ಹುಬ್ಬಳ್ಳಿ
ಮಂಗಳವಾರ, 14 ಏಪ್ರಿಲ್ 2026
ಸಂಪುಟ 16, ಸಂಚಿಕೆ 20, ಪುಟಗಳು 14
ಹುಬ್ಬಳ್ಳಿ ▪ ಬೆಂಗಳೂರು ▪ ಮಂಗಳೂರು ▪ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಶತಮಾನದ ನಿರ್ಧಾರ

ಮಹಿಳಾ ಮೀಸಲು ಅನುಷ್ಠಾನದಿಂದ ಹಿಂದಿನ ದೃಷ್ಟಿಕೋನ ಸಾಕಾರ, ಭವಿಷ್ಯದ ನಿರ್ಣಯ ಈಡೇರಿಕೆ: ಮೋದಿ

• ಪುಟ 2

ಕಿರುಸುದ್ದಿ



ಉಪ್ಪಿನಬೆಟಗೇರಿ: ಹನುಮನಕೊಪ್ಪ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಧಾರವಾಡ ಪರಿಸರ ಪ್ರೇಮ ತಂಡ ಆಯೋಜಿಸಿದ್ದ ಬಣ್ಣ ದರ್ಪಣಕ್ಕೆ ಎ.ಎಸ್ ಅಧಿಕಾರಿ ಮಲ್ಲಿಕಾರ್ಜುನ ತೊದಲಬಾಗಿ ಚಾಲನೆ ನೀಡಿದರು.

ಶೇ.96.16ರಷ್ಟು ಅಂಕ

ಕುಂದಗೋಳ: ಪಟ್ಟಣದ ನಿವಾಸಿಯಾದ ಖುಷಿ ಸುರೇಶ ಗಂಗಾಯಿ ಅವರು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 600ಕ್ಕೆ 577 ಅಂಕಗಳನ್ನು ಪಡೆದು ಶೇ.96.16 ಫಲಿತಾಂಶದೊಂದಿಗೆ ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆಯಾಗಿದ್ದಾರೆ.



ಖುಷಿ ಸುರೇಶ ಗಂಗಾಯಿ ಅವರು ಮಂಗಳೂರಿನ ವಳಾಚಿಲ ಗ್ರಾಮದ ಎಕ್ಸಪೋರ್ಟ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ. ವಿದ್ಯಾರ್ಥಿನಿಯ ಈ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಶಿಕ್ಷಕರು ಹರ್ಷ ವ್ಯಕ್ತಪಡಿಸಿದ್ದಾರೆ.

ವಚನ ಕಂಠಪಾಠ ಸ್ಪರ್ಧೆ

ಕಲಘಟಗಿ: ಬಸವತತ್ವ ಲಿಂಗಾನುಭಾವಿ ಶರಣರ ಬಳಗ ಹಿರೇಹೊನ್ನಿಹಳ್ಳಿ ಹಾಗೂ ಗ್ರಾಮದ ಸಮಸ್ತ ನಾಗರಿಕರಿಂದ 893ನೇ ವಿಶ್ವಗುರು ಬಸವಣ್ಣನವರ ಜಯಂತ್ಯುತ್ಸವ ಆಯೋಜಿಸಲಾಗಿದೆ.

ಏ.19ರ ಬೆಳಗ್ಗೆ 6 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಕಾರ್ಯಕ್ರಮ ಹಾಗೂ ಮಧ್ಯಾಹ್ನ 3 ಗಂಟೆಗೆ ತಾಲೂಕ ಮಟ್ಟದ ವಿದ್ಯಾರ್ಥಿಗಳಿಗಾಗಿ ವಚನ ಕಂಠಪಾಠ ಸ್ಪರ್ಧೆ ಏರ್ಪಡಿಸಲಾಗಿದೆ. ಪ್ರಾಥಮಿಕ ವಿಭಾಗ, ಪ್ರೌಢ ವಿಭಾಗ, ಕಾಲೇಜು ವಿಭಾಗ ಎಂದು ವಿಂಗಡಿಸಲಾಗಿದೆ. ಸಂಜೆ 6 ಗಂಟೆಯಿಂದ ವಚನ ನೃತ್ಯ, ವಚನ ಗಾಯನ, ಸಂಗೀತ, ಸಾಂಸ್ಕೃತಿಕ ಕಾರ್ಯಕ್ರಮ ಜರುಗುವವು. ಬಸವ ಜಯಂತಿಯಂದು ಏ.20ರ ಬೆಳಗ್ಗೆ 8 ಗಂಟೆಗೆ ಜಗಜ್ಯೋತಿ, ಕರ್ನಾಟಕದ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಭಾವಚಿತ್ರದೊಂದಿಗೆ ಹಿರೇಹೊನ್ನಿಹಳ್ಳಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಪಥ ಸಂಚಲನ, ವಚನ ಪಠಣದೊಂದಿಗೆ ಮೆರವಣಿಗೆ ಹಾಗೂ ಅನುಭವ ಮಂಟಪದ ಆವರಣದಲ್ಲಿ ಷಟಸ್ಥಲ ಧ್ವಜಾರೋಹಣ, ಸಾಮೂಹಿಕ ಪ್ರಾರ್ಥನೆ ಮತ್ತು ಅನುಭಾವದೊಂದಿಗೆ ಮಹಾ ಪ್ರಸಾದ ಜರುಗುವುದು. ಹೆಚ್ಚಿನ ಮಾಹಿತಿಗಾಗಿ 9902995780, 9880584128, 9480399020 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರತಿಭಟನೆ ಸಲ್ಲ

ಧಾರವಾಡ: ಡಾ. ಬಿ.ಆರ್.ಅಂಬೇಡ್ಕರ್ ಜಯಂತಿ ದಿನ ಯಾವುದೇ ಸಂಘಟನೆಗಳ ಪ್ರತಿಭಟನೆ, ರ‍್ಯಾಲಿಗೆ ಅವಕಾಶ ನೀಡದಂತೆ ಭೀಮ-ಶಕ್ತಿ ಸಂಘಟನೆ ಉಪನಗರ ಠಾಣೆ ಮುಂದೆ ಪ್ರತಿಭಟಿಸಿ, ಮನವಿ ಸಲ್ಲಿಸಿದೆ. ಏ.14ಕ್ಕೆ ಸಾಮಾಜಿಕ ನ್ಯಾಯದ ಹರಿಕಾರ ಡಾ.ಅಂಬೇಡ್ಕರ್ ಜಯಂತಿ ಸಂಭ್ರಮ ಜಿಲ್ಲೆಯಲ್ಲಿ ಮನೆ ಮಾಡಲಿದ್ದು, ಈ ವೇಳೆ ಕೆಲವು ಸಂಘಟನೆ ಪ್ರತಿಭಟನೆ, ರ‍್ಯಾಲಿ, ಮೆರವಣಿಗೆಗೆ ಸಿದ್ಧತೆ ನಡೆಸಿದ್ದಾಗಿ ಮಾಹಿತಿ ನೀಡಿದೆ. ಜಿಲ್ಲಾಡಳಿತ ಜಯಂತಿ ಆಚರಿಸುವ ವೇಳೆ ಯಾವುದೇ ಅನಾನುಕೂಲತೆ ಹಾಗೂ ಕಾನೂನು ಸುವ್ಯವಸ್ಥೆ ಧಕ್ಕೆ ಬರದಂತೆ ಮತ್ತು ಗೊಂದಲಕ್ಕೆ ಆಸ್ಪದ ನೀಡದಂತೆ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದೆ. ಭೀಮ ಶಕ್ತಿ ಸಂಘಟನೆಯ ಶಂಕರ ಮುಗಳಿ, ಲಕ್ಷ್ಮಣ ಆರ್., ಸತೀಶ ಗಿರಿಯಣ್ಣವರ, ಸಮೀರ್ ಬಳ್ಳಾರಿ, ಪ್ರವೀಣ ಅದರಗುಂಚಿ, ಮನೋಜ ಹಾದಿಮನಿ, ಲಕ್ಷ್ಮೀ ಮಾದರ ಇದ್ದರು.

ಸೂಕ್ತ ಕ್ರಮಕ್ಕೆ ಆಗ್ರಹ



ಅಳ್ನಾವರ: ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ನಡೆದಿದೆ ಎನ್ನಲಾದ ಲವ್ ಜಿಹಾದ ಪ್ರಕರಣದಲ್ಲಿ ಭಾಗಿಯಾದವರ ಮೇಲೆ ಸೂಕ್ತ ಕ್ರಮ ಕೈಗೊಂಡು ಇದರಲ್ಲಿ ಭಾಗಿಯಾದವರ ಬಗ್ಗೆ ತನಿಖೆ ನಡೆಸಬೇಕೆಂದು ಆಗ್ರಹಿಸಿ ಅಳ್ನಾವರದ ಹಿಂದೂ ರಾಷ್ಟ್ರ ಸಮನ್ವಯ ಸಮಿತಿಯವರು ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಮತಾಂತರ, ಲೈಂಗಿಕ ಕಿರುಕುಳ ಹಾಗೂ ಬೆದರಿಕೆಯಂತಹ ಪ್ರಕರಣಗಳು ಬೆಳಕಿಗೆ ಬರುತ್ತಿದ್ದು, ಜಿಮ್ ಗಳಲ್ಲಿ ಇಂತಹ ಘಟನೆಗಳು ಹೆಚ್ಚಾಗಿ ನಡೆಯುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಒಂದು ಧರ್ಮವನ್ನು ಗುರಿಯಾಗಿಟ್ಟುಕೊಂಡು ನಡೆಯುತ್ತಿರುವ ಕೃತ್ಯಗಳನ್ನು ತಡೆಯುವದು ಅವಶ್ಯವಿದೆ ಎಂದು ಮಹಾದೇವ ಸಾಗರೇಕರ ನೇತೃತ್ವದಲ್ಲಿ ಉಪ ತಹಶೀಲ್ದಾರ್ ಮಲ್ಲಿಕಾರ್ಜುನ ಬಿರಾದಾರ ಅವರಿಗೆ ಮನವಿ ಸಲ್ಲಿಸಲಾಯಿತು.



ಧಾರವಾಡ: ಧಾರವಾಡ ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಅವರಿಗೆ 75 ವರ್ಷಗಳು ತುಂಬಿದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ವಸಂತ ಅರ್ಕಚಾರ್, ಪುಂಡಲಿಕ ಹಡಪದ, ಸಾಲಿಮಠ, ಕರಿಯಪ್ಪ ಅಮ್ಮಿನಬಾವಿ, ಸವಿತಾ ಅಮರಶೆಟ್ಟಿ ಇತರರಿದ್ದರು.

ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ನಾಳೆ

ಅಳ್ನಾವರ: ತಾಲೂಕಿನ ಐದನೇ ಕನ್ನಡ ಸಾಹಿತ್ಯ ಸಮ್ಮೇಳನ ಏ.15ರಂದು ಪಟ್ಟಣದ ಉಮಾ ಭವನದಲ್ಲಿ ಜರುಗಲಿದೆ. ಬೆಳಗ್ಗೆ 8.30ಕ್ಕೆ ನಡೆಯಲಿರುವ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಮಾಜಿ ಸೈನಿಕ ಅಜ್ಜಪ್ಪ ಕುರುಬರ ರಾಷ್ಟ್ರ ಧ್ವಜಾರೋಹಣ, ಡಾ.ಲಿಂಗರಾಜ ಅಂಗಡಿ ನಾಡಧ್ವಜ ಹಾಗೂ ಗುರುರಾಜ ಸಬನೀಸ ಪರಿಷತ್ ಧ್ವಜಾರೋಹಣ ನೆರವೇರಿಸಲಿದ್ದು 9.30ಕ್ಕೆ ಕೆರೆ ಶಾಲಾ ಮೈದಾನದಿಂದ ಪ್ರಾರಂಭವಾಗಲಿರುವ ಸಮ್ಮೇಳನಾಧ್ಯಕ್ಷರ ಮೆರವಣಿಗೆಯಲ್ಲಿ ಎಸ್.ಬಿ.ಪಾಟೀಲ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಿದ್ದು, ತಹಶೀಲ್ದಾರ್ ಡಾ.ಡಿ.ಎಚ್.ಹೂಗಾರ ಹಾಗೂ ಪಿಎಸ್ಐ ಬಸವರಾಜ ಯದ್ದಲಗುಡ್ಡ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಬೆಳಗ್ಗೆ 10.30ಕ್ಕೆ ಉಮಾಭವನದಲ್ಲಿ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಸಮ್ಮೇಳನ ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ಕಾರ್ಮಿಕ ಸಚಿವರಾದ ಸಂತೋಷ ಲಾಡ ಅವರು ವಹಿಸಲಿದ್ದಾರೆ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಮತ್ತು ಸಭಾಪತಿ ಬಸವರಾಜ ಹೊರಟ್ಟಿ ಉಪಸ್ಥಿತಿ ಇರಲಿದ್ದು ಸರ್ಕಾರದ ಮುಖ್ಯ ಸಚೇತಕ ಸಲೀಮ ಅಹ್ಮದ, ಶಾಸಕರುಗಳಾದ ಎನ್.ಎಚ್ ಕೋನರಡ್ಡಿ, ವಿನಯ ಕುಲಕರ್ಣಿ, ವಿಧಾನ ಪರಿಷತ್ ಸದಸ್ಯರಾದ ಎಸ್.ವ್ಹಿ.ಸಂಕನೂರು,ಪ್ರದೀಪ ಶೆಟ್ಟರ ಆಗಮಿಸಲಿದ್ದಾರೆ. ಕಸಾಪ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ ಅಂಗಡಿ ಹಾಗೂ ಸ್ಥಳಿಯ ಗಣ್ಯರು ಉಪಸ್ಥಿತರಿರಲಿದ್ದು ಮಧ್ಯಾಹ್ನ 2 ಗಂಟೆಗೆ ನಡೆಯುವ ಗೋಷ್ಠಿಯ ಅಧ್ಯಕ್ಷತೆಯನ್ನು ಧಾರವಾಡ ಜಿಲ್ಲಾ ಕನಿಪ ಸಂಘದ ಅಧ್ಯಕ್ಷ ಬಂಡು ಕುಲಕರ್ಣಿ ವಹಿಸಲಿದ್ದು, ಸಂಜೆ 4 ಗಂಟೆಗೆ ಸಮಾರೋಪ ಸಮಾರಂಭದ ನುಡಿಗಳನ್ನು ಧಾರವಾಡ ಕ.ವಿ.ವ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಆಡಲಿದ್ದಾರೆ. ಸಮ್ಮೇಳನದ ಸರ್ವಾಧ್ಯಕ್ಷರಾಗಿ ಡಾ.ಬಸವರಾಜ ಮೂಡಬಾಗಿಲ ಅವರನ್ನು ಆಯ್ಕೆ ಮಾಡಲಾಗಿದೆ.



ಧಾರವಾಡ: ಇಲ್ಲಿನ ಹಾಶ್ಮಿ ನಗರದ ಫೈರೋಜ್ ಖಾನ್ ಪಠಾಣ ಹತ್ಯೆ ಖಂಡಿಸಿ ಆತನ ಕುಟುಂಬಸ್ಥರು, ಬೆಂಬಲಿಗರು ಸೋಮವಾರ ಮೊಂಬತ್ತಿ ಮೆರವಣಿಗೆ ನಡೆಸಿದರು.

ವಿಕಸಿತ ಭಾರತಕ್ಕೆ ಎಐ ಪೂರಕ

ಧಾರವಾಡ: ವಿಕಸಿತ ಭಾರತಕ್ಕೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಪೂರಕ. ಕಲಿಕೆ, ಆಲಿಸುವಿಕೆ, ಸಮಸ್ಯೆಗೆ ಪರಿಹಾರ, ನಿರ್ಧಾರ ಕೈಗೊಳ್ಳುವಲ್ಲಿ ಎಐ ಬಳಸಾಗುತ್ತಿದೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ. ಎ.ಎಂ.ಖಾನ್ ಹೇಳಿದರು.



ನಗರದ ಕರ್ನಾಟಕ ವಿಜ್ಞಾನ ಕಾಲೇಜಿನ ಬೋಗೋಳಶಾಸ್ತ್ರ ವಿಭಾಗವು ಬಿ.ಸಿ.ಎ. ಸಭಾಭವನದಲ್ಲಿ ಹಮ್ಮಿಕೊಂಡ ಉನ್ನತ ಶಿಕ್ಷಣದಲ್ಲಿ ಎಐ ಅನ್ವಯಿಕೆಗಳು ಎಂಬ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ಎಐ ಬಳಕೆಯಲ್ಲಿ ನೈತಿಕ ಅಂಶಗಳು ಬಳಸಬೇಕಿದೆ ಎಂದರು.

ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಡಾ. ಸಂತೋಷ ದೇಶಪಾಂಡೆ ಮಾತನಾಡಿ, ಪ್ರಸ್ತುತ ಮೊಬೈಲ್ ತಂತ್ರಜ್ಞಾ, 33 ಸೆನ್ಸಾರ್ ಗಳನ್ನೂ ಕೂಡ ಸರ್ವರೂ ಬಳಕೆ ಮಾಡುತ್ತಿದ್ದಾರೆ. ಆದ್ದರಿಂದ ಕೃತಕ ಬುದ್ಧಿಮತ್ತೆ ಉಪಯೋಗದ ಕೌಶಲ್ಯಗಳನ್ನು ಕಲಿಯುವುದು ಹಾಗೂ ಬಳಸುವ ವಿಧಾನಗಳ ಅರಿವು ಹೊಂದಬೇಕಿದೆ ಎಂದರು.

ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಎಂ.ಟಿ.ನಾಯಕ ಮಾತನಾಡಿ, ಕೃತಕ ಬುದ್ಧಿಮತ್ತೆಯನ್ನು ಶಿಕ್ಷಣ, ಆಡಳಿತ, ಸಂಶೋಧನೆ, ಕಲಿಕೆ ಸೇರಿದಂತೆ ಸರ್ವ ವಲಯಗಳಲ್ಲೂ ಬಳಸುತ್ತಿದ್ದು, ಈ ಕುರಿತು ಪ್ರಾಧ್ಯಾಪಕರು ಜ್ಞಾನ ಹೊಂದುವಂತೆ ಹೇಳಿದರು. ಕರ್ನಾಟಕ ವಿಜ್ಞಾನ ಕಾಲೇಜಿನ ಪ್ರಾಚಾರ್ಯ ಪ್ರೊ. ಎಂ.ಎಸ್.ಸಾಳುಂಕೆ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ರೋಹಿತ ಕಲಿವಾಳ, ಪ್ರೊ. ಭಾರತಿ ಕೆ, ಪ್ರೊ. ಬೊಸ್ಲೇ ಲೋಬೋ, ಪ್ರೊ. ಎಸ್.ಎಸ್. ಮೋಟೆಬೆನ್ನೂರ, ಪ್ರೊ. ಎಂ.ಎನ್. ಮ್ಯಾಗೇರಿ, ಪ್ರೊ. ವಿ.ಬಿ.ಸಾವಿರಮಠ ಎಐ ತರಬೇತಿ ನೀಡಿದರು. ಡಾ.ಕಿರಣ ಕೋಲ್ಕಾರ, ಡಾ.ಜಿ.ಎನ್. ಕಮ್ಮೂರ, ಡಾ.ವಿ.ಬಿ.ಸಾವಿರಮಠ, ಡಾ. ಎಂ.ಎಲ್.ಉಪ್ಪಾರ, ಡಾ.ನಾರಾಯಣಕರ, ಡಾ.ಕಿರಣ ರೆಡ್ಡಿ, ಡಾ. ತಳವಾರ ಇದ್ದರು.

> ನಿತ್ಯ ಜೀವನದಲ್ಲಿ ಕೃಕ ಬುದ್ಧಿಮತ್ತೆ ಬಳಸುವ ಸಮಯ ದೂರವೇ ಇಲ್ಲ. ಈ ಕಾರಣಕ್ಕೆ ಎಐ ತಂತ್ರಜ್ಞಾನ ಬಳಕೆ ಕೌಶಲ್ಯ ಮತ್ತು ಸಾಧನಗಳ ಅರಿವು ಅಗತ್ಯ. ಸಮಗ್ರ ಮಾಹಿತಿ ವ್ಯವಸ್ಥಿತವಾಗಿ ಸಂಗ್ರಹಿಸುವಲ್ಲಿ ಎಐ ಸಹಕಾರಿಯಾಗಿದೆ.
>
> ■ ಡಾ. ಎ.ಎಂ. ಖಾನ್, ಕರ್ನಾಟಕ ವಿಶ್ವವಿದ್ಯಾಲಯ ಕುಲಪತಿ

ಶಿರೂರು ಗ್ರಾಮಕ್ಕೆ ನೀರು ಪೂರೈಸಲು ಒತ್ತಾಯ



ಧಾರವಾಡ: ನವಲಗುಂದ ತಾಲೂಕಿನ ಶಿರೂರು ಗ್ರಾಮದಲ್ಲಿ ಉಲ್ಬಣಿಸಿದ ನೀರಿನ ಸಮಸ್ಯೆ ಪರಿಹರಿಸುವಂತೆ ಒತ್ತಾಯಿಸಿ ರೈತ ಮುಖಂಡ ಮಲ್ಲಿಕಾರ್ಜುನ ಬಾಳನಗೌಡರ ನೇತೃತ್ವದಲ್ಲಿ ರೈತರು ಜಿಲ್ಲಾಧಿಕಾರಿ ಕಚೇರಿ ಮುಂದೆ ಸೋಮವಾರ ಪ್ರತಿಭಟಿಸಿದರು.

ಸುಮಾರು ಅರ್ಧ ಗಂಟೆಗೂ ಅಧಿಕ ಹೊತ್ತು ಪ್ರತಿಭಟಿಸಿದ ರೈತರು, ಜಿಲ್ಲಾಡಳಿತ, ನವಲಗುಂದ ತಾಲೂಕು ಆಡಳಿತ ಹಾಗೂ ಶಾಸಕರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿ, ನಂತರ ಹೆಚ್ಚುವರಿ ಜಿಲ್ಲಾಧಿಕಾರಿಗೆ ಗೀತಾ ಅವರಿಗೆ ಮನವಿ ಸಲ್ಲಿಸಿದರು. ಶಿರೂರ ಗ್ರಾಮದ ಹೈಸ್ಕೂಲ್ ಪಕ್ಕದ ಸುಮಾರು 100ಕ್ಕೂ ಅಧಿಕ ಮನೆಗಳಿಗೆ ನೀರಿನ ಅಭಾವ ಉಂಟಾಗಿದೆ. ಪೈಪ್ ಲೈನ್ ವ್ಯವಸ್ಥೆ ಸರಿಯಾಗಿ ಇಲ್ಲದ ಕಾರಣ ಮನೆಗಳಿಗೆ ನೀರು ತಲುಪುತ್ತಿಲ್ಲ ಎಂದು ಮಲ್ಲಿಕಾರ್ಜುನ ಬಾಳನಗೌಡರ ಆರೋಪ ಮಾಡಿದರು.

ನಾಗರಿಕರು ಮುಖ್ಯವಾಗಿ ಚಿಕ್ಕಮಕ್ಕಳು, ಬಾಣಂತಿಯರ ಜತೆ ಜಾನುವಾರುಗಳಿಗೂ ನೀರಿನ ಕೊರತೆ ಉಂಟಾಗಿದೆ. ಹೀಗಾಗಿ ತಕ್ಷಣವೇ ಗ್ರಾಮಕ್ಕೆ ನೀರಿನ ವ್ಯವಸ್ಥೆ ಮಾಡಲು ಆಗ್ರಹಿಸಿದರು. ಮನವಿ ಸ್ವೀಕರಿಸಿದ ಎಡಿಸಿ ಗೀತಾ ಪರಿಹರಿಸುವ ವಾಗ್ದಾನ ಮಾಡಿದರು. ಪ್ರತಿಭಟನೆಯಲ್ಲಿ ಶಿವನಗೌಡ ಬಸ್ತಿ. ಎನ್.ಎಸ್.ಪಾಟೀಲ, ಎಂ.ಪಿ.ನಂದಿಹಳ್ಳಿ, ಬಿ.ಬಿ.ಪಾಟೀಲ, ವಿಠ್ಠಲ ಎಸ್.ಎಚ್, ಮೋಹನ ರಾಮದುರ್ಗ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

> **ಕೊರತೆ ನೀಗಿಸಿ**
>
> ಜಿಲ್ಲೆಯ ಕಡಲೆ ಖರೀದಿ ಕೇಂದ್ರಗಳಲ್ಲಿ ಖಾಲಿ ಚೀಲಗಳ ಕೊರತೆ ಉಂಟಾಗಿದ್ದು, ಖರೀದಿ ಪ್ರಕ್ರಿಯೆ ವಿಳಂಬವಾಗಿದೆ. ಹೀಗಾಗಿ ತಕ್ಷಣವೇ ಖಾಲಿ ಚೀಲಗಳ ಕೊರತೆ ನೀಗಿಸಿ, ಖರೀದಿ ಪ್ರಕ್ರಿಯೆಗೆ ಅವಕಾಶ ಮಾಡಬೇಕು ಎಂದು ರೈತ ಮುಖಂಡ ಮಲ್ಲಿಕಾರ್ಜುನ ಬಾಳನಗೌಡರ ಆಗ್ರಹಿಸಿದರು.

ವಾರ್ಷಿಕೋತ್ಸವ, ಸಾಂಸ್ಕೃತಿಕ ಸಂಭ್ರಮ
ಕರುನಾಡ ಶ್ರೀಗಂಧ ರಾಜ್ಯ ಪ್ರಶಸ್ತಿ

ಹುಬ್ಬಳ್ಳಿ: ಶ್ರದ್ಧಾ ಫೌಂಡೇಶನ್, ಹುಬ್ಬಳ್ಳಿ ಸಂಸ್ಥೆಯ ಮೂರನೇ ವಾರ್ಷಿಕೋತ್ಸವ ಹಾಗೂ ಸಾಂಸ್ಕೃತಿಕ ಸಂಭ್ರಮ ಸಾಧಕರ ಉತ್ಸವ 2026 ಅಂಗವಾಗಿ ಜರುಗಿದ ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸರ್ವಧರ್ಮ ಸಮಾಜ ಸೇವಕ ಡಾ.ರಮೇಶ್ ಮಹಾದೇವಪ್ಪನವರ ಹಾಗೂ ಅವರ ಪತ್ನಿ ಗೀತಾ ರಮೇಶ್ ಅವರಿಗೆ ಕರುನಾಡ ಶ್ರೀಗಂಧ ರಾಜ್ಯ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಈ ಸಂದರ್ಭದಲ್ಲಿ ಗಣ್ಯರು ಸೇರಿದಂತೆ ಇತರರು ಉಪಸ್ಥಿತರಿದ್ದರು.



ಸಂಸ್ಕಾರ ಕಲಿಸುವ ಉಪನಯನ: ಪ್ರಹ್ಲಾದ ಜೋಶಿ

ಹುಬ್ಬಳ್ಳಿ: ಮುಂದಿನ ಜೀವನ ಹೇಗೆ ಸಾಗಿಸಬೇಕೆನ್ನುವ ಸಂಸ್ಕಾರ ಕಲಿಸುವ ವಿಧಾನವೇ ಉಪನಯನ ವಿಧಿಯಾಗಿದೆ. ಇದು ಮಕ್ಕಳಿಗೆ ಧಾರ್ಮಿಕ ಸಂಸ್ಕಾರಗಳನ್ನು ವಿಧಿವತ್ತಾಗಿ ಪಾಲಿಸುವ ಜವಾಬ್ದಾರಿ ತಿಳಿಸುತ್ತದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿದರು.

ಕ್ಷತ್ರಿಯ ಮರಾಠಾ ಸಮಾಜ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಭಾನುವಾರ ನಗರದಲ್ಲಿ ಹಮ್ಮಿಕೊಂಡಿದ್ದ ಮರಾಠಾ ಸಮಾಜದ ಮಕ್ಕಳ ಉಚಿತ ಸಾಮೂಹಿಕ ಉಪನಯನ ಸಂಸ್ಕಾರ ಕಾರ್ಯಕ್ರಮ ಹಾಗೂ ಮರಾಠಾ ಮೆಟ್ರಿಮೋನಿ ವೆಬ್‌ಸೈಟ್‌ನಲ್ಲಿ ವಧು-ವರರ ನೋಂದಣಿ ಹಾಗೂ ಪಾಲಕರ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು. ಇಂದಿನ ದಿನಗಳಲ್ಲಿ ಉಪನಯನ ಮಾಡಿಸಿಕೊಳ್ಳಲು ಮಕ್ಕಳು ಹಿಂಜರಿಯುತ್ತಿದ್ದು, ಅವರಿಗೆ ಅದರ ಮಹತ್ವದ ಬಗ್ಗೆ ತಿಳಿಸಿ. ಸಾಮೂಹಿಕವಾಗಿ ಉಪನಯನ ಅಥವಾ ವಿವಾಹಗಳನ್ನು ಆಯೋಜಿಸುವುದರಿಂದ ಸಮಾಜದಲ್ಲಿ ಒಗ್ಗಟ್ಟು ಮೂಡಿಸುತ್ತದೆ ಎಂದರು.

ಛತ್ರಪತಿ ಶಿವಾಜಿ ಮಹಾರಾಜರ ಪಾಲಿಸಿದ ಭೇದ-ಭಾವ ಅಥವಾ ಪಕ್ಷಪಾತವಿಲ್ಲದ ಸಮಾನತೆಯ ಹಿಂದುತ್ವದ ದೃಷ್ಟಿಕೋನವನ್ನು ಮರಾಠಾ ಸಮಾಜ ಈಗಲೂ ಅನುಸರಿಸುತ್ತ ಬಂದಿದೆ ಎಂದರು. ಸಾನ್ನಿಧ್ಯ ವಹಿಸಿ ಮಾತನಾಡಿದ ಮರಾಠ ಸಮಾಜದ ವೇದಾಂತಾಚಾರ್ಯ ಮಂಜುನಾಥ ಭಾರತಿ ಸ್ವಾಮೀಜಿ, ಮರಾಠಾ ಸಮಾಜ ಹಿಂದುಳಿದ ಸಮಾಜವಾಗಿದ್ದು, ಇಂದಿನ ಪೀಳಿಗೆಗೆ ಸಮಾಜದ ಹಿನ್ನೆಲೆ ಹಿನ್ನೆಲೆ ತಿಳಿಸಿಕೊಡುವ ಅಗತ್ಯ ಎದ್ದುಕಾಣುತ್ತಿದೆ. ಈ ನಿಟ್ಟಿನಲ್ಲಿ ಸಾಮೂಹಿಕವಾಗಿ ಉಪನಯನಕಾರ್ಯಕ್ರಮ ಮಾಡುವ ಮೂಲಕ ಉಳಿಸಿಕೊಳ್ಳಲುವುದು ಶ್ಲಾಘನೀಯ, ಸಂಪ್ರದಾಯ ಉಳಿಸುವ ಮತ್ತು ಮುಂದಿನ ಪೀಳಿಗೆಗೆ ತಿಳಿಸಿಕೊಡುವ ಕಾರ್ಯವನ್ನು ಕ್ಷತ್ರಿಯ ಮರಾಠ ಸಮಾಜದಿಂದ ನಡೆಯುತ್ತಿದ್ದು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ನಡೆಯಬೇಕು ಎಂದರು.

ಮರಾಠಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮರಿಯೋಜಿರಾವ್, ವ್ಯವಸ್ಥಾಪಕ ನಿರ್ದೇಶಕ ಶಂಕರ ಪಾಗೋಜಿ, ಕೇಶವ ಯಾದವ, ರಮೇಶ ಮಹದೇವಪ್ಪನವರ, ದಿನೇಶ ವಾಘಮೋರೆ, ಸುನೀಲ ದಳವಿ ಮಾತನಾಡಿದರು. ಭೀಮರಾವ್ ಪವಾರ್ ಅಧ್ಯಕ್ಷತೆ ವಹಿಸಿದ್ದರು. ಶೈಲೇಂದ್ರ ಅಪ್ಪಾಸಾಹೇಬ ಚವ್ಹಾಣ್, ಶಂಕರರಾವ್ ಮೋಹಿತೆ, ವಿನೋದ ಜಾಧವ, ಜ್ಯೋತಿಬಾ ಶಿಂಧೆ, ಅರುಣ ಶಿರ್ಕೆ, ನಾರಾಯಣ ಮೋಹಿತೆ, ಅರುಣ ಗೋಳೆ, ಶ್ಯಾಮರಾವ್ ಶಿಂಧೆ, ಲಕ್ಷ್ಮಣರಾವ್ ಶಿಂಧೆ, ರಮೇಶ ಸೂರ್ಯವಂಶಿ, ಸಂಜಯ ಸಾತೆ, ಪ್ರಕಾಶ ಹರಚಿನ್ನವರ, ಮಾರುತಿ ಪರಬತ್, ವಸಂತರಾವ ಕರಾಡೆ, ಸುರೇಶ ಚವ್ಹಾಣ್, ಪ್ರಕಾಶ ಕೋರೆ, ನಿರ್ಮಲಾ ತೊಡಕರ ಇದ್ದರು.



ಕೃತಿ ಓಡುವ ಗಡಿಯಾರ ಪುಸ್ತಕ ಲೋಕಾರ್ಪಣೆ



ಹುಬ್ಬಳ್ಳಿ: ಇಲ್ಲಿನ ಪತ್ರಕರ್ತರ ಭವನದಲ್ಲಿ ಹುಬ್ಬಳ್ಳಿ ಲೇಖಕಿಯರ ಬಳಗದವರು ಅಕ್ಷರ ಸಾಹಿತ್ಯ ವೇದಿಕೆ ಮತ್ತು ರವಿ ಪ್ರಕಾಶನದ ಸಹಯೋಗದೊಂದಿಗೆ ಹುಬ್ಬಳ್ಳಿ ಬಳಗದ ಕವಯತ್ರಿ ಗಾಯತ್ರೀ ರವಿ ಅವರ ನಾಲ್ಕನೇ ಕಾವ್ಯ ಕೃತಿ ಓಡುವ ಗಡಿಯಾರ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮ ಆಯೋಜಿಸಿದ್ದರು.

ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿದ ಜಾಜಿಮಲ್ಲಿಗೆ ಕವಿತೆಯ ಖ್ಯಾತ ಕವಿಸತ್ಯಾನಂದ ಪಾತ್ರೊಟ ಮಾತನಾಡಿ, ಕನ್ನಡ ಸಾಹಿತ್ಯದ ಬೆಳವಣಿಗೆಗೆ ಸಾಹಿತಿಗಳ ಕೊಡುಗೆ ಹೇಗಿರಬೇಕೆಂದು ಹೇಳಿದರು. ಹುಬ್ಬಳ್ಳಿಯ ಕವಿ ಮಹಾಂತಪ್ಪ ನಂದೂರ ಕಾವ್ಯದ ಮಹತ್ವ ಬಗ್ಗೆ ಮತ್ತು ಲೇಖಕಿ ಸುನಂದಾ ಕಡಮೆಯವರು ಕೃತಿ ಪರಿಚಯ ಮಾಡಿದರು. ಹಾವೇರಿಯ ಸಾಹಿತಿ ಡಾ. ಸತೀಶ್ ಕುಲಕರ್ಣಿ ಅವರು ಗಾಯತ್ರೀ ಅವರ ಕಾವ್ಯ ಸಾಧನೆ ಕುರಿತು ಮಾತನಾಡಿದರು.

ಅಧ್ಯಕ್ಷತೆ ವಹಿಸಿ ಹುಬ್ಬಳ್ಳಿ ಲೇಖಕಿಯರ ಬಳಗದ ಅಧ್ಯಕ್ಷೆ ಡಾ. ಸರೋಜಾ ಮೇಟಿ ಲೊಡಾಯಾ ಮಾತನಾಡಿ, ಹುಬ್ಬಳ್ಳಿಯಲ್ಲಿ ಸಾಹಿತ್ಯ ಬೆಳವಣಿಗೆಗೆ ಹುಬ್ಬಳ್ಳಿ ಲೇಖಕಿಯರ ಕಾರ್ಯವೈಖರಿ ವಿವರಿಸಿದರು. ಶಾಲಿನಿ ರುದ್ರಮುನಿ ಪ್ರಾರ್ಥಿಸಿದರು. ಕವಿತಾ ಹೆಗಡೆ ಸ್ವಾಗತಿಸಿದರು. ಶ್ರೀದೇವಿ ಬಿರಾದಾರ ವಂದಿಸಿದರು. ಲೇಖಕ ವಿರೂಪಾಕ್ಷ ಕಟ್ಟಿಮನಿ ನಿರೂಪಿಸಿದರು. ಗಾಯತ್ರೀ ರವಿ ಅವರ ಪರಿವಾರ ಹುಬ್ಬಳ್ಳಿ ಲೇಖಕಿಯರು, ಅಕ್ಷರ ಸಾಹಿತ್ಯ ವೇದಿಕೆ, ಹಾವೇರಿಯ ಸಾಹಿತ್ಯ ಬಳಗ ಮತ್ತು ವೆಂಕಟೇಶ್ ಮರೆ ಗುದ್ದಿ, ಮಹೇಶ್ ಮತ್ತು ಸುರೇಶ್ ಹೊರಕೇರಿ, ಕೇಶವ ಕೊಂಗಿ ಪ್ರಕಾಶ ಕಡಮೆ ಮುಂತಾದವರಿದ್ದರು. ಲೋಕಾರ್ಪಣೆ ಕಾರ್ಯಕ್ರಮದಲ್ಲಿ ೯ ಸತ್ಯಾನಂದ ಪಾತ್ರೊಟ, ಸತೀಶ್ ಕುಲಕರ್ಣಿ, ಮಹಾಂತಪ್ಪ ನಂದೂರ, ಗಾಯತ್ರೀ ರವಿ, ಡಾ. ಸರೋಜಾ ಮೇಟಿ ಲೊಡಾಯಾ, ರವಿ ಬಡಿಗೇರ, ವಿರೂಪಾಕ್ಷ ಕಟ್ಟಿಮನಿ ಇದ್ದರು.

ಚುನಾವಣಾಧಿಕಾರಿ ಗೈರು: ಚುನಾವಣೆಗೆ ಗೊಂದಲ

▶ ರವಿ.ಸಿ.ಕಮಡೊಳ್ಳಿ

ಕುಂದಗೋಳ: ತಾಲೂಕು ಶಿಕ್ಷಕರ ಸಂಘದ ಚುನಾವಣೆ ಘೋಷಣೆ ಆಗಿದ್ದರೂ, ನಾಮಪತ್ರ ಸ್ವೀಕಾರದ ದಿನಗಳಲ್ಲಿ ಚುನಾವಣಾಧಿಕಾರಿಯೇ ಗೈರಾಗಿರುವುದು ಗೊಂದಲಕ್ಕೆ ಕಾರಣವಾಗಿದೆ.

ನಿಗದಿಯಂತೆ ಏಪ್ರಿಲ್ 11 ಮತ್ತು 12 ರಂದು ಬೆಳಗ್ಗೆ 11 ರಿಂದ ಸಂಜೆ 6ರವರೆಗೆ ನಾಮಪತ್ರ ಸಲ್ಲಿಕೆ ನಡೆಯಬೇಕಿತ್ತು. ಆದರೆ ಈ ಎರಡೂ ದಿನಗಳಲ್ಲಿ ಚುನಾವಣಾಧಿಕಾರಿ ಕಚೇರಿಗೆ ಹಾಜರಾಗದ ಹಿನ್ನೆಲೆಯಲ್ಲಿ ಯಾವುದೇ ನಾಮಪತ್ರ ಸ್ವೀಕಾರ ಪ್ರಕ್ರಿಯೆ ನಡೆಯಲಿಲ್ಲ. ತಹಶೀಲ್ದಾರ್ ಕಚೇರಿಗೆ ತೆರಳುವ ಮಾರ್ಗದಲ್ಲಿರುವ ಶಿಕ್ಷಕರ ಸಂಘದ ಕಟ್ಟಡದಲ್ಲಿ ಚುನಾವಣಾಧಿಕಾರಿ ಇರಬೇಕಾಗಿದ್ದರೂ ಅಲ್ಲಿ ಖಾಲಿ ಕುರ್ಚಿ ಮತ್ತು ತಿರುಗುವ ಫ್ಯಾನ್ ಹೊರತುಪಡಿಸಿ ಯಾರೂ ಕಾಣಿಸಲಿಲ್ಲ. ನಾಮಪತ್ರ ಸಲ್ಲಿಸಲು ಬಂದಿದ್ದ ಹಲವು ಶಿಕ್ಷಕರು ಗಂಟೆಗಳ ಕಾಲ ಕಾದು ನಿರಾಶೆಯಿಂದ ಹಿಂತಿರುಗಿದರು. ಚುನಾವಣಾ ವೇಳಾಪಟ್ಟಿಯ ಪ್ರಕಾರ ಏಪ್ರಿಲ್ 13ರಂದು ನಾಮಪತ್ರ ಪರಿಶೀಲನೆ, ಏಪ್ರಿಲ್ 14ರಂದು ವಾಪಸ್ಸಾತಿಗೆ ಅವಕಾಶ ಹಾಗೂ ಅಗತ್ಯವಿದ್ದಲ್ಲಿ ಏಪ್ರಿಲ್ 19ರಂದು ಮತದಾನ ಮತ್ತು ಅಂದೇ ಸಂಜೆ 6.30ಕ್ಕೆ ಎಣಿಕೆ ಕಾರ್ಯ ನಡೆಸಿ ಫಲಿತಾಂಶ ಪ್ರಕಟಿಸುವುದಾಗಿ ತಿಳಿಸಲಾಗಿತ್ತು. ಈ ಬಗ್ಗೆ ಸ್ಪಷ್ಟತೆ ಇಲ್ಲದಿರುವುದು ಮತ್ತಷ್ಟು ಅನುಮಾನಗಳಿಗೆ ಕಾರಣವಾಗಿದೆ.

ತಹಶೀಲ್ದಾರ್ ರಾಜು ಮಾವರಕರ ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ತಿಳಿಸಿ, ಜಿಲ್ಲಾ ಸಹಕಾರ ಸಂಘದ ಅಧಿಕಾರಿಯನ್ನು ಸಂಪರ್ಕಿಸಲು ಸೂಚಿಸಿದರು. ಆದರೆ ಸಂಬಂಧಪಟ್ಟ ಅಧಿಕಾರಿಯೂ ಇದು ಸಹಕಾರಿ ಸಂಘದ ವ್ಯಾಪ್ತಿಗೆ ಸೇರದು, ಶಿಕ್ಷಕರ ಸಂಘವೇ ಚುನಾವಣಾಧಿಕಾರಿಯನ್ನು ನೇಮಿಸಬೇಕು ಎಂದು ಹೇಳಿದ್ದಾರೆ. ಹಿಂದಿನ ಅಧ್ಯಕ್ಷ ಮಾರುತಿ ಘೂಡಕೆ ಸಂಪರ್ಕಕ್ಕೆ ಸಿಗಲಿಲ್ಲ. ಹಿಂದಿನ ಸಮಿತಿಯ ಖಜಾಂಚಿ ಡಿ.ಸಿ. ಹಿರೇಮಠ ಮಾತನಾಡಿ, ಚುನಾವಣಾಕಾರಿ ಬಗ್ಗೆ ಯಾವುದೇ ಮಾಹಿತಿ ಇಲ್ಲ, ಅಧಿಕಾರಿ ಬಾರದ ಕಾರಣ ನಾಮಪತ್ರ ಸ್ವೀಕಾರ ಪ್ರಕ್ರಿಯೆಯೇ ನಡೆದಿಲ್ಲ ಎಂದರು.

> **ನಡೆಯದ ಪ್ರಕ್ರಿಯೆ**
>
> ಚುನಾವಣೆಗೆ ಸ್ಪರ್ಧಿಸಲು ಬಂದಿದ್ದ ಶಿಕ್ಷಕರೋರ್ವರು ಯಾರನ್ನು ಚುನಾವಣಾಧಿಕಾರಿಯಾಗಿ ನೇಮಿಸಿದ್ದಾರೆ ಎಂಬುದೇ ಗೊತ್ತಿಲ್ಲ. ನಾವು ಬಂದರೂ ಪ್ರಕ್ರಿಯೆ ನಡೆಯಲೇ ಇಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.





ಧಾರವಾಡ: ಡಾ. ಬಿ.ಆರ್.ಅಂಬೇಡ್ಕರ್ ಜಯಂತಿ ದಿನ ಯಾವುದೇ ಸಂಘಟನೆಗಳ ಪ್ರತಿಭಟನೆ, ರ‍್ಯಾಲಿಗೆ ಅವಕಾಶ ನೀಡದಂತೆ ಭೀಮ-ಶಕ್ತಿ ಸಂಘಟನೆ ಉಪನಗರ ಠಾಣೆ ಮುಂದೆ ಪ್ರತಿಭಟಿಸಿ, ಮನವಿ ಸಲ್ಲಿಸಿದೆ.

ಆಧುನಿಕ ತಂತ್ರಜ್ಞಾನ ಸಹಕಾರಿ



ಧಾರವಾಡ: ಎಸ್‌ಡಿಎಂ ವೈದ್ಯಕೀಯ ಕಾಲೇಜಿನಲ್ಲಿ ವಾಕ್ ಮತ್ತು ಶ್ರವಣ ಚಿಕಿತ್ಸೆ ವಿಭಾಗದಿಂದ ಇತ್ತೀಚಿನ ಆಟಿಸಂಣ ಮಧ್ಯಸ್ಥಿಕೆ; ಸಮಗ್ರ, ಸಂಯೋಜಿತ ಮತ್ತು ಪುರಾವೆ ಆಧಾರಿತ ವಿಧಾನ ವಿಷಯದ ಕುರಿತು ಎರಡು ದಿನಗಳ ಕಾರ್ಯಾಗಾರ ಜರುಗಿತು.

ಕಾರ್ಯಾಗಾರ ಉದ್ಘಾಟಿಸಿದ ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಭಾಷಾತಜ್ಞೆ ಡಾ. ಜಯಶ್ರೀ ಶಾನಬಾಳ ಮಾತನಾಡಿ, ಆಟಿಸಂ ಸಮಸ್ಯೆಗಳನ್ನು ನಿವಾರಿಸಲು ಆಧುನಿಕ ತಂತ್ರಜ್ಞಾನ ಬಹಳಷ್ಟು ಸಹಕಾರಿಯಾಗಿದೆ ಎಂದರು.

ಆಟಿಸಂ ಕ್ಷೇತ್ರಕ್ಕೆ ನೀಡಿದ ಕೊಡುಗೆ ಮೆಲಕು ಹಾಕಿದ ಅವರು, ಈ ಆಟಿಸಂ ಚಿಕಿತ್ಸೆಯಲ್ಲಿ ಡಿಜಿಟಲ್ ಇಂಡಿಯಾ ಮೂಲಕವೇ ಪುನರ್ವಸತಿ ಕಲ್ಪಿಸಬೇಕು ಎಂದು ತಿಳಿಸಿದರು. ಕೊನೆಯಲ್ಲಿ ಡಾ. ಜಯಶ್ರೀ ಶಾನಬಾಳ ಅವರನ್ನು ಸನ್ಮಾನಿಸಲಾಯಿತು. ಉಪಕುಲಸಚಿವ ಡಾ.ಅಜಂತಾ ಜಿ.ಎಸ್., ಎಸ್‌ಡಿಎಂ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯ ವಿಜಯ ಕುಲಕರ್ಣಿ, ಹಣಕಾಸು ಅಧಿಕಾರಿ ವಿ.ಜಿ.ಪ್ರಭು, ಡಾ. ಚಿದೇಂದ್ರ ಶೆಟ್ಟರ, ಡಾ.ಸಂಜಯ ಪಾರಮಾರ, ಡಾ.ರಶ್ಮಿ, ಸಿಂಚನಾ, ಡಾ.ವಸೀಮ್ ಇದ್ದರು.

ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ

ಕುಂದಗೋಳ: ಇಂದಿನ ತಂತ್ರಜ್ಞಾನ ಯುಗದಲ್ಲಿ ವಂಶ ಪಾರಂಪರಿವಾಗಿ ಗಂಟಿ ಸುಡುಗಾರಸಿದ್ದರ ಕಲೆಯನ್ನು ವಿವಿಧ ರಾಜ್ಯಗಳಲ್ಲಿ ಪ್ರದರ್ಶನ ನೀಡುತ್ತಿರುವ ಕಲಾವಿದ ಯಲ್ಲಪ್ಪ ಡಕ್ಕಣ್ಣವರ ಅವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಬೇಕೆಂದು ಹಿರಿಯ ಜಾನಪದ ಕಲಾವಿದ ಎಸ್. ಎಸ್. ಹಿರೇಮಠ ಹೇಳಿದರು. ತಾಲೂಕಿನ ಹರಲಾಪೂರ ಗ್ರಾಮದ ಜಾನಪದ ಕ್ರೀಡಾ ರಂಗ ಕುಟೀರದಲ್ಲಿ ಆಯೋಜಿಸಿರುವ ಯುವಜನ ಹಾಗೂ ಸಾಂಸ್ಕೃತಿಕ ಅಭಿವೃದ್ಧಿ ಕೇಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯೋಗದಲ್ಲಿ ಲಿಂ.ಪಾರ್ವತೆಮ್ಮ ಚಂ. ನರೇಗಲ್ಲಮಠ ಅವರ ಸ್ಮರಣೆಗೆ ನಡೆಯುತ್ತಿರುವ ರಾಜ್ಯಮಟ್ಟದ ಮಕ್ಕಳ ಮಲ್ಲಕಂಬ ಜಾನಪದ ಯೋಗ ಶಿಬಿರದಲ್ಲಿ ಕಲಾವಿದ ಯಲ್ಲಪ್ಪ ಡಕ್ಕಣ್ಣವರ ಅವರಿಗೆ ಸನ್ಮಾನಿಸಿ ಮಾತನಾಡಿ, ಇಂತಹ ಪರಂಪರೆಯನ್ನು ಉಳಿಸಿ ಬೆಳೆಸುತ್ತಿರುವ ಇವರ ಕಾರ್ಯ ಶ್ಲಾಘನಿಯವಾಗಿದೆ. ಇವರಿಗೆ ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕಾರ ಲಭಿಸಿದೆ ಎಂದರು. ಕಲಾವಿದ ಯಲ್ಲಪ್ಪ ಡಕ್ಕಣ್ಣವರ ಮಾತನಾಡಿ, ನಮ್ಮ ಪೂರ್ವಿಕರು ಈ ಸಿದ್ಧಿಕಲೆಯನ್ನು ಕರಗತ ಮಾಡಿಕೊಂಡು ಸುತ್ತಾಡುತ್ತಿದ್ದರು. ನಾವು ಸಹ ನಮ್ಮ ಪರಂಪರೆಯ ಕಲೆಯನ್ನು ರಾಜ್ಯ ವ್ಯಾಪ್ತಿ ಸುತ್ತಾಡಿ ಜಾಗೃತಿ ಮೂಡಿಸುತ್ತಿರುವ ಕುರಿತು ಮಕ್ಕಳಲ್ಲಿ ಹಂಚಿಕೊಂಡರು. ಗಣೇಶ ಕಮ್ಮಾರ, ರುದ್ರಮುನಿ ಹಿರೇಮಠ, ಎನ್. ದೇವರಾಜ, ಸಂದೀಪ ಪಾಟೀಲ್, ಅಮೋಘ ಹಿರೇಮಠ ಹಾಗೂ ವಿದ್ಯಾರ್ಥಿಗಳು ಇದ್ದರು.



1200 ಫಲಾನುಭವಿಗಳ ಸಮಾವೇಶ



ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯ 35ನೇ ವಾರ್ಡ್‌ನ ಬೈರಿದೇವರಕೊಪ್ಪದ ಸರ್ಕಾರಿ ಶಾಲೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳ 1200 ಫಲಾನುಭವಿಗಳ ಸಮಾವೇಶವನ್ನು ವಿಧಾನ ಪರಿಷತ್ ಸದಸ್ಯ ಎಫ್. ಎಚ್. ಜಕ್ಕಪ್ಪನವರ ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ 11 ಅಂಗನವಾಡಿಯ ಕಾರ್ಯಕರ್ತರು ಹಾಗೂ ಸಹಾಯಕರಿಗೆ ಸನ್ಮಾನಿಸಲಾಯಿತು.

ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಜತ್ ಉಳ್ಳಾಗಡ್ಡಿಮಠ ಮಾತನಾಡಿ, ಕರ್ನಾಟಕದಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಈ ಐದು ಗ್ಯಾರಂಟಿ ಯೋಜನೆಗಳು ಮಹಿಳೆಯರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುವುದಲ್ಲದೆ, ಬಡ ಹಾಗು ಮಾಧ್ಯಮ ವರ್ಗದಲ್ಲಿ ಮಹಿಳೆಯರು ತಮ್ಮ ಕುಟುಂಬದ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಪುರುಷರ ಸಮಾನವಾಗಿ ಪ್ರಮುಖ ಪಾತ್ರ ವಹಿಸುವಂತೆ ಮಾಡಿವೆ. ಕಾಂಗ್ರೆಸ್ ಪಕ್ಷ ಜನರಿಗೆ ನೀಡಿದ ಭರವಸೆಯನ್ನು ಯಶಸ್ವಿಯಾಗಿ ಈಡೇರಿಸಿದೆ ಎಂದರು.

ಬಾಲವಿಕಾಸ್ ಅಕಾಡೆಮಿಯ ಅಧ್ಯಕ್ಷ ಅಡಿವೇಶ್ ಇಟಗಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಲ್ತಾಫ್ ಹಳ್ಳೂರ್, ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಪ್ರಕಾಶ್ ಹಳಿಯಾಲ್, ಜಿಲ್ಲಾ ಗ್ಯಾರಂಟಿ ಸಮಿತಿ ಉಪಾಧ್ಯಕ್ಷ ವೀರೇಶಯ್ಯ ಕಡಕೋಳಮಠ, ಸೆಂಟ್ರಲ್ ಕ್ಷೇತ್ರದ ಗ್ಯಾರಂಟಿ ಸಮಿತಿ ಅಧ್ಯಕ್ಷ ಸಂಗಮೇಶ್ ಗೌರಕ್ಕನವರ್, ಉಣಕಲ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷರೀಫ್ ಗರಗದ, ಬಸವರಾಜ ಬೆಲ್ಲದ್, ಪ್ರಕಾಶ್ ಮಾಯಕರ್ ಇದ್ದರು.

ಹುಬ್ಬಳ್ಳಿ
ಮಂಗಳವಾರ, 14 ಏಪ್ರಿಲ್ 2026
ಸಂಪುಟ 16, ಸಂಚಿಕೆ 20, ಪುಟಗಳು 14
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಇಂದು ಬಿಜೆಪಿ ಸಿಎಂ ಆಯ್ಕೆ? | ೦೨
ಈ ಬಾರಿ ಮುಂಗಾರು ಸಾಮಾನ್ಯಕ್ಕಿಂತ ಕಡಿಮೆ | ೦೨
ಬಂಗಾಳದಲ್ಲಿ ಬಿಜೆಪಿ ಸರ್ಕಾರ ರಚನೆ: ಶಾ | ೦೨

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಶತಭಿಷೆ

ದಿನದ ಮಾತು

ನಿರಪೇಕ್ಷ ಭಾವನೆಯಿಂದ ಚಿಕಿತ್ಸೆ ನೀಡುವವನೇ ನಿಜವಾದ ವೈದ್ಯ.
▲ಭರತ



ಅಂಬೇಡ್ಕರ್ ರಾಜಕೀಯ ಚಿಂತನೆಗಳ ಸತ್ಯ
• ವಿಶೇಷ ಪುಟ ೦೨

ಯುದ್ಧಮಧ್ಯಸ್ಥಿಕೆಯ ದೊಂಬರಾಟದಲ್ಲಿ ಸಿಲುಕಿರುವ ಪಾಕ್

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
• ಪುಟ ೬

ಕಿರುಸುದ್ದಿ

ಸಂಗೀತ ದಂತಕಥೆ ಆಶಾ ಭೋಸ್ಲೆಗೆ ವಿದಾಯ



• **ಮುಂಬೈ:** ಬಹು ಅಂಗಾಂಗ ವೈಫಲ್ಯದಿಂದಾಗಿ 92ನೇ ವಯಸ್ಸಿನಲ್ಲಿ ನಿಧನರಾದ ಸುಪ್ರಸಿದ್ಧ ಗಾಯಕಿ ಆಶಾ ಭೋಸ್ಲೆಯವರ ಅಂತ್ಯಕ್ರಿಯೆ ಸೋಮವಾರ ಶಿವಾಜಿ ಪಾರ್ಕ್‌ನಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ನಡೆಯಿತು.
• ಪುಟ ೨

ಪ್ರಧಾನಿಯಿಂದ ಭೈರವೈಕ್ಯ ಮಂದಿರ ಲೋಕಾರ್ಪಣೆ ನಾಳೆ
• ಪುಟ ೮

ಟಿಸಿಎಸ್ ನಾಸಿಕ್ ಘಟನೆ ತನಿಖೆಗೆ ಟಾಟಾ ಆದೇಶ
• ಪುಟ ೨

ನಮ್ಮ ರಕ್ಷಣೆಗೆ ಭಾರತದ ಆಧ್ಯಾತ್ಮಿಕ ಜ್ಞಾನ ನೆರವು
• ಪುಟ ೨

ನೋಯ್ಡಾ: ಹಿಂಸೆಗೆ ತಿರುಗಿದ ಪ್ರತಿಭಟನೆ
• ಪುಟ ೨

ಪಿಯುಸಿ ವಿದ್ಯಾರ್ಥಿಗಳಿಗೂ ಇನ್ನು ಪಠ್ಯಪುಸ್ತಕ ಉಚಿತ
• ಪುಟ ೮

ಪೊಲೀಸ್ ಠಾಣೆ ಮೇಲೆ ದಾಳಿಗೆ ಐಎಸ್ಐ ನಂಟು
• ಪುಟ ೨

ಮಹಿಳಾ ಮೀಸಲು ಅನುಷ್ಠಾನದಿಂದ ಹಿಂದಿನ ದೃಷ್ಟಿಕೋನ ಸಾಕಾರ, ಭವಿಷ್ಯದ ನಿರ್ಣಯ ಈಡೇರಿಕೆ: ಪ್ರಧಾನಿ ಮೋದಿ

ಶತಮಾನದ ನಿರ್ಧಾರ

• **ಹೊಸದಿಲ್ಲಿ:** ಭಾರತದ ಸಂಸತ್ತು 2029ರಲ್ಲಿ ಅನುಷ್ಠಾನಕ್ಕೆ ಬರುವ ಮಹತ್ವದ ಮಹಿಳಾ ಮೀಸಲಾತಿ ಕಾಯ್ದೆಯನ್ನು ಜಾರಿಗೆ ತರುವ ಮೂಲಕ ದಶಕಗಳ ಕಾಯುವಿಕೆಗೆ ಅಂತ್ಯಹಾಡಲಿದ್ದು, ಇದರೊಂದಿಗೆ ಭಾರತವು 21ನೇ ಶತಮಾನದ ಅತ್ಯಂತ ಮಹತ್ವದ ನಿರ್ಧಾರಗಳಲ್ಲೊಂದನ್ನು ತೆಗೆದುಕೊಳ್ಳುವ ಅಂಚಿನಲ್ಲಿ ನಿಂತಿದೆ ಎಂಬುದಾಗಿ ಪ್ರಧಾನಿ ನರೇಂದ್ರ ಮೋದಿಯವರು ಸೋಮವಾರ ತಿಳಿಸಿದ್ದಾರೆ.

ಏ.16ರಂದು ಸಂಸತ್ತಿನ ಮೂರು ದಿನಗಳ ವಿಶೇಷ ಅಧಿವೇಶನ ನಡೆಯಲಿದ್ದು, ಇದಕ್ಕೂ ಮುನ್ನ ಇಲ್ಲಿ ಮಹಿಳಾ ಸಮ್ಮೇಳನವೊಂದನ್ನು ಉದ್ದೇಶಿಸಿ ಅವರು ಮಾತನಾಡಿದರು. 'ನಾರೀ ಶಕ್ತಿ ವಂದನ್ ಅಧಿನಿಯಮ'ಕ್ಕೆ ತಿದ್ದುಪಡಿ ತರುವ ಮೂಲಕ ಹಿಂದಿನ ದೃಷ್ಟಿಕೋನಗಳನ್ನು ಸಾಕಾರಗೊಳಿಸಲಿದೆ ಮತ್ತು ಭವಿಷ್ಯದ ನಿರ್ಣಯಗಳನ್ನು ಈಡೇರಿಸಲಿದೆ. ಆಡಳಿತದಲ್ಲಿ ಮಹಿಳೆಯರ ಕೊಡುಗೆಗಳನ್ನು ಶ್ಲಾಘಿಸಿದ ಅವರು, ಅನೇಕ ಮಹಿಳೆಯರು ದೊಡ್ಡ ಪಾತ್ರಗಳನ್ನು ನಿರ್ವಹಿಸಲು ಸಜ್ಜಾಗಿ ಉತ್ಸಾಹದಿಂದ ಎದುರು ನೋಡುತ್ತಿದ್ದಾರೆ ಎಂದರು.



ನಮ್ಮ ದೇಶದ ಸಂಸತ್ತು ಹೊಸ ಇತಿಹಾಸ ಸೃಷ್ಟಿಸುವ ಸನಿಹದಲ್ಲಿದೆ. ಸಮಾನತಾ ನೆಲೆಗಟ್ಟಿನ ಭಾರತವೊಂದಕ್ಕಾಗಿ ಹಿಂದಿನ ದೃಷ್ಟಿಕೋನಗಳು ನನಸಾಗಲಿದ್ದು, ಭವಿಷ್ಯದ ನಿರ್ಣಯಗಳು ಕೂಡ ಪೂರ್ಣವಾಗಲಿವೆ. ಇಲ್ಲಿ ಸಾಮಾಜಿಕ ನ್ಯಾಯ ಕೇವಲ ಘೋಷಣೆಯಾಗಿರದೆ, ನಮ್ಮ ಕಾರ್ಯಸಂಸ್ಕೃತಿ ಮತ್ತು ನಮ್ಮ ನೀತಿ ನಿರೂಪಣಾ ಪ್ರಕ್ರಿಯೆಯ ಸಹಜ ಭಾಗವಾಗಿದೆ ಎಂಬುದನ್ನು ಎತ್ತಿಹಿಡಿಯಲಿದೆ ಎಂದರು.

2023ರಲ್ಲಿ ಮಹಿಳಾ ಮೀಸಲು ಶಾಸನವನ್ನು ಮಂಡಿಸಿದಾಗ ಎಲ್ಲ ಪಕ್ಷಗಳೂ ಸರ್ವಾನುಮತದಿಂದ ಇದನ್ನು ಅಂಗೀಕರಿಸಿದ್ದು, 2029ರೊಳಗೆ ಇದರ ಅನುಷ್ಠಾನವಾಗಬೇಕೆಂಬುದು ವಿಶೇಷವಾಗಿ ವಿಪಕ್ಷಗಳಿಂದ ಸೇರಿದಂತೆ ಇದೊಂದು ಸಾಮೂಹಿಕ ಬೇಡಿಕೆಯಾಗಿತ್ತು ಎಂದರು. ರಾಜ್ಯ ವಿಧಾನಸಭೆಗಳಿಂದ ಹಿಡಿದು ದೇಶದ ಸಂಸತ್ತಿನವರೆಗೆ ದಶಕಗಳಿಂದ ಇದ್ದ ಕಾಯುವಿಕೆಗೆ ಏ.16,17,18ರ ವಿಶೇಷ ಅಧಿವೇಶನ ಅಂತ್ಯ ಹಾಡಲಿದೆ. ಬಜೆಟ್ ಅಧಿವೇಶನವನ್ನು ಈ ಮಹಿಳಾ ಮೀಸಲು ತಿದ್ದುಪಡಿಗಳನ್ನು ಪರಿಗಣಿಸಿ ಅಂಗೀಕರಿಸುವುದಕ್ಕಾಗಿ ವಿಸ್ತರಿಸಲಾಗಿದೆ. ಪುಟ ೪



ಸಂಸದರ ಭೇಟಿ ಮಾಡಿ ನಿರೀಕ್ಷೆ, ಅಪೇಕ್ಷೆ ಹಂಚಿಕೊಳ್ಳಲು ಮನವಿ

ನಮ್ಮ ಪ್ರಯತ್ನ ಮತ್ತು ಆದ್ಯತೆಯೆಂದರೆ, ಈ ಕೆಲಸವನ್ನು ನಾವು ಸಂವಾದ, ಸಹಕಾರ ಮತ್ತು ಪಾಲ್ಗೊಳ್ಳುವಿಕೆಯ ಮೂಲಕ ಪೂರ್ಣಗೊಳಿಸಬೇಕು. ಇದರಿಂದ ಸಂಸತ್ತಿನ ಘನತೆ ಹೆಚ್ಚಾಗುತ್ತದೆ . ಈ ವಿಷಯದಲ್ಲಿ ಮಹಿಳೆಯರಲ್ಲಿನ ಉತ್ಸಾಹ ಸ್ವಾಗತಾರ್ಹ. ದೇಶಾದ್ಯಂತ ಮಹಿಳೆಯರು ವಿಧಾನಸಭೆ ಮತ್ತು ಲೋಕಸಭೆಯನ್ನು ತಲುಪುವ ಮೂಲಕ ತಮ್ಮ ಆಕಾಂಕ್ಷೆಗಳನ್ನು ಈಡೇರಿಸುವಲ್ಲಿ ಅವರ ಕನಸುಗಳಿಗೆ ಹೊಸ ರೆಕ್ಕೆಗಳು ಮೂಡಿವೆ. ಇದು ದೇಶದಲ್ಲಿ ಧನಾತ್ಮಕ ವಾತಾವರಣವೊಂದನ್ನು ಸೃಷ್ಟಿಸಿದೆ. ಈ ಸಂಪೂರ್ಣ ಪ್ರಕ್ರಿಯೆಯಲ್ಲಿ ತಮ್ಮ ಕ್ರಿಯಾಶೀಲ ಪಾಲ್ಗೊಳ್ಳುವಿಕೆಯನ್ನು ಕಾಯ್ದುಕೊಳ್ಳುವುದಕ್ಕಾಗಿ ತಮ್ಮ ಸಂಸದರನ್ನು ಭೇಟಿ ಮಾಡಿ ತಮ್ಮ ದೃಷ್ಟಿಕೋನ ಮತ್ತು ನಿರೀಕ್ಷೆಗಳನ್ನು ಹಂಚಿಕೊಳ್ಳಬೇಕೆಂದು ಮೋದಿಯವರು ಮಹಿಳೆಯರಲ್ಲಿ ಮೋದಿ ಮನವಿ ಮಾಡಿಕೊಂಡರು.

ಸ್ಥಳೀಯ ಸಂಸ್ಥೆಗಳಲ್ಲಿ 14 ಲಕ್ಷ ಮಹಿಳೆಯರು

ಮಹಿಳಾ ನಾಯಕತ್ವಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ ಪಂಚಾಯತ್ ರಾಜ್ ಸಂಸ್ಥೆಗಳಾಗಿದ್ದು, ದೇಶದ ಸ್ಥಳೀಯ ಸಂಸ್ಥೆಗಳಲ್ಲಿ 14 ಲಕ್ಷಕ್ಕೂ ಅಧಿಕ ಮಹಿಳೆಯರು ಇಂದು ಯಶಸ್ವಿಯಾಗಿ ಸಾಧನೆಗೈಯ್ಯುತ್ತಿದ್ದಾರೆ. ಸುಮಾರು 21 ರಾಜ್ಯಗಳಲ್ಲಿನ ಪಂಚಾಯತ್‌ಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ಪ್ರಮಾಣ ಸುಮಾರು ಶೇ.50ನ್ನು ಸಮೀಪಿಸಿದೆ. ಲಕ್ಷಾಂತರ ಮಹಿಳೆಯರು ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ಕ್ರಿಯಾಶೀಲ ಪಾತ್ರ ವಹಿಸುತ್ತಿರುವುದು ವಿಶ್ವದ ಪ್ರಮುಖ ನಾಯಕರು ಮತ್ತು ರಾಜಕೀಯ ತಜ್ಞರಲ್ಲಿ ಕೂಡ ಅಚ್ಚರಿಯುಂಟು ಮಾಡಿದೆ. ಇದು ಭಾರತದ ಹೆಮ್ಮೆಯನ್ನು ವೃದ್ಧಿಸಿದೆ ಎಂದರು. ಇಂದು ನೀತಿ ನಿರೂಪಣಾ ಪ್ರಕ್ರಿಯೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಿದ್ದು, ಇದು ವ್ಯವಸ್ಥೆಗಳನ್ನು ಸಂವೇದನಾಶೀಲಗೊಳಿಸಿದೆ. ಪುಟ ೪

ಇರಾನ್ ನೌಕಾ ನಿರ್ಬಂಧಕ್ಕೆ ಯುಎಸ್ ಸಜ್ಜು ಕೊಲ್ಲಿ, ಒಮಾನ್‌ಗೆ ಭಯ ಹೆಚ್ಚಿಸಿದ ಇರಾನ್

ಅಮೆರಿಕ ಬೆದರಿಕೆ ಇರಾನ್ ಎಚ್ಚರಿಕೆ

• **ಕೈರೋ:** ಅಮೆರಿಕದ ಸೇನೆ ಸೋಮವಾರದಿಂದ ಇರಾನ್‌ನ ಎಲ್ಲಾ ಬಂದರುಗಳು ಮತ್ತು ಕರಾವಳಿ ಪ್ರದೇಶಗಳ ಮೇಲೆ ನೌಕಾ ನಿರ್ಬಂಧ ಹೇರಲು ಸಿದ್ಧವಾಗಿದೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ಮೇಲೆ ಒತ್ತಡ ಹೆಚ್ಚಿಸಲು ಈ ಕ್ರಮ ಕೈಗೊಂಡಿದ್ದು, ಇದರಿಂದ ತೈಲದ ಬೆಲೆಗಳು ಏರಿಕೆಯಾಗುವ ಮತ್ತು ಯುದ್ಧ ಮತ್ತೊಮ್ಮೆ ತೀವ್ರಗೊಳ್ಳುವ ಅಪಾಯ ಉಂಟಾಗಿದೆ. ಇದಕ್ಕೆ ಪ್ರತಿಯಾಗಿ ಇರಾನ್ ಪರ್ಷಿಯನ್ ಕೊಲ್ಲಿ ಮತ್ತು ಒಮಾನ್ ಸಮುದ್ರದ ಎಲ್ಲಾ ಬಂದರುಗಳಿಗೆ ಬೆದರಿಕೆ ಹಾಕಿದೆ.



ಇರಾನ್ ಸರ್ಕಾರದ ಮಾಧ್ಯಮಗಳ ವರದಿಯಂತೆ, ಪರ್ಷಿಯನ್ ಕೊಲ್ಲಿ ಮತ್ತು ಒಮಾನ್ ಸಮುದ್ರದಲ್ಲಿ ಭದ್ರತೆ ಎಲ್ಲರಿಗೂ ಅಥವಾ ಯಾರಿಗೂ ಇಲ್ಲ. ಇರಾನ್ ಸೇನೆ ಮತ್ತು ರೆವಲ್ಯೂಶನರಿ ಗಾರ್ಡ್ ಪ್ರಕಟಿಸಿದ ಹೇಳಿಕೆಯಲ್ಲಿ, ಈ ಪ್ರದೇಶದ ಯಾವುದೇ ಬಂದರು ಸುರಕ್ಷಿತವಾಗಿರುವುದಿಲ್ಲ ಎಂದು ಎಚ್ಚರಿಸಲಾಗಿದೆ.

ಅಮೆರಿಕ ನೌಕಾ ನಿರ್ಬಂಧ: ಅಮೆರಿಕದ ಸೆಂಟ್ರಲ್ ಕಮಾಂಡ್ (CENTCOM) ಪ್ರಕಟಿಸಿದಂತೆ, ಭಾರತೀಯ ಕಾಲಮಾನ ಸೋಮವಾರ ಸಂಜೆ 6:30ರಿಂದ ಇರಾನ್ ಬಂದರುಗಳಿಗೆ ಪ್ರವೇಶಿಸುವ ಅಥವಾ ಹೊರಡುವ ಎಲ್ಲಾ ರಾಷ್ಟ್ರಗಳ ಹಡಗುಗಳ ಮೇಲೆ ನಿರ್ಬಂಧ ಜಾರಿಯಾಗುತ್ತದೆ. ಪುಟ ೪

ಅನಿಶ್ಚಿತತೆ ಮುಂದುವರಿಕೆ

ಏಪ್ರಿಲ್ 22ಕ್ಕೆ ಯುದ್ಧ ವಿರಾಮ ಅವಧಿ ಮುಗಿಯಲಿದ್ದು, ಅದರ ನಂತರ ಏನಾಗುತ್ತದೆ ಎಂಬುದರ ಬಗ್ಗೆ ಯಾವುದೇ ಸ್ಪಷ್ಟತೆ ಇಲ್ಲ. ಪಾಕಿಸ್ತಾನ ಮತ್ತು ಟರ್ಕಿ ದೇಶಗಳು ಮತ್ತೆ ಮಾತುಕತೆ ಆರಂಭಿಸಲು ಯತ್ನಿಸುತ್ತಿವೆ. ಪರಿಸ್ಥಿತಿ ಸುಧಾರಿಸಿದರೆ ಯುದ್ಧ ವಿರಾಮವನ್ನು ಇನ್ನಷ್ಟು ವಿಸ್ತರಿಸುವ ಸಾಧ್ಯತೆಯೂ ಇದೆ.



ಪರಮಾಣು ಕಾರ್ಯಕ್ರಮವೇ ಮೂಲ ಸಮಸ್ಯೆ

ಇರಾನ್‌ನ ಪರಮಾಣು ಕಾರ್ಯಕ್ರಮ ಈ ಸಂಘರ್ಷದ ಕೇಂದ್ರಬಿಂದು. ಇರಾನ್ ಶಾಂತಿಯುತ ಅಣುಶಕ್ತಿ ಅಭಿವೃದ್ಧಿ ಮಾಡುತ್ತಿರುವುದಾಗಿ ಹೇಳುತ್ತಿದ್ದರೂ, ಅಮೆರಿಕ ಮತ್ತು ಅದರ ಮಿತ್ರ ರಾಷ್ಟ್ರಗಳು ಅದನ್ನು ಅನುಮಾನದಿಂದ ನೋಡುತ್ತಿವೆ. ಈ ಯುದ್ಧದಲ್ಲಿ ಸಾವಿರಾರು ಮಂದಿ ಮೃತಪಟ್ಟಿದ್ದು, ಹಲವಾರು ದೇಶಗಳ ಮೂಲಸೌಕರ್ಯ ಹಾನಿಗೊಳಗಾಗಿದೆ. ಒಟ್ಟಾರೆ, ಈ ಪರಿಸ್ಥಿತಿ ಜಾಗತಿಕ ಆರ್ಥಿಕತೆ ಮತ್ತು ಭದ್ರತೆಯ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇದೆ.

ಅನಗತ್ಯ ಹೇಳಿಕೆ ನೀಡಿದರೆ ಶಿಸ್ತು ಕ್ರಮ: ಡಿ.ಕೆ.ಶಿವಕುಮಾರ್

ಶಾಸಕರಿಂದ ವರಿಷ್ಠರ ಭೇಟಿ ತಪ್ಪಲ್ಲ

• **ಬೆಂಗಳೂರು:** ಪಕ್ಷದ ಶಾಸಕರು ಹೈಕಮಾಂಡ್ ವರಿಷ್ಠರನ್ನು ಭೇಟಿಮಾಡುವುದರಲ್ಲಿ ತಪ್ಪೇನಿಲ್ಲ. ಅನವಶ್ಯಕವಾಗಿ ಏನೇನೋ ಹೇಳಿಕೆ ನೀಡಿದರೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದ್ದಾರೆ.



ಅಗತ್ಯ ಬಿದ್ದರೆ ತಾವು ಸಚಿವ ಸ್ಥಾನಕ್ಕೆ ರಾಜೀನಾಮೆಗೂ ಸಿದ್ಧ. ಹಿರಿಯ ಸಚಿವರು ರಾಜೀನಾಮೆ ನೀಡಬೇಕೆಂದು ಹೈಕಮಾಂಡ್ ತೀರ್ಮಾನ ತೆಗೆದುಕೊಂಡು ಬದಲಾವಣೆ ಮಾಡಬೇಕಾದರೆ ಅದನ್ನು ಪ್ರಶ್ನಿಸದೇ ಒಪ್ಪಿಕೊಳ್ಳಲೇಬೇಕಾಗುತ್ತದೆ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ಇದೇ ವೇಳೆ ಹೇಳಿದ್ದಾರೆ.

ಸೋಮವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದ ಬಳಿ ಮಾತನಾಡಿದ ಡಿಕೆ ಶಿವಕುಮಾರ್, ಪಕ್ಷದ ಶಿಸ್ತನ್ನು ಎಲ್ಲಾ ಶಾಸಕರು ಕಾಪಾಡಬೇಕು. ಪುಟ ೪

ಅಗತ್ಯವಾದರೆ ಸಚಿವ ಸ್ಥಾನಕ್ಕೆ ರಾಜೀನಾಮೆ: ಪರಮೇಶ್ವರ್

• **ಬೆಂಗಳೂರು:** ಹಿರಿಯ ಸಚಿವರು ರಾಜೀನಾಮೆ ನೀಡಬೇಕೆಂದು ಹೈಕಮಾಂಡ್ ತೀರ್ಮಾನ ತೆಗೆದುಕೊಂಡು ಬದಲಾವಣೆ ಮಾಡಬೇಕಾದರೆ ಅದನ್ನು ಪ್ರಶ್ನಿಸದೇ ಒಪ್ಪಿಕೊಳ್ಳಲೇ ಬೇಕಾಗುತ್ತದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ. ಸೋಮವಾರ ಮಾತನಾಡಿದ ಅವರು, ಹಿರಿಯ ಶಾಸಕರು ಸಚಿವ ಸ್ಥಾನ ಕೇಳಿರುವುದರಲ್ಲಿ ತಪ್ಪಿಲ್ಲ. ಆದರೆ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳಬೇಕು ಎಂದರು. ಪುಟ ೪



ತಮ್ಮದೇ ಹೆಸರಿನ ಸೇತುವೆ ಉದ್ಘಾಟಿಸಿದ ಸಿಎಂ ಸಿದ್ದರಾಮಯ್ಯ

ಕೇಂದ್ರಕ್ಕಿಂತ ರಾಜ್ಯದ ಆರ್ಥಿಕತೆ ಉತ್ತಮ

• **ಚಿಕ್ಕಮಗಳೂರು:** ಕರ್ನಾಟಕದ ಆರ್ಥಿಕ ಪರಿಸ್ಥಿತಿಯು ಕೇಂದ್ರ ಸರ್ಕಾರದ ಆರ್ಥಿಕ ಸ್ಥಿತಿಗಿಂತ ಉತ್ತಮವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.



ನರಸಿಂಹರಾಜಪುರದಿಂದ ಹಂದೂರು ಗ್ರಾಮಕ್ಕೆ ಭದ್ರಾ ಹಿನ್ನೀರಿನಲ್ಲಿ ಸುಮಾರು 35 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ಸೇತುವೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆಹಾಗೂವಿವಿಧಸವಲತ್ತುಗಳ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಗ್ಯಾರಂಟಿ ಯೋಜನೆಗಳಿಂದ ರಾಜ್ಯ ದಿವಾಳಿಯಾಗುತ್ತದೆ ಎಂದು ಟೀಕಿಸುವವರಿಗೆ ತಮ್ಮ ಸಾಧನೆಯೇ ಉತ್ತರವಾಗಿದೆ. ಕೇಂದ್ರದ ಜಿಡಿಪಿ ಬೆಳವಣಿಗೆ 7.14 ಆಗಿದ್ದರೆ, ರಾಜ್ಯದ ಜಿಡಿಪಿ ಬೆಳವಣಿಗೆ 8.01 ಆಗಿದೆ ಎಂದರು. ಸಿದ್ದರಾಮಯ್ಯ ಬಂದು ಕರ್ನಾಟಕವನ್ನು ಸಾಲಗಾರ ರಾಜ್ಯವನ್ನಾಗಿ ಮಾಡಿದ್ದಾರೆ ಎಂದು ದೂರುತ್ತಾರೆ. ಪುಟ ೪



ನುಡಿದಂತೆ ನಡೆದ ಸರ್ಕಾರ

ಕೇಂದ್ರ ಸರ್ಕಾರ ನಮ್ಮ ಜತೆ ಸಹಕರಿಸುತ್ತಿಲ್ಲ. ಭದ್ರಾ ಮೇಲ್ದಂಡೆ ಯೋಜನೆಗೆ 5300 ಕೋಟಿ ರೂ. ಕೊಡುತ್ತೇವೆ ಎಂದು 2023-24ರ ಕೇಂದ್ರ ಬಜೆಟ್‌ನಲ್ಲಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಘೋಷಣೆ ಮಾಡಿದ್ದರು. ಪುಟ ೪

ಪಟ್ಟಿಯಲ್ಲಿಲ್ಲದಿದ್ದರೆ ಮತ ಹಕ್ಕಿಲ್ಲ

• **ಹೊಸದಿಲ್ಲಿ:** ಪಶ್ಚಿಮ ಬಂಗಾಳದ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ವೇಳೆ ಮತದಾರರ ಪಟ್ಟಿಯಿಂದ ಹೆಸರು ಡಿಲೀಟ್ ಆದವರಿಗೆ ಮತ್ತು ಮೇಲ್ಮನವಿ ನ್ಯಾಯ ಮಂಡಳಿಗಳ ಮುಂದೆ ಇನ್ನೂ ವಿಚಾರಣೆ ಬಾಕಿ ಇರುವವರಿಗೆ, ಮಧ್ಯಂತರ ಮತದಾನದ ಹಕ್ಕು ನೀಡಲು ಸುಪ್ರೀಂಕೋರ್ಟ್ ನಿರಾಕರಿಸಿದೆ. ಏಪ್ರಿಲ್ 23 ಮತ್ತು 29ರಂದು ನಡೆಯಲಿರುವ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ಮುನ್ನ ನಡೆದ ವಿಶೇಷ ತೀವ್ರ ಪರಿಷ್ಕರಣೆ ನಂತರ ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕಲಾದವರ ಅರ್ಜಿಯನ್ನು ಭಾರತದ ಸುಪ್ರೀಂ ಕೋರ್ಟ್ ಸೋಮವಾರ ವಿಚಾರಣೆಗೆ ಸ್ವೀಕರಿಸಲು ನಿರಾಕರಿಸಿದೆ. ಮುಖ್ಯ ನ್ಯಾ. ಸೂರ್ಯಕಾಂತ್ ನೇತೃತ್ವದ, ನ್ಯಾ.ಜೋಯ್‌ಮಲ್ಯ ಬಾಗ್ಚಿ ಅವರನ್ನು ಒಳಗೊಂಡ ಪೀಠ, ಮೇಲ್ಮನವಿ ನ್ಯಾಯಮಂಡಳಿಗಳನ್ನೇ ಸಂಪರ್ಕಿಸಲು ಅತೃಪ್ತರಿಗೆ ಸೂಚಿಸಿದೆ. ಪುಟ ೪

ಎಸ್‌ಐಆರ್: ಮೇಲ್ಮನವಿ ನ್ಯಾಯಮಂಡಳಿ ಸಂಪರ್ಕಿಸಲು ಸುಪ್ರೀಂ ಸೂಚನೆ

ಆಯುಷ್ಮಾನ್ ಭಾರತ್‌ನಲ್ಲಿ ಹೆಚ್ಚು ಮಂದಿಗೆ ಚಿಕಿತ್ಸೆ

ಜಯದೇವ, ಕಿದ್ವಾಯಿಗೆ ಸ್ಥಾನ

▸ ನಂದಿನಿ ಎನ್.

ದಿಗಂತ ವಿಶೇಷ

• **ಬೆಂಗಳೂರು:** ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಉತ್ತಮ ಸೇವೆ ಮತ್ತು ಹೆಚ್ಚಿನ ರೋಗಿಗಳಿಗೆ ವೈದ್ಯಕೀಯ ಸೌಲಭ್ಯ ಒದಗಿಸಿದ ಆಸ್ಪತ್ರೆಗಳ ಪೈಕಿ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಮತ್ತು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಮುಂಚೂಣಿಯಲ್ಲಿದೆ.

ಹೃದಯ ಸಂಬಂಧಿತ ಕಾಯಿಲೆಗಳಿಗೆ ಉತ್ತಮ ಚಿಕಿತ್ಸೆ ನೀಡುವ ಜಯದೇವ ಹೃದ್ರೋಗ ಆಸ್ಪತ್ರೆಯು ಹಲವು ಹೆಗ್ಗಳಿಕೆಗೆ ಪಾತ್ರವಾಗಿದೆ. ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಉತ್ತಮ ಚಿಕಿತ್ಸೆ ನೀಡುತ್ತಿದೆ. ಜತೆಗೆ ಇತ್ತೀಚೆಗೆ ದೇಶದಲ್ಲೇ ಅತ್ಯುತ್ತಮ ಕ್ಯಾನ್ಸರ್ ಚಿಕಿತ್ಸಾ ಕೇಂದ್ರವಾಗಿ ಹೊರ ಹೊಮ್ಮಿದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಮತ್ತೊಂದು ಮೈಲಿಗಲ್ಲು ಸಾಧಿಸಿದೆ. ಚಿಕಿತ್ಸೆಗೆ ಬರುವವರಲ್ಲಿ ಬಹುತೇಕರು ಬಡ-ಮಧ್ಯಮ ವರ್ಗದವರಾಗಿದ್ದು, ಸರ್ಕಾರಿ ಯೋಜನೆಗಳ ಫಲಾನುಭವಿಗಳಾಗಿದ್ದಾರೆ. ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಸೇರಿದಂತೆ ಪ್ರತಿ ಯೋಜನೆಗೆ ಸಂಸ್ಥೆಯಲ್ಲಿ ಪ್ರತ್ಯೇಕ ವಿಭಾಗ ನಿರ್ಮಾಣ ಮಾಡಲಾಗಿದೆ. ಪುಟ ೪



ದೇಶದ ಅತ್ಯುನ್ನತ ಆಸ್ಪತ್ರೆ ಕಿದ್ವಾಯಿ

ಬಡರೋಗಿಗಳ ಆಶಾಕಿರಣ ಹಾಗೂ ವಿಶ್ವಮಟ್ಟದಲ್ಲಿ ಪ್ರಖ್ಯಾತಿ ಪಡೆದಿರುವ ರಾಜ್ಯದ ಪ್ರತಿಷ್ಠಿತ ಕ್ಯಾನ್ಸರ್ ಆಸ್ಪತ್ರೆಯಾದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಕರ್ನಾಟಕದ ಆಸ್ಪತ್ರೆಗಳ ಪೈಕಿ ಪ್ರಥಮ ಸ್ಥಾನ ಪಡೆದಿದೆ. 2025ರಲ್ಲಿ ದ ವೀಕ್ ಹನ್ಸಾ ಸಂಶೋಧನಾ ಸಮೀಕ್ಷೆಯಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಭಾರತದಲ್ಲಿ 5ನೇ ಸ್ಥಾನ ಪಡೆದಿದೆ. ಪುಟ ೪

ಶಿಕ್ಷಕರ ವರ್ಗಾವಣೆ ಭಾರೀ ಬದಲಾವಣೆ

ಪುಟ್ಟ ಮಗುವಿನ ತಾಯಿ, ಗರ್ಭಿಣಿ ಶಿಕ್ಷಕಿಯರು ಕೇಳಿದ ಕಡೆ ವರ್ಗ

• **ಬೆಂಗಳೂರು:** ಗರ್ಭಿಣಿ ಅಥವಾ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವಿರುವ ಶಿಕ್ಷಕಿಯರು ಬಯಸಿದ ಸ್ಥಳ ಆಯ್ಕೆಗೆ ಆದ್ಯತೆ ನೀಡುವ ಹಾಗೂ ಗುಣಮಟ್ಟದ ಶಿಕ್ಷಣ ನೀಡಲು ಶಿಕ್ಷಕರ ಹಿತ ಕಾಯುವ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ-2026ಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಕಳೆದ ವಿಧಾನ ಮಂಡಲ ಅಧಿವೇಶನದಲ್ಲಿ ಮಂಡಿಸಿದ್ದ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ-2026 ವನ್ನು ಸಹಿಗಾಗಿ ರಾಜ್ಯಪಾಲರಿಗೆ ಕಳುಹಿಸಲಾಗಿತ್ತು. ಪುಟ ೪

ವಿಧೇಯಕಕ್ಕೆ ಗವರ್ನರ್ ಅಂಕಿತ

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,55,000**(2,40,000) ಅಪರಂಜಿ ಚಿನ್ನ: **1,52,460**(1,52,840) ಆಭರಣ ಚಿನ್ನ: **1,39,750**(1,40,100) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **76,847**(702↓) ಎನ್‌ಎಸ್‌ಇ **23,842**(207↓)

$1 = ₹92.74

ನಾರೀಶಕ್ತಿಗೆ ಕೈ ಅಪಮಾನ: ಬಿವೈವಿ

•**ಬೆಂಗಳೂರು :** ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ಸಿನವರು ಮಹಿಳಾ ಮೀಸಲಾತಿ ಒಂದು ರಾಜಕೀಯ ಗಿಮಿಕ್ ಎಂದಿದ್ದಾರೆ. ಈ ಹೇಳಿಕೆಯ ಮೂಲಕ ದೇಶದ ನಾರೀಶಕ್ತಿಗೆ ಅಪಮಾನ ಮಾಡುವ ಕೆಲಸವನ್ನು ಕಾಂಗ್ರೆಸ್ ಪಕ್ಷದವರು ಮಾಡಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಹಿಳಾ ಮೀಸಲಾತಿಯು ನರೇಂದ್ರ ಮೋದಿ ಅವರು ತೆಗೆದುಕೊಂಡ ಐತಿಹಾಸಿಕ ನಿರ್ಣಯ. ಮಹಿಳೆಯರಿಗೆ ಶೇ. 33 ಮೀಸಲಾತಿ ನೀಡಬೇಕೆಂಬ ತೀರ್ಮಾನವು ಸುವರ್ಣಾಕ್ಷರದಲ್ಲಿ ಬರೆದಿಡಬೇಕಾದ ಮಹತ್ವದ ಕ್ಷಣ ಎಂದು ತಿಳಿಸಿದರು.

ಉಪ ಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸ: ಬಾಗಲಕೋಟೆ, ದಾವಣಗೆರೆ ದಕ್ಷಿಣವನ್ನು ಕಾಂಗ್ರೆಸ್ ಪಕ್ಷದಿಂದ ಕಿತ್ತುಕೊಳ್ಳುವಲ್ಲಿ ಯಶಸ್ವಿ ಆಗುತ್ತೇವೆ. ಎರಡೂ ಕಡೆ ಗೆಲ್ಲುವ ಸಂಪೂರ್ಣ ವಿಶ್ವಾಸ ನಮಗಿದೆ. ಆದರೆ, ಉಪ ಚುನಾವಣೆಯಲ್ಲಿ ರಾಜ್ಯದ ಮುಖ್ಯಮಂತ್ರಿಗಳು ವಿಧಾನಸೌಧ ಮತ್ತು ಆಡಳಿತವನ್ನು ಸಂಪೂರ್ಣ ಮರೆತು ಬಾಗಲಕೋಟೆಯಲ್ಲಿ 8–9 ದಿನಗಳ ಕಾಲ ತಮ್ಮ ತಂಡದ ಜೊತೆ ಸೂಟ್‌ಕೇಸ್ ಜೊತೆ ಅಲ್ಲೇ ಇದ್ದುದನ್ನು ನೋಡಿದ್ದೀರಿ. ದಾವಣಗೆರೆ ಬಗ್ಗೆ ಮುಖ್ಯಮಂತ್ರಿಗಳು ತಲೆ ಕೆಡಿಸಿಕೊಂಡಂತೆ ಕಾಣಲಿಲ್ಲ. ಮುಖ್ಯಮಂತ್ರಿಗಳು ಸಂಪೂರ್ಣ ಹತಾಶರಾಗಿದ್ದರು ಎಂದು ತಿಳಿಸಿದರು. ದಾವಣಗೆರೆ ಸೋಲಿನ ಮುನ್ಸೂಚನೆ ಲಭಿಸಿದ್ದರಿಂದ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಮುಖ್ಯಮಂತ್ರಿಗಳ ರಾಜಕೀಯ ಸಲಹೆಗಾರರ ರಾಜೀನಾಮೆ ಪಡೆಯುವಂತೆ ಸೂಚನೆ ನೀಡಿದೆ. ಸಚಿವಸಂಪುಟದ ವಿಸ್ತರಣೆಗೆ ಆಗ್ರಹಿಸಿ 38ಕ್ಕೂ ಹೆಚ್ಚು ಶಾಸಕರು ಈಗಾಗಲೇ ದಿಲ್ಲಿಯಲ್ಲಿ ಬೀಡು ಬಿಟ್ಟಿದ್ದಾರೆ. ಡಿ.ಕೆ.ಶಿವಕುಮಾರ್ ಬೆಂಬಲಿಗರು ಸಹ ದಿಲ್ಲಿ ಯಾತ್ರೆ ಪ್ರಾರಂಭ ಮಾಡಿದ್ದನ್ನು ಗಮನಿಸಿದರೆ, ಉಪ ಚುನಾವಣೆ ಫಲಿತಾಂಶದ ನಂತರ ಆಡಳಿತ ಪಕ್ಷವಾದ ಕಾಂಗ್ರೆಸ್ ಪಕ್ಷದಲ್ಲಿ ಅಲ್ಲೋಲಕಲ್ಲೋಲ ಆಗಲಿದೆ ಎಂದು ತಿಳಿಸಿದರು.

ರಾಜ್ಯದಲ್ಲೇ ಪ್ರಥಮ ಬಾರಿಗೆ ಪರಿಚಯ | ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ

ಶಾಲೆಯಲ್ಲಿ ಎಐ ರೋಬೊ ಶಿಕ್ಷಕಿ ಪಾಠ

•**ಕುಂದಾಪುರ:** 111 ವರ್ಷಗಳ ಭವ್ಯ ಇತಿಹಾಸ ಹೊಂದಿರುವ ಕುಂದಾಪುರ ತಾಲೂಕು ಬೈಂದೂರು ಶೈಕ್ಷಣಿಕ ವಲಯದ ವಂಡ್ಸೆ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಎ.ಐ ರೋಬೊ ಶಿಕ್ಷಕಿಯನ್ನು ಪರಿಚಯಿಸುವ ಮೂಲಕ ರಾಜ್ಯದ ಗಮನ ಸೆಳೆದಿದೆ. ಕರ್ನಾಟಕ ರಾಜ್ಯದಲ್ಲೇ ಪ್ರಥಮವಾಗಿ ಸರಕಾರಿ ಶಾಲೆಯೊಂದು ಬೋಧನೆಗೆ ಎ.ಐ ಟೀಚರ್ 'ಐರಿಸ್' ಅನ್ನು ಪರಿಚಯಿಸುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಕ್ರಾಂತಿಯೊಂದನ್ನು ಸೃಷ್ಟಿಸಿದೆ.



ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (ಎ.ಐ) ಶಿಕ್ಷಕಿ ಈಗಾಗಲೇ ಶಾಲೆಯಲ್ಲಿ ಕಾರ್ಯನಿರ್ವಹಣೆಗೆ ಸಜ್ಜಾಗಿದೆ. 2026–27ನೇ ಸಾಲಿನಲ್ಲಿ ಎ.ಐ ರೋಬೊ ಟೀಚರ್ ಬೋಧನೆ ಲಭ್ಯವಾಗಲಿದೆ. ಸದಾ ಹೊಸತನ, ಪ್ರಯೋಗಶೀಲತೆಯ ಮೂಲಕ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗುವ ವಂಡ್ಸೆ ಸರಕಾರಿ ಶಾಲೆಯಲ್ಲಿ ಸಂಪೂರ್ಣ ಖಾಸಗಿ ಸಹಭಾಗಿತ್ವದೊಂದಿಗೆ ಎ.ಐ. ಟೀಚರ್ ಅಳವಡಿಕೆ ಮಾಡಿಕೊಂಡಿರುವುದು ಮತ್ತೊಂದು ಸಾಧನೆಯಾಗಿದೆ.

2024ರಲ್ಲಿ ಕೇರಳ ರಾಜ್ಯದ ಶಾಲೆಯೊಂದರಲ್ಲಿ 'ಆರ್ಟಿಫಿಶಿಯಲ್ ಇಂಟೆಲಿಜೆನ್ಸ್' ಶಿಕ್ಷಕಿ ಐರಿಸ್ ಪರಿಚಯಿಸಲಾಗಿತ್ತು. ಇದೀಗ ವಂಡ್ಸೆ ಶಾಲೆ ಐರಿಸ್ ಪರಿಚಯಿಸಲು ಮುಂದಾಗಿದೆ. ಈಗಾಗಲೇ ಕಂಪೆನಿ ಐರಿಸ್‌ನ್ನು ಶಾಲೆಗೆ ನೀಡಿದೆ. ಮೇಕರ್ ಲ್ಯಾಬ್ಸ್ ಎಜುಟೆಕ್ ಪ್ರೈವೇಟ್ ಲಿಮಿಟೆಡ್‌ನ ಸಹಯೋಗದೊಂದಿಗೆ ಇದನ್ನು ಅಭಿವೃದ್ಧಿಪಡಿಸಲಾಗಿದೆ.

2016ರಲ್ಲಿ ಶತಮಾನೋತ್ಸವವನ್ನು ಆಚರಿಸಿಕೊಂಡ ಶಾಲೆಯನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲಿ ಶ್ರೀ ಮೂಕಾಂಬಿಕಾ ಚಾರಿಟೇಬಲ್ ಟ್ರಸ್ಟ್ ಸಾರಥ್ಯದಲ್ಲಿ ಎಸ್.ಡಿ.ಎಂಸಿ, ಹಳೆ ವಿದ್ಯಾರ್ಥಿ ಸಂಘ ಮತ್ತು ಶಿಕ್ಷಕರ ಸಹಕಾರದೊಂದಿಗೆ ಇವತ್ತು ಉಡುಪಿ ಜಿಲ್ಲೆಯಲ್ಲಿ ಒಂದು ಪ್ರತಿಷ್ಠಿತ ಶಾಲೆಯಾಗಿ ಮೂಡಿ ಬಂದಿದೆ. ಪೂರ್ವ ಪ್ರಾಥಮಿಕ ಶಾಲೆಯಿಂದ ಆಂಗ್ಲ ಭಾಷಾ ಭೋದನೆ ಆರಂಭಿಸಲಾಯಿತು. ಪ್ರಸ್ತುತ 350ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಬೆಂಗಳೂರಿಂದ ಮುಂಬೈಗೆ ವಂದೇ ಭಾರತ್ ಸ್ಲೀಪರ್ ರೈಲು

•**ಹೊಸದಿಲ್ಲಿ:** ಐಟಿ ಸಿಟಿ ಬೆಂಗಳೂರಿನಿಂದ ವಾಣಿಜ್ಯ ನಗರಿ ಮುಂಬೈಗೆ ನೂತನ ವಂದೇ ಭಾರತ್ ಸ್ಲೀಪರ್ ರೈಲು ಸಂಚಾರಕ್ಕೆ ಕೇಂದ್ರ ಸರ್ಕಾರ ಅಸ್ತು ಎಂದಿದೆ.

ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ, ಕಲ್ಯಾಣ ಕರ್ನಾಟಕ ಸಂಪರ್ಕಕ್ಕೆ ಅನುಕೂಲವಾಗುವಂತೆ ನೂತನ ವಂದೇ ಭಾರತ್ ರೈಲು ಆರಂಭಿಸಲು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಅವರು ಪ್ರಧಾನಿ ನರೇಂದ್ರ ಮೋದಿ ಮತ್ತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ ಅವರಿಗೆ ಮನವಿ ಸಲ್ಲಿಸಿ ಗಮನ ಸೆಳೆದಿದ್ದರು. ಇದೀಗ ಕೇಂದ್ರ ಸರ್ಕಾರ, ಸಚಿವ ಜೋಶಿ ಅವರ ಮನವಿಗೆ ಸ್ಪಂದಿಸಿದ್ದು, ಕಲ್ಯಾಣ ಕರ್ನಾಟಕದ ಮಾರ್ಗವಾಗಿ ಬೆಂಗಳೂರು–ಮುಂಬೈ ಮಧ್ಯೆ ಹೊಸ ವಂದೇ ಭಾರತ್ ಸ್ಲೀಪರ್ ರೈಲು ಸಂಚಾರಕ್ಕೆ ಅನುಮೋದನೆ ನೀಡಿದೆ. ಬೆಂಗಳೂರಿನಿಂದ ಕರ್ನಾಟಕದ ಮಧ್ಯಭಾಗವಾದ ತುಮಕೂರು, ದಾವಣಗೆರೆ, ಹಾವೇರಿ, ಹುಬ್ಬಳ್ಳಿ–ಧಾರವಾಡ ಮತ್ತು ಬೆಳಗಾವಿ ಮಾರ್ಗದ ಮೂಲಕ ವಾಣಿಜ್ಯ ನಗರಿ ಮುಂಬೈಗೆ ಬೆಂಗಳೂರು–ಮುಂಬೈ ಸೂಪರ್ ಫಾಸ್ಟ್ ರೈಲು ಕಲ್ಪಿಸುವಂತೆ ಸಚಿವ ಪ್ರಲ್ಹಾದ ಜೋಶಿ ಕೇಂದ್ರದ ಗಮನ ಸೆಳೆದಿದ್ದರು.

ಶೀಘ್ರವೇ ಈ ಸೂಪರ್ ಫಾಸ್ಟ್ ರೈಲು ಸಂಚಾರ ಪ್ರಾರಂಭಿಸಿ, ನಂತರದ ದಿನಗಳಲ್ಲಿ ಅದನ್ನು ವಂದೇ ಭಾರತ್ ಸ್ಲೀಪರ್ ರೈಲು ಆಗಿ ಬದಲಾಯಿಸುವ ಜೋಶಿ ಅವರ ಪ್ರಸ್ತಾವನೆಗೆ ಕೇಂದ್ರ ರೈಲ್ವೆ ಸಚಿವರಾದ ಅಶ್ವಿನಿ ವೈಷ್ಣವ್ ಮನ್ನಣೆ ನೀಡಿದ್ದಾರೆ.

ಕಲ್ಯಾಣ ಕರ್ನಾಟಕಕ್ಕೆ ಆದ್ಯತೆ: ರಾಜ್ಯದ ಅಭಿವೃದ್ಧಿ ಜತೆ ಕಲ್ಯಾಣ ಕರ್ನಾಟಕ ಭಾಗಕ್ಕೂ ಕೇಂದ್ರ ಸರ್ಕಾರ ಆದ್ಯತೆ ನೀಡುತ್ತಿದ್ದು, ಇದರಿಂದ ರಾಜ್ಯದಲ್ಲಿನ ವಾಣಿಜ್ಯ ಚಟುವಟಿಕೆಗಳ ಜೊತೆಗೆ ಉತ್ತಮ ಸಂಚಾರ ಸೌಲಭ್ಯವನ್ನೂ ಈ ನೂತನ ವಂದೇ ಭಾರತ್ ರೈಲು ಬಲವರ್ಧಿಸಲಿದೆ ಎಂದಿರುವ ಸಚಿವ ಪ್ರಲ್ಹಾದ ಜೋಶಿ, ಪ್ರಧಾನಿ ಮೋದಿ ಮತ್ತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ ಅವರಿಗೆ ಧನ್ಯವಾದ ಅರ್ಪಿಸಿದ್ದಾರೆ.

ಕಿಡಿ ನುಡಿ

•ವಾಸುದೇವರಾವ್ ಕಕ್ಕೆನೇಜಿ

◈ ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಇರಾನ್ ಅಮೇರಿಕಾ ಸಂಧಾನ ವಿಫಲ
– ಪ್ರಮುಖ ವರದಿ

–ಅಂತೂ ಎಂದಿನಂತೆ ಈ ಬಾರಿಯೂ ಪಾಕಿಸ್ತಾನದವರು ವಿಫಲರಾಗುವುದರಲ್ಲಿ ಸಫಲರಾದರು!

ದಿನ ಭವಿಷ್ಯ

ಮೇಷ ಕಚೇರಿಯಲ್ಲಿ ಹೆಚ್ಚು ಹೊಣೆ. ಇಂದಿನ ಬೆಳವಣಿಗೆ ಒತ್ತಡ ಹೆಚ್ಚಿಸಲಿದೆ. ಆತ್ಮೀಯರ ಜತೆ ಒಡನಾಟದಿಂದ ತುಸು ನೆಮ್ಮದಿ.

ವೃಷಭ ಗಮನವಿಟ್ಟು ಕೆಲಸ ಮಾಡಿದರೆ ಮಾತ್ರ ಗುರಿ ಸಾಧಿಸಬಹುದು. ಇದನ್ನು ಅರಿಯಿರಿ. ಬೇಕಾಬಿಟ್ಟಿ ಧೋರಣೆ ತ್ಯಜಿಸಿ. ಕೆಲ ಅಭ್ಯಾಸ ಬಿಟ್ಟುಬಿಡಿ.

ಮಿಥುನ ದೇಹಾರೋಗ್ಯ ಕಾಪಾಡಲು ಆದ್ಯತೆ ಕೊಡಿ. ದಂಪತಿ ಮಧ್ಯೆ ವಾಗ್ವಾದ ಸಂಭವ. ಒಬ್ಬರು ಮೌನ ತಾಳುವುದು ಉತ್ತಮ. ಆರ್ಥಿಕ ಒತ್ತಡ.

ಕಟಕ ನಿಮ್ಮ ಸುತ್ತಲಿನ ಪರಿಸ್ಥಿತಿ, ವ್ಯಕ್ತಿಗಳ ಜತೆ ಹೊಂದಿಕೊಳ್ಳಲು ಕಷ್ಟ ಪಡುವಿರಿ. ಮನೆಯವರ ಮಾತನ್ನು ವಿರೋಧಿಸಲು ಹೋಗಬೇಡಿ.

ಸಿಂಹ ಬದಲಾವಣೆಗೆ ಅಂಜಬೇಡಿ. ಅದುವೇ ನಿಮ್ಮ ಪ್ರಗತಿಗೆ ದಾರಿ. ಸುಮ್ಮನೇ ಕೂರುವುದು ಫಲ ನೀಡದು. ಮನೆ ಮಂದಿಯ ಸಹಕಾರ.

ಕನ್ಯಾ ಪ್ರಭಾವಿ ವ್ಯಕ್ತಿಗಳ ಸಂಪರ್ಕ. ಬಯಸಿದ ಕಾರ್ಯ ಸಂಪನ್ನ. ಹಣದ ವಿಚಾರದಲ್ಲಿ ರಿಸ್ಕ್ ತೆಗೆದುಕೊಳ್ಳಲು ಹೋಗಬೇಡಿ.

ತುಲಾ ಆತ್ಮೀಯರಿಂದ ಅಚ್ಚರಿಯ ಕೊಡುಗೆ. ಆರ್ಥಿಕವಾಗಿ ತುಸು ಹಿನ್ನಡೆ. ಒತ್ತಡದ ಕಾರ್ಯದಿಂದ ದೂರವಿರಿ. ಆರೋಗ್ಯ ಸುಸ್ಥಿರ.

ವೃಶ್ಚಿಕ ಉದ್ಯೋಗ ಅರಸುವವರಿಗೆ ಶುಭ ಸುದ್ದಿ. ವಿವಾಹ ಭಾಗ್ಯ ಕೂಡಿಬರಬಹುದು. ಆರ್ಥಿಕವಾಗಿ ಹಿನ್ನಡೆ ಕಾಣುವಿರಿ.

ಧನು ಆಹಾರ ಸೇವನೆ ಹಿತಮಿತವಾಗಿರಲಿ. ಆರೋಗ್ಯಕ್ಕೆ ಅದು ಅವಶ್ಯ. ಮನೆಯ ಬಿಕ್ಕಟ್ಟು ಬೇಗ ಪರಿಹಾರ ಕಾಣಲಿದೆ. ಹಠದ ಧೋರಣೆ ಬಿಡಿ.

ಮಕರ ವೃತ್ತಿ ಒತ್ತಡವು ಮನಶ್ಶಾಂತಿ ಕೆಡಿಸೀತು. ಧ್ಯಾನ ಸಹಕಾರಿ. ಹೊಸ ವ್ಯವಹಾರದಲ್ಲಿ ಈಗಲೇ ಹೂಡಿಕೆ ಮಾಡದಿರಿ. ಸ್ವಲ್ಪ ಕಾಲ ಕಾದುನೋಡಿ.

ಕುಂಭ ಬಾಕಿ ಇರುವ ಕಾರ್ಯ ಪೂರೈಸಲು ಇಂದು ಗಮನ ಕೊಡಿ. ಆದಾಯ ಹೆಚ್ಚಳದ ಸಂಕೇತ. ಆಪ್ತರ ಜತೆ ವಾಗ್ವಾದ ನಡೆದೀತು.

ಮೀನ ಮನೆಯವರ ಆರೋಗ್ಯ ಸಮಸ್ಯೆ ಚಿಂತೆಗೆ ಕಾರಣವಾದೀತು. ಕೆಲವು ವಿಚಾರದಲ್ಲಿ ಅತಿ ಭಾವುಕತೆ ತೋರುವಿರಿ. ದೃಢ ಮನಸ್ಸಿರಲಿ.

ರಾಹುಕಾಲ: 3.00– 4.30
ಗುಳಿಕಕಾಲ: 12.00–1.30

ಅದೃಷ್ಟ ಸಂಖ್ಯೆ: 5,9,3,1

ಚಂದ್ರದ್ರೋಣ ಪರ್ವತದಲ್ಲಿ ಸಿಸಿ ಕ್ಯಾಮೆರಾ ಅಳವಡಿಕೆ, ಸೆಕ್ಯೂರಿಟಿ ಸಿಬ್ಬಂದಿ ಅಗತ್ಯ

ಸುರಕ್ಷತೆಗೆ ಆದ್ಯತೆ ನೀಡಲಿ

▸ಸುರೇಶ್, ಚಿಕ್ಕಮಗಳೂರು

•**ಚಿಕ್ಕಮಗಳೂರು:** ಚಂದ್ರದ್ರೋಣಪರ್ವತತಪ್ಪಲಿನ ಮಾಣಿಕ್ಯಧಾರದ ಬಳಿ ನಡೆದ ಕೇರಳ ಮೂಲದ ಬಾಲಕಿ ಶ್ರೀನಂದಾ ನಾಪತ್ತೆ ಮತ್ತು ಸಾವಿನ ಪ್ರಕರಣವು ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಪೊಲೀಸ್ ಇಲಾಖೆ, ಜಿಲ್ಲಾಡಳಿತಕ್ಕೆ ಪಾಠವಾಗಬೇಕಿದೆ.

ಪ್ರವಾಸಿ ತಾಣಗಳಲ್ಲಿ ಇಂತಹ ಆಕಸ್ಮಿಕ ಅವಘಡಗಳು ಸಾಮಾನ್ಯ ಎಂದು ತಳ್ಳಿಹಾಕುವುದು ಸುಲಭ. ಆದರೆ ಶ್ರೀನಂದಾ ಪ್ರಕರಣದಲ್ಲಿ ಹಲವು ರೀತಿಯ ಮುನ್ನೆಚ್ಚರಿಕೆಯ ವಿಫಲತೆಗಳು ಎದ್ದು ಕಾಣುತ್ತವೆ. ಈ ಕಾರಣಕ್ಕೆ ಈ ಪ್ರಕರಣ ಇನ್ನೂ ನಿಗೂಢವಾಗಿಯೇ ಉಳಿದಿದೆ. ಘಟನೆ ನಡೆದ ಸ್ಥಳದಲ್ಲಿ ಸಿಸಿ ಕ್ಯಾಮೆರಾ ಸೇರಿದಂತೆ ಸುತ್ತಲ ಪ್ರದೇಶದ ಮೇಲೆ ಕಣ್ಣಿಡಲು ಒಂದಷ್ಟು ಖಾಸಗಿ ಸೆಕ್ಯೂರಿಟಿಗಳು ಅಥವಾ ಸರ್ಕಾರಿ ಸಿಬ್ಬಂದಿಗಳನ್ನು ನೇಮಿಸಿದ್ದರೆ ಬಾಲಕಿ ಸಾವನ್ನು ತಡೆಯುವ ಸಾಧ್ಯವಿತ್ತೇನೋ? ಅಥವಾ ಪ್ರಕರಣವನ್ನು ಬೇಗನೇ ಪತ್ತೆ ಹಚ್ಚಲು ಸಾಧ್ಯವಿತ್ತು ಎನ್ನುವ ಅಭಿಪ್ರಾಯಗಳು ಈಗ ಪ್ರವಾಸಿಗರು ಹಾಗೂ ಸಾರ್ವಜನಿಕರಲ್ಲಿ ವ್ಯಕ್ತವಾಗುತ್ತಿದೆ.

ಪ್ರವಾಸೋದ್ಯಮ ಕ್ಷೇತ್ರದಲ್ಲಿ ದೇಶ, ವಿದೇಶದ ಗಮನ ಸೆಳೆದಿರುವ ಚಂದ್ರದ್ರೋಣ ಪರ್ವತ ಸಾಲಿನ ತಾಣಗಳಿಗೆ ಪ್ರತಿದಿನ ಸಹಸ್ರಾರು ಮಂದಿ ಭೇಟಿ ನೀಡುತ್ತಿದ್ದಾರೆ. ಇದರಿಂದ ಪ್ರವಾಸೋದ್ಯಮ ಹಾಗೂ ಆರ್ಥಿಕ ಚಟುವಟಿಕೆಗೆ ಉತ್ತೇಜನ ಸಿಕ್ಕಿದೆ. ಉದ್ಯೋಗ ಸೃಷ್ಟಿಯೂ ಆಗಿದೆ. ಹೀಗಿರುವಾಗ ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ, ಕಾನೂನು ಪ್ರಕ್ರಿಯೆಗಳಿಗೆ ಸಹಕಾರಿ ಆಗುವಂತಹ ಕ್ರಮಗಳನ್ನು ಜಿಲ್ಲಾಡಳಿತ ಕೈಗೊಳ್ಳಲೇ ಬೇಕಿದೆ.

ಪ್ರಮುಖವಾಗಿ ಹೆಚ್ಚು ಪ್ರವಾಸಿಗರ ದಟ್ಟಣೆ ಇರುವ ತಾಣಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸುವುದು, ಸೆಕ್ಯೂರಿಟಿ ಸಿಬ್ಬಂದಿಗಳನ್ನು ನೇಮಿಸುವುದು, ಸಿಸಿ ಕ್ಯಾಮೆರಾ ಕಣ್ಗಾವಲಿನಲ್ಲಿರುವ ಕುರಿತು ಹಾಗೂ ಅಪಾಯಕಾರಿ ಸ್ಥಳಗಳ ಕುರಿತು ಎಚ್ಚರಿಕೆ ಫಲಕಗಳನ್ನು ಅಳವಡಿಸುವುದು ಅಗತ್ಯವಿದೆ. ಇಂತಹ ಕ್ರಮದಿಂದ ಹೊರಗಿನಿಂದ ಬರುವ ಪ್ರವಾಸಿಗರಲ್ಲಿ ಸುರಕ್ಷಾ ಭಾವನೆ ಮೂಡಿಸಲು ಅನುಕೂಲವಾಗುತ್ತದೆ.

ದತ್ತಪೀಠದಲ್ಲಿ ಅಳವಡಿಸಿರುವಂತೆಯೇ ಮಾಣಿಕ್ಯಧಾರದ ವಾಹನ ನಿಲುಗಡೆ ಸ್ಥಳ, ವೀಕ್ಷಣಾ ಗೋಪುರ, ಸ್ನಾನಘಟ್ಟಗಳ ಬಳಿ ಕಡ್ಡಾಯವಾಗಿ ಸಿಸಿ ಕ್ಯಾಮರಾಗಳು ಹಾಗೂ ಸಿಬ್ಬಂದಿಗಳನ್ನು ನೇಮಿಸಬೇಕಿದೆ.

ಹೊನ್ನಮ್ಮನ ಹಳ್ಳದಲ್ಲಿ ಬೇಸಿಗೆ ದಿನಗಳಲ್ಲಿ ಭಾರೀ ಪ್ರಮಾಣದ ಹೂಳು ತುಂಬಿರುತ್ತದೆ. ನೀರಿನಲ್ಲಿ ಮಿಂದು ಮೈಮರೆಯುವ ಪ್ರವಾಸಿಗರು ಹಳ್ಳದಲ್ಲಿ ಕಾಲಿಟ್ಟರೆ ಸೆಳೆತಕ್ಕೊಳಗಾಗಿ ಸಾವು ಸಂಭವಿಸುವುದು ನಿಶ್ಚಿತ. ಈ ಕಾರಣಕ್ಕೆ ಇಲ್ಲಿ ಸಿಸಿ ಕ್ಯಾಮರಾಗಳ ಜೊತೆಗೆ ರೈಲಿಂಗ್ ಅಳವಡಿಸಬೇಕಿದೆ. ಹೊನ್ನಮ್ಮನಹಳ್ಳ ಮೇಲ್ಭಾಗದಲ್ಲಿರುವ ಶೋಲಾ ಅರಣ್ಯಕ್ಕೆ ಪ್ರವಾಸಿಗರು ಪ್ರವೇಶಿಸುವುದನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಬೇಕಿದೆ.



ದಿಗಂತ ವಿಶೇಷ

ಜಟಿಲ ಸಮಸ್ಯೆ

ಇಡೀ ಜಿಲ್ಲೆಯನ್ನು ತಲ್ಲಣಗೊಳಿಸಿದ ಶ್ರೀನಂದಾ ಸಾವಿನ ಘಟನೆ ಕೇವಲ ಒಂದು ಆತ್ಮಹತ್ಯೆಯೋ, ಅಸಹಜ ಸಾವಿನ ಪ್ರಕರಣಕ್ಕೆ ಮಾತ್ರ ಸೀಮಿತವಾಗಿಲ್ಲ. ಆಕೆ ನಾಪತ್ತೆಯಾದಾಗಿನಿಂದ ಶವವಾಗಿ ಪತ್ತೆಯಾಗುವವರೆಗೆ ನಾಲ್ಕು ದಿನಗಳ ಕಾಲ ಕುಟುಂಬ ಅನುಭವಿಸಿದ ಯಾತನೆ, ಪೊಲೀಸ್ ಇಲಾಖೆ, ಜಿಲ್ಲಾಡಳಿತ, ಶೋಧ ಕಾರ್ಯದಲ್ಲಿ ತೊಡಗಿಸಿಕೊಂಡ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿ, ಸ್ವಯಂ ಸೇವಕರ ಪರಿಶ್ರಮ ಎಲ್ಲವನ್ನೂ ಹತ್ತಿರದಿಂದ ಕಂಡವರಿಗೆ ಪ್ರಕರಣದ ಗಂಭೀರತೆ, ಕಾನೂನು ಪ್ರಕ್ರಿಯೆಗಳನ್ನು ಪೂರೈಸುವ ಸವಾಲುಗಳು ಎಷ್ಟು ಜಟಿಲ ಎನ್ನುವುದು ಅರಿವಿಗೆ ಬರಲು ಸಾಧ್ಯ.

ಗಿರಿ ಭಾಗದ ಪ್ರಮುಖ ತಾಣಗಳಲ್ಲಿ ಸಿಸಿ ಕ್ಯಾಮೆರ ಅಳವಡಿಸುವುದು, ಶೌಚಾಲಯ, ಸ್ವಚ್ಛತೆ ನಿರ್ವಹಣೆ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸುವ ವಿಚಾರ ಇಲಾಖೆ ಮುಂದಿದೆ. ಪಿಪಿಪಿ ಮಾದರಿಯಲ್ಲಿ ಇದನ್ನು ಅನುಷ್ಠಾನಕ್ಕೆ ತರುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅನುಮೋದನೆ ಸಿಕ್ಕಲ್ಲಿ ಕಾರ್ಯಗತಗೊಳಿಸುತ್ತೇವೆ.
■ **ಲೋಹಿತ್, ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ**

ಪ್ರವಾಸಿಗರು ಹೆಚ್ಚು ಭೇಟಿ ನೀಡುವ ಗಿರಿ ಭಾಗದ ಪ್ರದೇಶಗಳನ್ನು ಡಾರ್ಕ್ ಸ್ಪಾಟ್‌ಗಳೆಂದು ಗುರುತಿಸಿ ಅಗತ್ಯವಿರುವ ಎಲ್ಲಾ ಸುರಕ್ಷಾ ಕ್ರಮ ಹಾಗೂ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕಿದೆ.
■ **ಕೆ.ಎಸ್.ಗುರುವೇಶ್, ಸಂಚಾಲಕರು, ಚಂದ್ರ ದ್ರೋಣ ಪರ್ವತ ತಪ್ಪಲು ಅಭಿವೃದ್ಧಿ ಸಮಿತಿ**

ಶತಮಾನದ ನಿರ್ಧಾರ

ಪುಟ 1➜ '2023ರಲ್ಲಿ, ಹೊಸ ಸಂಸತ್ತಿನಲ್ಲಿ, ನಾವು ನಾರೀ ಶಕ್ತಿ ವಂದನ ಕಾಯ್ದೆಯ ರೂಪದಲಿ ಮೊದಲ ಹೆಜ್ಜೆ ಇಟ್ಟಿದ್ದೇವೆ... ನಮ್ಮ ರಾಷ್ಟ್ರದ ಅಭಿವೃದ್ಧಿ ಪ್ರಯಾಣದಲ್ಲಿ ಈ ನಿರ್ಣಾಯಕ ಮೈಲಿಗಲ್ಲುಗಳ ಮಧ್ಯೆ, ಭಾರತವು 21 ನೇ ಶತಮಾನದ ಅತ್ಯಂತ ಮಹತ್ವದ ನಿರ್ಧಾರಗಳಲ್ಲಿ ಒಂದಾದ 'ನಾರೀ ಶಕ್ತಿ'ಗೆ ಮೀಸಲಾದ ನಿರ್ಧಾರವನ್ನು ತೆಗೆದುಕೊಳ್ಳುವ ಅಂಚಿನಲ್ಲಿದೆ.' ಈ ನಿರ್ಧಾರವು ನಮ್ಮ ಕಾಲದ ಅತ್ಯಂತ ಪ್ರಮುಖ ನಿರ್ಧಾರಗಳಲ್ಲಿ ಒಂದಾಗಿರುತ್ತದೆ ಎಂದು ನಾನು ಬಹಳ ಜವಾಬ್ದಾರಿಯಿಂದ ಹೇಳಬಲ್ಲೆ, ಇದು ಮಹಿಳೆಯರ ಸಬಲೀಕರಣಕ್ಕೆ ಮೀಸಲಾದ ನಿರ್ಧಾರ, ಸ್ತ್ರೀತ್ವದ ಶಕ್ತಿ ಮತ್ತು ಪೂಜ್ಯತೆಗೆ ನಿಜವಾದ ಗೌರವವಾಗಿರಲಿದೆ ಎಂದು ಅವರು 'ನಾರೀ ಶಕ್ತಿ ವಂದನ ಸಮ್ಮೇಳನ'ದಲ್ಲಿ ನುಡಿದರು.

2023ರ ಸೆಪ್ಟೆಂಬರ್‌ನಲ್ಲಿ ಸಂಸತ್ತು ಅಂಗೀಕರಿಸಿದ 'ನಾರೀಶಕ್ತಿ ವಂದನ್ ಅಧಿನಿಯಮ' ಮಹಿಳಾ ಮೀಸಲು ಕಾಯ್ದೆಯೆಂದೇ ಕರೆಯಲ್ಪಟ್ಟಿದ್ದು, ಇದರಂತೆ, ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದರಷ್ಟು (ಶೇ.33) ಸ್ಥಾನಗಳನ್ನು ಮೀಸಲಿರಿಸಲಾಗುವುದು. ಈ ಹೊಸ ಮಸೂದೆ ಮಂಡನೆಯಾಗದೆ ಇರುತ್ತಿದ್ದಲ್ಲಿ, ಈಗ ಇರುವ ಕಾನೂನಿನಂತೆ ಮಹಿಳಾ ಮೀಸಲು ಮಸೂದೆ 2034ರೊಳಗೆ ಅನುಷ್ಠಾನಕ್ಕೆ ಬರಲು ಸಾಧ್ಯವಾಗುತ್ತಿರಲಿಲ್ಲ, ಯಾಕೆಂದರೆ 2027ರ ಜನಗಣತಿಯ ಬಳಿಕ ಕ್ಷೇತ್ರ ವಿಂಗಡಣೆ ಪ್ರಕ್ರಿಯೆ ಪೂರ್ಣಗೊಳ್ಳಬೇಕಾದುದರಿಂದ ಈ ವಿಳಂಬ ಕಾಣಬೇಕಾಗಿ ಬರುತ್ತಿತ್ತು. ಆದ್ದರಿಂದ 2029ರ ಲೋಕಸಭಾ ಚುನಾವಣೆಯಲ್ಲೇ ಇದು ಜಾರಿಗೆ ಬರಬೇಕಾಗಿದ್ದಲ್ಲಿ ಈ ಶಾಸನಕ್ಕೆ ತಿದ್ದುಪಡಿಗಳನ್ನು ತರಬೇಕಾದ ಅಗತ್ಯವಿದ್ದು, ಇದಕ್ಕಾಗಿ ಕೇಂದ್ರದ ನರೇಂದ್ರ ಮೋದಿ ಸರಕಾರ ವಿಶೇಷ ಅಧಿವೇಶನ ಕರೆದಿದೆ. ಈ ತಿದ್ದುಪಡಿಗಳು ಅಂಗೀಕಾರವಾದಲ್ಲಿ, ಲೋಕಸಭಾ ಸ್ಥಾನಗಳ ಸಂಖ್ಯೆ 816ಕ್ಕೇರಲಿದ್ದು, ಮಹಿಳೆಯರಿಗೆ 273 ಸ್ಥಾನಗಳ ಮೀಸಲು ಲಭಿಸಲಿದೆ. ಈ ಮೂಲಕ ಮಹಿಳೆಯರ ಪಾಲ್ಗೊಳ್ಳುವಿಕೆಯು ದೇಶದ ಪ್ರಜಾತಂತ್ರವನ್ನು ಬಲಗೊಳಿಸಲಿದೆ ಎಂದು ಮೋದಿಯವರು ತಿಳಿಸಿದರು.

ಸ್ಥಳೀಯ ಸಂಸ್ಥೆಗಳಲ್ಲಿ 14 ಲಕ್ಷ ಮಹಿಳೆಯರು

ಪುಟ 1➜ ಇದರಿಂದ ಜಲ, ಶಿಕ್ಷಣ, ಆರೋಗ್ಯ ಮತ್ತು ಪೌಷ್ಟಿಕತೆಯಂತಹ ವಿಷಯಗಳಲ್ಲಿ ಹೆಚ್ಚು ಸಮರ್ಪಣಾ ಕಾರ್ಯಗಳಿಗೆ ಕಾರಣವಾಗಿದೆ. ಪಂಚಾಯತ್ ಮಟ್ಟದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಜಲಜೀವನ್ ಮಿಷನ್‌ನ ಯಶಸ್ಸು ಸಾಕ್ಷಿಯಾಗಿದ್ದು, ಪಂಚಾಯತ್ ಮಟ್ಟದಲ್ಲಿ ಮಹಿಳೆಯರು ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಪಂಚಾಯತ್ ಮಟ್ಟದಲ್ಲಿನ ಅವರ ವರ್ಷಗಳ ಅನುಭವ ಅವರನ್ನು ಇನ್ನಷ್ಟು ದೊಡ್ಡ ಪಾತ್ರಗಳಿಗೆ ಸನ್ನದ್ಧರಾಗುವಂತೆ ಮಾಡಿದೆ. ಹೆಣ್ಣು ಭ್ರೂಣ ಹತ್ಯೆ ತಡೆಗೆ ಬೇಟಿ ಬಚಾವೋ –ಬೇಟಿ ಪಢಾವೋ ಅಭಿಯಾನ, ಗರ್ಭಿಣಿಯರಿಗೆ ಸೂಕ್ತ ಪೌಷ್ಟಿಕತೆ ಕಲ್ಪಿಸಲು ಮಾತೃವಂದನ್ ಯೋಜನೆಯಡಿ 5000 ರೂ.ಗಳ ಹಣಕಾಸು ನೆರವು, ಹೆಣ್ಣುಮಕ್ಕಳ ಶಿಕ್ಷಣಕ್ಕೆ ಬಲ ನೀಡಲು ಹೆಚ್ಚಿನ ಬಡ್ಡಿಯನ್ನು ಒದಗಿಸುವ ಸುಕನ್ಯಾ ಸಮೃದ್ಧಿ ಯೋಜನೆ ಸೇರಿದಂತೆ ಹುಟ್ಟಿನಿಂದ ಕೊನೆಯವರೆಗೆ ವಿವಿಧಯೋಜನೆಗಳ ಮೂಲಕ ಸಹೋದರಿಯರು ಮತ್ತು ಪುತ್ರಿಯರ ಸೇವೆಗೆ ತಮ್ಮ ಸರಕಾರ ಸಿದ್ಧವಿರುವುದನ್ನು ಮೋದಿಯವರು ಎತ್ತಿತೋರಿದರು.

ಕೇಂದ್ರಕ್ಕಿಂತ ರಾಜ್ಯದ ಆರ್ಥಿಕತೆ ಉತ್ತಮ

ಪುಟ 1➜ ಕಳೆದ ವರ್ಷ ಕ್ಯಾಪಿಟಲ್ ಎಕ್ಸ್‌ಪೆಂಡಿಚರ್ 72,300 ಕೋಟಿ ರೂ. ಈ ವರ್ಷ 84 ಸಾವಿರ ಕೋಟಿಗೂ ಹೆಚ್ಚು ಖರ್ಚು ಮಾಡಿದ್ದೇವೆ. ಇಷ್ಟಾದರೂ ಬಿಜೆಪಿಯವರು ಸುಳ್ಳು ಹೇಳುತ್ತಾರೆ. ಸುಳ್ಳೇ ಅವರ ಮನೆ ದೇವರು ಎಂದು ದೂರಿದರು.

ಕೇಂದ್ರ ಸರ್ಕಾರ 2014 ಮಾರ್ಚ್‌ವರೆಗೆ ಇದ್ದ ಸಾಲ ಒಟ್ಟು 53,11,000 ಕೋಟಿ ರೂ. ಆದರೆ ಈಗ ಅದು 218 ಲಕ್ಷ 18 ಸಾವಿರ ಕೋಟಿ ರೂ.ಗೆ ಏರಿಕೆ ಆಗಿದೆ. ನರೇಂದ್ರ ಮೋದಿ ಅವರು ಬಂದ ಮೇಲೆ 165 ಲಕ್ಷ 65 ಸಾವಿರ ಕೋಟಿ ರೂ.ಸಾಲ ಮಾಡಿದ್ದಾರೆ ಎಂದರು. ಫಿಸಿಕಲ್ ಡಿಫಿಸಿಟ್ ಜಿಡಿಪಿಯ ಶೇ.3ರ ಒಳಗೆ ಇರಬೇಕು. ನಮ್ಮದು ಶೇ.2.95ರಷ್ಟಿದೆ. ಸಾಲ ಜಿಡಿಪಿಯ ಶೇ.25 ರೊಳಗಿರಬೇಕು. ನಮ್ಮದು ಶೇ.24.95 ಇದೆ. ನಮ್ಮ ಆರ್ಥಿಕ ಪರಿಸ್ಥಿತಿ ಸದೃಢವಾಗಿದೆ ಎಂದರು.

ಕೇಂದ್ರದ ಫಿಸಿಕಲ್ ಡಿಫಿಸಿಟ್ ಶೇ.4.3 ಆಗಿದೆ. ಅವರಿಗಿಂತ ನಾವು ಆರ್ಥಿವಾಗಿ ಉತ್ತಮವಾಗಿದ್ದೇವೆ. ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದ ಮೇಲೆ ಕರ್ನಾಟಕ ಸರ್ಕಾರ ಆರ್ಥಿಕ ದಿವಾಳಿ ಆಗಿದೆ ಎಂದರೆ ಅದು ಸುಳ್ಳಲ್ಲವೇ ಎಂದು ಪ್ರಶ್ನಿಸಿದರು.

ವಿಜಯೇಂದ್ರ ಎಂಬುವರಿದ್ದಾರೆ. ಬಿಜೆಪಿ ಅಧ್ಯಕ್ಷರು ಅವರು. ಶ್ವೇತಪತ್ರ ಮಂಡಿಸಿ ಅಂತಾನೆ. ಬಜೆಟ್ಟನ್ನು ಓದುವುದಿಲ್ಲ, ಬಜೆಟ್ ಮೇಲೆ ಚರ್ಚೆ ಮಾಡುವುದಿಲ್ಲ, ಇದೆಲ್ಲ ಪ್ರಚಾರಕ್ಕಾಗಿ ಆಡುವ ಮಾತು ಎಂದು ವಾಗ್ದಾಳಿ ನಡೆಸಿದರು.

15ನೇ ಹಣಕಾಸು ಆಯೋಗ ಶಿಫಾರಸು ಮಾಡಿರುವ 5,495 ಕೋಟಿ ರೂ. ಅನುದಾನವನ್ನು ಕೇಂದ್ರ ಕರ್ನಾಟಕಕ್ಕೆ ಕೊಟ್ಟಿಲ್ಲ, ಬೆಂಗಳೂರು ಕೆರೆಗಳ ಅಭಿವೃದ್ಧಿಗೆ 3000 ಕೋಟಿ, ಬೆಂಗಳೂರು ವರ್ತುಲ ರಸ್ತೆಗೆ 3000 ಕೋಟಿ ರೂ. ಸೇರಿ 11,495 ಕೋಟಿ ರೂ. ಕೇಂದ್ರದಿಂದ ಕೊಡಬೇಕಾಗಿತ್ತು. ಆದರೆ ಒಂದು ರೂಪಾಯಿ ಕೊಡಲಿಲ್ಲ. ಇದು ಕನ್ನಡಿಗರಿಗೆ ಬಗೆದ ದ್ರೋಹ ಎಂದರು.

ಕೇಂದ್ರದವರು ವರ್ಷಕ್ಕೆ 2 ಕೋಟಿ ಉದ್ಯೋಗ ಕೊಡ್ತೀವಿ ಎಂದರು ಕೊಟ್ಟಿಲ್ಲ, ಕೇಂದ್ರದ ಕಪ್ಪುಹಣವನ್ನೆಲ್ಲ ತಂದು ಪ್ರತಿ ಕುಟುಂಬಕ್ಕೆ 15 ಲಕ್ಷ ಖಾತೆಗೆ ಹಾಕ್ತೀವಿ ಎಂದರು, ರೈತರ ಆದಾಯ ದುಪ್ಪಟ್ಟು ಮಾಡುತ್ತೇವೆ ಅಂದರು, ಅಚ್ಚೇದಿನ್ ಬರುತ್ತದೆ ಎಂದರು ಬಂದಿದೆಯಾ ಎಂದು ಪ್ರಶ್ನಿಸಿದರು.

ಶಾಸಕ ಟಿ.ಡಿ.ರಾಜೇಗೌಡ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ.ಜಾರ್ಜ್, ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ ಬಾಲಕೃಷ್ಣ, ಕೆಎಸ್‌ಟಿಡಿಸಿ ಅಧ್ಯಕ್ಷ ಸರೋವರ ಶ್ರೀನಿವಾಸ್, ಶಾಸಕರುಗಳಾದ ಕೆ.ಎಸ್.ಆನಂದ್, ಕೆ.ಎಚ್. ಶ್ರೀನಿವಾಸ್, ವಿಧಾನ ಪರಿಷತ್ ಸದಸ್ಯೆ ಆರತಿ ಕೃಷ್ಣ, ಭದ್ರ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಅಂಶುಮಂತ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಜಿಲ್ಲಾಧಿಕಾರಿ ಎನ್.ಎಂ. ನಾಗರಾಜು, ಜಿ.ಪಂ. ಸಿಇಒ ಎಚ್.ಎಸ್.ಕೀರ್ತನಾ, ಎಸ್ಪಿ ಜಿತೇಂದ್ರ ಕುಮಾರ್ ದಯಾಮ ಇತರರು ಇದ್ದರು.

ನುಡಿದಂತೆ ನಡೆದ ಸರ್ಕಾರ

ಪುಟ 1➜ **ಇದಾದ ನಂತರ 4 ಬಜೆಟ್ ಮಂಡಿಸಿದರು. ಆದರೆ ಇಂದಿನ ವರೆಗೆ ನಯಾಪೈಸೆ ಕೊಡಲಿಲ್ಲ. ಇದು ನ್ಯಾಯವೇ. ಕೊಟ್ಟ ಮಾತಿನಂತೆ ನಡೆದುಕೊಂಡಿರುವ ಪಕ್ಷ ಅಥವಾ ಸರ್ಕಾರ ಯಾವುದಾದರೂ ಇದ್ದರೆ ಕಾಂಗ್ರೆಸ್ ಮಾತ್ರ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.**

ಶಿಕ್ಷಕರ ವರ್ಗಾವಣೆ ಭಾರೀ ಬದಲಾವಣೆ

ಪುಟ 1➜ ಆದರಂತೆ ಕರ್ನಾಟಕ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುವ ವಿವಿಧ ವರ್ಗದ ಶಿಕ್ಷಕರ ವರ್ಗಾವಣೆಯಲ್ಲಿ ಮಹತ್ವದ ಬದಲಾವಣೆಗಳನ್ನು ಮಾಡಲಾಗಿದೆ.

ಶಿಕ್ಷಣ ಇಲಾಖೆಯು ಕರ್ನಾಟಕ ಪಬ್ಲಿಕ್ ಶಾಲೆಗಳು, ಆದರ್ಶ ವಿದ್ಯಾಲಯ, ಪಿಎಂಶ್ರೀ ಎಂದು ಶಾಲೆಗಳಲ್ಲಿ ಮೂರು ವರ್ಗಗಳನ್ನಾಗಿ ವಿಂಗಡಿಸಿದೆ. ಇಲ್ಲಿರುವ ಶಿಕ್ಷಕರು ಕನಿಷ್ಠ 12 ವರ್ಷ ಒಂದೇ ಕಡೆ ಕರ್ತವ್ಯ ನಿರ್ವಹಿಸಿರಬೇಕು. ಬಳಿಕ ಅವರಿಗೆ ಕೌನ್ಸೆಲಿಂಗ್ ನಡೆಸುವ ಮೂಲಕ ವರ್ಗಾವಣೆಗೆ ಅವಕಾಶ ದೊರೆಯಲಿದೆ ಎಂದು ಶಿಕ್ಷಣ ಇಲಾಖೆ ತಿಳಿಸಿದೆ. ಬೋಧಕೇತರ ಹುದ್ದೆಗಳಿಗೆ ಶಿಕ್ಷಕರ ನೇಮಕಕ್ಕೆ ನಿರ್ಬಂಧ ವಿಧಿಸಿದೆ. ತುರ್ತು ಸೇವಾ ಗುಂಪು ಎಂದು ಪರಿಗಣಿಸಿ ಶಿಕ್ಷಕರ ವರ್ಗಾವಣೆ ಸ್ವರೂಪದಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ಮಾಡಲಾಗಿದೆ ಎಂದು ರಾಜ್ಯ ಸರ್ಕಾರ ಮಾಹಿತಿ ನೀಡಿ ರಾಜ್ಯ ಪತ್ರ ಹೊರಡಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರವು ಇತ್ತೀಚೆಗೆ ವಿಧಾನಸಭೆಯಲ್ಲಿ ನಡೆದ ಅಧಿವೇಶನ ವೇಳೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ– 2026ರ ಮಸೂದೆ ಮಂಡಿಸಿತ್ತು. ಅದಕ್ಕೆ ರಾಜ್ಯಪಾಲರ ಅಂತಿಮ ಅಂಕಿತ ಬಾಕಿ ಇತ್ತು. ಅದೀಗ ನೆರವೇರಿದ್ದು, ವಿಧೇಯಕ ಜಾರಿಗೊಳಿಸಲಾಗಿದೆ.

ಅಮೆರಿಕ ಬೆದರಿಕೆ ಇರಾನ್ ಎಚ್ಚರಿಕೆ

ಪುಟ 1➜ ಆದರೆ, ಇರಾನ್ ಹೊರತುಪಡಿಸಿ ಇತರ ದೇಶಗಳ ಬಂದರುಗಳ ನಡುವೆ ಸಂಚರಿಸುವ ಹಡಗುಗಳಿಗೆ ಹಾರ್ಮುಜ್ ಜಲಸಂಧಿ ಮೂಲಕ ಸಂಚಾರಕ್ಕೆ ಅವಕಾಶ ಇರುತ್ತದೆ. ಇದು ಟ್ರಂಪ್ ಮೊದಲು ನೀಡಿದ್ದ ಸಂಪೂರ್ಣ ನಿರ್ಬಂಧದ ಬೆದರಿಕೆಗೆ ಹೋಲಿಸಿದರೆ ಸ್ವಲ್ಪ ಸಡಿಲ ಕ್ರಮವಾಗಿದೆ.

ಹಡಗು ಸಂಚಾರ ಕುಂಠಿತ: ಈ ನಿರ್ಬಂಧದ ಘೋಷಣೆಯ ನಂತರ ಹಡಗು ಸಂಚಾರ ಕಡಿಮೆಯಾಗಿದೆ. ಯುದ್ಧ ವಿರಾಮದ ನಂತರ ಮತ್ತೆ ಆರಂಭವಾದ ಸೀಮಿತ ಸಂಚಾರವೂ ಈಗ ಸ್ಥಗಿತಗೊಂಡಿದೆ. ತೈಲ ಬೆಲೆಗಳ ಮೇಲೆ ಇದರ ಪರಿಣಾಮ ತಕ್ಷಣವೇ ಗೋಚರಿಸಿದೆ. ಅಮೆರಿಕ ಕಚ್ಚಾ ತೈಲದ ಬೆಲೆ ಶೇ.8 ಏರಿಕೆಯಾಗಿದ್ದು, ಬ್ರೆಂಟ್ ಕಚ್ಚಾ ತೈಲ 7% ಏರಿಕೆಯಾಗಿದೆ.

ಚರ್ಚೆ ವಿಫಲ, ಉದ್ವಿಗ್ನತೆ ಹೆಚ್ಚಳ: ಪಾಕಿಸ್ತಾನದಲ್ಲಿ ನಡೆದ ಅಮೆರಿಕ–ಇರಾನ್ ಮಾತುಕತೆಗಳು ಯಾವುದೇ ಒಪ್ಪಂದ ವಿಲ್ಲದೆ ಮುಕ್ತಾಯಗೊಂಡವು. ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಹೇಳುವಂತೆ, ಇರಾನ್ ಅಣ್ವಸ್ತ್ರ ಅಭಿವೃದ್ಧಿಯನ್ನು ನಿಲ್ಲಿಸಲು ಒಪ್ಪದ ಕಾರಣ ಮಾತುಕತೆ ಸ್ಥಗಿತಗೊಂಡಿತು. ಇರಾನ್ ತನ್ನ ಮೇಲೆ ನಡೆದ ದಾಳಿಗಳ ನಷ್ಟ ಪರಿಹಾರ ಮತ್ತು ಸ್ಥಗಿತಗೊಂಡ ಆಸ್ತಿಗಳ ಬಿಡುಗಡೆ ಬೇಡಿಕೆ ಇಟ್ಟಿದೆ. ಇರಾನ್‌ನ ಹಿರಿಯ ಅಧಿಕಾರಿಗಳು ಕಠಿಣ ಪ್ರತಿಕ್ರಿಯೆ ನೀಡಿದ್ದಾರೆ. ನೀವು ಯುದ್ಧ ಮಾಡಿದರೆ ನಾವು ಕೂಡ ಯುದ್ಧ ಮಾಡುತ್ತೇವೆ ಎಂದು ಇರಾನ್ ಸಂಸತ್ ಸ್ಪೀಕರ್ ಮೊಹಮ್ಮದ್ ಬಘರ್ ಘಾಲಿಬಾಫ್ ಎಚ್ಚರಿಸಿದ್ದಾರೆ.

ಶಾಸಕರಿಂದ ವರಿಷ್ಠರ ಭೇಟಿ ತಪ್ಪಲ್ಲ

ಪುಟ 1➜ ಪಕ್ಷಕ್ಕೆ ಗೌರವ ನೀಡಬೇಕು. ಮಾಧ್ಯಮಗಳ ಮುಂದೆ ಪಕ್ಷದ ಗೌರವವನ್ನು ಹಾಳು ಮಾಡಬಾರದು. ಮುಖ್ಯಮಂತ್ರಿಗಳೂ ಈಗಾಗಲೇ ಈ ವಿಚಾರದ ಬಗ್ಗೆ ಹೇಳಿದ್ದಾರೆ. ಮುಂದೆ ಎಲ್ಲರ ಭವಿಷ್ಯ ಪಕ್ಷದಲ್ಲಿದೆಯೇ ಹೊರತು ಮಾಧ್ಯಮಗಳಲ್ಲಿ ಅಲ್ಲ ಎಂದರು.

ಶಾಸಕರು ದೆಹಲಿಗೆ ತೆರಳುವ ಮುಂಚೆ ಒಂದಷ್ಟು ಜನ ನನ್ನ ಜತೆ ಮಾತನಾಡಿದ್ದಾರೆ. ಹೈಕಮಾಂಡ್ ಬಳಿ ಸಚಿವ ಸ್ಥಾನ ಕೇಳುವುದರಲ್ಲಿ ತಪ್ಪೇನಿಲ್ಲ. ಮೊದಲ ಹಾಗೂ ಎರಡನೇ ಬಾರಿ ಗೆದ್ದಿರುವವರೂ ಮಂತ್ರಿಗಳಾಗಬಹುದು. ಈ ಹಿಂದೆ ಈ ರೀತಿ ನಡೆದಿದೆ. ಆದರೆ ಇದು ಸಮಯವಲ್ಲ, ಇನ್ನೂ ಚುನಾವಣೆಗಳು ನಡೆಯುತ್ತಿವೆ. ಒಂದಷ್ಟು ಜನ ತಮಿಳುನಾಡಿಗೆ ತೆರಳಿದ್ದಾರೆ. ಮೊದಲು ಚುನಾವಣೆ ಆಗಲಿ, ನಂತರ ಇದರ ಬಗ್ಗೆ ಯೋಚಿಸೋಣ ಎಂದು ಶಿವಕುಮಾರ್ ತಿಳಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವರ ಭೇಟಿ ಬಗ್ಗೆ ಪ್ರತಿಕ್ರಿಯಿಸಿದ ಡಿ.ಕೆ. ಶಿವಕುಮಾರ್, ಪಕ್ಷದಿಂದ ತಮಿಳುನಾಡಿಗೆ ತೆರಳುವಂತೆ ಸೂಚನೆ ನೀಡಿದ್ದರು. ಅಲ್ಲಿಗೆ ಹೋಗಿ ಬಂದಿದ್ದೇನೆ. ಮತ್ತೆ ತೆರಳಬೇಕಾಗಿದೆ. ಆ ಬಗ್ಗೆ ಎಐಸಿಸಿ ಅಧ್ಯಕ್ಷರಿಗೆ ವರದಿ ನೀಡಬೇಕಿತ್ತು. ಭೇಟಿ ಮಾಡಿ ವರದಿ ನೀಡಿದ್ದೇನೆ ಎಂದು ತಿಳಿಸಿದರು.

ಸಚಿವರ ಕಾರ್ಯವೈಖರಿ ಬಗ್ಗೆ ವರದಿ ಕೇಳಿದ್ದೇವೆ: ಸಚಿವ ಸಂಪುಟ ಸದಸ್ಯರ ಕಾರ್ಯವೈಖರಿ ಬಗ್ಗೆ ಅವರ ಇಲಾಖೆಗಳ ಸಾಧನೆಗಳ ಬಗ್ಗೆ ವಿಸ್ತೃತವಾದ ವರದಿಯನ್ನು ಕೇಳಿದ್ದೇವೆ. ಮೊದಲು ಆ ವರದಿ ಬರಲಿ, ಬಳಿಕ ಸಚಿವ ಸಂಪುಟ ಪುನರ್ ರಚನೆ ಆಗಬೇಕೆ? ಬೇಡವೆ ಎಂಬುದರ ಬಗ್ಗೆ ಚರ್ಚಿಸೋಣ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಅಗತ್ಯವಾದರೆ ಸಚಿವ ಸ್ಥಾನಕ್ಕೆ ರಾಜೀನಾಮೆ: ಪರಮೇಶ್ವರ್

ಪುಟ 1➜ ಹೊಸಬರಿಗೆ ಅವಕಾಶ ಮಾಡಿಕೊಡಲು ಸಂಪುಟದಲ್ಲಿರುವ ಹಿರಿಯರೂ ಕೂಡ ರಾಜೀನಾಮೆ ನೀಡಬೇಕೆಂದಾದರೆ, ನಾನಾಗಲೀ, ರಾಮಲಿಂಗಾರೆಡ್ಡಿ, ಕೆ.ಜೆ.ಜಾರ್ಜ್, ಎಚ್.ಕೆ.ಪಾಟೀಲ್ ಸೇರಿದಂತೆ ಹಿರಿಯ ಸಚಿವರು ಹೈಕಮಾಂಡ್ ನಿರ್ಧಾರವನ್ನು ಒಪ್ಪದೇ ಪ್ರಶ್ನೆ ಮಾಡಲು ಅವಕಾಶ ಇಲ್ಲ ಎಂದು ಪರಮೇಶ್ವರ್ ಹೇಳಿದರು. ರಾಜಕೀಯ ಒತ್ತಡಕ್ಕೆ ಮಣಿದು ಸಚಿವ ಸ್ಥಾನದಿಂದ ನಮ್ಮನ್ನು ಬದಲಾವಣೆ ಮಾಡಿದರೆ, ಅದನ್ನು ಬೇಡ ಎನ್ನಲು ಸಾಧ್ಯವಿಲ್ಲ. ಅನನುಭವಿಗಳಿಗೆ ಸಂಪುಟದಲ್ಲಿ ಅವಕಾಶ ಕಲ್ಪಿಸಲಾಗುತ್ತದೆ ಎಂಬುದು ನಮಗೆ ಸಂಬಂಧಪಡದ ವಿಚಾರ. ಎರಡು, ಮೂರು ಬಾರಿ ಶಾಸಕರಾಗಿರುವವರಿಗೆ ಸಚಿವ ಸ್ಥಾನ ನಿಭಾಯಿಸುವ ಸಾಮರ್ಥ್ಯ ಇರುತ್ತದೆ. ಯಾವುದೇ ಖಾತೆಯನ್ನಾಗಲಿ ನಿಭಾಯಿಸುವ ಅನುಭವ ಸಹಜವಾಗಿರುತ್ತದೆ ಎಂದರು.

ಜಯದೇವ, ಕಿದ್ವಾಯಿಗೆ ಸ್ಥಾನ

ಪುಟ 1➜ ಆಯಾ ಹೊರರೋಗಿಗಳ ವಿಭಾಗಗಳಲ್ಲಿ (ಒಪಿಡಿ) ಚಿಕಿತ್ಸೆ ಪಡೆಯಲು ಅನುಮೋದನೆ ಪ್ರಕ್ರಿಯೆ ನಡೆಯುತ್ತಿದೆ.

ಜಯದೇವ, ಕಿದ್ವಾಯಿ ಚಿಕಿತ್ಸೆಯಲ್ಲಿ ಮುಂಚೂಣಿ: 2025–26ನೇ ಸಾಲಿನಲ್ಲಿ ಆಯುಷ್ಮಾನ್ ಭಾರತ್ –ಆರೋಗ್ಯ ಕರ್ನಾಟಕ ಯೋಜನೆ ಅಡಿ ದ್ವಿತೀಯ, ತೃತೀಯ ಹಾಗೂ ತುರ್ತು ಶಸ್ತ್ರಚಿಕಿತ್ಸೆಗಳಿಗೆ ಸಂಬಂಧಿಸಿದಂತೆ ಅಧಿಕ ಮಂದಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿದ ಆಸ್ಪತ್ರೆಗಳ ಪಟ್ಟಿಯನ್ನು ವಿವಿಧ ವಿಭಾಗಗಳಲ್ಲಿ ಆರೋಗ್ಯ ಇಲಾಖೆ ಸಿದ್ಧಪಡಿಸಿದೆ. ಅಗ್ರ 12 ಆಸ್ಪತ್ರೆಗಳ ಪೈಕಿ ಜಯದೇವ ಆಸ್ಪತ್ರೆ 18,374, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ 16,936 ರೋಗಿಗಳಿಗೆ ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಚಿಕಿತ್ಸೆ ನೀಡಿ ಮುಂಚೂಣಿಯಲ್ಲಿದೆ.

ದೇಶದ ಅತ್ಯುನ್ನತ ಆಸ್ಪತ್ರೆ ಕಿದ್ವಾಯಿ

ಪುಟ 1➜ ದೇಶದಲ್ಲಿ ಕ್ಯಾನ್ಸರ್ ಆರೈಕೆಯಲ್ಲಿ ಸರ್ಕಾರಿ ಆಸ್ಪತ್ರೆಗಳ ಪೈಕಿ ಕಿದ್ವಾಯಿ ಮೂರನೇ ಸ್ಥಾನ ಪಡೆದಿದೆ. ಖಾಸಗಿ ಆಸ್ಪತ್ರೆಗಳಿಗೆ ಹೋಲಿಕೆ ಮಾಡಿದರೆ ಕಿದ್ವಾಯಿ ಕ್ಯಾನ್ಸರ್ ರೋಗಿಗಳ ಚಿಕಿತ್ಸೆಯಲ್ಲಿ ಅತ್ಯುತ್ತಮ ಎಂದು ಸಾಬೀತಾಗಿದೆ.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಆಯುಷ್ಮಾನ್ ಭಾರತ್ –ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಬಡ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ರೋಗಿಗಳಿಗೆ ಶೀಘ್ರಗತಿಯಲ್ಲಿ ಚಿಕಿತ್ಸೆ ದೊರೆಯಲು ರಾಜ್ಯಾದ್ಯಂತ ಕಿದ್ವಾಯಿ ಫೆರಿಫೆರಲ್ ಕ್ಯಾನ್ಸರ್ ಘಟಕಗಳನ್ನು ತೆರೆಯಲಾಗುತ್ತಿದೆ.
■ **ಡಾ.ಟಿ.ನವೀನ್, ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ**

ಪಟ್ಟಿಯಲ್ಲಿಲ್ಲದಿದ್ದರೆ ಮತ ಹಕ್ಕಿಲ್ಲ

ಪುಟ 1➜ ಈ ಅರ್ಜಿಯನ್ನು ಪೀಠ ಅಕಾಲಿಕ ಎಂದು ಪರಿಗಣಿಸಿದೆ. ಪೀಠ ತನ್ನ ಆದೇಶದಲ್ಲಿ, 'ಅರ್ಜಿದಾರರು ಈಗಾಗಲೇ ಅಪೀಲಿ ನ್ಯಾಯಮಂಡಳಿಗಳ ಮೊರೆ ಹೋಗಿರುವುದರಿಂದ, ಅವರ ಆತಂಕಗಳು ಈ ಹಂತದಲ್ಲಿ ಅಕಾಲಿಕವಾಗಿವೆ. ಈ ಅರ್ಜಿಯನ್ನು ನಾವು ಸ್ವೀಕರಿಸಿದರೆ ಅನಾವಶ್ಯಕ ಪರಿಣಾಮಗಳು ಉಂಟಾಗಬಹುದು ಎಂದು ಹೇಳಿ, ಪ್ರಕರಣದ ತಾತ್ವಿಕ ಅಂಶಗಳ ಬಗ್ಗೆ ಯಾವುದೇ ಅಭಿಪ್ರಾಯ ವ್ಯಕ್ತಪಡಿಸಿಲ್ಲ ಎಂದು ಸ್ಪಷ್ಟಪಡಿಸಿದೆ.

ಎಸ್‌ಐಆರ್ ಪ್ರಕ್ರಿಯೆಯ ನಂತರ ಪಶ್ಚಿಮ ಬಂಗಾಳದ ಮತದಾರರ ಪಟ್ಟಿಯಿಂದ ಸುಮಾರು 90 ಲಕ್ಷ ಹೆಸರುಗಳನ್ನು ತೆಗೆದುಹಾಕಲಾಗಿದೆ ಎಂದು ವರದಿಯಾಗಿದೆ. ಇದರಲ್ಲಿ ಸುಮಾರು 30 ರಿಂದ 34 ಲಕ್ಷ ಅರ್ಜಿಗಳು ವಿವಿಧ ಮೇಲ್ಮನವಿ ನ್ಯಾಯಮಂಡಳಿಗಳ ಮುಂದೆ ಬಾಕಿ ಇವೆ. ಈ ಪ್ರಕರಣಗಳನ್ನು ಪರಿಶೀಲಿಸಲು ಕಲ್ಕತ್ತಾ ಹೈಕೋರ್ಟ್ ನೇತೃತ್ವದಲ್ಲಿ ನಿವೃತ್ತ ನ್ಯಾಯಮೂರ್ತಿಗಳಿಂದ 19 ನ್ಯಾಯಮಂಡಳಿಗಳನ್ನು ರಚಿಸಲಾಗಿದೆ. ಮತದಾರರ ಪರವಾಗಿ ಸಲ್ಲಿಸಲಾದ ಅರ್ಜಿಯಲ್ಲಿ, ಭಾರತದ ಚುನಾವಣಾ ಆಯೋಗ ಕಾನೂನುಬದ್ಧ ಕ್ರಮಗಳನ್ನು ಪಾಲಿಸದೆ ತುರ್ತುವಾಗಿ ಹೆಸರುಗಳನ್ನು ಅಳಿಸುತ್ತಿದೆ ಮತ್ತು ಸಲ್ಲಿಸಲಾದ ಮನವಿಗಳನ್ನು ಸಮಯಕ್ಕೆ ಸರಿಯಾಗಿ ವಿಚಾರಣೆ ಮಾಡುತ್ತಿಲ್ಲ ಎಂದು ಆರೋಪಿಸಲಾಗಿದೆ.

ಚುನಾವಣಾ ಆಯೋಗದ ಪರ ವಕೀಲರು, ಪ್ರತಿ ನ್ಯಾಯಮಂಡಳಿಯೂ ಲಕ್ಷಾಂತರ ಮೇಲ್ಮನವಿ ಅರ್ಜಿಗಳನ್ನು ಎದುರಿಸುತ್ತಿದೆ ಎಂದು ನ್ಯಾಯಾಲಯಕ್ಕೆ ತಿಳಿಸಿದರು. ಅರ್ಜಿದಾರರ ವಕೀಲರು, ಅಗತ್ಯ ದಾಖಲೆಗಳನ್ನು ಸಲ್ಲಿಸುವಲ್ಲಿ ಆಯೋಗ ವಿಫಲವಾಗಿದೆ ಮತ್ತು ಮತದಾರರ ಪಟ್ಟಿಯ ಫ್ರೀಜಿಂಗ್ ದಿನಾಂಕವನ್ನು ವಿಸ್ತರಿಸಬೇಕೆಂದು ವಾದಿಸಿದರು.

ವಿಚಾರಣೆಯ ವೇಳೆ ನ್ಯಾಯಮೂರ್ತಿ ಬಾಗ್ಚಿ, ಮತದಾನದ ಹಕ್ಕು ಕೇವಲ ಕಾನೂನುಬದ್ಧ ಹಕ್ಕು ಮಾತ್ರವಲ್ಲ, ಅದು ಪ್ರಜಾಪ್ರಭುತ್ವದ ಭಾವನಾತ್ಮಕ ಅಸ್ತಿತ್ವದ ಭಾಗವೂ ಆಗಿದೆ ಎಂದು ಹೇಳಿದರು. ಆದರೆ ನ್ಯಾಯಮಂಡಳಿಗಳ ಮೇಲೆ ಕಟ್ಟುನಿಟ್ಟಿನ ಸಮಯದ ಒತ್ತಡ ಹೇರಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಇದಲ್ಲದೆ, ನ್ಯಾಯಾಂಗದ ಹಸ್ತಕ್ಷೇಪದ ಉದ್ದೇಶ ಚುನಾವಣೆಯನ್ನು ಮುಂದುವರಿಸುವುದೇ ಹೊರತು ತಡೆಯುವುದಲ್ಲ ಎಂದು ಪೀಠ ಹೇಳಿತು. ಅರ್ಜಿದಾರರು ಮೊದಲು ಲಭ್ಯವಿರುವ ಎಲ್ಲಾ ಮೇಲ್ಮನವಿ ಮಾರ್ಗಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು ಎಂದು ಕೋರ್ಟ್ ಸೂಚಿಸಿತು.

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗಳು ಏಪ್ರಿಲ್ 23 ಮತ್ತು 29ರಂದು ನಡೆಯಲಿದ್ದು, ಮೇ 4ರಂದು ಮತ ಎಣಿಕೆ ನಡೆಯಲಿದೆ.

ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಬಿ.ಎಂ.ರಸ್ತೆ, ಹಾಸನ.
ದೂರವಾಣಿ ಸಂಖ್ಯೆ: 268876, 266719,
ನಂ: ಹಾನಪ್ರಾ/ಎಸ್.ಎಂ.ಕೆ.ನಗರ/ಮೂ.ನಿ/ವಾ.ನಿ/ಬಿ.ನಿ/ಇ-ಹರಾಜು/ಪ್ರಕಟಣೆ/01/2026-27
ದಿನಾಂಕ:09.04.2026

ಹಾಸನ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಮೂಲೆ ನಿವೇಶನಗಳು, ವಾಣಿಜ್ಯ ನಿವೇಶನಗಳು ಮತ್ತು ಮಧ್ಯಂತರ ವಸತಿ ಬಿಡಿ ನಿವೇಶನಗಳ ಇ-ಹರಾಜು ಸಾರ್ವಜನಿಕ ಪ್ರಕಟಣೆ

ಇ-ಹರಾಜನ್ನು ಆರಂಭಿಸುವ ದಿನಾಂಕ:23.04.2026 ಭಾರತೀಯ ಕಾಲಮಾನ 17.00 ಗಂಟೆಯ ನಂತರ ಇ.ಎಂ.ಡಿ. ಮೊತ್ತದೊಂದಿಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು, ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ:22.05.2026 ಭಾರತೀಯ ಕಾಲಮಾನ 17.00 ಗಂಟೆ ವರೆಗೆ ಕ್ರಮ ಸಂಖ್ಯೆ:01 ರಿಂದ 22 ರವರೆಗಿನ ನಿವೇಶನಗಳ ಇ-ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ ದಿನಾಂಕ:25.05.2026ಭಾರತೀಯ ಕಾಲಮಾನ 17.00ಗಂಟೆಗೆ (ಸಂಜೆ-5.00ಗಂಟೆ) (ಡೆಲ್ಟಾ ಟೈಮ್ 5.00 ನಿಮಿಷ) ಕ್ರಮ ಸಂಖ್ಯೆ:23 ರಿಂದ 44 ರವರೆಗಿನ ನಿವೇಶನಗಳ ಇ-ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ ದಿನಾಂಕ:26.05.2026 ಭಾರತೀಯ ಕಾಲಮಾನ 17.00ಗಂಟೆಗೆ (ಸಂಜೆ-5.00ಗಂಟೆ) (ಡೆಲ್ಟಾ ಟೈಮ್ 5.00 ನಿಮಿಷ) ಇ-ಹರಾಜಿನಲ್ಲಿ ಭಾಗವಹಿಸುವವರು, ಹರಾಜಿನಲ್ಲಿರುವ ನಿವೇಶನದ ಒಟ್ಟು ಮೌಲ್ಯ ರೂ.30.00 ಲಕ್ಷದವರೆಗೆ ಪಾವತಿ ಮಾಡಬೇಕಾದ ಇ.ಎಂ.ಡಿ ಹಣ ಪ್ರತಿ ನಿವೇಶನಕ್ಕೆ ರೂ.50,000/- ಹಾಗೂ ರೂ.30.00 ಲಕ್ಷಕ್ಕಿಂತ ಮೇಲ್ಪಟ್ಟ ಮೌಲ್ಯದ ನಿವೇಶನಗಳಿಗೆ ಇ.ಎಂ.ಡಿ ಹಣ ಪ್ರತಿ ನಿವೇಶನಕ್ಕೆ ರೂ.1,00,000/- ಕನಿಷ್ಠ ಬಿಡ್ ಬದಲಾವಣೆ ಮೊತ್ತ ನಿವೇಶನಗಳಿಗೆ ರೂ.10,000/-ಗಳು. ಇ-ಹರಾಜಿನಲ್ಲಿ ಭಾಗವಹಿಸಲು ಹೆಚ್ಚಿನ ಮಾಹಿತಿಗಾಗಿ ನಿವೇಶನಗಳ ವಿವರಕ್ಕಾಗಿ ಸಂಪರ್ಕಿಸಬೇಕಾದ ಅಂತರ್ಜಾಲ https://kppp.karnataka.gov.in ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ಮೂಲೆ ಮತ್ತು ವಾಣಿಜ್ಯ ನಿವೇಶನಗಳು (ಕ್ರ.ಸಂ. 01 ರಿಂದ 22)

ಕ್ರ.ಸಂ	ನಿವೇಶನ ಸಂಖ್ಯೆ ಮೂಲೆ ನಿವೇಶನ	Site Facing of roads	ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ	ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗಧಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.2250/-
1	1	S-E	(15.00+17.00)/2	(4.80+12.80)/2	140.80	3408750
2	22	S-E	(6.90+12.10)/2	(12.10+13.10)/2	113.40	2745000
3	46	S-W	(12.00+13.00)/2	(6.80+12.10)/2	118.13	2859927
4	2038	S-W	(11.40+17.30)/2	(12.00+13.10)/2	172.20	4169250
5	2371	S-W	(15.50+26.50)/2	(18.00+21.40)/2	369.00	8932500
6	2372	S-E	(7.30+15.50)/2	(12.00+14.30)/2	136.80	3312000
7	3750	S-E	(12.50+16.70)/2	(18.00+18.50)/2	262.80	6363000
8	3762	N-E	(20.60+16.60)/2	(18.10+18.10)/2	336.66	8149500
9	4476	N-E	(19.80+16.60)/2	(18.30+18.00)/2	330.33	7997289

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ವಾಣಿಜ್ಯ ನಿವೇಶನಗಳ ವಿವರಗಳು (ಕ್ರ.ಸಂ. 10 ರಿಂದ 22)

ಕ್ರ.ಸಂ	ನಿವೇಶನ ಸಂಖ್ಯೆ ವಾಣಿಜ್ಯ ನಿವೇಶನ	Site Facing of roads	ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ	ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗಧಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.3250/-
10	6356	N-E	41.90+9.20/2	47.70+35.60/2	887.58	31037500
11	6365	East	25.00+42.55/2	27.20+35.00/2	1050.40	36731500
12	6369	East	58.00+39.60/2	27.00+25.30/2	1234.64	43175340
13	6370	N-S	30.10+13.00/2	25.00+18.30/2	394.36	13789750
14	6396	S-E	15.25+34.90/2	25.20+32.90/2	631.89	22096750
15	6408	N-W	25.60+21.20/2	33.00+32.50/2	760.50	26594750
16	6409	West	23.30	32.50	757.25	26481033
17	6410	West	23.30	32.50	757.25	26481033
18	6411	West	23.30	32.50	757.25	26481033
19	6413	West	18.30	32.40	592.92	20735000
20	6414	West	18.30	32.40	592.92	20735000
21	6419	West	24.75	29.00	717.75	25099750
22	6420	West	24.75	30.10	744.97	26051775

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ವಾಣಿಜ್ಯ ನಿವೇಶನಗಳು ಮತ್ತು ವಸತಿ ಬಿಡಿ ಮಧ್ಯಂತರ ನಿವೇಶನಗಳು (ಕ್ರ.ಸಂ. 23 ರಿಂದ 44)

ಕ್ರ.ಸಂ	ನಿವೇಶನ ಸಂಖ್ಯೆ ವಾಣಿಜ್ಯ ನಿವೇಶನ	Site Facing of roads	ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ	ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗಧಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.3250/-
23	6425	S-W	16.90+47.10/2	32.00+44.60/2	1024.00	35808500
24	7/1	N, S, W	18.00	33.00	594.00	20772180
25	7/2	North	15.00	18.00	270.00	9441900
26	7/3	North	15.00	18.00	270.00	9441900
27	7/4	North	12.00	18.00	216.00	7553520
28	7/5	North	12.00	18.00	216.00	7553520
29	7/6	South	12.00	15.00	180.00	6294600
30	7/7	South	12.00	18.00	216.00	7553520
31	7/8	South	15.00	15.00	225.00	7868250
32	7/9	South	15.00	15.00	225.00	7868250
33	10/1	North (24m road) West (24m road circle)	Odd site	Odd site	804.55	28135114
34	10/2	S-W 12m road)	18.20	18.00	327.60	11456172
35	10/3	South (12m road)	12.00	18.00	216.00	7553520
36	10/4	South (12m road)	12.00	18.00	216.00	7553520
37	11/1	N-E	72.00	57.00	4104.00	143516880
38	11/2	S-E	18.00	24.00	432.00	15107040
39	11/3	South	18.00	24.00	432.00	15107040
40	11/4	South	18.00	24.00	432.00	15107040
41	11/5	South	18.00	24.00	432.00	15107040

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ಮಧ್ಯಂತರ ವಸತಿ ಬಿಡಿ ನಿವೇಶನಗಳ ವಿವರಗಳು (ಕ್ರ.ಸಂ. 42 ರಿಂದ 44)

ಕ್ರ.ಸಂ	ನಿವೇಶನ ಸಂಖ್ಯೆ ವಾಣಿಜ್ಯ ನಿವೇಶನ	Site Facing of roads	ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ	ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗಧಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.2000/-
42	4907	South	(12.00+11.40)/2	(9.00+12.20)/2	124.02	2668900
43	4932	North	23.00+23.50/2	8.20.8.60/2	194.14	4178000
44	1148	West	28.85	9.00	259.65	5587668

ಇ-ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಕೆಳಕಂಡಂತಿವೆ:- 1.ಇ-ಹರಾಜಿನಲ್ಲಿ ಭಾಗವಹಿಸಲಿಚ್ಚಿಸುವವರು ಇ-ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಮುಖಪುಟದ ಡೌನ್‌ಲೋಡ್‌ನಲ್ಲಿ ಟೆಂಡರ್‌ದಾರರಿಗೆ ಬಳಕೆದಾರರ ಕೈಪಿಡಿಗಳು ಇಲ್ಲಿ New e-Auction Bidding user manual ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್- 080-46010000 ಮತ್ತು 080-68948777 ಗೆ ಸಂಪರ್ಕಿಸಬಹುದು. 2.ಪಾನ್ ಕಾರ್ಡ್ (PAN Card, Aadhar Card) ಲಗತ್ತಿಸುವುದು. 3.ಇ-ಮೇಲ್ ವಿಳಾಸ/ ಮೊಬೈಲ್ ದೂರವಾಣಿ ಸಂಖ್ಯೆ/ಸ್ಥಿರ ದೂರವಾಣಿ (ಲ್ಯಾಂಡ್‌ಲೈನ್)ಸಂಖ್ಯೆ ನಮೂದಿಸಿರುವುದು. ನಿರ್ದಿಷ್ಟಪಡಿಸಿದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ವಿವರಗಳನ್ನು ಭರ್ತಿ ಮಾಡಿ, ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ. 4.ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪನಿಗಳು/ಟ್ರಸ್ಟ್ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೀಗೆ ಭಾಗವಹಿಸುವ ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪನಿಗಳು/ಟ್ರಸ್ಟ್ ಹರಾಜಿನಲ್ಲಿ ಭಾಗವಹಿಸುವ ಮುನ್ನ ತಮ್ಮ ಪಾಲುದಾರಿಕೆ ಸಂಸ್ಥೆಯ ನೊಂದಾವಣಿಯನ್ನು ಭಾರತ ದೇಶದಲ್ಲಿ ಮಾಡಿ ಕೊಂಡಿರಬೇಕು. 5.ಹರಾಜಿನ ನಿವೇಶನಗಳಿಗೆ ಸಂಬಂಧಿಸಿದ ಎಲ್ಲಾ ಕಾನೂನು ಪ್ರಕರಣಗಳು ಹಾಸನದ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತದೆ.

6.ಇ.ಎಂ.ಡಿ.ಮೊತ್ತ ರೂ.50,000/- & ರೂ.1,00,000/-ಗಳನ್ನು ಹಾಗೂ ಇ-ಹರಾಜಿನ ಶುಲ್ಕವನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ DEBIT CARD/CREDIT CARD/NET BANKING ಮುಖಾಂತರ ಅಥವಾ ಡಿ.ಡಿ. ಯೊಂದಿಗೆ ಚಲನ್ ಮುದ್ರಿಸಿ ಐ.ಸಿ.ಐ.ಸಿ.ಐ. ಬ್ಯಾಂಕ್ ಶಾಖೆಗೆ ಪಾವತಿ ಮಾಡಬಹುದಾಗಿದೆ. 7.ಯಶಸ್ವಿ ಬಿಡ್‌ದಾರರು ಬಿಡ್ಡನ್ನು ಅಂಗೀಕೃತಗೊಂಡಿರುವ ಬಗ್ಗೆ ಇ-ಪೋರ್ಟಲ್ ಮುಖಾಂತರವೇ ಪರಿಶೀಲಿಸಿಕೊಂಡು, 25%ರಷ್ಟು ಬಿಡ್ ಮೊತ್ತವನ್ನು (ಇ.ಎಂ.ಡಿ. ರೂ. 50,000/- ಮತ್ತು ರೂ.1,00,000/-ಗಳನ್ನು ಹೊರತುಪಡಿಸಿ) ಇ-ಹರಾಜು ಮುಕ್ತಾಯಗೊಂಡು ಅಂಗೀಕೃತಗೊಂಡ ಅವಧಿಯ 72 ಗಂಟೆಗೆ (03ದಿನಗಳ ಒಳಗಾಗಿ) ಅಥವಾ ಅದರೊಳಗಾಗಿ ಕೆಳಕಂಡ ಬ್ಯಾಂಕ್ ಖಾತೆಗೆ ಪಾವತಿ ಮಾಡಬೇಕು (ಪಾವತಿಸಿದ ನಂತರ ಅದರ ಪ್ರತಿಯನ್ನು ಕಛೇರಿಗೆ ಸಲ್ಲಿಸುವುದು) ಸರ್ಕಾರಿ ರಜಾ/ಬ್ಯಾಂಕ್ ರಜಾ ಇದ್ದಲ್ಲಿ, ನಂತರದ ದಿನದಲ್ಲಿ (Next Day) ಪಾವತಿಸತಕ್ಕದ್ದು. ಹಾಗೂ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಪಾವತಿಯ ರೀತಿ: ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ.
Beneficiary Name: Commissioner, Hassan Urban Development Authority, Hassan (HUDA)

ಕ್ರಸಂ.	ಬ್ಯಾಂಕ್ ಹೆಸರು	ಖಾತೆ ಸಂಖ್ಯೆ	ಐ.ಎಫ್.ಎಸ್.ಸಿ. ಕೋಡ್
1	ಬ್ಯಾಂಕ್ ಆಫ್ ಬರೋಡ, ಹುಡಾ ಶಾಖೆ, ಬಿ.ಎಂ.ರಸ್ತೆ, ಹಾಸನ	74730100000418	BARB0VJHUDA (ZERO)

8.ಯಶಸ್ವಿ ಬಿಡ್‌ದಾರರು ನಿವೇಶನದ ಬಿಡ್‌ನ ಮೊತ್ತದ ಶೇಕಡಾ 25 ರಷ್ಟು ಪಾವತಿಸಿದ ನಂತರ ಇ-ಹರಾಜು ಬಿಡ್‌ನ್ನು ಪ್ರಾಧಿಕಾರ ಸ್ಥಿರೀಕರಣದ ಬಗ್ಗೆ ನಮೂನೆ 1 ರಲ್ಲಿ ತಿಳುವಳಿಕೆ ಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ 45(ನಲವತ್ತೈದು) ದಿನಗಳೊಳಗಾಗಿ ವಸತಿ, ಮೂಲೆ, ವಾಣಿಜ್ಯ ನಿವೇಶನಗಳ ಪೂರ್ಣ ಹಣ ಸಂದಾಯ ಮಾಡಬೇಕು. ಅದಕ್ಕೆ ತಪ್ಪಿದಲ್ಲಿ ಶೇಕಡಾ 18 ರಂತೆ ಬಡ್ಡಿಯೊಂದಿಗೆ 90 (ತೊಂಭತ್ತು) ದಿನಗಳ ಕಾಲಾವಕಾಶ ವಿಸ್ತರಿಸಲಾಗುವುದು. ಪ್ರಾಧಿಕಾರವು ಒಪ್ಪಿದಲ್ಲಿ ಶೇಕಡಾ 21 ರಂತೆ ಬಡ್ಡಿ ದರದಲ್ಲಿ ಮುಂದಿನ 30 (ಮೂವತ್ತು) ದಿವಸಗಳ ಕಾಲಾವಕಾಶ ನೀಡಲಾಗುವುದು. ಈ ಮೇಲ್ಕಂಡ ಎಲ್ಲಾ ಕಾಲಾವಧಿಯು ಮುಗಿದ ನಂತರ ಮತ್ತೆ ಕಾಲಾವಕಾಶ ನೀಡಲು ನಿಯಮವಳಿಯಲ್ಲಿ ಅವಕಾಶವಿರುವುದಿಲ್ಲ. ನಿಗದಿತ ಅವಧಿ ಒಳಗಡೆ ಬಾಕಿ ಬಿಡ್ ಮೊತ್ತದ ಹಣ ಪಾವತಿಸದಿದ್ದಲ್ಲಿ ಹರಾಜು ಮೊತ್ತದ ಶೇಕಡಾ 25ರಷ್ಟು ಮುಂಗಡ ಠೇವಣಿ ಹಣವನ್ನು ಯಾವುದೇ ಸೂಚನೆ ನೀಡದೆ ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಹಾಗೂ ಸದರಿ ಹರಾಜು ರದ್ದಪಡಿಸಿ, ಹರಾಜಿಗೆ ತಗಲಿದ ವೆಚ್ಚವನ್ನು ನಿಮ್ಮಿಂದ ವಸೂಲು ಮಾಡಲಾಗುವುದು. 9.ಯಶಸ್ವಿ ಬಿಡ್‌ದಾರರು ನಿಗದಿತ ಅವಧಿಯೊಳಗೆ ಹಣ ಪಾವತಿಸದಿದ್ದಲ್ಲಿ ನಿವೇಶನ ಮರು ಹರಾಜು ಮಾಡಲಾಗುವುದು. ಮರುಹರಾಜಿನಲ್ಲಿ ಮೊದಲ ಬಿಡ್‌ದಾರರಿಂದ ಕಡಿಮೆ ಬಿಡ್ ಮೊತ್ತಕ್ಕೆ ಹರಾಜಿನಲ್ಲಿ ಪ್ರಾಧಿಕಾರಕ್ಕೆ ನಷ್ಟವಾಗುವ ಮೊತ್ತವನ್ನು ಮೊದಲ ಬಿಡ್‌ದಾರರಿಂದ ವಸೂಲಿ ಮಾಡಲು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು. ಒಂದು ವೇಳೆ ಮೊದಲ ಬಿಡ್‌ದಾರರು ಬಿಡ್ ಮೊತ್ತಕ್ಕಿಂತ ಹೆಚ್ಚಿನ ಮೊತ್ತಕ್ಕೆ ಹರಾಜಿನಲ್ಲಿ ಬರುವ ಲಾಭಾಂಶ ಮೊದಲ ಬಿಡ್‌ದಾರರಿಗೆ ನೀಡಲಾಗುವುದಿಲ್ಲ. 10.ಹರಾಜಿನಲ್ಲಿ ನಿವೇಶನ ಪಡೆದವರು ನಿವೇಶನವನ್ನು ವಿಭಜಿಸಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. 11.ಹರಾಜಿನಲ್ಲಿ ನಿವೇಶನ ಪಡೆದವರು ಪ್ರಾಧಿಕಾರದಿಂದ ನಿವೇಶನ ನೋಂದಾಯಿಸಿಕೊಡುವಾಗ ವಿಧಿಸಿದ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು. 12.ನಿವೇಶನಗಳನ್ನು ಎಲ್ಲಿ ಹೇಗಿವೆಯೋ ಹಾಗೆಯೇ ಹರಾಜು ನಡೆಸಲಾಗುವುದು. 13.ಬ್ಯಾಂಕ್ ಸೇವಾ ಶುಲ್ಕ ಇತ್ಯಾದಿಗಳನ್ನು ಬಿಡ್ಡುದಾರರೇ ಭರಿಸತಕ್ಕದ್ದು. 14.ಅಖೈರು ಬಿಡ್ಡಾದ ನಂತರ ಸದರಿ ಬಿಡ್ಡನ್ನು ಅಂಗೀಕರಿಸುವ ಅಥವಾ ಯಾವುದೇ ಕಾರಣ ನೀಡದೆ, ತಿಳುವಳಿಕೆ ನೀಡದೆ ತಿರಸ್ಕರಿಸುವ ಹಕ್ಕನ್ನು ಪ್ರಾಧಿಕಾರ ಹೊಂದಿರುತ್ತದೆ. 15.ಈ ಹರಾಜನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಮೂಲೆ ಮತ್ತು ವಾಣಿಜ್ಯ ನಿವೇಶನಗಳ ವಿಲೇವಾರಿ ನಿಯಮ 1991ರ ನಿಯಮಾವಳಿ ರೀತ್ಯಾ ಕ್ರಮವಹಿಸಲಾಗುವುದು. 16.ನಿವೇಶನದ ವಿವರಕ್ಕೆ ಮತ್ತು ಇತರೆ ಮಾಹಿತಿಗಳಿಗೆ https://kppp.karnataka.gov.in ಲಾಗಿನ್ ಆಗಿ ಪಡೆಯಬಹುದು. 17.ಇ-ಹರಾಜಿನ ಯಶಸ್ವಿ ಬಿಡ್‌ದಾರರು (H-1 Bidders) ನಿವೇಶನದ ಬಿಡ್‌ನ ಮೊತ್ತದ ಶೇಕಡಾ 25ರಷ್ಟು ಹಣ ಪಾವತಿಸಿದ ನಂತರ ಪಾವತಿಸಿರುವ ರಸೀದಿ ಮತ್ತು ಸಂಂಧಿಸಿದ ದಾಖಲಾತಿಗಳನ್ನು ಕಛೇರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. 18.ಬಿಡ್‌ದಾರರು ಇ-ಪೋರ್ಟಲ್‌ನಲ್ಲಿ ನಿವೇಶನಕ್ಕಾಗಿ ರಿಜಿಸ್ಟ್ರೇಷನ್ ಮಾಡುವ ವೇಳೆ ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಐ.ಎಫ್.ಎಸ್.ಸಿ ಕೋಡ್‌ನ್ನು ಸರಿಯಾಗಿ ರೀತಿಯಲ್ಲಿ ನಮೂದಿಸಬೇಕು. ತಪ್ಪಿದಲ್ಲಿ ಇ.ಎಂ.ಡಿ. ಮೊತ್ತವನ್ನು ಬ್ಯಾಂಕ್ ಖಾತೆಗೆ https://kppp.karnataka.gov.in ರವರು ವರ್ಗಾಯಿಸಲು ಸಾಧ್ಯವಾಗುವುದಿಲ್ಲ. 19.ಕ್ರ.ಸಂ. 01 ರಿಂದ 44 ನಿವೇಶನಗಳಿಗೆ ಕನಿಷ್ಠ ಬಿಡ್ ಬದಲಾವಣೆ ಮೊತ್ತ ರೂ.10000/- ಗಳು. 20.ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಳಿಸಿದ ನಂತರ ಇ.ಎಂ.ಡಿ. ಮೊತ್ತವನ್ನು https://kppp.karnataka.gov.in ರವರು ನೇರವಾಗಿ ಬ್ಯಾಂಕ್ ಖಾತೆಗೆ ಮರುಪಾವತಿಸಲು ಕ್ರಮವಹಿಸುತ್ತಾರೆ. ಇ.ಎಂ.ಡಿ. ಮೊತ್ತವನ್ನು ಹಿಂದಿರುಗಿಸಲು ತಡವಾದ್ದಲ್ಲಿ, ಇ-ಮೇಲ್ ವಿಳಾಸ refund.eproc@karnataka.gov.in ಹಾಗೂ ದೂರವಾಣಿ ಸಂಖ್ಯೆ: 080-22230960, 080-22234115 ಸಂಪರ್ಕಿಸಬಹುದಾಗಿರುತ್ತದೆ. 21.ಇ-ಹರಾಜು ಕೊನೆಯ ಕ್ಷಣದಲ್ಲಿ ಬರುತ್ತಿರುವ ಬಿಡ್ಡುಗಳಿಗೆ ಡೆಲ್ಟಾ ಟೈಮ್ 5 ನಿಮಿಷಗಳ ಕಾಲ ವಿಸ್ತರಣೆಯಾಗುತ್ತದೆ. ಉದಾ: ಇ-ಹರಾಜಿನಲ್ಲಿ ಪಾಲ್ಗೊಳ್ಳಲು, ಆಸಕ್ತಿ ವ್ಯಕ್ತಪಡಿಸಲು ಅಂತಿಮ ಸಮಯ 5.00 ಎಂದಿದ್ದಲ್ಲಿ ಅದನ್ನು 4.57 ಗಂಟೆಗಳಿಂದ ಪ್ರಾರಂಭಿಸಿ, 5.02 ಘಂಟೆಗಳ ವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಮತ್ತೆ ಯಾರಾದರೂ ಬಿಡ್‌ದಾರರು ಬಿಡ್ಡನ್ನು 5.01 ಘಂಟೆಗೆ ಮಾಡಿದ್ದಲ್ಲಿ 5.06 ವರೆಗೆ ಅವಧಿ ವಿಸ್ತರಣೆಯಾಗುತ್ತದೆ. 22.ಅಂತಿಮವಾಗಿ ನಿವೇಶನವನ್ನು ಬಿಡ್ಡುದಾರರಿಗೆ ಹಸ್ತಾಂತರಿಸುವ ಸಮಯದಲ್ಲಿ ನಿವೇಶನಗಳ ನಿಖರವಾದ ಅಳತೆಯಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಲ್ಲಿ ಹೆಚ್ಚು/ಕಡಿಮೆ ದರವನ್ನು ಬಿಡ್ಡುದಾರರು ನೀಡಿರುವ ಬಿಡ್ಡಿನ ದರದ ಮೇಲೆ ನಿಗಧಿಪಡಿಸಲಾಗುವುದು. 23.ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು www.hassan.uda.gov.in ವೆಬ್‌ಸೈಟ್‌ನಿಂದ ನೋಡಬಹುದಾಗಿದೆ. ನಿವೇಶನ ಮತ್ತು ಸ್ಥಳದ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿವರ:- 1)ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮೊ: 9845827558 2) ಕಾರ್ಯದರ್ಶಿಗಳು ಮೊ:7483179415 3) ನಗರ ಯೋಜಕರು ಮೊ:9741938357, 4) ಮೊ:9844740640,

ಸಹಿ/- (ಕೆ.ಎಂ.ರಮೇಶ್) ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ

ಸಹಿ/- (ಪಟೇಲ್ ಶಿವಣ್ಣ) ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ

ವಾಸಾಸಂಇ/ಹಿಸನಿ/ಹಾಸನ/29/ಕೆಎಸ್ಎಂಸಿಎ/2026-27

ಪೊಲೀಸ್ ಆಯುಕ್ತರಿಗೆ ಹಿಂದು ಸಂಘಟನೆಗಳಿಂದ ಮನವಿ

ಲವ್ ಜಿಹಾದ್, ಡ್ರಗ್ಸ್ ದಂಧೆ ನಿಯಂತ್ರಿಸಿ



ಹುಬ್ಬಳ್ಳಿ: ಹು-ಧಾ ಅವಳಿ ನಗರದಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಲವ್ ಜಿಹಾದ್, ಡ್ರಗ್ಸ್ ದಂಧೆ ನಿಯಂತ್ರಿಸಬೇಕು. ಹಿಂದು ಕಾರ್ಯಕರ್ತರ ಮೇಲಿನ ಪ್ರಕರಣಗಳನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿ ಸಮಸ್ತ ಹಿಂದು ಸಮಾಜ ಹಾಗೂ ವಿಶ್ವ ಹಿಂದು ಪರಿಷತ್ ಮುಖಂಡರು ಪೊಲೀಸ್ ಆಯುಕ್ತ ಎನ್. ಶಶಿಕುಮಾರ ಅವರಿಗೆ ಮನವಿ ಸಲ್ಲಿಸಿದರು.

ಸೋಮವಾರ ನವನಗರದಲ್ಲಿರುವ ಪೊಲೀಸ್ ಆಯುಕ್ತ ಕಚೇರಿಗೆ ಭೇಟಿ ನೀಡಿ ಹಿಂದು ಸಮಾಜದ ಮುಖಂಡರು ಇಂತಹ ಕೃತ್ಯ ವೆಸಗುತ್ತಿರುವ ಆರೋಪಿಗಳನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದರು.

ಹಿಂದು ಅಮಾಯಕ ಹುಡುಗಿಯರನ್ನು ಲವ್ ಜಿಹಾದ್ ಬಲೆಗೆ ಬೀಳಿಸಲಾಗುತ್ತಿದೆ. ನಂತರ ಮತಾಂತರಗೊಳಿಸಿ ಜೀವಕ್ಕೆ ಕುತ್ತು ತರಲಾಗುತ್ತಿದೆ. ಇತ್ತೀಚಿಗೆ ಲವ್ ಜಿಹಾದ್ ಪ್ರಕರಣಗಳು ಮತ್ತು ಹಿಂದು ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಹೆಚ್ಚಾಗಿ ನಡೆಯುತ್ತಿವೆ. ಹುಬ್ಬಳ್ಳಿಯಲ್ಲಿ ಸಮೀರ ಮುಲ್ಲಾ ಪ್ರಕರಣ, ಮುಪಿಜ್ ಮಿಯಾನವರ (ಕೇಶ್ವಾಪೂರ ಪೋಲಿಸ್ ಠಾಣೆ), ಮುಸ್ತಾಕ್ (ಅಶೋಕ ನಗರ ಪೋಲಿಸ್ ಠಾಣೆ), ಸಾಹಿಲ್ ಮುಂಡರಗಿ (ಇಂಡಿಪಂಪ್ ಪೋಲಿಸ್ ಠಾಣೆ), ಪರವೇಜ್ (ಇಂಡಿಪಂಪ್ ಪೋಲಿಸ್ ಠಾಣೆ), ಸಮೀರ್ ಬೂದಿಹಾಳ ವಿರುದ್ಧ ದಾಖಲಾಗಿವೆ.

ಈ ಪ್ರಕರಣಗಳನ್ನು ಒಟ್ಟಾರೆಯಾಗಿ ಗಮನಿಸಿದಾಗ ಜಿಮ್ ಹೇರ್ ಸಲೂನ್, ಏರೋಬಿಕ್ ಜಿಮ್, ಶಾಲೆ ಮತ್ತು ಕಾಲೇಜ್‌ಗಳನ್ನು ಗುರಿಯಾಗಿಸಿಕೊಂಡು ವ್ಯವಸಿತವಾಗಿ ಹಿಂದು ಹೆಣ್ಣು ಮಕ್ಕಳನ್ನು ಮುಸ್ಲಿಂ ಯುವಕರು ತಮ್ಮ ಜಾಲದಲ್ಲಿ ಸಿಲುಕಿಸಿ, ಅವರಿಗೆ ಮತ್ತು ಬರುವ ನಿಷೇಧಿತ ಮಾದಕ ವಸ್ತುಗಳನ್ನು ನೀಡಿ, ಅವರ ಮೇಲೆ ಅತ್ಯಾಚಾರ, ಲೈಂಗಿಕ ಶೋಷಣೆ ಮಾಡಿ ಅವುಗಳನ್ನು ಚಿತ್ರಿಸಿಕೊಂಡು, ಪದೇ ಪದೆ ಆ ಹೆಣ್ಣು ಮಕ್ಕಳನ್ನು ಲೈಂಗಿಕವಾಗಿ ಬಳಸಿಕೊಳ್ಳುತ್ತಿರುವುದು ಈ ಎಲ್ಲ ಪ್ರಕರಣಗಳಲ್ಲಿ ಸಾಬೀತಾಗಿದೆ.

ಈ ರೀತಿಯ ಪ್ರಕರಣಗಳಿಂದ ಹಿಂದು ಸಮಾಜದಲ್ಲಿ ಆಕ್ರೋಶ ಮಡುಗಟ್ಟಿದೆ. ಈ ರೀತಿಯ ಪ್ರಕರಣಗಳು ಸಮಾಜಕ್ಕೆ ಮತ್ತು ದೇಶಕ್ಕೆ ಗಂಡಾಂತರಕಾರಿಯಾಗಿದೆ. ಅದಕ್ಕಾಗಿ ತಾವು ಕೂಡಲೇ ಈ ಎಲ್ಲ ಪ್ರಕರಣಗಳಲ್ಲಿ ಆರೋಪಿಗಳಿಗೆ ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದರು.

ಮುಖಂಡರಾದ ಶಂಕರಣ್ಣ ಮುನವಳ್ಳಿ, ಮಹಾದೇವ ಕರಮರಿ, ವಿನಯ ಜವಳಿ, ನಿತೀನ ಠಕ್ಕರ, ಇಂದ್ರಜಿತ ಓಝಾ, ದೀಪಕ ಧನಿಗೊಂಡ, ರಾಮಸಿಂಗ ರಜಪೂತ, ಸುನೀಲ್ ದಳವಿ, ಜಸ್ಬಿರಸಿಂಗ, ಅನಂತರಾಜ ಭಟ, ಅಮೃತಲಾಲ ಪಟೇಲ, ಉಕಚಂದ ಭಾಪ್ನಾ, ಅರುಣ ಶಿಕ್ರೆ, ದಿನೇಶಲಾಲ ಸಂಘವಿ, ಚೆನ್ನು ಹೊಸಮನಿ, ವಿನಾಯಕ ಆಕಳವಾಡಿ, ಪೂರ್ಣ ಚಂದ್ರರಾವ ಘಂಟಸಾಲ, ನಾರಾಯಣ ವೈದ್ಯ, ಸಾಗರ ಕಲಾಲ,ಹರ್ಷಕುಮಾರ ಶೆಟ್ಟಿ, ಜಯಂತಿ ಲಾಲ ಜೈನ, ಬಸವರಾಜ ಯಕಲಾಸಪುರ ಇದ್ದರು.

ವಿಶ್ವ ಹಿಂದು ಪರಿಷತ್‌ನಿಂದ ಮನವಿ

ನಗರದಲ್ಲಿ ನಡೆಯುತ್ತಿರುವ ಲವ್ ಜಿಹಾದ ಪ್ರಕರಣಗಳನ್ನು ತಡೆಯಬೇಕು ಎಂದು ವಿಶ್ವ ಹಿಂದು ಪರಿಷತ್ ಮುಖಂಡರು ಪೊಲೀಸ್ ಆಯುಕ್ತ ಎನ್. ಶಶಿಕುಮಾರ ಅವರಿಗೆ ಮನವಿ ಸಲ್ಲಿಸಿದರು.
ಮಹಾನಗರದಲ್ಲಿ ಗಾಂಜಾ, ಡ್ರಗ್ಸ್ ಹಾವಳಿ ಮಿತಿ ಮೀರಿದೆ. ಕಾಲೇಜ್ ವಿದ್ಯಾರ್ಥಿಗಳನ್ನೆ ಟಾರ್ಗೆಟ್ ಮಾಡಲಾಗುತ್ತಿದೆ. ಡ್ರಗ್ಸ್ ಪೆಡಲರ್ಸ್‌ಗಳ ಹಾವಳಿ ಹೆಚ್ಚಾಗಿದೆ. ಇಂಥವರ ವಿರುದ್ಧ ಪೊಲೀಸ್ ಇಲಾಖೆ ಕಠಿಣ ಕ್ರಮ ಜರುಗಿಸಬೇಕು.
ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಲ್ಲಿದ್ದರೂ ಕಳ್ಳ ಗೋ ಸಾಗಣೆ ಹೆಚ್ಚಾಗಿದೆ. ಸಾಗಣೆ ಮತ್ತು ಹತ್ಯೆ ಮಾರಾಟ ಮಾಡುವವರು ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಗೋ ಮಾತೆಯನ್ನು ಸಂರಕ್ಷಿಸಬೇಕು. ಲವ್ ಜಿಹಾದ್ ಕೇಸ್ ತಡೆಯಲು ಹೋದ 62 ಹಿಂದು ಕಾರ್ಯಕರ್ತರ ಮೇಲೆ ಪ್ರಕರಣ ದಾಖಲಿಸಲಾಗಿದೆ. ಕೂಡಲೇ ಕೇಸ್ ಹಿಂಪಡೆಯಬೇಕು ಎಂದು ಒತ್ತಾಯಿಸಿ ಮನವಿಯನ್ನು ಸಲ್ಲಿಸಲಾಯಿತು.
ವಿಎಚ್‌ಪಿ ಮಹಾನಗರ ಜಿಲ್ಲೆ ಕಾರ್ಯದರ್ಶಿ ಚೇತನರಾವ್, ಗೋವರ್ಧನರಾವ್, ಬಜರಂಗದಳದ ರಾಜ್ಯ ಸಹ ಕಾರ್ಯದರ್ಶಿ ಶಿವಾನಂದ ಸತ್ತಿಗೇರಿ ಇತರರು ಇದ್ದರು.



ವಿಶೇಷ ಎಕ್ಸ್‌ಪ್ರೆಸ್ ರೈಲು ಸಂಚಾರ

ಹುಬ್ಬಳ್ಳಿ: ಬೇಸಿಗೆಯ ರಜಾ ದಿನಗಳಲ್ಲಿ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಎಸ್‌ಎಸ್‌ಎಸ್ ಹುಬ್ಬಳ್ಳಿ ಮತ್ತು ಪಶ್ಚಿಮ ಬಂಗಾಳದ ಅಲಿಪುರ್ ದ್ವಾರ್ ನಿಲ್ದಾಣಗಳ ನಡುವೆ, ಬೆಂಗಳೂರಿನ ಎಸ್‌ಎಂವಿಟಿ ಮತ್ತು ಯಲಹಂಕ ನಿಲ್ದಾಣಗಳ ಮೂಲಕ ಒಂದು ಟ್ರಿಪ್ ವಿಶೇಷ ಎಕ್ಸ್‌ಪ್ರೆಸ್ ರೈಲನ್ನು ಕಾರ್ಯಾಚರಣೆ ಮಾಡಲಾಗುವುದು.

ರೈಲು ಸಂಖ್ಯೆ 07323 ಹುಬ್ಬಳ್ಳಿ-ಅಲಿಪುರ್ ದ್ವಾರ್ ವಿಶೇಷ ಎಕ್ಸ್‌ಪ್ರೆಸ್ ರೈಲು 2026ರ ಏಪ್ರಿಲ್ 15ರ ಬುಧವಾರ ರಾತ್ರಿ 11.15ಕ್ಕೆ ಹುಬ್ಬಳ್ಳಿಯಿಂದ ಹೊರಟು, ಶನಿವಾರ ಮಧ್ಯಾಹ್ನ 1.50ಕ್ಕೆ ಅಲಿಪುರ್ ದ್ವಾರ್ ತಲುಪಲಿದೆ.

ಮರು ಪ್ರಯಾಣದಲ್ಲಿ ರೈಲು ಸಂಖ್ಯೆ 07324 ಅಲಿಪುರ್ ದ್ವಾರ್ ಹುಬ್ಬಳ್ಳಿ ವಿಶೇಷ ಎಕ್ಸ್‌ಪ್ರೆಸ್ ರೈಲು ಏಪ್ರಿಲ್ 19ರ ಭಾನುವಾರ ಸಂಜೆ 4.25ಕ್ಕೆ ಅಲಿಪುರ್ ದ್ವಾರ್‌ನಿಂದ ಹೊರಟು, ಬುಧವಾರ ಬೆಳಗ್ಗೆ 9.45ಕ್ಕೆ ಹುಬ್ಬಳ್ಳಿ ನಿಲ್ದಾಣಕ್ಕೆ ಬಂದು ಸೇರಲಿದೆ.

ಈ ರೈಲು ಎರಡೂ ಮಾರ್ಗಗಳಲ್ಲಿ ತನ್ನ ಪ್ರಯಾಣದ ಅವಧಿಯಲ್ಲಿ ದಾವಣಗೆರೆ, ಅರಸೀಕೆರೆ, ತುಮಕೂರು, ಎಸ್‌ಎಂವಿಟಿ ಬೆಂಗಳೂರು, ಯಲಹಂಕ, ಧರ್ಮಾವರಂ, ಡೋನ್, ನಂದ್ಯಾಲ, ಗುಂಟೂರು, ವಿಜಯವಾಡ, ರಾಜಮಂಡ್ರಿ, ಕೊಟ್ಟವಲಸ, ವಿಜಯನಗರಂ, ಶ್ರೀಕಾಕುಳಂ ರೋಡ್, ಪಲಾಸ, ಬ್ರಹ್ಮಪುರ, ಖುರ್ದಾ ರೋಡ್, ಭುವನೇಶ್ವರ, ಕಟಕ್, ಭದ್ರಾಕ್, ಖರಗ್ಪುರ, ಅಂದುಲ್,ದನಕುಣಿ, ಬರ್ದ್ಧಮಾನ್, ಬೋಲ್ಪುರ್ (ಶಾಂತಿನಿಕೇತನ), ರಾಂಪುರ್ ಹಾಟ್, ನ್ಯೂ ಫರಕ್ಕಾ, ಮಾಲ್ಡಾ ಟೌನ್, ಬರಸೋಯಿ, ಕಿಶನ್ ಗಂಜ್, ನ್ಯೂ ಜಲ್ಪೈಗುರಿ, ಸಿಲಿಗುರಿ, ಬಿನ್ನಗುರಿ ಮತ್ತು ಹಸಿಮಾರಾ ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿರಲಿದೆ.

20 ಎಲ್.ಹೆಚ್.ಬಿ ಬೋಗಿಗಳನ್ನು ಹೊಂದಿರುವ ಈ ರೈಲು, ಎಸಿ 2-ಟೈರ್, ಎಸಿ 3-ಟೈರ್, ಸ್ಲೀಪರ್ ಕ್ಲಾಸ್, ಸಾಮಾನ್ಯ ದ್ವಿತೀಯ ದರ್ಜೆ ಹಾಗೂ ಲಗೇಜ್ ಮತ್ತು ಬ್ರೇಕ್ ವ್ಯಾನ್ ಬೋಗಿಗಳನ್ನು ಒಳಗೊಂಡಿರುತ್ತದೆ.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಮನವಿ



ವಿಜಯನಗರ: ಅನಂತ ಶಯನಗುಡಿ ರೈಲ್ವೆ ಮೇಲ್ಸೇತುವೆ ಕಾಮಗಾರಿ ಚುರುಕುಗೊಳಿಸುವುದು ಸೇರಿದಂತೆ ರೈಲ್ವೆ ಇಲಾಖೆಗೆ ಸಂಬಂಧಿಸಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ವಿಜಯನಗರ ರೈಲ್ವೆ ಬಳಕೆದಾರರ ಸಂಘ ಒತ್ತಾಯಿಸಿದೆ.

ಸಂಘದ ಪ್ರಮುಖರು ಸೋಮವಾರ ಹೊಸಪೇಟೆ ರೈಲ್ವೆ ನಿಲ್ದಾಣದ ಅಧೀಕ್ಷಕ ಶಿವರಾಜ್‌ಕುಮಾರ್ ಮೀನಾ ರವರ ಮೂಲಕ ನೈರುತ್ಯ ರೈಲ್ವೆಯ ಪ್ರಧಾನ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಿ, ಹುಬ್ಬಳ್ಳಿ-ಬಳ್ಳಾರಿ ನಡುವೆ ಹಗಲು ವೇಳೆಯಲ್ಲಿ ರೈಲು ಸಂಚಾರ ಇಲ್ಲದಿರುವುದರಿಂದ ಪ್ರಯಾಣಿಕರಿಗೆ ತುಂಬ ಅನಾನುಕೂಲ ಉಂಟಾಗಿದೆ. ಪ್ರಸ್ತುತ ಮುಂಜಾನೆ 8 ಗಂಟೆಗೆ ಹೊಸಪೇಟೆ ಮಾರ್ಗವಾಗಿ ಹುಬ್ಬಳ್ಳಿ ಕಡೆಗೆ ನಿರ್ಗಮಿಸಿದ ನಂತರ ಸಂಜೆ 6ಗಂಟೆ ವರೆಗೆ ಯಾವುದೇ ರೈಲು ಸೌಲಭ್ಯವಿಲ್ಲ. ಆದ್ದರಿಂದ ಬಳ್ಳಾರಿಯಿಂದ ಬೆಳಗ್ಗೆ 11:30ಕ್ಕೆ ಹೊರಡುವಂತೆ ಹಗಲು ರೈಲನ್ನು ಪ್ರಾರಂಭಿಸಿ ಹೊಸಪೇಟೆ ಮಾರ್ಗವಾಗಿ ಹುಬ್ಬಳ್ಳಿಗೆ ತಲುಪುವಂತೆ ಕ್ರಮ ಕೈಗೊಳ್ಳಬೇಕು. ಇದರಿಂದ ವ್ಯಾಪಾರಸ್ಥರು, ವಿದ್ಯಾರ್ಥಿಗಳು, ಮತ್ತು ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಅನಂತಶಯನಗುಡಿ ರೈಲ್ವೆ ಮೇಲ್ಸೇತುವೆ ಎಲ್.ಸಿ.ಗೇಟ್ ಸಂಖ್ಯೆ 85 ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿರುವುದರಿಂದ ವಾಹನಗಳು ಮತ್ತು ಸಾರ್ವಜನಿಕರ ಸುಗಮ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದೆ. ವಿಶ್ವಪ್ರಸಿದ್ಧ ಹಂಪಿಗೆ ತೆರಳುವ ಪ್ರವಾಸಿಗರು ಇದೇ ರಾಜ್ಯ ಹೆದ್ದಾರಿಯನ್ನು ಬಳಸಬೇಕು. ಆದರೆ, ಮೇಲಿಂದ ಮೇಲೆ ರೈಲ್ವೆ ಗೇಟ್ ಹಾಕುವುದರಿಂದ ಬಿರುಬಿಸಿಲಿನಲ್ಲೇ ಗಂಟೆಗಳ ಕಾಲ ಕಾಯುವಂತಾಗಿದೆ ಎಂದರು.

ಅದರಂತೆಚಿತ್ತವಾಡ್ಗಿ ಮತ್ತು ಮಾಗಾಣಿ ಪ್ರದೇಶಗಳಿಂದ ಪ್ರತಿನಿತ್ಯ ಸಾವಿರಾರು ರೈತರು ವಿದ್ಯಾರ್ಥಿಗಳು ಈ ಎಲ್.ಸಿಗೇಟ್ ಮೂಲಕ ನಗರಕ್ಕೆ ಆಗಮಿಸುತ್ತಾರೆ. ಸಕಾಲದಲ್ಲಿ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ತೆರಳಲು, ರೋಗಿಗಳು ತುರ್ತಾಗಿ ಆಸ್ಪತ್ರೆಗೆ ಹೋಗಲು ಮತ್ತು ಸಾರ್ವಜನಿಕರು ವಾಹನಗಳ ವಿಳಂಬ ರಹಿತ ಸುಗಮ ಸುರಕ್ಷಿತ ಸಂಚಾರಕ್ಕೆ ಅನುಕೂಲವಾಗುವಂತೆ ಕೂಡಲೇ ಈ ಎರಡೂ ಗೇಟ್‌ಗಳಿಗೆ ಮೇಲ್‌ಸೇತುವೆ ಅಥವಾ ಅಂಡರ್‌ಪಾಸ್ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ವಿಜಯನಗರ ರೈಲ್ವೆ ಬಳಕೆದಾರರ ಸಂಘದ ಅಧ್ಯಕ್ಷ ವೈ.ಯಮುನೇಶ್, ಕಾರ್ಯದರ್ಶಿ ಮಹೇಶ್‌ಕುಡುತಿನಿ, ಉಪಾಧ್ಯಕ್ಷ ಜಿ.ಉಮಾಮಹೇಶ್ವರ್ ಹಾಗೂ ಮುಖಂಡರಾದ ನಜೀರ್‌ಸಾಬ್, ಐಲಿಸಿದ್ದಣ್ಣ, ಶರಣಗೌಡ, ಜೆ.ವರುಣ್, ಜಗದೀಶ್.ಎಲ್, ಜಿ.ದೇವರೆಡ್ಡಿ, ವಿ.ನಾಗೇಶ್, ಮನೋಹರ್ ಎಂ.ಜಿ., ಏಕನಾಥ ಎಸ್.ಡಿ., ಎಂ.ರಾಜಶೇಖರ್, ಎಂ.ಶಂಕ್ರರಪ್ಪ, ಜಿ.ರಾಮಚಂದ್ರ, ಕೆ.ಶಾಂತಪ್ಪ, ಬಿ.ವಿರುಪಾಕ್ಷಪ್ಪ, ಶ್ರೀನಿವಾಸ್‌ರಾವ್, ಶಿವಪುತ್ರಪ್ಪ ಮತ್ತಿತರರು ಇದ್ದರು.

ಪಂ.ಅನಂತಾಚಾರ್ಯ ಅಕಮಂಚಿಗೆ ವಿದ್ಯಾಧೀಶಾನುಗ್ರಹ ಪ್ರಶಸ್ತಿ



ಕಲಬುರಗಿ: ಜಿಲ್ಲೆಯ ಅಫಜಲ್ಪುರ ತಾಲೂಕಿನ ಭೀಮಾ ತೀರದಲ್ಲಿರುವ ಪುಣ್ಯಕ್ಷೇತ್ರ ಮಣ್ಣೂರಲ್ಲಿ ಕಳೆದ 4 ದಶಕಗಳಿಂದ ಅಧ್ಯಯನ, ಅಧ್ಯಾಪನ ಮಾಡಿಕೊಂಡು ಸಾಧನೆ ಮಾಡುತ್ತಿರುವ ಶ್ರೀ ವೇದಶತೀರ್ಥ ಸಂಸ್ಕೃತ ವಿದ್ಯಾಪೀಠದ ಕುಲಪತಿಗಳಾದ ಪಂ.ಅನಂತಾಚಾರ್ಯ ಅಕಮಂಚಿಯವರಿಗೆ ರಾಜ್ಯ ಸಂಸ್ಕೃತ ವಿವಿಯಿಂದ ಮಾನ್ಯತೆ ಪಡೆದಿರುವ ಬೆಂಗಳೂರಿನ ದ್ವೈತ ವೇದಾಂತಾಧ್ಯಯನ ಸಂಶೋಧನಾ ಪ್ರತಿಷ್ಠಾನ ವಿದ್ಯಾಧೀಶಾನುಗ್ರಹ ಪ್ರಶಸ್ತಿ ನೀಡಿ ಗೌರವಿಸಿದೆ.

ಶೀಮದುತ್ತರಾದಿ ಮಠದ ಪರಂಪರೆಯಲ್ಲಿ ಆಗಿ ಹೋಗಿರುವ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರ ಹೆಸರಲ್ಲಿ ಈ ಪ್ರಶಸ್ತಿ ನೀಡಲಾಗುತ್ತಿದ್ದು ಈ ಬಾರಿ ಪಂ.ಅನಂತಾಚಾರ್ಯರು ಈ ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ. ಉತ್ತರಾದಿ ಮಠಾಧೀಶರಾದ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು ಬೆಂಗಳೂರಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿಯನ್ನು ಪಂ.ಅನಂತಾಚಾರ್ಯರಿಗೆ ನೀಡಿ ಅನುಗ್ರಹಿಸಿದರು.ಮಣ್ಣೂರು ಭೀಮಾ ತೀರದಲ್ಲಿ ಗುರುಕುಲ ಪರಂಪರೆಯಲ್ಲಿ ವಿದ್ಯಾಪೀಠ ನಡೆಸಿಕೊಂಡು ಹೊರಟಿರುವ ಅನಂತಾಚಾರ್ಯರು ಕಳೆದ 4 ದಶಕಕ್ಕೂ ಹೆಚ್ಚು ಕಾಲದಿಂದ ಸಂಸ್ಕೃತ ಪಾಠಪ್ರವಚನ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿದ್ದಾರೆ. ಇವರಿಂದ ಪಾಠ ಪ್ರವಚನ ಹೇಳಿಸಿಕೊಂಡ ಅನೇಕರು ದೇಶಾದ್ಯಂತ ವಿವಿಧೆಡೆ ಸಂಸ್ಕೃತ ಪಾಠಶಾಲೆ ನಡೆಸಿಕೊಂಡು ಹೊರಟಿದ್ದಾರೆ.

ಧ್ಯಾನಪ್ರಮೋದ ಪುರಸ್ಕಾರ ಸೇರಿದಂತೆ ಅನೇಕ ಪ್ರಶಸ್ತಿಗಳು ಅರಸಿಕೊಂಡು ಬಂದಿರುವ ಅನಂತಾಚಾರ್ಯರು ಶ್ರೀಮದ್ ಭಾಗವತ ಪುರಾಣ ಪ್ರವಚನ ಚತುರರೆಂದೇ ಖ್ಯಾತ್ಯರಾಗಿದ್ದಾರೆ. ಬೆಂಗಳೂರಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಧ್ವೈತ ವೇದಾಂತಾಧ್ಯಯನ ಸಂಶೋಧನಾ ಪ್ರತಿಷ್ಠಾನದ ಅಧ್ಯಕ್ಷರಾದ ಸತ್ಯಧ್ಯಾನಾಚಾರ್ಯ ಕಟ್ಟಿ ಅವರು ಉಪಸ್ಥಿತರಿದ್ದರು.

ಸಂಪಾದಕೀಯ

ಅಭಿನಂದಿಸಬೇಕೇ ಹೊರತು...

ಪಾಕಿಸ್ತಾನವು ಇರಾನ್ ಮತ್ತು ಅಮೆರಿಕದ ನಡುವೆ ಶಾಂತಿ ಮಾತುಕತೆಯ ಮಧ್ಯಸ್ಥಿಕೆ ವಹಿಸಲು ಸಫಲವಾದುದು ವಿಶ್ವಗುರು ಎಂದು ಹೇಳಿಕೊಳ್ಳುವ ಭಾರತದ ಘನತೆಗೆ ಬಿದ್ದ ಪೆಟ್ಟು ಎಂಬುದಾಗಿ, ಮೋದಿ ಸರಕಾರವನ್ನು ತೆಗಳಲು ಸದಾ ಕಾದಿರುವ ಮಂದಿಯಿಂದ ಇತ್ತೀಚೆಗೆ ಬಂದ ಪ್ರತಿಕ್ರಿಯೆಗಳು. ಅವರ ಹೇಳಿಕೆಯಲ್ಲಿ ಕೊನೆಗಾದರೂ ಭಾರತದ ವಿರುದ್ಧ ಪಾಕಿಸ್ತಾನವು ಮೇಲುಗೈ ಸಾಧಿಸಿತಲ್ಲ ಎಂಬ ಪರೋಕ್ಷ ಹಿಗ್ಗೂ ಇದ್ದುದು ಸುಳ್ಳಲ್ಲ. ಮೋದಿ ಸರಕಾರದಡಿಯಲ್ಲಿ ಭಾರತದ ಘನತೆಯು ಜಾಗತಿಕವಾಗಿ ಕುಸಿಯುವುದನ್ನೆ ಕಾದಿರುವ ಕತ್ತೆಕಿರುಬಗಳಿವರು. ಆದರೆ ಈಗ ಶಾಂತಿ ಮಾತುಕತೆ ಮುರಿದು ಬಿದ್ದಿದೆ. ಮಧ್ಯಸ್ಥಿಕೆ ವಹಿಸಿದ್ದ ಪಾಕಿಸ್ತಾನ ಇಂಗು ತಿಂದ ಮಂಗನಂತಾಗಿದೆ. ಈ ಮಾತುಕತೆ ಮುರಿದು ಬೀಳುತ್ತದೆ ಎನ್ನುವುದು ಪೂರ್ವನಿರ್ಧರಿತವಾಗಿತ್ತು. ಏಕೆಂದರೆ ಟ್ರಂಪ್‌ರನ್ನು ಹಿಡಿದುಕೊಂಡು ಯಾವುದೇ ಒಪ್ಪಂದ ರೂಪಿಸುವುದು ಸಾಧ್ಯವೇ ಇರಲಿಲ್ಲ. ಟ್ರಂಪ್‌ಗೆ ಇರಾನ್ ಜತೆಗಿನ ಸಮರದಲ್ಲಿ ಉಂಟಾದ ಹಿನ್ನಡೆಯಿಂದ ಮುಖವುಳಿಸಬೇಕಾಗಿತ್ತು ಹಾಗೂ ಜಗತ್ತಿನ ದೃಷ್ಟಿಯನ್ನು ಬೇರೆಡೆಗೆ ಹರಿಸಬೇಕಾಗಿತ್ತು. ಅದಕ್ಕಾಗಿ ಪಾಕಿಸ್ತಾನದ ಮೂಲಕ ಶಾಂತಿ ಮಾತುಕತೆಯ ನಾಟಕವಾಡಿಸಿದರು. ಇದನ್ನು ಅರಿತಿದ್ದರಿಂದಲೇ ಭಾರತವು ಶಾಂತಿ ಮಾತುಕತೆಯ 'ದಲ್ಲಾಳಿ' ಕೆಲಸಕ್ಕೆ ಮುಂದಾಗಿರಲಿಲ್ಲ. ಇದು ಭಾರತದ ಜಾಣ ನಡೆಯಾಗಿತ್ತು.



ಇರಾನ್-ಇಸ್ರೇಲ್-ಅಮೆರಿಕನಡುವೆಸಮರಸ್ಫೋಟಗೊಂಡಂದಿನಿಂದಲೂ ನಮ್ಮ ದೇಶದಲ್ಲಿನ ಒಂದು ವರ್ಗಕ್ಕೆ ಭಾರತ ಸರಕಾರವನ್ನು ಟೀಕಿಸುವುದೇ ಕೆಲಸವಾಗಿದೆ. ಅವರಿಂದ ಸದಾ, ಪರಿಸ್ಥಿತಿಯನ್ನು ಸರಕಾರವು ಸರಿಯಾಗಿ ನಿಭಾಯಿಸಿಲ್ಲ ಎಂಬ ದೂರುಗಳು. ದೇಶವು ತೈಲ ಬಿಕ್ಕಟ್ಟಿಗೆ ಸಿಲುಕಿದಷ್ಟೂ ಅವರಿಗೆ ಹೆಚ್ಚು ಹರ್ಷ. ಮೋದಿ ಸರಕಾರವನ್ನು ಟೀಕಿಸಲೊಂದು ಅವಕಾಶ ಸಿಕ್ಕಿತಲ್ಲ ಎಂಬುದಾಗಿ. ನಿಜವಾಗಿ ಜಾಗತಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ದೇಶ ಹಿತ ಕಾಯುವುದು ಮುಖ್ಯ ಹಾಗೂ ತಾವೆಲ್ಲರೂ ಆಡಳಿತದೊಂದಿಗೆ ಕೈಜೋಡಿಸಬೇಕುಎಂಬಂತಹಮನಸ್ಥಿತಿಇರಬೇಕು. ಆದರೆನಮ್ಮಲ್ಲಿನವಿರೋಧ ಪಕ್ಷಗಳಿಗೆಮತ್ತುಕೆಲವುರಾಷ್ಟ್ರವಿರೋಧಿಮಾನಸಿಕತೆಯವರಿಗೆಅಂತಹಚಿಂತನೆ ಇಲ್ಲ. ದೇಶಕ್ಕೆ ಹಿನ್ನಡೆಯಾಗುವುದನ್ನೆ ಅವರು ಸಂಭ್ರಮಿಸುತ್ತಾರೆ. ಪಾಕಿಸ್ತಾನ ಶಾಂತಿ ಮಾತುಕತೆಯ ಮಧ್ಯಸ್ಥಿಕೆ ವಹಿಸಿದಾಗಲೂ ಅವರಿಗೆ ಉಂಟಾದುದು ಇದೇ ಸಂಭ್ರಮ. ಆದರೆ ಈ ಸಮರಕಾಲದಲ್ಲಿ ಭಾರತ ಸರಕಾರವು ತೈಲ ಪೂರೈಕೆ ಮತ್ತು ಅಡುಗೆ ಅನಿಲ ಪೂರೈಕೆಯನ್ನು ಅಬಾಧಿತವಾಗಿರುವಂತೆ ನೋಡಿಕೊಂಡುದು, ಸಮರನಿರತಎಲ್ಲಾದೇಶಗಳೊಂದಿಗೆಆಪ್ತಸಂಬಂಧವನ್ನು ಮುಂದುವರಿಸಿಕೊಂಡು ಬಂದುದು ರಾಜತಾಂತ್ರಿಕತೆಯ ಮಹತ್ಸಾಧನೆ ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕು. ಇದಕ್ಕಾಗಿ ಭಾರತ ಸರಕಾರವನ್ನು ಅಭಿನಂದಿಸಬೇಕೇ ಹೊರತು ಟೀಕಿಸುವುದಲ್ಲ.

ಅರಿವನ್ನು ಪರೀಕ್ಷಿಸಿ

ಅಕ್ಷರಾಣಿ ಪರೀಕ್ಷ್ಯಂತಾಂ ಅಂಬರಾಡಂಬರೇಣ ಕಿಮ್।
ಶಂಭುರಂಬರಹೀನೋಽಪಿ ಸರ್ವಜ್ಞಃ ಕಿಂ ನ ಜಾಯತೇ ॥

-ಸುಭಾಷಿತಾ ರತ್ನ ಭಾಂಡಾಗಾರ

ಅಕ್ಷರವನ್ನು (ತಿಳಿವನ್ನು) ಪರೀಕ್ಷಿಸಿ. ಬಟ್ಟೆಯ ಆಡಂಬರದಿಂದೇನು? ಈಶ್ವರನು ದಿಗಂಬರನಾಗಿದ್ದರೂ ಸರ್ವಜ್ಞನಾಗಿಲ್ಲವೇನು? -ಎಂಬುದು ಶ್ಲೋಕಾರ್ಥ.

ಇಂದುಮನುಷ್ಯರನ್ನುಗುರುತಿಸುವರೀತಿಸಾಕಷ್ಟುಬದಲಾಗಿದೆ. ಅವರಕುಲಗೋತ್ರ ನೋಡುತ್ತಾರೆ. ಬಡವನೋಬಲ್ಲಿದನೋಎಂಬುದನ್ನುಗಮನಿಸುತ್ತಾರೆ. ಅವರಉಡುಗೆ ತೊಡುಗೆಗಳನ್ನು ಅವಲೋಕಿಸುತ್ತಾರೆ. ಸ್ಥಾನಮಾನ, ಪ್ರತಿಷ್ಠೆಗಳನ್ನು ಲೆಕ್ಕ ಹಾಕುತ್ತಾರೆ. ಉತ್ತಮ ಕುಲದವನಾದರೆ, ಶ್ರೀಮಂತನಾದರೆ, ಆಡಂಬರದ ಪೋಷಾಕು ಧರಿಸಿದ್ದರೆ, ವಿಶೇಷ ಸ್ಥಾನಮಾನ ಹೊಂದಿದ್ದರೆ ಸತ್ಕರಿಸುವ, ಸ್ವಾಗತಿಸುವ ಪರಿಯೇ ಬೇರೆ. ಇವು ಯಾವುದೂ ಇಲ್ಲದಿದ್ದರೆ ನೋಡುವ ದೃಷ್ಟಿಯೇ ಬೇರೆ.

ಇದನ್ನೆಲ್ಲ ಸೂಕ್ಷ್ಮವಾಗಿ ಅವಲೋಕಿಸಿದ ಮೇಲೆ ಕವಿಯು ನಿರ್ಣಯ ರೂಪದಲ್ಲಿ ವಿಚಾರವನ್ನು ಮಂಡಿಸುತ್ತಾನೆ. ಮನುಷ್ಯರನ್ನು ಗುರುತಿಸುವುದು ಜ್ಞಾನದ ಮೂಲಕ.



ಅವರ ತಿಳುವಳಿಕೆಯ ಹಿನ್ನೆಲೆಯಲ್ಲಿ, ನಿಜವಾದ ಜ್ಞಾನಿಯು ಲೌಕಿಕ ಆಡಂಬರಕ್ಕೆ ಬೆಲೆ ಕೊಡುವುದಿಲ್ಲ. ಜ್ಞಾನಮೂಲದತ್ತ ಚಿಂತಿಸುತ್ತಾನೆ. ಜ್ಞಾನ ವಿಶೇಷದತ್ತ ಗಮನವೀಯುತ್ತಾನೆ. ''ನ ಹಿ ಜ್ಞಾನೇನ ಸದೃಶಮ್' 'ಜ್ಞಾನಂ ಬ್ರಹ್ಮೇತಿ ವ್ಯಜಾನಾತ್' ' ಪ್ರಜ್ಞಾನಂ ಬ್ರಹ್ಮ'.... ಈ ಎಲ್ಲ ಶ್ರೇಷ್ಠ ವಾಕ್ಯಗಳು ಪರಬ್ರಹ್ಮನನ್ನು ಪ್ರತಿನಿಧಿಸುತ್ತವೆ. ಪರಮ ತತ್ವವನ್ನು ಪ್ರತಿಪಾದಿಸುತ್ತವೆ. ಪರಮಪದವು ಜ್ಞಾನ ಮಾರ್ಗದಲ್ಲಿ ಪ್ರಾಪ್ತಿಯಾಗುತ್ತದೆ.

ಸನಾತನ ಪರಂಪರೆ ಜ್ಞಾನೋಪಾಸನೆಗೆ ಅತ್ಯಂತ ಮಹತ್ವವನ್ನು ನೀಡಿದೆ. ಸನಾತನ ಪ್ರಪಂಚದಲ್ಲಿವ್ಯಕ್ತಿಯೋರ್ವನನ್ನುಗುರುತಿಸುವುದುಜ್ಞಾನದಹಿನ್ನೆಲೆಯಲ್ಲಿ, ವಿದ್ಯೆಯ ಆಧಾರದಲ್ಲಿ. ವಿದ್ಯಾವಂತನು ಎಲ್ಲೆಡೆಯಿಂದಲೂ ಗೌರವ ಪಡೆಯುವುದರಿಂದ ''ವಿದ್ವಾನ್ ಸರ್ವತ್ರ ಪೂಜ್ಯತೇ'' ಎಂಬ ಉಕ್ತಿ ಜನಜನಿತವಾಗಿದೆ.

ಲೋಕದಲ್ಲಿ ವ್ಯಕ್ತಿಯನ್ನು ಅವನ ಅರಿವಿನ ಹಿನ್ನೆಲೆಯಿಂದಲೇ ಗುರುತಿಸಬೇಕು. ವಿದ್ಯಾವಂತನಿಗೆ, ಜ್ಞಾನಿಗೆ ಎಲ್ಲೆಡೆಯಲ್ಲೂ ಯಾವಾಗಲೂ ಗೌರವವಿದ್ದೇ ಇರುತ್ತದೆ. ಜ್ಞಾನಕ್ಕೇ ಬೆಲೆಯೇ ಹೊರತು ಹೊರಗಿನ ಆಡಂಬರಕ್ಕಲ್ಲ. ಪಾಂಡಿತ್ಯವೆಂಬುದು ಸಾರ್ವಕಾಲಿಕಹಾಗೂಸಾರ್ವತ್ರಿಕ. ಆದ್ದರಿಂದವ್ಯಕ್ತಿಯನ್ನುಜ್ಞಾನದಹಿನ್ನೆಲೆಯಲ್ಲಿಯೇ ಅಳೆಯಬೇಕು, ಗುರುತಿಸಬೇಕು.

ಸಮುದ್ರರಾಜನುಪೀತಾಂಬರಧಾರಿಯಾದಮಹಾವಿಷ್ಣುವನ್ನುನೋಡಿಲಕ್ಷ್ಮಿಯನ್ನು ಕೊಟ್ಟನಂತೆ, ಚರ್ಮಾಂಬರಧಾರಿಯಾದ ಶಿವನನ್ನು ನೋಡಿ ವಿಷವನ್ನಿತ್ತನಂತೆ ಎನ್ನುತ್ತಾ ವಸ್ತ್ರಾಲಂಕಾರವೇಮುಖ್ಯ ಎನ್ನುವ ಸುಭಾಷಿತವೂ ಇದೆ. ಶಂಭುವು ವಸ್ತ್ರಹೀನನಾದರೂ ದಿಗಂಬರ. ಸರ್ವಜ್ಞನು ಅವನೊಬ್ಬನೇ. ಸರ್ವಜ್ಞ ಪದವಿಗೆ ಏರಿದವ ಅವನು ಮಾತ್ರ. ದಿಗಂಬರತ್ವ ಅವನ ಯೋಗ್ಯತೆಯನ್ನು ತಡೆಯಲಿಲ್ಲ. ಅಂಬರಹೀನತ್ವವೆಂಬುದು ಜ್ಞಾನಿಗಳ ಜ್ಞಾನಿ ಎಂದು ಗೌರವಿಸುವುದಕ್ಕೆ ತಡೆಯೊಡ್ಡಿಲ್ಲ.

ಆದ್ದರಿಂದ ಜ್ಞಾನಸಿದ್ಧಿಗೆ, ಜ್ಞಾನವೃದ್ಧಿಗೆ, ಜ್ಞಾನಾಭಿವೃದ್ಧಿಗೆ ಜ್ಞಾನಸಿದ್ಧರಾಗಿ ತೊಡಗಿಕೊಳ್ಳಬೇಕು. 'ಜ್ಞಾನೇ ಸರ್ವಂ ಪ್ರತಿಷ್ಠಿತಮ್'. ಜ್ಞಾನದಲ್ಲಿಯೇ ಎಲ್ಲವೂ ಇದೆ.

ಯುದ್ಧಮಧ್ಯಸ್ಥಿಕೆಯ ದೊಂಬರಾಟದಲ್ಲಿ ಸಿಲುಕಿರುವ ಪಾಕ್



ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com

ಯುದ್ಧವಿರಾಮ ಬಂತೆಂದು ನಾವೆಲ್ಲಾ ನಿಟ್ಟುಸಿರು ಬಿಡುತ್ತಿರುವಾಗಲೇ, ಇಸ್ಲಾಮಾಬಾದಿನಲ್ಲಿ ನಡೆದ ಸಂಧಾನ ವಿಫಲವಾಗಿದೆಯೆಂಬ ಕಳವಳಕಾರಿ ಸುದ್ದಿ ಹೊರಬಿದ್ದಿದೆ. ಮತ್ತೊಂದು ಸುತ್ತು ಮಾತುಕತೆ ನಡೆಯಬಹುದು ಎಂಬ ಆಸೆಯಿದ್ದರೂ, ಇರಾನ್ ತನ್ನ ಅಣುಪರೀಕ್ಷೆಯನ್ನು ಕೈಬಿಡಬೇಕು ಎಂದು ಮುಖ್ಯ ಅಂಶವೇ ಬಗೆಹರಿಯದಕ್ಕಾಗಿ, ಅಮೇರಿಕನ್ನರು ಎದ್ದು ಹೊರನಡೆದಿದ್ದಾರೆ. ಅಲ್ಲಿಗೆ ಎಲ್ಲವೂ ಮೊದಲಿನ ಯುದ್ಧಸನ್ನದ್ಧ ಸ್ಥಿತಿಗೇ ಬಂದು ನಿಂತಂತಾಗಿದೆ, ಶಾಂತಿ ಮರುಕಳಿಸಬಹುದೆಂಬ ಆಸೆಗೆ ಮತ್ತೆ ನೀರೆರಚಿದಂತಾಗಿದೆ.

ನಲವತ್ತು ದಿನಗಳ ಹಿಂದೆ ಪ್ರಾರಂಭವಾದ ಚಕಮಕಿಯೊಂದು, ಇದ್ದಕ್ಕಿದ್ದಂತೆ ಬೆಂಕಿಯಾಗಿ ಪರಿವರ್ತನೆಗೊಂಡು, ಕಾಳ್ಗಿಚ್ಚಿನಂತೆ ಪಶ್ಚಿಮ ಏಷ್ಯಾದಲ್ಲಿ ಹರಡಿ, ಇಡೀ ಜಗತ್ತಿಗೇ ಅದರ ಬಿಸಿ ತಾಗಿಸಿತು. ಇಸ್ರೇಲ್ ಮತ್ತು ಇರಾನ್ ನಡುವೆ ನಡೆಯುತ್ತಿದ್ದ, ಅಲ್ಲೆಲ್ಲೋ ದೂರದಲ್ಲಿದ್ದ ಒಂದು ಕೊಂಕು ಬಿಟ್ಟರೆ, ತನ್ನದಲ್ಲದ ಈ ಗಲಾಟೆಗೆ ಮೂಗು ತೂರಿಸಿದ ಅಮೇರಿಕ, ಬಹಳಷ್ಟು ಮೇಲುಗೈ ಸಾಧಿಸಿದರೂ, ಕಳೆದ ಮೂರುವಾರದಲ್ಲಿ ಅನಿರೀಕ್ಷಿತ ಪೆಟ್ಟುಗಳನ್ನೂ ತಿಂದಿತು. ಅಮೇರಿಕಾದ ಸೈನ್ಯ ದೊಡ್ಡದು ಮತ್ತು ಶಕ್ತಿಶಾಲಿಯಂತೂ ಹೌದು. ಆದರೆ ಮಹಾದೈತ್ಯನನ್ನು, ದೈತ್ಯನಂತೆ ಎದುರಿಸದೇ, ಇಪ್ಪತ್ತು ವರ್ಷಗಳ ಕಾಲ ಹೊಂಚು ಹಾಕಿ ಕಾದು ಕೂತು, ಹೇಗೆಲ್ಲಾ ತನ್ನ ಶತ್ರುಗಳನ್ನು ಹೊಡೆಯಬೇಕು ಎಂದು ಇರಾನ್ ಉಪಾಯ ಮಾಡಿತ್ತೋ ಹಾಗೇ ಮಾಡಿದೆ.

ನಾಲ್ಕುವಾರಗಳ ನಂತರ ಯಾವುದೋ ಮಾಯೆ ಕೆಲಸ ಮಾಡಿ, ಎರಡೂ ಬಣಗಳನ್ನು ಮಾತುಕತೆಗೆ ಕರೆಸುವಂತಾದದ್ದು ಒಂದು ಒಳ್ಳೆಯ ಬೆಳವಣಿಗೆ ಅಂತಲೇ ಹೇಳಬಹುದು. ಎರಡು ಬಣಗಳು ತಯಾರಿದ್ದರೆ ನಾವು ಮಧ್ಯಸ್ಥಿಕೆ ಮಾಡಲು ತಯಾರಿದ್ದೇವೆ ಎಂದು ಪಾಕಿಸ್ಥಾನ ಹೇಳಿದ್ದೇ ತಡ, ನಮ್ಮಲ್ಲಿನ ಮೋದಿ ವಿರೋಧಿಗಳು (ದೇಶ ವಿರೋಧಿಗಳು ಅಂತಲೇ ಅಂದುಕೊಳ್ಳಿ) ಹಾಹಾಕಾರ ಎಬ್ಬಿಸಿಬಿಟ್ಟರು. ವಿಶ್ವಗುರು ಅಂದಿದ್ದೇನು, ಐವತ್ತಾರು ಇಂಚಿನ ಎದೆ ಅಂದಿದ್ದೇನು, ಮತ್ಯಾಕೆ ಮೋದಿ ಈ ಸಂಧಾನ ಮಾಡಿಸಲಿಲ್ಲ, ಎಲ್ಲಾ ಬಿಟ್ಟು ಪಾಕಿಸ್ಥಾನ ಸಂಧಾನಕ್ಕೆ ಮುಂದಾಯ್ತಲ್ಲ ಅಂತಾ ಜರಿದದ್ದೇನು! ಆದರೆ, ಇವರ್ಯಾರಿಗೂ ತಿಳಿಯದೇ ಹೋದ ವಿಷಯವೆಂದರೆ, ಮಾತುಕತೆಗೆ ಯಾವತ್ತೂ ಪಾಕಿಸ್ಥಾನ ತಾನಾಗಿಯೇ ಆಹ್ವಾನ ಕೊಟ್ಟಿರಲೇ ಇಲ್ಲ. ಅಮೇರಿಕದ ಹೊಲಸು ತೊಳೆಯುವ ಕಾಯಕವನ್ನು ಮೊದಲಿಂದಲೂ ಮಾಡಿಕೊಂಡು ಬಂದಿದ್ದ ಪಾಕಿಸ್ಥಾನ, ತನ್ನ ಯಜಮಾನನ ಅಣತಿಯ ಮೇರೆಗೆ ಮಾತಾಡಿತಷ್ಟೇ. ಪಾಕಿಸ್ಥಾನ ಹೇಳಿದ್ದೇ ತಡ, ಅಮೇರಿಕಾ 'ನಮ್ಮ ಬೇಡಿಕೆಗಳನ್ನು ಪಾಕಿಸ್ಥಾನ ಮೂಲಕ ಕಳಿಸಲಿದ್ದೇವೆ' ಎಂದು ಏಕಪಕ್ಷೀಯವಾಗಿ ಘೋಷಿಸಿಕೊಂಡಿತು. ಇರಾನ್ ಇನ್ನೂ ಈ ಮಾತುಕತೆಗೆ ತಯಾರಿಯನ್ನೇ ಮಾಡಿಕೊಂಡಿರಲಿಲ್ಲ, ಅಲ್ಲದೇ ಪಾಕಿಸ್ಥಾನದ ಮೂಲಕ ಸಂಧಾನಕ್ಕೆ ಮುಂದಾಗಲು ಇರಾನ್ ಯೋಚಿಸಿಯೂ ಇರಲಿಲ್ಲ. ಇದಿಷ್ಟೂ ಅಮೇರಿಕಾದ ಪಿ.ಆರ್ ಆಟವಷ್ಟೇ ಆಗಿದ್ದದ್ದು. ಎಷ್ಟರ ಮಟ್ಟಿಗೆ ಇದಿಷ್ಟೂ ಅಮೇರಿಕಾದ ಆಟವಾಗಿತ್ತೆಂದರೆ, ಪಾಕಿಸ್ಥಾನ ಪ್ರಧಾನಿ ಟಿವಿಯ ಮುಂದೆ ಏನು ಹೇಳಬೇಕು, ಸಾಮಾಜಿಕ ತಾಣಗಳಲ್ಲಿ ಏನು ಬರೆಯಬೇಕು ಎನ್ನುವ ಚಿತ್ರಕಥೆ-ಸಂಭಾಷಣೆಗಳೂ ವಾಷಿಂಗ್ಟನ್ನಿನಿಂದ ಬಂದಿದ್ದವು. ಹಾಗೆ ಬಂದ ಕಥೆಯನ್ನೂ ಸರಿಯಾಗಿ ಕಾರ್ಯಗತಗೊಳಿಸಿಲಾದಷ್ಟೂ ಕೈಲಾಗದ ಪಾಕಿಸ್ಥಾನಿಗಳು, ತಮ್ಮ ಪ್ರಧಾನಿಯ ಎಕ್ಸ್ ಖಾತೆಯ ಪೋಸ್ಟ್‌ನಲ್ಲಿ ಕೈಗೆ ಕೊಟ್ಟ ಚಿತ್ರಕಥೆಯಲ್ಲಿದ್ದ ಇದು ಪಾಕ್ ಪ್ರಧಾನಿ ಬರೆಯಬೇಕಾದ ಸಾಲುಗಳು ಎನ್ನುವ ಸಾಲನ್ನೂ ಅಳಿಸದೇ, ಅದರ ಸಮೇತವೇ ಯಥಾವತ್ತಾಗಿ ಅಂಟಿಸಿ, ಅದನ್ನು ಜನರು ಎಡಿಟ್ ಹಿಸ್ಟರಿಯಲ್ಲಿ ನೋಡಿ, ಹೊಟ್ಟೆಹಿಡಿದು ನಕ್ಕರು.

ಈ ಪ್ರಹಸನದಲ್ಲಿ ಯಾರಾದರೂ ಪಾಕಿಸ್ಥಾನವನ್ನು ಸಂಧಾನಕಾರ, ಮಧ್ಯಸ್ಥಿಕೆದಾರ ಅಥವಾ ಶಾಂತಿಮಾತುಕತೆಯ ಮುತ್ಸದ್ದಿ ಪಾಲುದಾರ ಎಂದುಕೊಂಡಿದ್ದರೆ ಅದಕ್ಕಿಂತಾ ದೊಡ್ಡ ತಪ್ಪುತಿಳುವಳಿಕೆ ಇನ್ನೊಂದಿಲ್ಲ. ಅಮೇರಿಕಾಕ್ಕೆ ಏಷ್ಯಾದಲ್ಲಿ ತನ್ನ ಮಾತನ್ನು ಹೇಳಿದಂತೆಯೇ ತಲುಪಿಸಿ ಪೋಸ್ಟ್- ಮ್ಯಾನ್ ಕೆಲಸ ಮಾಡುವ ಒಬ್ಬ ಸಂದೇಶಗಾರ ಬೇಕಿತ್ತು. ಅರಬ್ ದೇಶಗಳು ಯುದ್ಧದಿಂದ ಹೊರಗೇ ಇರುತ್ತೇವೆ ಎಂದು ಹೇಳಿದ್ದರಿಂದ, ಸಂಧಾನಕ್ಕೆ ಸೂಕ್ತ ಸ್ಥಳಗಳಾಗಿರಲಿಲ್ಲ. ಪಾಕಿಸ್ಥಾನದಲ್ಲಿ ಸದ್ಯಕ್ಕೆ ಶೆಹಬಾಜ್ ಶರೀಫ್ ಗಿಂತಲೂ ಶಕ್ತಿಶಾಲಿಯಾಗಿರುವ ಅಲ್ಲಿನ ಸೇನಾಧ್ಯಕ್ಷ ಅಸೀಫ್ ಮುನೀರ್, ಅಮೇರಿಕನ್ ಸೈನ್ಯದಲ್ಲಿರುವ ತನ್ನ ಗಾಲ್ಫ್ ದೋಸ್ತಿಗಳಿಗೆ ಫೋನಾಯಿಸಿ, ನೋಡಿ ಬೇಕಾದರೆ ನಾವಿದ್ದೇವೆ ಮಾತುಕತೆಗೆ ಎಂದಿದ್ದಕ್ಕೆ ಇಷ್ಟೆಲ್ಲಾ ಕತೆ ನಡೆದದ್ದು. ಈ ಮಾತುಕತೆಯಲ್ಲಿ ಪಾಕಿಸ್ಥಾನ 'ಬನ್ನಿ, ಈ ಈ ವಿಚಾರಗಳ ಬಗ್ಗೆ ಮಾತಾಡೋಣ, ಸಂಧಾನ ಮಾತುಕತೆಗೆ ನಮ್ಮ ಪ್ರಕಾರ ಈ ಹತ್ತು ಅಂಶಗಳ ಪ್ರಣಾಳಿಕೆಯನ್ನು ನಾವು ತಯಾರಿಸಿದ್ದೇವೆ' ಎಂದೇನೂ ಹೇಳಲಿಲ್ಲ. ಬದಲಿಗೆ? ಎರಡೂ ಪಾರ್ಟಿಗಳು ಕೊಟ್ಟ ತಮ್ಮತಮ್ಮ ಹತ್ತು ಹದಿಮೂರು ಅಂಶಗಳ ಪಟ್ಟಿಯನ್ನು ಅಲ್ಲಿಂದಿಲ್ಲಿಗೇ, ಇಲ್ಲಿಂದಲ್ಲಿಗೇ ಮಾಡಿದ್ದು ಬಿಟ್ಟರೆ ಪಾಕಿಸ್ಥಾನದ ಹೆಗ್ಗಳಿಕೆ ಈ ಇಡೀ ಪ್ರಕ್ರಿಯೆಯಲ್ಲಿ ಏನೇನೂ ಇಲ್ಲ. ಆ ಪೋಸ್ಟ್-ಮ್ಯಾನ್ ಕೆಲಸವನ್ನೂ ಸರಿಯಾಗಿ ಮಾಡದ ಪಾಕಿಗಳು ಇರಾನಿಗಳು ಕೊಟ್ಟ ತಮ್ಮ ಪಟ್ಟಿಯನ್ನು ಸರಿಯಾಗಿ ಇಂಗ್ಲೀಷಿಗೆ ತರ್ಜುಮೆಯನ್ನೂ ಮಾಡದೇ ಅಮೇರಿಕಾಕ್ಕೆ ಕೊಟ್ಟಿದ್ದಾರೆ. ಅತ್ತ ಕಡೆ ಇಸ್ರೇಲ್ ಮತ್ತು ಅಮೇರಿಕಾ ಈ ಯುದ್ಧವಿರಾಮ ಇರಾನ್'ಗೆ ಮಾತ್ರ ಅನ್ವಯವಾಗುತ್ತದೆ ಎಂದಿದ್ದನ್ನ ಇರಾನಿಗಳಿಗೆ ಹೇಳಲೇ ಇಲ್ಲ, ಲೆಬನಾನ್ ಅನ್ನೂ ಯುದ್ಧವಿರಾಮದ ಮಾತುಕತೆಯೊಳಗೆ ತಾವೇ ಸೇರಿಸಿ, ಘೋಷಿಸಿ, ಲೆಬನಾನಿನಲ್ಲಿ ಜನ 'ಅಬ್ಬಾ ಸದ್ಯಕ್ಕೆ ವಿರಾಮ ಬಂತು' ಎಂದು ನಿಟ್ಟುಸಿರು ಬಿಟ್ಟು ಮನೆಗಳಿಂದ ಹೊರಗೆ ಬಂದು, ಹತ್ತೇ ನಿಮಿಷದಲ್ಲಿ ಇಸ್ರೇಲ್ ಬಾಂಬ್ ದಾಳಿಗೆ ಸಿಕ್ಕು 250 ಜನ ಸುಖಾಸುಮ್ಮನೇ ಪ್ರಾಣ ಕಳೆದುಕೊಂಡರು.

ಆ ಕಡೆ ಇರಾನಿನ ಮುಖ್ಯ ಸ್ನೇಹಿತ ಚೀನಾ ಕೂಡಾ ಪಾಕಿಸ್ಥಾನಕ್ಕೆ ಆಗಾಗ ಹಳಸಿದ ಅನ್ನವನ್ನು ಹಾಕಿ ಸಾಕಿಟ್ಟುಕೊಂಡಿರುವ ವಿಚಾರ ಎಲ್ಲರಿಗೂ ತಿಳಿದದ್ದೇ. ಚೀನಾದ ಒತ್ತಾಯದಂತೆ ಕೊನೆಗೂ ಇರಾನ್ ಪಾಕಿಸ್ಥಾನದಲ್ಲಿ ಸಂಧಾನ ಮಾತುಕತೆಗೆ ಒಪ್ಪಿದ್ದೇ ಹೊರತು, ಪಾಕಿಸ್ಥಾನದ ಮುತ್ಸದ್ದಿತನವನ್ನು ನಂಬಿ ಅಲ್ಲ. ಆದರೆ ಈಗ ತಮಾಷೆ ನೋಡಿ. ಸಂಧಾನ ಮುರಿದುಬಿದ್ದ ಬೆನ್ನಹಿಂದೆಯೇ, ತನ್ನ ಮತ್ತು ಸೌದಿ ಅರೇಬಿಯಾದ ನಡುವೆ ಇರುವ ಒಪ್ಪಂದದಂತೆ, ಸೌದಿಯ ಮೇಲೆ ನಡೆದ ಧಾಳಿಯ ವಿರುದ್ಧ (ಅಂದರೆ ಇರಾನ್ ನಡೆಸಿದ ದಾಳಿಯ ವಿರುದ್ಧ) ಹೋರಾಡಲಿಕ್ಕೆ ತನ್ನ ಹದಿಮೂರು ಸಾವಿರ ಸೈನಿಕರನ್ನೂ, ಒಂದಷ್ಟು ಜೆಟ್ ವಿಮಾನಗಳನ್ನೂ ಕಳುಹಿಸಿದೆ. ಈ ಕಡೆ ಇರಾನ್ ಜೊತೆ ಸಂಧಾನ ಮಾತುಕತೆ ನಡೆಸುತ್ತೇನೆಂದು ಹೇಳಿದ ಒಂದೇ ವಾರದಲ್ಲಿ, ಯೂ-ಟರ್ನ್ ಹೊಡೆದ ಪಾಕಿಸ್ಥಾನ ಆ ಕಡೆ ಇರಾನ್ ವಿರುದ್ಧವೇ ಹೋರಾಡಲಿಕ್ಕೆ ತನ್ನ ಸೈನಿಕರನ್ನು ಕಳುಹಿಸಿದೆ. ಈ ಎಡಬಿಡಂಗಿಗಳು ಯಾವ ಮುಖ ಇಟ್ಟುಕೊಂಡು, ಎರಡನೇ ಸುತ್ತಿನ ಮಾತುಕತೆಗೆ ಇರಾನಿನ ನಾಯಕರನ್ನು ಕರೆಸುತ್ತಾರೆ!? ಬೆಣೆ ಬಿಡಿಸಲು ಹೋಗಿ ಬಾಲ ಸಿಗಿಸಿಕೊಂಡ ಪರಿಸ್ಥಿತಿ ಈಗ ಪಾಕಿಸ್ಥಾನದ್ದು!

ಈ ಮಧ್ಯಸ್ಥಿಕೆ ಅಮೇರಿಕಕ್ಕೂ ಇರಾನಿಗೂ ಹಾಗೂ ಜಗತ್ತಿಗೂ ಅಗತ್ಯವಿದೆಯೋ ಇಲ್ಲವೋ, ಪಾಕಿಸ್ಥಾನಕ್ಕೆ ಮಾತ್ರ ನೂರಕ್ಕೆ ನೂರು ಅಗತ್ಯವಿತ್ತು. ಇವತ್ತೋ ನಾಳೆಯೋ ಅಂತರ್ದಹಿಸಿಯೋ, ಕುಸಿದೋ ಬಿದ್ದುಹೋಗುವ ಹಂತದಲ್ಲಿರುವ ಪಾಕಿಸ್ಥಾನಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ತಲೆಯೆತ್ತಿ ನಿಲ್ಲಲಿಕ್ಕೆ ಒಂದು ಊರುಗೋಲು ಬೇಕಾಗಿತ್ತು. ಆಪರೇಷನ್ ಸಿಂಧೂರ್‌ನಿಂದ ಆಗಿರುವ ಮಂಗಳಾರತಿಯ ಉರಿ ಇನ್ನೂ ಇಳಿದಿಲ್ಲ, ಸ್ನೇಹಿತನೆಂದು ಹೇಳಿಕೊಂಡಿರುವ ಚೀನಾ ಕೂಡ ಇದುವರೆಗೂ ಒಂದೇ ಒಂದು ಆಲಿಂಗನ ಕೊಟ್ಟು ಸಮಾಧಾನ ಮಾಡಿಲ್ಲ, ಒಳಗಿನ ಉರಿ ಆರಿಲ್ಲ, ಅಷ್ಟೊತ್ತಿಗೇ ಈ ಹೊಸ ಯುದ್ಧದಿಂದ ಉಂಟಾಗಿರುವ ತೈಲ ಕೊರತೆಯ ಹೊಡೆತಕ್ಕೆ ಪಾಕಿಸ್ಥಾನದ ಸರ್ಕಾರಿ ವಾಹನಗಳೇ ಓಡುತ್ತಿಲ್ಲ, ಲೋಡ್ ಶೆಡ್ಡಿಂಗ್ ಶುರುವಾಗಿ, ಆಫೀಸುಗಳಲ್ಲಿ ಫ್ಯಾನ್ ಬಂದ್ ಆಗಿದೆ. ಪೂರ್ತಿ ಸಂಬಳ ಸರಿಯಾಗಿ ಪಾವತಿಸಿ ತಿಂಗಳುಗಳೇ ಕಳೆದಿವೆ. ಅಕ್ಷರಶಃ ಮುಳುಗುತ್ತಿರುವ ದೋಣಿಯಾಗಿರುವ ಪಾಕಿಸ್ಥಾನಕ್ಕೊಂದು ರಾಜತಾಂತ್ರಿಕ ಆಸರೆ ಬೇಕಿದೆ. ಅದಕ್ಕೇ ಈ ಮಧ್ಯಸ್ಥಿಕೆಯ ನಾಟಕದಲ್ಲಿ ಪಾತ್ರವಹಿಸುತ್ತಿದೆ.

ಅಂದಹಾಗೆ, ಭಾರತಕ್ಕೆ ಈ ಮಧ್ಯಸ್ಥಿಕೆಯ ಅವಕಾಶ ಸಿಕ್ಕಿಲ್ಲ ಅಂತಾ ಬಾಯಿಬಡಿದುಕೊಳ್ಳುತ್ತಿರುವವರ ಗಮನಕ್ಕೆ ಕೆಲಮಾತುಗಳು. ಭಾರತಕ್ಕೆ ಯಾವ ದೇಶಗಳ ಮಾತು ಕೇಳಿ ತನ್ನ ನೀತಿ ನಿಯಮಾವಳಿಗಳನ್ನು ರೂಪಿಸುವ ಅಗತ್ಯ ಇಲ್ಲ, ಭಾರತಕ್ಕೆ ಯಾವ ದೇಶಗಳ ನಡುವೆ ಮಧ್ಯಸ್ಥಿಕೆ ವಹಿಸುವ ಯಾವ ಅಗತ್ಯವೂ ಇಲ್ಲ. ವಿಶೇಷವಾಗಿ ಈ ಹುಚ್ಚು ದೇಶಗಳಾದ ಅಮೇರಿಕ ಮತ್ತು ಇರಾನ್ ನಡುವಂತೂ ಮಧ್ಯಸ್ಥಿಕೆ ನಡೆಸುವ ಅಗತ್ಯವಿಲ್ಲ. ಈ ಹಿಂದೆಯೂ ಭಾರತ ಇಂತಹಾ ಮಧ್ಯಸ್ಥಿಕೆಗಳಿಗೆ ಮುಂದಾಗಿಲ್ಲ, ಈಗಲೂ ಅದರ ಅಗತ್ಯವಿಲ್ಲ. 'ಅಲಿಪ್ತ ನೀತಿ'ಯೆಂದರೆ ಯುದ್ಧದಲ್ಲಿ ಪರವಹಿಸದೇ ಇರುವುದು ಮಾತ್ರವಲ್ಲ, ಶಾಂತಿಯಲ್ಲೂ ಯಾವ ಪರವನ್ನೂ ವಹಿಸದೇ, ನಮ್ಮದೃಷ್ಟಿದೆ ಅದನ್ನು ನೋಡಿಕೊಂಡಿರುವುದು. ಹಾಗೂ ಭಾರತ ತನ್ನ ಅಲಿಪ್ತತೆಯ ನೀತಿಯನ್ನು ಸರಿಯಾಗಿಯೇ ನಿಭಾಯಿಸಿದೆ.

ಕೊನೆಯಮಾತು: ಈ ಸಂಧಾನ ಮಾತುಕತೆಗಳಿಗೊಪ್ಪದೇ ಹೊರನಡೆದಲ್ಲಿ ಹೆಚ್ಚಿನ ನಷ್ಟ ಇರಾನಿಗೇ ಹೊರತು ಅಮೇರಿಕಾಕ್ಕಲ್ಲ. ಅಮೇರಿಕಾ ಹತ್ತು ಸರ್ಕಸ್ಸುಗಳನ್ನು ಮಾಡಿ, ಇದರಿಂದ ಹೊರಬಂದು ಮೈಕೊಡವಿ ನಿಲ್ಲಲಿದೆ. ಅದಾಗಲೇ ಒಂದೇ ಒಂದು ಕುಂಟುಗಾಲಿನಲ್ಲಿ ನಿಂತಿರುವ ಗಾಯಾಳು ಇರಾನ್, ಸಿಕ್ಕ ಹುಲ್ಲುಕಡ್ಡಿಯನ್ನು ಬಳಸಿಕೊಳ್ಳದೇ ಹೋದರೆ, ಮುಳುಗುವುದು ಖಚಿತ. ಇದರೊಂದಿಗೇ ಅಮೇರಿಕಾ ಮತ್ತಷ್ಟು ದೇಶಗಳ ಮೇಲೆ ರೌಡಿ ವರ್ತನೆ ಮಾಡುವುದೂ ಖಚಿತ.

ಆರ್ಯರು ಮೂಲತಃ ಗೋಪಾಲಕರು



ಧರಣಿ ಮಂಡಲ
• ಕೆ.ಎಸ್. ಶೈಲೇಶ್ ಹೊಳ್ಳ
shyleshholla@gmail.com

ಪುರಾತನ ಕಾಲದಿಂದಲೂ ಭಾರತದಲ್ಲಿ ಹಲವಾರು ಉತ್ತಮ ತಳಿಯ ದನಗಳಿದ್ದವು. ಇವುಗಳಲ್ಲಿ ಕೆಲವು ಏಕೋದ್ದೇಶದ ಬಳಕೆಯ ದನಗಳಾಗಿ ರೂಪುಗೊಂಡಿದ್ದರೆ, ಇನ್ನು ಕೆಲವು ದ್ವಂದ್ವೋದ್ದೇಶದ ಬಳಕೆಯ ದನಗಳಾಗಿ ಉಪಯೋಗಕ್ಕೆ ಬರುತ್ತಿವೆ. ಇಂತಹ ದನಗಳ ಪಾಲನೆ ಪೋಷಣೆ ಮತ್ತು ತಳಿ ಅಭಿವೃದ್ಧಿಯ ನಿರ್ವಹಣೆಯನ್ನು ಕಾಲಕಾಲಕ್ಕೆ ಆಡಳಿತ ನಡೆಸಿದ ಅಂದಿನ ಅರಸರು ಹಾಗೂ ಸಾರ್ವಜನಿಕರು ಹೆಚ್ಚು ಆಸಕ್ತಿಯಿಂದ ನಡೆಸಿದ್ದರ ಪರಿಣಾಮವಾಗಿ ಅಂತಹ ದನಗಳ ತಳಿಗಳು ಶುದ್ಧ ಸ್ಥಿತಿಯಲ್ಲಿಯೇ ಇಂದಿಗೂ ಅಲ್ಲಲ್ಲಿ ನಮಗೆ ಕಂಡು ಬರುತ್ತಿವೆ. ಹಾಗೆಯೇ ಭಾರತದ ಪಶುಪಾಲನಾ ಪದ್ಧತಿ ಬೇರೆ ದೇಶಗಳಿಗಿಂತ ಶ್ರೇಷ್ಠ ಮಟ್ಟದ್ದಾಗಿತ್ತೆಂದು ನಮ್ಮ ವೇದ ಪುರಾಣಗಳೇ ಸ್ಪಷ್ಟೀಕರಿಸುತ್ತವೆ. ಇಂದು ನಾವು ಡೆನ್ಮಾರ್ಕ್, ಹಾಲೆಂಡ್, ಅಮೆರಿಕಾ, ಆಸ್ಟ್ರೇಲಿಯಾದಂತಹ ಮುಂದುವರೆದ ದೇಶಗಳಿಂದ ಹೈನು ಉತ್ಪಾದನಾ ತಳಿಗಳನ್ನು ಹೇಗೆ ಆಮದು ಮಾಡಿಕೊಳ್ಳುತ್ತಿದ್ದೇವೆಯೋ ಅದೇ ರೀತಿ ವಿದೇಶಿಯರು ಸಹ ನಮ್ಮಲ್ಲಿಯ ಉತ್ಕೃಷ್ಟ ತಳಿಗಳನ್ನು ಇಲ್ಲಿಂದ ಕೊಂಡುಹೋಗುತ್ತಿದ್ದುದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ.

ನಮ್ಮ ದೇಶದ ದನಗಳ ಇತಿಹಾಸವನ್ನು ಆರ್ಯರ ಪುರಾತನ ಇತಿಹಾಸವಿಲ್ಲದೆ ಅರಿಯಲು ಸಾಧ್ಯವೇ ಇಲ್ಲ ಎಂಬುದು ಬಹುತೇಕ ತಜ್ಞರ ಅಭಿಪ್ರಾಯ. ಅದುನಿಜವೂಹೌದು. ಮೊದಲುಆರ್ಯರಆಕ್ರಮಣಒಂದು ಸಿದ್ಧಾಂತಎಂದುಹೇಳುತ್ತಿದ್ದಬ್ರಿಟಿಷರನ್ನೊಳಗೊಂಡಂತೆಎಲ್ಲಾಪಾಶ್ಚಿಮಾತ್ಯರು ಹಾಗೂ ಇತಿಹಾಸಕಾರರು ಇಂದು ಅದು ಸುಳ್ಳೆಂದು ಸಾಬೀತಾದ ಮೇಲೆ, ಅದು ಆರ್ಯರಆಕ್ರಮಣವಲ್ಲ, ಆರ್ಯರವಲಸೆ ಎಂಬುದಾಗಿ ತಮ್ಮ ವರಸೆ ಬದಲಿಸಿದ್ದಾರೆ. ಇದರಿಂದ ಆರ್ಯರು ಬೇರೆ ದೇಶದಿಂದ ವಲಸೆ ಬಂದವರು ಎಂಬುದು ಸಹಾ ಶುದ್ಧ ಸುಳ್ಳೆಂದು ಸಾಬೀತಾಗಿದೆ.

ಆರ್ಯ ಎಂದರೆ ಗೋಪಾಲಕ ಎಂದರ್ಥ. ಇವರಮೂಲಮತ್ತು ಮುಖ್ಯ ಕಸಬು ಪಶುಪಾಲನೆಯಾಗಿತ್ತು. ಇದರಿಂದ ಇವರಿಗೆಪಶುಪಾಲನೆ, ಪೋಷಣೆ ಮತ್ತು ಸಂವರ್ಧನೆಯಲ್ಲಿ ಹೆಚ್ಚಿನ ಪರಿಣತಿಯಿತ್ತು. ಆದ್ದರಿಂದ ಇವರಲ್ಲಿನ ಪಶುಪಾಲಕರನ್ನು ಗೊಲ್ಲರು, ದನಗಾಹಿಗಳು ಎಂಬುದಾಗಿ ಕರೆಯುತ್ತಿದ್ದರು. ಇವರಲ್ಲಿ ಪಶು ಸಂಪತ್ತು ವಿಪುಲವಾಗಿದ್ದರಿಂದ ದನಗಳ ಹಿಂಡೇ ಇವರ ಸಂಪತ್ತಾಗಿತ್ತು. ಹೀಗಾಗಿ ಒಬ್ಬರ ಗೋವುಗಳನ್ನು ಮತ್ತೊಬ್ಬರು ಹಿಡಿದು ತಂದು ತಮ್ಮ ಹಿಂಡನ್ನು ವೃದ್ಧಿಸಿಕೊಳ್ಳುವ ಕಾರ್ಯ ಆಗಾಗ ನಡೆಯುತ್ತಿತ್ತು. ಈ ಕಾರಣಕ್ಕಾಗಿಯೇ ಅವರಲ್ಲಿ ಆಗಾಗ್ಗೆ ಜಗಳ, ಹೊಡೆದಾಟ, ಯುದ್ಧಗಳೂ ಸಹ ಆಗುತ್ತಿದ್ದವು ಎಂಬುದು ಇತಿಹಾಸದಿಂದ ತಿಳಿದುಬರುತ್ತದೆ. ಹೀಗೆ ಯಾರ ಹತ್ತಿರ ಹೆಚ್ಚು ದನಗಳ ಸಂಗ್ರಹವಿರುತ್ತಿದ್ದವೋ ಅವನನ್ನೇ ರಾಜ, ಅಧಿನಾಯಕ ಇಲ್ಲವೇ ಸಮಾಜದ ಮುಖ್ಯಸ್ಥನೆಂದು ಕರೆಯುವುದು ವಾಡಿಕೆಯಾಗಿತ್ತು.

ಇದೇ ಕಾರಣಕ್ಕೆ ಆರ್ಯರ ಇತಿಹಾಸಕ್ಕೂ ಈ ದೇಶದ ಉತ್ತಮ ಗೋತಳಿಗಳ ಇತಿಹಾಸಕ್ಕೂ ಪರಸ್ಪರ ಸಂಬಂಧವಿದೆ ಎಂದು ಹೇಳಲಾಗುತ್ತಿರುವುದು. ಇದಕ್ಕೆ ಸಾಕ್ಷಿ ನಮ್ಮಲ್ಲಿಯ ವಿವಿಧ ಜಾತಿಯ ದನಗಳ ಬೆಳವಣಿಗೆ ಮತ್ತು ಅಭಿವೃದ್ಧಿಯ ಕಾರ್ಯದಲ್ಲಿ ಆರ್ಯರ ಪಾತ್ರ ಅತ್ಯಂತ ಪ್ರಮುಖವಾಗಿ ಕಂಡುಬಂದಿರುವುದು. ಹೀಗಾಗಿಯೇ ಆರ್ಯರನ್ನು ಇಂದಿನ ಉತ್ಕೃಷ್ಟ ಗೋ ತಳಿಗಳ ಮೂಲ ಪುರುಷರು ಎಂದು ಹೇಳಲಾಗುತ್ತಿರುವುದು. ಅಷ್ಟೇ ಅಲ್ಲದೆ ಆರ್ಯರ ಪುರಾತನ ಇತಿಹಾಸ ಇಂದಿನ ನಮ್ಮಲ್ಲಿಯ ದನಗಳ ಇತಿಹಾಸಕ್ಕೆ ದಾರಿದೀಪದಂತೆ ಕಂಡುಬಂದಿರುವುದು.

ಇಂದು ನಮ್ಮಲ್ಲಿರುವ ಉತ್ತರ ಭಾರತದ ತಳಿಗಳಾದ ಕಾಂಕ್ರೇಜ್ ಮತ್ತು ಗೀರ್ ಹಾಗೂ ಕರ್ನಾಟಕದ ಹೆಸರಾಂತ ತಳಿಯಾದ ಹಳ್ಳಿಕಾರ್ ದನಗಳೇ ಭಾರತದ ಪುರಾತನ ಇತಿಹಾಸ ಪ್ರಸಿದ್ಧವಾದ ಮೂಲ ತಳಿಗಳು ಎಂಬುದು ಇತಿಹಾಸದಿಂದ ತಿಳಿದುಬರುತ್ತದೆ. ಹಾಗೆಯೇ ಈ ಮೂರು ತಳಿಗಳನ್ನು ನಮ್ಮಲ್ಲಿ ಸಾಕಿ ಸಂವರ್ಧಿಸಿರುವುದಕ್ಕೆ ಸುಮಾರು 2000 ವರ್ಷಗಳ ಹಿಂದಿನ ಇತಿಹಾಸವಿರುವುದು ಸಹ ಕಂಡುಬರುತ್ತದೆ. ಇದಕ್ಕೆ ಸಾಕ್ಷಿ ಋಗ್ವೇದದಲ್ಲಿ ಸಿಂಧು ನದಿಯ ಬಯಲು ಮತ್ತು ಅದರ ಉಪನದಿಯಾದ ಗೋಮಾಲ ತೀರ ಪ್ರದೇಶಗಳು ಬಹಳ ಫಲವತ್ತಾದ ಪ್ರದೇಶಗಳನ್ನು ಹೊಂದಿದ್ದು, ಅಲ್ಲಿ ಉತ್ತಮ ದನಗಳ ಹಿಂಡು ಇತ್ತೆಂದು ಹೇಳಲಾಗಿರುವುದು. ಈ ಪ್ರದೇಶ ದಲ್ಲಿಯೇ ಆರ್ಯರು ಬಹಳ ಕಾಲದವರೆಗೆ ನೆಲೆಸಿದ್ದರು ಎಂದು ಸಹ ಹೇಳಲಾಗುತ್ತದೆ. ಹಾಗೆಯೇ ಮೊಹೆಂಜೋದಾರೋ ಮತ್ತು ಹರಪ್ಪಗಳಲ್ಲಿ ಸಿಕ್ಕಿರುವ ಪುರಾತನ ಅವಶೇಷಗಳಲ್ಲಿ ದನಗಳ ಮುದ್ರೆ ಮತ್ತು ಎಲುಬುಗಳು ದೊರೆತಿವೆ. ಈ ಎಲುಬುಗಳು ಎತ್ತರವಾದ, ದೊಡ್ಡ ಡುಬ್ಬಗಳನ್ನೊಳಗೊಂಡ ಮತ್ತು ಉದ್ದ ಕೋಡಿನ ದನಗಳದ್ದು ಎಂಬುದಾಗಿ ಸಂಶೋಧಕರು ದೃಢಪಡಿಸಿದ್ದಾರೆ. ಅಚ್ಚರಿಯೇನೆಂದರೆ ಹೀಗೆ ಅವರ ಬಳಿಯಿದ್ದ ಆ ದನಗಳ ಎಲ್ಲಾ ಹೋಲಿಕೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅದು ಇಂದಿನ ನಮ್ಮ ಉತ್ತರ ಭಾರತದ ಕಾಂಕ್ರೇಜ್ ತಳಿಯನ್ನು ಬಹುತೇಕ ಹೋಲುತ್ತಿರುವುದು ದೃಢಪಟ್ಟಿದೆ.

ಆರ್ಯರು ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಇಲ್ಲವೇ ಮತ್ತಿನ್ಯಾವುದೋ ಕಾರಣಕ್ಕೆ ಹೋದಾಗಲೆಲ್ಲಾ ಅವರ ಜೊತೆಗಿದ್ದ ದನ, ನಡೆ-ನುಡಿ, ಸಂಸ್ಕೃತಿ, ನಾಗರೀಕತೆಗಳನ್ನು ಸಹ ಜೊತೆಯಲ್ಲಿಯೇ ತೆಗೆದುಕೊಂಡು ಹೋಗುತ್ತಿದ್ದರು ಎಂಬುದನ್ನು ಅಧ್ಯಯನಗಳು ಹೇಳುತ್ತವೆ. ಹೀಗೆ ಅವರು ತಮ್ಮ ಜೊತೆಯಲ್ಲಿ ಕೊಂಡೊಯ್ದ ದನಗಳೇ ನಮ್ಮ ದೇಶದ ಮೂಲತಳಿಯದನಗಳೆಂದು ಕೆಲವು ಇತಿಹಾಸತಜ್ಞರು ಅಭಿಪ್ರಾಯಿಸುತ್ತಾರೆ. ಹೀಗಾಗಿಯೇ ಉತ್ತರದ ಹರಿಯಾಣವಿ, ಮೇವಡಿ ಹಾಗೂ ನಗೋರಿ, ದಕ್ಷಿಣದ ಗೆವೋಲೋ, ಓಂಗೋಲ್, ಕೃಷ್ಣಾತೀರ, ಬಚಾರ್ ಹಾಗೂ ಕೆರಿಫೆಡ್ ದನಗಳು ಆರ್ಯರ ಮೂಲ ದನಗಳಿಂದ ರೂಪುಗೊಂಡಿರುವ ದನಗಳು ಎಂಬುದಾಗಿ ಹೇಳಲಾಗುತ್ತದೆ. ಇದಕ್ಕೆ ನಿದರ್ಶನ ಆರ್ಯರು ಹೇಗೆ ಹೇಗೆ ಹರಡಿಕೊಂಡರೋ, ಎಲ್ಲೆಲ್ಲಿ ನೆಲೆಸಿದ್ದರೋ ಅಲ್ಲೆಲ್ಲಾ ಆರ್ಯರ ಈ ತಳಿಯ ದನಗಳು ಇಂದಿಗೂ ಹೆಚ್ಚಾಗಿ ಹಬ್ಬಿಕೊಂಡಿರುವುದನ್ನು ನಾವು ಕಾಣುವುದೇ ಆಗಿದೆ. ಅಷ್ಟೇ ಅಲ್ಲದೆ ಆರ್ಯರ ಒಟ್ಟು ದನದ ಹಿಂಡಿನಲ್ಲಿ ಬಣ್ಣ ಬಣ್ಣಗಳಿಂದ ಕೂಡಿದ ದನಗಳು ಸಹ ಇದ್ದವು ಎಂಬುದು ಯುರೋಪ್ ದೇಶದ ಅಂದಿನ ಚರಿತ್ರೆಯಿಂದ ತಿಳಿದುಬರುತ್ತದೆ.

ಒಂದು ಕಾಲಕ್ಕೆ ರೋಮನ್ ಸಾಮ್ರಾಜ್ಯ ತಮ್ಮ ಪ್ರಭುತ್ವವನ್ನು ಯೂರೋಪಿನಲ್ಲೆಲ್ಲಾ ವಿಸ್ತರಿಸಿತ್ತು. ಅಂದು ಇಟಲಿಯ 'ಪೋ' ನದಿಯ ಕೊಳ್ಳದ ಪ್ರದೇಶಗಳಾದ ಟಸ್ಕನಿ ಮತ್ತು ಲೊಂಬಾರ್ಡಿ ಎಂಬಲ್ಲಿ ಉತ್ತಮ ಜಾತಿಯ ದನಗಳಿದ್ದವು. ಈ ಲೊಂಬಾರ್ಡಿ ದನಗಳಲ್ಲಿ ಕೆಲವು ದನಗಳ ಮೈಬಣ್ಣ ಹಳದಿ ಮಿಶ್ರಿತ ಬೂದು ಬಣ್ಣದಿಂದ ಕೂಡಿತ್ತು ಹಾಗೂ ಅವುಗಳ ಹೊಟ್ಟೆಯ ತಳಭಾಗವು ಬಿಳುಪು ಬಣ್ಣದಿಂದ ಕೂಡಿತ್ತು. ಹಾಗೆಯೇ ಈ ಪ್ರದೇಶದ ದನಗಳು ಅಂದಿನ ಆರ್ಯರ ಬಳಿಯಿದ್ದ ದನಗಳೊಂದಿಗೆ ಕೂಡಿ ಬೆಳೆದಿದ್ದರಿಂದ ಆರ್ಯರ ದನಗಳಲ್ಲಿಯೂ ಸಹ ಈ ಬಣ್ಣ ಮೂಡಿಬಂದಿರಬಹುದು ಎಂಬುದಾಗಿ ಅಂದಾಜಿಸಲಾಗಿದೆ. ಅಷ್ಟೇ ಅಲ್ಲದೆ ನಮ್ಮ ಪುರಾಣದಲ್ಲಿ 'ಶ್ಯಬಳೀ ಧವಳಾದಯಃ' ಎಂದು ಒಂದು ಕಡೆ ಹೇಳಲಾಗಿದೆ. 'ಶ್ಯಬಳಿ' ಅಂದರೆ ಚುಕ್ಕೆ ಚುಕ್ಕೆಗಳಿಂದ ಕೂಡಿದ ದನ ಎಂದರ್ಥ. ಹಾಗೆಯೇ 'ಧವಳ' ಎಂದರೆ ಬಿಳಿಯದು ಎಂದರ್ಥ. ಹೀಗಾಗಿಯೇ ವಸಿಷ್ಠರ ಬಳಿಯಿದ್ದ ಆಕಳಾದ ಕಾಮಧೇನುವಿನ ಮಗಳಿಗೆ 'ಶ್ಯಬಳಿ' ಎಂಬ ಹೆಸರಿತ್ತು ಎಂಬುದಾಗಿ ಹೇಳಲಾಗುತ್ತದೆ.

ಆಗಿನ ಕಾಲದಲ್ಲಿ ಗೋಸಂವರ್ಧನೆಯ ಸಲುವಾಗಿ ಹಿಂಡಿನಲ್ಲಿ ಉತ್ತಮವಾದ ಹೋರಿಗಳನ್ನು ಬೀಜಕ್ಕಾಗಿ ಆರಿಸುತ್ತಿದ್ದರು. ಒಕ್ಕಲುತನಕ್ಕೆ ಯೋಗ್ಯವಾದ ದನಗಳನ್ನು ಬೇರ್ಪಡಿಸುತ್ತಿದ್ದರು. ಬ್ರಾಹ್ಮಣರಿಗೆ, ಗಾಯಕರಿಗೆ, ವಿದ್ಯಾವಂತರಿಗೆ ಉತ್ತೇಜನಕ್ಕಾಗಿ ಮತ್ತು ಮರ್ಯಾದೆಗಾಗಿ ಗೋವುಗಳನ್ನು ಕೊಡುತ್ತಿದ್ದರು ಎಂಬುದು ಈ ಕೆಳಗಿನ ಕುಮಾರವ್ಯಾಸನ ಗದುಗಿನ ಭಾರತದ ಪದ್ಯದಿಂದ ತಿಳಿದುಬರುತ್ತದೆ.

ತರಿಸಿ ಹೋರಿಯ ಗವಿಯ ಗೂಳಿಯ ಬರಸಿದನು ಕೆಲ ಕೆಲವ ಕೃಷಿಕರಿ
ಗಿರಿಸಿದನು ಗೋಲಕ್ಷವಿತ್ತನು ವಿಪ್ರಸಂಕುಲಕೆ॥
ಕರಿಸಿ ಕೊಟ್ಟನು ಭಟರಿಗೆ, ಮಲ್ಲರಿಗೆ, ಗಾಯಕರಿಗೆ, ವಿದ್ಯಾವಂ
ತರಿಗೆ ಬಹು ವಿಧ ಬಹಳ ವಂದಿಗೆ ಮಾಗಧವ್ರಜಕೆ॥

ಹಾಗೆಯೇ ಅಂದಿನ ಕಾಲದಲ್ಲಿ ದನಗಳ ಪ್ರದರ್ಶನವನ್ನು ಏರ್ಪಡಿಸಿ ಉತ್ತಮ ದನಗಳಿಗೆ ಬಹುಮಾನ ಕೊಟ್ಟು ಗೌರವಿಸುತ್ತಿದ್ದರು ಎಂಬುದು ಈ ಕೆಳಗಿನ ಪದ್ಯದಿಂದ ತಿಳಿದುಬರುತ್ತದೆ.

ಅಂಗ ಚಿತ್ತವನಿತ್ತು ಮೊದಲಿನ /
ಪುಂಗವ ಸತ್ಕರಿಸಿ ಹಿಂಡಿನ /
ಪಂಗಡದ ಗೋಪಾಲಕರಿಗೆ ಕೊಟ್ಟನುಡುಗೊರೆಯ //

ಈಎಲ್ಲಾಸಂಶೋಧನೆಮತ್ತುಸಾಕ್ಷ್ಯಗಳಿಂದಸ್ಪಷ್ಟವಾಗುವುದೇನೆಂದರೆಇಡೀ ಮನುಕುಲದ ಮೂಲ ಭಾರತ. ಜಗತ್ತಿನ ಎಲ್ಲಾ ಮನುಷ್ಯರ ಪೂರ್ವಜರು ಭಾರತೀಯರು. ಆರ್ಯರು ಸಹಾ ಭಾರತೀಯರು, ಅವರು ಹೊರಗಿನಿಂದ ಬಂದವರಲ್ಲ. ಹಾಗೆಯೇ ಜಗತ್ತಿನ ಎಲ್ಲಾ ನಾಗರಿಕತೆಗಳ ಮೂಲ ಭಾರತ. ಹಾಗಾಗಿ ಗೋವಿನ ಸೃಷ್ಟಿಯೂ ಈ ಪುಣ್ಯಭೂಮಿಯಲ್ಲಿಯೇ ಆಗಿದೆ ಎಂಬುದು ಶತಸಿದ್ಧ!

ಅಂಬೇಡ್ಕರ್: ಭಾರತದ ನಾಗರಿಕತೆಯ ಸೇನಾನಿ

ಇಂದು ಅಂಬೇಡ್ಕರ್ ಜಯಂತಿ

• ಉತ್ಪಲ್ ಕುಮಾರ್

ಎಲ್ಲಾ ದೇಶಗಳಿಗೂ ಅದರದೇ ಆದ ಹೀರೋಗಳಿದ್ದಾರೆ. ಕೆಲವರನ್ನು ಗುರುತಿಸಿ ಶ್ಲಾಘಿಸಲಾಗುತ್ತದೆ. ಆದರೆ ಕೆಲವರು ಕಡೆಗಣಿಸಲ್ಪಡುತ್ತಾರೆ. ಇದು ಭಾರತದ ಪುರಾತನ ಮತ್ತು ಮಧ್ಯಯುಗಕ್ಕಷ್ಟೇ ಸೀಮಿತವಲ್ಲ, ಭಾರತದ ಆಧುನಿಕ ರಾಜಕೀಯ ಪಡಸಾಲೆಯಲ್ಲೂ ಇಂತಹ ನಿದರ್ಶನ ಗಳು ಕಾಣಸಿಗುತ್ತವೆ. ಮಹಾತ್ಮಾ ಗಾಂಧಿಯವರನ್ನು ಸಹಜವಾಗಿಯೇ ಹೊಗಳಲಾಯಿತಾದರೂ, ನೇತಾಜಿ ಸುಭಾಶ್ಚಂದ್ರ ಭೋಸ್ ಮತ್ತು ಸಾವರ್ಕರ್‌ರಂತಹ ಮಹಾನ್ ನಾಯಕರ ಕುರಿತಂತೆ ಅನಾದರ ತೋರಲಾಯಿತು.

ವಿಪರ್ಯಾಸವೆಂದರೆ ಈ ಸಾಲಿಗೆ ಡಾ. ಅಂಬೇಡ್ಕರ್ ಅವರೂ ಸೇರುತ್ತಾರೆ. ಈಗ ಅವರನ್ನು ಅತ್ಯಂತ ಮಹನೀಯರ ಮಟ್ಟಕ್ಕೆ ಏರಿಸಲಾಗಿದೆಯಾದರೂ, ದೇಶಾದ್ಯಂತ ಮಹಾತ್ಮಾ ಗಾಂಧಿ ನಂತರ ಅವರದೇ ಹೆಚ್ಚು ಪ್ರತಿಮೆಗಳಿವೆಯಾದರೂ, ಅವರು ಬದುಕಿದ್ದಾಗ ಹಾಗೂ ನಿಧನರಾದ ಬಳಿಕ ಮೊದಲ ಕೆಲವು ವರ್ಷಗಳಲ್ಲಿ ಅವರು ಅನುಭವಿಸಿದ ಅನಾದರ, ಉಪೇಕ್ಷೆ ಹೇಳತೀರದ್ದು.

ಅಂಬೇಡ್ಕರ್‌ರವರು ಬದುಕಿದ್ದಾಗ ಅವರನ್ನು ರಾಜಕೀಯದ ಮುಖ್ಯವಾಹಿನಿಯಿಂದ ಬದಿಗಿಡಲಾಯಿತು. ಅವರು ನಿಧನರಾದ ಬಳಿಕವೂ ನೆಹರೂ ಆಡಳಿತವು ಅವರನ್ನು ಕೇವಲ ದಲಿತರು ಮತ್ತು ಅಸ್ಪೃಶ್ಯರ ಮುಖಂಡ ಎಂಬಷ್ಟಕ್ಕೆ ಸೀಮಿತಗೊಳಿಸಲು ಪ್ರಯತ್ನಿಸಿತು. ಅಂಬೇಡ್ಕರ್‌ರವರ ಪ್ರಖರ ಬುದ್ಧಿವಂತಿಕೆ, ಸಾಂವಿಧಾನಿಕ ತಜ್ಞತೆ, ಆರ್ಥಿಕ ಪ್ರಬುದ್ಧತೆ ಮತ್ತು ನಾಗರಿಕ ತಿಳುವಳಿಕೆ ಮೊದಲಾದವುಗಳನ್ನು ಕಡೆಗಣಿಸಲಾಯಿತು. ಅಂಬೇಡ್ಕರ್‌ರವರನ್ನು ಕೇವಲ ಒಂದು ಪ್ರತಿಮೆಯಂತೆ ಪರಿಗಣಿಸಲಾಯಿತು.



ನಿಜವಾದ ಅಂಬೇಡ್ಕರ್ ಒಬ್ಬ ಬುದ್ಧಿವಂತ ಪಂಡಿತ ಹಾಗೂ ಪ್ರಬುದ್ಧ ಅರ್ಥಶಾಸ್ತ್ರಜ್ಞ. ನೊಬೆಲ್ ವಿಜೇತ ಅಮರ್ತ್ಯಸೇನ್ ಅವರು ''ಅಂಬೇಡ್ಕರ್ ನನ್ನ ಆರ್ಥಿಕತೆಯ ಪಿತಾಮಹ'' ಎಂದು ಬಣ್ಣಿಸಿದ್ದರು. ರಿಸರ್ವ್ ಬ್ಯಾಂಕ್, ಕೇಂದ್ರೀಯ ಜಲ ಆಯೋಗ ಮುಂತಾದ ಆಧುನಿಕ ಭಾರತದ ಹಲವಾರು ಸಂಸ್ಥೆಗಳು ಅಂಬೇಡ್ಕರ್‌ರವರ ದೂರದೃಷ್ಟಿಯ ಫಲ. ಕೊಲಂಬಿಯಾ ವಿಶ್ವವಿದ್ಯಾಲಯ ಮತ್ತು ಲಂಡನ್ ಸ್ಕೂಲ್ ಆಫ್ ಇಕನಾಮಿಕ್ಸ್‌ನಿಂದ ಎರಡು ಪಿಎಚ್‌ಡಿ ಪಡೆದವರಾದರೂ ಅವರನ್ನು ನೆಹರೂರವರು ಕೇವಲ ದಲಿತ ಮುಖಂಡರೆಂಬಷ್ಟೇ ಪರಿಗಣಿಸಿ ಸಂಪುಟದಲ್ಲಿ ಅವರನ್ನು ಅವಗಣಿಸಿದರು. ಅದಕ್ಕಾಗಿಯೇ ಅಂಬೇಡ್ಕರ್‌ರವರು ನೆಹರೂ ಸಂಪುಟಕ್ಕೆ ರಾಜೀನಾಮೆ ನೀಡಿ ಹೊರಬಂದುದು.

ತಮ್ಮ ರಾಜೀನಾಮೆ ಪತ್ರದಲ್ಲಿ ಅಂಬೇಡ್ಕರ್ ''ಕೆಲವಾರು ಸಚಿವರಿಗೆ ಎರಡು ಮೂರು ಖಾತೆಗಳನ್ನು ನೀಡಲಾಗಿದೆ. ಅವರಿಗೆ ಅದು ನಿಭಾಯಿಸಲಾಗದ ಹೊರೆ. ಆದರೆ ನನ್ನನ್ನು ಸಂಪುಟದ ಮುಖ್ಯ ಸಮಿತಿಗೆ ಒಬ್ಬ ಸದಸ್ಯನನ್ನಾಗಿ ಕೂಡಾ ನೇಮಿಸಲಿಲ್ಲ. ಆರ್ಥಿಕ ವ್ಯವಹಾರಗಳ ಸಮಿತಿಯನ್ನು ರಚಿಸಿದಾಗ, ನಾನು ಆರ್ಥಿಕ ಮತ್ತು ಫೈನಾನ್ಸ್ ವಿಭಾಗದಲ್ಲಿ ಪರಿಣಿತರಾಗುವುದರಿಂದ ನನ್ನನ್ನು ಆ ಸಮಿತಿಗೆ ನೇಮಿಸಲಾಗುವುದೆಂದು ನಿರೀಕ್ಷಿಸಿದ್ದೆ. ಆದರೆ ನನ್ನನ್ನು ಕಡೆಗಣಿಸಲಾಯಿತು'' ಎಂದು ಬರೆದಿದ್ದರು.

ತಮ್ಮ ಕಾಲದಲ್ಲಿ ಕಾನೂನು ವಿಷಯಗಳ ಬಗ್ಗೆ ಅತ್ಯಂತ ನಿಪುಣತೆ ಹೊಂದಿದ್ದ ಅಂಬೇಡ್ಕರ್‌ರವರು ಸಮಾಜ ಮತ್ತು ಸರಕಾರ ಎರಡನ್ನೂ ಪ್ರಜಾಪ್ರಭುತ್ವಗೊಳಿಸುವ ನಂಬಿಕೆ ಹೊಂದಿದ್ದರು. ದೇಶದಲ್ಲಿ ಸಮಾನತೆ, ಭ್ರಾತೃತ್ವತೆ ಮತ್ತು ಸ್ವಾತಂತ್ರ್ಯವು ಸುಗಮವಾಗಿ ಮುಂದುವರಿಯ ಬೇಕಾದರೆ ಸಮಾಜ ಮತ್ತು ಸರಕಾರಗಳೆರಡೂ ಪರಸ್ಪರ ಸಮನ್ವಯತೆಯಿಂದ ಕಾರ್ಯವೆಸಗಬೇಕು ಎಂಬುದು ಅವರ ನಿಲುವಾಗಿತ್ತು. ಅದೇರೀತಿ ಕಾನೂನು ಮತ್ತು ನೈತಿಕತೆ, ಸಾಂವಿಧಾನಿಕತೆ ಮತ್ತು ನೀತಿಪರತೆ ಜತೆಯಾಗಿ ಸಾಗಬೇಕು ಎಂದೂ ಅವರು ಪ್ರತಿಪಾದಿಸಿದ್ದರು. ಕಾಂಗ್ರೆಸ್ ಬಯಸಿದಂತೆ ಸಾಗಿದ್ದರೆ ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯ ಸದಸ್ಯರೂ ಆಗಿರುತ್ತಿರಲಿಲ್ಲ. ಅವರು ಮುಂಬೈ ಚುನಾವಣೆಯನ್ನು ಸೋಲುವಂತೆ ಮಾಡಲಾಯಿತು. ಆದರೆ ಅಂದಿನ ಬಂಗಾಳದ ಖ್ಯಾತ ದಲಿತ ನಾಯಕ ಜೋಗೇಂದ್ರನಾಥ್ ಮಂಡಲ್ ಅವರ ಬೆಂಬಲದ ಕಾರಣದಿಂದಾಗಿ ಅವರು ಸಂವಿಧಾನ ರಚನಾ ಮಂಡಳಿಯಲ್ಲಿ ಸೇರುವಂತಾಯಿತು.

ನಿಜವಾಗಿ ಅಂಬೇಡ್ಕರ್‌ರವರು ದೇಶದ ಮುಂಚೂಣಿ ನಾಗರಿಕಸೇನಾನಿಯಾಗಿದ್ದರು. ''ನಾನುಹಿಂದುವಾಗಿಸಾಯಲು ಇಚ್ಛಿಸುವುದಿಲ್ಲ'', ಜಾತಿಪದ್ಧತಿಯಿಂದ ಗ್ರಸ್ತವಾಗಿರುವ ಹಿಂದು ಧರ್ಮದಲ್ಲಿ ಸುಧಾರಣೆ ಸಾಧ್ಯವಿಲ್ಲ ಎಂದು ಅವರು ಹೇಳಿದ ಮಾತುಗಳನ್ನು ಈಗ ಕೆಲವರು ಆಗಾಗ ಉಲ್ಲೇಖಿಸುತ್ತರಾದರೂ, ಇತರಮತಧರ್ಮಗಳಕುರಿತಂತೆಅವರನಿಲುವೇನಾಗಿತ್ತುಎಂಬ ಬಗ್ಗೆ ವಿವರಿಸುವುದೇ ಇಲ್ಲ. ಇಸ್ಲಾಂನ್ನು ಅವರು 'ಮುಚ್ಚಿದ ನಿಗಮ' ಎಂದು ಬಣ್ಣಿಸಿದ್ದರು. ಮುಸ್ಲಿಮರು ಮತ್ತು ಮುಸ್ಲಿಮೇತರರ ಮಧ್ಯೆ ಇಸ್ಲಾಂ ಕಠೋರ ಭೇದನೀತಿ ಅನುಸರಿಸುತ್ತಿದೆ ಎಂಬುದು ಅವರ ಅಭಿಪ್ರಾಯವಾಗಿತ್ತು.

ನಿಜ, ಅಂಬೇಡ್ಕರ್‌ರವರು ಹಿಂದುವಾಗಿ ನಿಧನರಾಗಲಿಲ್ಲ. ಹಾಗೆಂದು ಅವರು ಭಾರತೀಯತೆಯನ್ನು ಎಂದಿಗೂ ಕಳಚಿಕೊಳ್ಳಲಿಲ್ಲ. ಭಾರತದ ಸನಾತನ ಮೌಲ್ಯಗಳಲ್ಲಿ ಆಳವಾಗಿ ಬೆರೆತಿರುವ ಬೌದ್ಧ ಧರ್ಮವನ್ನೇ ಆರಿಸಿಕೊಂಡರು. ಸನಾತನ ಪರಂಪರೆಯ ಕುರಿತಂತೆ ಅಂಬೇಡ್ಕರ್‌ರವರಿಗೆ ಗೌರವವಿತ್ತು. ತಾವು ಮತ್ತು ತಮ್ಮ ಜಾತಿಯ ಇತರರು ಸಮಾಜದಲ್ಲಿ ಭೇದಭಾವ ಎದುರಿಸಿದ್ದರೂ ಅವರು ಸನಾತನ ವಾಸ್ತವಿಕತೆಯ ಬಗ್ಗೆ ಕುರುಡಾಗಿರಲಿಲ್ಲ.

ಅಂಬೇಡ್ಕರ್ ಒಬ್ಬ ಪ್ರಮುಖ ಸಾಮಾಜಿಕ ಮಾನವ ಶಾಸ್ತ್ರಜ್ಞರೆನ್ನಬಹುದು. 1916ರಲ್ಲಿ ಕೊಲಂಬಿಯಾದಲ್ಲಿ ನಡೆದ ಜಾತಿ ಸಮ್ಮೇಳನದಲ್ಲಿ ಅವರು ಮಂಡಿಸಿದ ಪ್ರಬಂಧವು ಭಾರತದಲ್ಲಿನ ಜಾತಿ ವ್ಯವಸ್ಥೆಯ ಉಗಮ ಮತ್ತು ಆಚರಣೆಯ ಕುರಿತಾದ ಪ್ರಥಮ ಗಂಭೀರ ಶೈಕ್ಷಣಿಕ ಅಧ್ಯಯನ ಎಂದು ಹೇಳಬಹುದು. ತಮ್ಮ ಮಾನವ ಶಾಸ್ತ್ರಜ್ಞಾನವನ್ನು ಬಳಸಿಕೊಂಡು ಅವರು ಆರ್ಯರ ಆಕ್ರಮಣ ಸಿದ್ಧಾಂತವನ್ನು ಖಂಡಿಸಿದ್ದರು. ''ಒಂದು ಪಂಗಡ ಅಥವಾ ಕುಟುಂಬವು ಜನಾಂಗೀಯವಾಗಿ ಆರ್ಯವೇ ಅಥವಾ ದ್ರಾವಿಡವೇ ಎಂಬ ಪ್ರಶ್ನೆಯು, ವಿದೇಶೀ ಶಿಕ್ಷಣವೇತ್ತರರು ಭಾರತಕ್ಕೆ ಬಂದು ವಿಭಜನಾ ರೇಖೆಯನ್ನು ಎಳೆಯುವ ತನಕ ಭಾರತದ ಜನರಿಗೆ ಕಾಡಿರಲೇ ಇಲ್ಲ'' ಎಂದು ಅವರು 1918ರಲ್ಲಿ ಬರೆದ ಪ್ರಬಂಧದಲ್ಲಿ ನುಡಿದಿದ್ದರು. ಅವರು ಹಲವಾರು ಸಂದರ್ಭಗಳಲ್ಲಿ ಹಿಂದಿನ ಋಷಿಗಳು ಶೂದ್ರರನ್ನು ಮೇಲೆತ್ತಿದ ನಿದರ್ಶನಗಳನ್ನು ಹಾಗೂ ಶೂದ್ರರು ರಾಜರಾಗಿ ಆಳಿದ್ದನ್ನೂ ಉದಾಹರಿಸುತ್ತಿದ್ದರು.

ಅಂಬೇಡ್ಕರ್‌ರವರು ಕಡು ಬಡತನದಲ್ಲಿ ಮತ್ತು ಇತರರಿಂದ ಜಾತಿಭೇದವನ್ನು ಅನುಭವಿಸಿ ಬೆಳೆದವರು. ವರ್ಷ ಕಳೆದಂತೆ ಅವರು ಬಡತನವನ್ನು ನೀಗಿಕೊಂಡರಷ್ಟೇ ಅಲ್ಲದೆ ಭಾರತೀಯ ಸಮಾಜವನ್ನು ಏಕತೆಯಿಂದ ಪರಿಗಣಿಸತೊಡಗಿದರು. ಪ್ರತಿಯೊಬ್ಬ ಮೇಲ್ವರ್ಗದ ಹಿಂದು ಅವರನ್ನು ನೇರವಾಗಿ ಅಥವಾ ಪ್ರತ್ಯಕ್ಷವಾಗಿ ಅವಮಾನಿಸಿದಂತೆಯೇ, ಮತ್ತೊಂದೆಡೆಯಿಂದ ಸಯ್ಯಾಜಿರಾವ್ ಗಾಯಕ್‌ವಾಡ್‌ರಂತಹ ಮೇಲ್ವರ್ಗದ ಇನ್ನು ಕೆಲವರು ಅವರನ್ನು ತುಂಬು ಹೃದಯದಿಂದ ಆದರಿಸಿದ್ದನ್ನೂ ಅವರು ಮರೆಯಲಿಲ್ಲ.

ಅಂಬೇಡ್ಕರ್‌ರನ್ನು ಕೇವಲ ದಲಿತ ನಾಯಕ ಎಂದು ಸೀಮಿತಗೊಳಿಸುವುದು ಸರಿಯಲ್ಲ. ಅವರು ಇಡೀ ದೇಶದ ನಾಯಕರು. ಅವರು ದೇಶದ ನಾಗರಿಕತೆಯ ಸೇನಾನಿ.

ಗಲ್ಫ್, ಒಮಾನ್ ಬಂದರು ಟಾರ್ಗೆಟ್!

ಮಧ್ಯಪ್ರಾಚ್ಯ ಯುದ್ಧ; ಅಮೆರಿಕದಿಂದ ಹಾರ್ಮುಜ್ ದಿಗ್ಬಂಧನ ಘೋಷಣೆ ಬೆನ್ನಲ್ಲೇ ಇರಾನ್ ಖಡಕ್ ಎಚ್ಚರಿಕೆ




ಟೆಹ್ರಾನ್: ಇರಾನ್‌ನ ಎಲ್ಲಾ ಬಂದರುಗಳ ಮೇಲೆ ಅಮೆರಿಕ ನೌಕಾಪಡೆ ದಿಗ್ಬಂಧನ ವಿಧಿಸುವುದಾಗಿ ಘೋಷಿಸಿದ ಬೆನ್ನಲ್ಲೇ, ಪರ್ಷಿಯನ್ ಗಲ್ಫ್ ಮತ್ತು ಒಮಾನ್ ಸಮುದ್ರದ ಯಾವುದೇ ಬಂದರುಗಳು ಇನ್ನು ಮುಂದೆ ಸುರಕ್ಷಿತವಾಗಿರುವುದಿಲ್ಲ ಎಂದು ಇರಾನ್ ಎಚ್ಚರಿಸಿದೆ. ಮಧ್ಯಪ್ರಾಚ್ಯದ ಬಂದರುಗಳ ಭದ್ರತೆ ಎಲ್ಲರಿಗೂ ಇರಬೇಕು ಇಲ್ಲವೇ ಯಾರಿಗೂ ಇರಬಾರದು ಎಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಪ್ರಕಟಣೆಯಲ್ಲಿ ತಿಳಿಸಿದೆ. ದೇಶದ ಕಾನೂನುಬದ್ಧ ಹಕ್ಕುಗಳನ್ನು ರಕ್ಷಿಸುವುದು ಇರಾನ್ ಸಶಸ್ತ್ರ ಪಡೆಗಳ ನೈಸರ್ಗಿಕ ಮತ್ತು ಕಾನೂನುಬದ್ಧ ಕರ್ತವ್ಯ ಹಾಗೂ ತನ್ನ ಪ್ರಾದೇಶಿಕ ಜಲಪ್ರದೇಶದ ಮೇಲೆ ಸಾರ್ವಭೌಮತ್ವವನ್ನು ಚಲಾಯಿಸುವುದು ಇರಾನ್ ರಾಷ್ಟ್ರದ ಹಕ್ಕು ಎಂದು ಐಆರ್‌ಜಿಸಿ ಹೇಳಿದೆ. ಈ ಹೇಳಿಕೆಯನ್ನು ಅಲ್ಲಿನ ಸರ್ಕಾರಿ ಸುದ್ದಿ ಸಂಸ್ಥೆ ಐಆರ್‌ಐಬಿ ವರದಿ ಮಾಡಿದೆ. ಅಲ್ಲದೆ, ಶತ್ರು ರಾಷ್ಟ್ರಗಳಿಗೆ ಸಂಬಂಧಿಸಿದ ಎಲ್ಲಾ ಹಡಗುಗಳಿಗೆ ಈ ಪ್ರಮುಖ ಜಲಮಾರ್ಗಗಳಲ್ಲಿ ಸಂಚರಿಸಲು ಅನುಮತಿ ನಿರಾಕರಿಸಲಾಗುವುದು ಮತ್ತು ಇತರ ಹಡಗುಗಳು ಟೆಹ್ರಾನ್ ನಿಗದಿಪಡಿಸಿದ ನಿಯಮಗಳಿಗೆ ಒಳಪಟ್ಟು ಸಂಚರಿಸಬಹುದು ಎಂದು ಐಆರ್‌ಜಿಸಿ ತಿಳಿಸಿದೆ.



ಖಾಯಂ ನಿಯಂತ್ರಣದ ಬೆದರಿಕೆ: ತನ್ನ ಬಂದರುಗಳ ಭದ್ರತೆಗೆ ಧಕ್ಕೆಯಾದಲ್ಲಿ ಪರ್ಷಿಯನ್ ಗಲ್ಫ್ ಮತ್ತು ಒಮಾನ್ ಸಮುದ್ರದ ಯಾವ ಬಂದರೂ ಸುರಕ್ಷಿತವಾಗಿರುವುದಿಲ್ಲ ಎಂದು ಇರಾನ್ ಸಶಸ್ತ್ರ ಪಡೆಗಳು ಎಚ್ಚರಿಸಿವೆ. ಶತ್ರುಗಳ ನಿರಂತರ ಬೆದರಿಕೆಗಳನ್ನು ಉಲ್ಲೇಖಿಸಿರುವ ಐಆರ್‌ಜಿಸಿ, ಅಮೆರಿಕ ಮತ್ತು ಇಸ್ರೇಲ್ ನಡುವಿನ ಯುದ್ಧ ಕೊನೆಗೊಂಡ ನಂತರವೂ ಹಾರ್ಮುಜ್ ಜಲಸಂಧಿಯನ್ನು ನಿಯಂತ್ರಿಸಲು ಟೆಹ್ರಾನ್ ಕಟ್ಟುನಿಟ್ಟಾದ ಖಾಯಂ ಕಾರ್ಯವಿಧಾನವನ್ನು ಜಾರಿಗೆ ತರಲಿದೆ ಎಂದು ಹೇಳಿದೆ. ಅಂತಾರಾಷ್ಟ್ರೀಯ ಜಲಪ್ರದೇಶದಲ್ಲಿ ನೌಕಾ ಸಂಚಾರದ ಮೇಲೆ ಅಮೆರಿಕ ಹೇರಿರುವ ನಿರ್ಬಂಧಗಳು ಕಾನೂನುಬಾಹಿರ ಮತ್ತು ಕಡಲ್ಗಳ್ಳತನಕ್ಕೆ ಸಮಾನ ಎಂದು ಅದು ಬಣ್ಣಿಸಿದೆ.

ಅಮೆರಿಕದ ದಿಗ್ಬಂಧನ ಘೋಷಣೆ: ಇರಾನ್‌ನ ಎಲ್ಲಾ ಬಂದರುಗಳು ಮತ್ತು ಕರಾವಳಿ ಪ್ರದೇಶಗಳಿಗೆ ದಿಗ್ಬಂಧನ ವಿಧಿಸುವುದಾಗಿ ಅಮೆರಿಕ ಸೇನೆ ಘೋಷಿಸಿದೆ. ಪರ್ಷಿಯನ್ ಗಲ್ಫ್ ಮತ್ತು ಒಮಾನ್ ಕೊಲ್ಲಿಯ ಇರಾನ್ ಬಂದರುಗಳಿಗೆ ಬರುವ ಅಥವಾ ಅಲ್ಲಿಂದ ನಿರ್ಗಮಿಸುವ ಎಲ್ಲಾ ರಾಷ್ಟ್ರಗಳ ಹಡಗುಗಳ ವಿರುದ್ಧ ಈ ದಿಗ್ಬಂಧನವನ್ನು ಜಾರಿಗೊಳಿಸಲಾಗುವುದು ಎಂದು ಸೆಂಟ್‌ಕಾಮ್ ತಿಳಿಸಿದೆ. ಆದರೆ, ಇರಾನ್ ಅಲ್ಲದ ಇತರ ಬಂದರುಗಳ ನಡುವೆ ಸಂಚರಿಸುವ ಹಡಗುಗಳಿಗೆ ಜಲಸಂಧಿಯಲ್ಲಿ ಸಂಚರಿಸಲು ಅನುಮತಿಸಲಾಗುವುದು ಎಂದು ಅದು ಹೇಳಿದೆ. ಯುದ್ಧ ಆರಂಭವಾದಾಗಿನಿಂದ ಲಕ್ಷಾಂತರ ಬ್ಯಾರೆಲ್ ತೈಲವನ್ನು ರಫ್ತು ಮಾಡುತ್ತಿರುವ ಇರಾನ್ ಮೇಲೆ ಒತ್ತಡ ಹೇರುವುದು ಈ ದಿಗ್ಬಂಧನದ ಉದ್ದೇಶ ಎಂದು ಯುಎಸ್ ಹೇಳಿಕೊಂಡಿದೆ.



ಡ್ರ್ಯಾಗನ್ ಕಾರ್ಯತಂತ್ರ

ವಿಶ್ಲೇಷಕರ ಪ್ರಕಾರ, ಅಮೆರಿಕ ಈ ಪ್ರದೇಶದಲ್ಲಿ ದಿನಕ್ಕೆ ಸುಮಾರು 1 ಬಿಲಿಯನ್ ಹಣವನ್ನು ಖರ್ಚು ಮಾಡುತ್ತಾ ಮಿಲಿಟರಿ ಶಕ್ತಿಯನ್ನು ವ್ಯಯಿಸುತ್ತಿದೆ. ಚೀನಾಗೆ ತೈಲ ಪೂರೈಕೆಯಲ್ಲಿ ಸ್ವಲ್ಪ ತೊಂದರೆಯಾದರೂ, ಅಮೆರಿಕದ ಗಮನ ತೈವಾನ್ ಮತ್ತು ಪೆಸಿಫಿಕ್ ವಲಯದಿಂದ ಮಧ್ಯಪ್ರಾಚ್ಯದ ಕಡೆಗೆ ಬದಲಾಗಿರುವುದು ಚೀನಾಗೆ ಕಾರ್ಯತಂತ್ರದ ದೃಷ್ಟಿಯಿಂದ ಲಾಭದಾಯಕ ಎನ್ನಲಾಗುತ್ತಿದೆ. ಇದೇ ವೇಳೆ, ರಷ್ಯಾ, ಚೀನಾ ಮತ್ತು ಇರಾನ್ ನಡುವಿನ ಸಮನ್ವಯ ಹೆಚ್ಚುತ್ತಿರುವುದನ್ನು ಜಾಗತಿಕ ವಿಶ್ಲೇಷಕರು ಗುರುತಿಸಿದ್ದಾರೆ. ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ಈ ಮೂರು ರಾಷ್ಟ್ರಗಳ ನಡುವಿನ ಮಿಲಿಟರಿ ಸಹಕಾರ ಮುಂದುವರಿಯುತ್ತಿರುವುದನ್ನು ಖಚಿತಪಡಿಸಿದ್ದಾರೆ.

ಚೀನಾಗೆ ತೈಲಾತಂಕ

ಚೀನಾ ವಿಶ್ವದ ಅತಿದೊಡ್ಡ ತೈಲ ಆಮದುದಾರ ರಾಷ್ಟ್ರವಾಗಿದ್ದು, ಇರಾನ್‌ನಿಂದ ರಫ್ತಾಗುವ ತೈಲದ ಬಹುಪಾಲು ಭಾಗ ಚೀನಾ ತಲುಪುತ್ತದೆ. ಹಾರ್ಮುಜ್ ಜಲಸಂಧಿಯ ಮೂಲಕ ನಡೆಯುವ ಸಂಚಾರಕ್ಕೆ ಅಡ್ಡಿಯಾದಲ್ಲಿ, ಚೀನಾದ ಇಂಧನ ಭದ್ರತೆಗೆ ನೇರವಾದ ಸವಾಲು ಎದುರಾಗುತ್ತದೆ. ಇದುವರೆಗೆ ಚೀನಾ ಪಾಶ್ಚಿಮಾತ್ಯ ದೇಶಗಳ ನಿರ್ಬಂಧಗಳನ್ನು ಮೀರಿ ಇರಾನ್‌ನಿಂದ ತೈಲವನ್ನು ಪಡೆಯಲು ಡಾರ್ಕ್ ಟ್ರಾನ್ಸಿಟ್(ಗುಪ್ತ ನೌಕಾ ಸಂಚಾರ) ವಿಧಾನಗಳನ್ನು ಬಳಸುತ್ತಿತ್ತು. ಆದರೆ, ಈಗ ಅಮೆರಿಕ ಮಿಲಿಟರಿ ನೇರವಾಗಿ ದಿಗ್ಬಂಧನ ವಿಧಿಸಿರುವುದರಿಂದ, ಈ ರೀತಿ ಕಣ್ತಪ್ಪಿಸಿ ತೈಲ ಸಾಗಿಸುವುದು ಚೀನಾಗೆ ಅತ್ಯಂತ ಕಷ್ಟಕರವಾಗಲಿದೆ. ಸಾಗಾಟದ ಹಾದಿ ಬದಲಾಗುವುದು ಅಥವಾ ಪೂರೈಕೆ ಸ್ಥಗಿತಗೊಳ್ಳುವುದರಿಂದ ಜಾಗತಿಕವಾಗಿ ತೈಲ ಬೆಲೆ ಏರಿಕೆಯಾಗುತ್ತದೆ. ಚೀನಾ ಯುದ್ಧದಲ್ಲಿ ನೇರವಾಗಿ ಭಾಗಿಯಾಗದಿದ್ದರೂ, ಇಂಧನ ಬೆಲೆ ಏರಿಕೆಯ ಆರ್ಥಿಕ ಹೊಡೆತವನ್ನು ಅನುಭವಿಸಬೇಕಾಗುತ್ತದೆ.

ನೌಕಾ ಸಂಚಾರದ ಮೇಲೆ ಪರಿಣಾಮ

ದಿಗ್ಬಂಧನದ ಘೋಷಣೆಯಿಂದಾಗಿ ಹಾರ್ಮುಜ್ ಜಲಸಂಧಿಯಲ್ಲಿ ಪುನರಾರಂಭಗೊಂಡಿದ್ದ ಅಲ್ಪಪ್ರಮಾಣದ ಹಡಗು ಸಂಚಾರವೂ ಸ್ಥಗಿತಗೊಂಡಿದೆ. ಕದನ ವಿರಾಮದ ಆರಂಭದ ನಂತರ ಕೇವಲ 40 ವಾಣಿಜ್ಯ ಹಡಗುಗಳು ಜಲಸಂಧಿಯನ್ನು ದಾಟಿವೆ. ಇದು ಯುದ್ಧಕ್ಕೆ ಮೊದಲು ದಾಖಲಾಗುತ್ತಿದ್ದ ಸರಾಸರಿ 100ರಿಂದ 135 ಹಡಗುಗಳ ಸಂಚಾರಕ್ಕೆ ಹೋಲಿಸಿದರೆ ಅತ್ಯಂತ ಕಡಿಮೆ. ಈ ಜಲಸಂಧಿ, ಜಾಗತಿಕ ಇಂಧನ ಪೂರೈಕೆಗೆ ಅತ್ಯಂತ ನಿರ್ಣಾಯಕವಾಗಿರುವುದರಿಂದ ದಿಗ್ಬಂಧನ ಜಾಗತಿಕ ತೈಲ ಬೆಲೆಗಳ ಏರಿಕೆಗೆ ಕಾರಣವಾಗುವ ಸಾಧ್ಯತೆಯಿದೆ.

ಹಾರ್ಮುಜ್‌ನಲ್ಲಿ ಭಾರತದ ಹಡಗು ಸಂಚಾರಕ್ಕೆ ಸಹಕಾರ

ಹೊಸದಿಲ್ಲಿ: ಆಯಕಟ್ಟಿನ ಹಾರ್ಮುಜ್ ಜಲಸಂಧಿಯ ಮೂಲಕ ಭಾರತೀಯ ಹಡಗುಗಳ ಸಂಚಾರವನ್ನು ಸುಗಮಗೊಳಿಸಲು ಟೆಹ್ರಾನ್ ವಿಶೇಷ ವ್ಯವಸ್ಥೆಗಳನ್ನು ಮಾಡುತ್ತಿದೆ ಎಂದು ಇರಾನ್ ರಾಯಭಾರಿ ಮೊಹಮ್ಮದ್ ಫತಾಲಿ ಸೋಮವಾರ ಘೋಷಿಸಿದ್ದಾರೆ. ಜಲಸಂಧಿಯ ಮೂಲಕ ಹಾದುಹೋಗುವ ಭಾರತೀಯ ಟ್ಯಾಂಕರ್‌ಗಳಿಗೆ ಯಾವುದೇ ಸುಂಕ ವಿಧಿಸಲಾಗಿಲ್ಲ ಎಂದು ರಾಯಭಾರಿ



ಫತಾಲಿ ತಿಳಿಸಿದ್ದಾರೆ. ಸಂಚಾರ ನಿರ್ಬಂಧಗಳು ಆರಂಭವಾದಾಗಿನಿಂದ ದ್ರವೀಕೃತ ಪೆಟ್ರೋಲಿಯಂ ಗ್ಯಾಸ್ (ಎಲ್‌ಪಿಜಿ) ಹೊತ್ತೊಯ್ಯುತ್ತಿದ್ದ ಒಂಬತ್ತು ಹಡಗುಗಳ ನಿರ್ಗಮನಕ್ಕಾಗಿ ಯಾವುದೇ ಶುಲ್ಕ ಪಾವತಿಸಿಲ್ಲ ಎಂದು ಭಾರತ ದೃಢಪಡಿಸಿದೆ. ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಈ ದ್ವಿಪಕ್ಷೀಯ ಹಿತಾಸಕ್ತಿಗಳ ಬಗ್ಗೆ ಚರ್ಚೆ ನಡೆಸಿದ್ದಾರೆ. ಕಾರ್ಯತಂತ್ರದ ತೊಡಗಿಸಿಕೊಳ್ಳುವಿಕೆಗಾಗಿ ಇರಾನ್ ವಿದೇಶಾಂಗ ಸಚಿವರು ಗುರುತಿಸಿರುವ ಐದು ಪ್ರಮುಖ ರಾಷ್ಟ್ರಗಳಲ್ಲಿ ಭಾರತವೂ ಒಂದು. ಈ ಜಲಸಂಧಿ, ಇರಾನ್‌ನ ಪ್ರಾದೇಶಿಕ ಜಲಪ್ರದೇಶ ಎಂದು ಬಣ್ಣಿಸಿರುವ ರಾಯಭಾರಿ, ರಾಜತಾಂತ್ರಿಕ ಮಾತುಕತೆಗಳ ನಡೆಯುತ್ತಿರುವಾಗಲೇ ಇರಾನ್ ಮೇಲೆ ದಾಳಿ ನಡೆಸಲಾಗಿದೆ ಎಂದು ಆರೋಪಿಸಿದ್ದಾರೆ. ಇಸ್ಲಾಮಾಬಾದ್‌ನಲ್ಲಿ ಇತ್ತೀಚೆಗೆ ನಡೆದ ಸಂಧಾನದಲ್ಲಿ, ಪರಮಾಣು ಕಾಳಜಿಗಳು, ನಿರ್ಬಂಧಗಳ ಸಡಿಲಿಕೆ ಮತ್ತು ಯುದ್ಧದ ಪರಿಹಾರದಂತಹ ವಿಷಯಗಳು ಚರ್ಚೆಯಾಗಿವೆ, ಎಂದು ಫತಾಲಿ ಉಲ್ಲೇಖಿಸಿದ್ದಾರೆ. ಷರತ್ತುಗಳನ್ನು ಪೂರೈಸಿದರೆ ಇರಾನ್ ಮುಂದಿನ ಮಾತುಕತೆ ಸಿದ್ಧವಾಗಿದೆ. ಆದರೆ ಸಂಘರ್ಷ ಎದುರಿಸಲೂ ಸನ್ನದ್ಧವಾಗಿದೆ ಎಂದು ಅವರು ಹೇಳಿದ್ದಾರೆ.

7 ವರ್ಷದ ನಂತರ ಭಾರತಕ್ಕೆ ಇರಾನ್ ತೈಲ

ಹೊಸದಿಲ್ಲಿ: ಸುಮಾರು ಏಳು ವರ್ಷಗಳ ವಿರಾಮದ ಬಳಿಕ ಇರಾನಿನ ಕಚ್ಚಾ ತೈಲ ಮತ್ತೆ ಭಾರತಕ್ಕೆ ತಲುಪಿದೆ. ಇರಾನ್‌ನಿಂದ ಕಚ್ಚಾ ತೈಲವನ್ನು ಹೊತ್ತ ಎರಡು ಸೂಪರ್ ಟ್ಯಾಂಕರ್‌ಗಳು ಭಾರತದ ಪೂರ್ವ ಮತ್ತು ಪಶ್ಚಿಮ ಕರಾವಳಿಯ ಬಂದರುಗಳಿಗೆ ಆಗಮಿಸಿವೆ ಎಂದು ಹಡಗು ಟ್ರ್ಯಾಕಿಂಗ್ ಮಾಹಿತಿಗಳು ತಿಳಿಸಿವೆ.

ನ್ಯಾಷನಲ್ ಇರಾನಿಯನ್ ಟ್ಯಾಂಕರ್ ಕಂಪನಿ ನಡೆಸುವ ಫೆಲಿಸಿಟಿ ಎಂಬ ದೊಡ್ಡ ಟ್ಯಾಂಕರ್ ಭಾನುವಾರ ತಡರಾತ್ರಿ ಗುಜರಾತ್‌ನ ಸಿಕ್ಕಾ ಬಂದರನ್ನು ತಲುಪಿದೆ. ಇದು ಮಾರ್ಚ್ ಮಧ್ಯಭಾಗದಲ್ಲಿ ಖಾರ್ಗ್ ದ್ವೀಪದಲ್ಲಿ ಲೋಡ್ ಮಾಡಿದ್ದ ಸುಮಾರು 2 ಮಿಲಿಯನ್ ಬ್ಯಾರೆಲ್ ಕಚ್ಚಾ ತೈಲವನ್ನು ಹೊತ್ತು ತಂದಿದೆ.

ಇದೇ ವೇಳೆ ಜಯಾ ಎಂಬ ಮತ್ತೊಂದು ಟ್ಯಾಂಕರ್ ಒಡಿಶಾ ಕರಾವಳಿಯ ಪ್ಯಾರಾದೀಪ್ ಬಂದರು ಸಮೀಪ ಲಂಗರು ಹಾಕಿದೆ. ಇದೂ ಕೂಡ ಸುಮಾರು 2 ಮಿಲಿಯನ್ ಬ್ಯಾರೆಲ್ ತೈಲವನ್ನು ಸಾಗಿಸಿದೆ. ಈ ಸರಕು ಫೆಬ್ರವರಿ ಕೊನೆಯಲ್ಲಿ, ಯುಎಸ್-ಇಸ್ರೇಲ್, ಇರಾನ್ ಸಂಘರ್ಷ ಆರಂಭವಾಗುವ ಮುನ್ನವೇ ಲೋಡ್ ಮಾಡಲಾಗಿತ್ತು. ಕಳೆದ ತಿಂಗಳು ಅಮೆರಿಕ ನೀಡಿದ ನಿರ್ಬಂಧಗಳ ತಾತ್ಕಾಲಿಕ ವಿನಾಯಿತಿಯ ಪರಿಣಾಮವಾಗಿ, ಸುಮಾರು ಏಳು ವರ್ಷಗಳ ಬಳಿಕ ಮೊದಲ ಬಾರಿಗೆ ಇರಾನಿನ ತೈಲ ಟ್ಯಾಂಕರ್‌ಗಳು ಭಾರತ ತಲುಪಿವೆ. ಜಾಗತಿಕ ಮಟ್ಟದಲ್ಲಿ ತೈಲ ಕೊರತೆಯನ್ನು ಕಡಿಮೆ ಮಾಡಲು ಮತ್ತು ಬೆಲೆ ನಿಯಂತ್ರಣಕ್ಕಾಗಿ, ಈಗಾಗಲೇ ಸಾಗಣೆಯಲ್ಲಿರುವ ಇರಾನಿನ ತೈಲವನ್ನು ಮಾರಾಟ ಮಾಡಲು ಒಂದು ತಿಂಗಳ ವಿನಾಯಿತಿ ನೀಡಲಾಗಿದೆ.

ಆದರೆ, ಇಸ್ಲಾಮಾಬಾದ್‌ನಲ್ಲಿ ನಡೆದ ಶಾಂತಿ ಮಾತುಕತೆಗಳು ವಿಫಲವಾದ ಹಿನ್ನೆಲೆಯಲ್ಲಿ, ಇರಾನ್‌ನ ತೈಲ ರಫ್ತು ಆದಾಯವನ್ನು ತಡೆಗಟ್ಟಲು ಅಮೆರಿಕ ಮತ್ತೆ ಕಠಿಣ ಕ್ರಮಗಳನ್ನು ಕೈಗೊಂಡಿದೆ. ಭಾರತಕ್ಕೆ ಬಂದಿರುವ ಈ ಟ್ಯಾಂಕರ್‌ಗಳ ಖರೀದಿದಾರರ ಬಗ್ಗೆ ಇನ್ನೂ ಅಧಿಕೃತ ಮಾಹಿತಿ ಲಭ್ಯವಾಗಿಲ್ಲ.

ಪ್ಯಾರಾದೀಪ್ ಬಂದರನ್ನು ಇಂಡಿಯನ್ ಆಯಿಲ್ ಕಾರ್ಪೊರೇಷನ್ ಮುಖ್ಯವಾಗಿ ನಿರ್ವಹಿಸುತ್ತಿದ್ದು, ಅದು ಕನಿಷ್ಠ ಒಂದು ಸಾಗಣೆಯನ್ನು ಖರೀದಿಸುವುದಾಗಿ ದೃಢಪಡಿಸಿದೆ. ಸಿಕ್ಕಾ ಬಂದರು ರಿಲಯನ್ಸ್ ಇಂಡಸ್ಟ್ರೀಸ್ ಹಾಗೂ ಭಾರತ್ ಪೆಟ್ರೋಲಿಯಂಗೆ ಪ್ರಮುಖ ಕಚ್ಚಾ ತೈಲ ಹ್ಯಾಂಡ್ಲಿಂಗ್ ಕೇಂದ್ರವಾಗಿದೆ.

ಇದಕ್ಕೂ ಮುನ್ನ, ಸುಮಾರು 6 ಲಕ್ಷ ಬ್ಯಾರೆಲ್ ತೈಲ ಹೊತ್ತ ಪಿಂಗ್ ಶುನ್ ಟ್ಯಾಂಕರ್ ಗುಜರಾತ್‌ನ ವಾಡಿನಾರ್ ಕಡೆಗೆ ಬರುತ್ತಿದ್ದರೂ, ಪಾವತಿ ಸಮಸ್ಯೆಗಳ ಕಾರಣದಿಂದ ಮಧ್ಯದಲ್ಲೇ ಚೀನಾಕ್ಕೆ ತಿರುಗಿಸಲಾಯಿತು.

2018ರಲ್ಲಿ ಅಮೆರಿಕದ ನಿರ್ಬಂಧಗಳು ಕಠಿಣಗೊಂಡ ಬಳಿಕ, ಮೇ 2019ರಿಂದ ಭಾರತ ಇರಾನ್‌ನಿಂದ ತೈಲ ಆಮದು ಸಂಪೂರ್ಣ ನಿಲ್ಲಿಸಿತ್ತು. ಅದಕ್ಕೂ ಮೊದಲು ಭಾರತ ದಿನಕ್ಕೆ 5.18 ಲಕ್ಷ ಬ್ಯಾರೆಲ್ ತೈಲ ಖರೀದಿಸುತ್ತಿತ್ತು. ನಂತರ ಇದು 2.68 ಲಕ್ಷ ಬ್ಯಾರೆಲ್‌ಗೆ ಇಳಿದು, ಕೊನೆಗೆ ಸಂಪೂರ್ಣ ಸ್ಥಗಿತಗೊಂಡಿತ್ತು. ಇದೀಗ 30 ದಿನಗಳ ತಾತ್ಕಾಲಿಕ ವಿನಾಯಿತಿಯಿಂದ ಮತ್ತೆ ತೈಲ ಸಾಗಣೆ ಆರಂಭವಾಗಿದೆ.



ಎಲ್‌ಪಿಜಿ ಪೂರೈಕೆಯ ತೀವ್ರ ಕೊರತೆಯಿಲ್ಲ

ಹೊಸದಿಲ್ಲಿ: ಪಶ್ಚಿಮ ಏಷ್ಯಾದ ಇತ್ತೀಚಿನ ಬೆಳವಣಿಗೆಗಳ ನಂತರವೂ ಆಟೋ ಬಿಡಿಭಾಗಗಳ ತಯಾರಕರು ಯಾವುದೇ ಗಂಭೀರ ಎಲ್‌ಪಿಜಿ ಪೂರೈಕೆ ಕೊರತೆಯನ್ನು ವರದಿ ಮಾಡಿಲ್ಲ ಎಂದು ಭಾರಿ ಕೈಗಾರಿಕೆಗಳ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಹನೀಫ್ ಖುರೇಷಿ ಸೋಮವಾರ ತಿಳಿಸಿದ್ದಾರೆ.

ಅನಿಲ ಪೂರೈಕೆಯನ್ನು ಕಾಯ್ದುಕೊಳ್ಳಲು ಮತ್ತು ಅಡೆತಡೆಗಳನ್ನು ತಡೆಗಟ್ಟಲು ಬೃಹತ್ ಕೈಗಾರಿಕೆಗಳ ಸಚಿವಾಲಯವು ಆಟೋ ಕಾಂಪೊನೆಂಟ್ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಷನ್ (ಎಸಿಎಂಎ) ಜತೆಗೆ ನಿರಂತರ ಸಂಪರ್ಕದಲ್ಲಿದೆ. ಲಭ್ಯವಿರುವ ಕಡೆಗಳಲ್ಲಿ ಎಲೆಕ್ಟ್ರಿಕ್ ಫರ್ನೇಸ್‌ಗಳು ಮತ್ತು ಪೈಪ್ಡ್ ನ್ಯಾಚುರಲ್ ಗ್ಯಾಸ್(ಪಿಎನ್‌ಜಿ) ಬಳಸಲು ಉದ್ಯಮಗಳಿಗೆ ಅಧಿಕಾರಿಗಳು ಸಲಹೆ ನೀಡಿದ್ದಾರೆ. ಪ್ರಾದೇಶಿಕ ಉದ್ವಿಗ್ನತೆಯ ನಡುವೆಯೂ, ಮಾರ್ಚ್‌ನಲ್ಲಿ ವಾಹನ ಉತ್ಪಾದನೆ ಶೇ.15ರಿಂದ 16ರಷ್ಟು ಹೆಚ್ಚಾಗಿದೆ.

ಸರ್ಕಾರ ಎಲೆಕ್ಟ್ರಿಕ್ ತ್ರಿಚಕ್ರ ವಾಹನಗಳಿಗೆ ನೀಡಲಾಗುವ 'ಪಿಎಂ ಇ-ಡ್ರೈವ್' ಸಬ್ಸಿಡಿಯನ್ನು ಮಾರ್ಚ್ 2028ರವರೆಗೆ ಮತ್ತು ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳ ಸಬ್ಸಿಡಿಯನ್ನು ಜುಲೈ 31, 2026ರವರೆಗೆ ವಿಸ್ತರಿಸಿದೆ. ಪಶ್ಚಿಮ ಏಷ್ಯಾದ ಬಿಕ್ಕಟ್ಟಿನ ಕಾರಣದಿಂದಾಗಿ, ಟ್ರಕ್ ಮತ್ತು ಬಸ್‌ಗಳ ಹಂತ ಹಂತದ ಉತ್ಪಾದನಾ ಕಾರ್ಯಕ್ರಮದ (ಪಿಎಂಪಿ) ಮಾರ್ಗಸೂಚಿಗಳನ್ನು ಆರು ತಿಂಗಳ ಕಾಲ, ಅಂದರೆ ಸೆಪ್ಟೆಂಬರ್‌ವರೆಗೆ ಸಡಿಲಿಸಲಾಗಿದೆ.

ಕಿರುಸುದ್ದಿ

ಲಾಲುಗೆ ಹಿನ್ನಡೆ:ಎಫ್‌ಐಆರ್ ರದ್ದಿಗೆ ಸುಪ್ರೀಂ ನಕಾರ

ಹೊಸದಿಲ್ಲಿ: ಲಾಲು ಪ್ರಸಾದ್ ಯಾದವ್‌ಗೆ ತೀವ್ರ ಹಿನ್ನಡೆಯಂತೆ, ಆರ್‌ಜೆಡಿ ಮುಖ್ಯಸ್ಥ ಮತ್ತು ಅವರ ಕುಟುಂಬ ಸದಸ್ಯರನ್ನು ಒಳಗೊಂಡ ಉದ್ಯೋಗಕ್ಕಾಗಿ ಭೂಮಿ ಹಗರಣದಲ್ಲಿ ಸಿಬಿಐ ಎಫ್‌ಐಆರ್ ಅನ್ನು ರದ್ದುಗೊಳಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಆದಾಗ್ಯೂ, ನ್ಯಾಯಮೂರ್ತಿಗಳಾದ ಎಂ. ಎಂ. ಸುಂದ್ರೇಶ್ ಮತ್ತು ಎನ್. ಕೋಟಿಸ್ವರ್ ಸಿಂಗ್ ಅವರ ನ್ಯಾಯಪೀಠವು ಹಗರಣದ ವಿಚಾರಣೆ ವೇಳೆ ವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗುವುದರಿಂದ ವಿನಾಯಿತಿ ನೀಡಿದೆ.

ಪೊಲೀಸ್ ಠಾಣೆ ಮೇಲೆ ದಾಳಿಗೆ ಐಎಸ್‌ಐ ನಂಟು

ಅಮೃತಸರ: ಕಳೆದ ತಿಂಗಳು ಪಂಜಾಬ್‌ನ ಅಮೃತಸರ ಜಿಲ್ಲೆಯ ಭಿಂಡಿ ಸೈದಾ ಪೊಲೀಸ್ ಠಾಣೆ ಮೇಲೆ ನಡೆದ ಗ್ರೆನೇಡ್ ದಾಳಿಗೆ ಸಂಬಂಧಿಸಿದಂತೆ ಆರು ಆರೋಪಿಗಳನ್ನು ಬಂಧಿಸಲಾಗಿದೆ. ಪ್ರಾಥಮಿಕ ತನಿಖೆಯಲ್ಲಿ ಬಂಧಿತರಿಗೆ ಪಾಕಿಸ್ತಾನದ ಐಎಸ್‌ಐ ಬೆಂಬಲವಿದೆ ಎಂದು ಕಂಡುಬಂದಿದೆ. ಮಾ.29 ಮತ್ತು 30ರ ಮಧ್ಯರಾತ್ರಿಯಲ್ಲಿ ಈ ಘಟನೆ ನಡೆದಿದೆ. ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ.

ಟಿಸಿಎಸ್ ನಾಸಿಕ್ ಘಟನೆ ತನಿಖೆಗೆ ಟಾಟಾ ಆದೇಶ

ಮುಂಬೈ: ಮಹಾರಾಷ್ಟ್ರದನಾಸಿಕ್‌ನಲ್ಲಿರುವ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್(ಟಿಸಿಎಸ್) ಕಚೇರಿಯಲ್ಲಿ ಹೊರಬಂದಿರುವ ಲೈಂಗಿಕ ಕಿರುಕುಳ ಮತ್ತು ಮತಾಂತರದಂಥ ಗಂಭೀರ ಆರೋಪಗಳು ಆತಂಕಕಾರಿ ಹಾಗೂ ನೋವುಂಟುಮಾಡುವಂತಿವೆ ಎಂದು ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್ ಹೇಳಿದ್ದಾರೆ. ಈ ಸಂಬಂಧ ಹಿರಿಯ ಅಧಿಕಾರಿಯ ನೇತೃತ್ವದಲ್ಲಿ ಸಮಗ್ರ ತನಿಖೆಗೆ ಆದೇಶಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ನಾಸಿಕ್ ಘಟಕದಿಂದ ಬಂದ ದೂರುಗಳು ಗಂಭೀರ ಸ್ವರೂಪದ್ದಾಗಿದ್ದು, ಸಂಸ್ಥೆಯ ಮುಖ್ಯ ಕಾರ್ಯಾಚರಣಾಧಿಕಾರಿ ಆರತಿ ಸುಬ್ರಹ್ಮಣಿಯನ್ ಅವರ ಮೇಲ್ವಿಚಾರಣೆಯಲ್ಲಿ ಸಂಪೂರ್ಣ ತನಿಖೆ ನಡೆಯುತ್ತಿದೆ. ಘಟನೆಯ ಸತ್ಯಾಸತ್ಯತೆ ಪತ್ತೆಹಚ್ಚಿ, ಹೊಣೆಗಾರರನ್ನು ಗುರುತಿಸುವುದು ತನಿಖೆಯ ಉದ್ದೇಶವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಎಂಟು ಮಹಿಳಾ ಉದ್ಯೋಗಿಗಳು ಲೈಂಗಿಕ ಕಿರುಕುಳ ಹಾಗೂ ಬಲವಂತದ ಧಾರ್ಮಿಕ ಮತಾಂತರದ ಆರೋಪಗಳನ್ನು ಹೊರಿಸಿದ್ದಾರೆ. ಈ ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಲಾಗಿದ್ದು, ಆರೋಪಿಗಳ ವಿರುದ್ಧ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ತನಿಖೆಗೆ ಕಂಪನಿ ಸಂಪೂರ್ಣ ಸಹಕಾರ ನೀಡುತ್ತಿದೆ ಎಂದು ಚಂದ್ರಶೇಖರನ್ ತಿಳಿಸಿದ್ದಾರೆ. ಉದ್ಯೋಗಿಗಳಿಂದ ಯಾವುದೇ ರೀತಿಯ ದೌರ್ಜನ್ಯ ಅಥವಾ ಅನಾಚಾರದ ವರ್ತನೆಗೆ ಕಂಪನಿಯಲ್ಲಿ ಶೂನ್ಯ ಸಹಿಷ್ಣುತೆ ನೀತಿ ಅನ್ವಯವಾಗುತ್ತದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ತನಿಖೆಯಲ್ಲಿ ತಪ್ಪಿತಸ್ಥರು ಪತ್ತೆಯಾದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

ನಮ್ಮ ರಕ್ಷಣೆಗೆ ಭಾರತದ ಆಧ್ಯಾತ್ಮಿಕ ಜ್ಞಾನ ನೆರವು

ನಾಗಪುರ: ಭಾರತವು ವಿಶ್ವದ ಆತ್ಮವಾಗಿದ್ದು, ಭೌತಿಕವಾದ ಮತ್ತು ಗ್ರಾಹಕ ಉಪಭೋಗವಾದಗಳ ಬಿರುಗಾಳಿಯಿಂದ ನಮ್ಮನ್ನು ರಕ್ಷಿಸಿಕೊಳ್ಳಲು ಭಾರತದ ಆಧ್ಯಾತ್ಮಿಕ ಜ್ಞಾನ ನೆರವಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗ್ವತ್ ಸೋಮವಾರ ಹೇಳಿದ್ದಾರೆ. ಭೌತಿಕವಾದ ಮತ್ತು ಗ್ರಾಹಕ ಉಪಭೋಗವಾದಗಳ ಅತಿರೇಕದಿಂದ ಅನೇಕ ಸಮಾಜಗಳು ನಾಶವಾಗಿ ಹೋಗಿರುವುದನ್ನು ಅವರು ಬೊಟ್ಟು ಮಾಡಿದರು. ನಾಗಪುರದಲ್ಲಿ ನಡೆದ ಪಂಚ್‌ಕಲ್ಯಾಣಕ್ ಪ್ರತಿಷ್ಠಾ ಗಜ್ರಾತ್ ಮಹೋತ್ಸವ್ ಕಾರ್ಯಕ್ರಮದಲ್ಲಿ ಸೇರಿದ್ದ ದೇಶದ ಪೂಜ್ಯ ಸಾಧುಸಂತರನ್ನುದ್ದೇಶಿಸಿ ಅವರು ಮಾತನಾಡಿದರು. ನಮ್ಮ ರಾಷ್ಟ್ರದ ಶ್ರೀಮಂತ ಆಧ್ಯಾತ್ಮಿಕ ಜ್ಞಾನ ಮತ್ತು ಅದನ್ನು ಜನರಲ್ಲಿ ಹರಡುವಲ್ಲಿ ಸಂತಶ್ರೇಷ್ಠರ ಪಾತ್ರವನ್ನು ಅವರು ಎತ್ತಿತೋರಿದರು. ನಮ್ಮ ದೇಶದ ಅಸ್ತಿತ್ವ ಎಲ್ಲಿಯವರೆಗೆ ಇರುವುದೋ ಅಲ್ಲಿಯವರೆಗೆ ಇಡಿ ಜಗತ್ತು ಚೆನ್ನಾಗಿರುತ್ತದೆ. ಯಾಕೆಂದರೆ ಜಗತ್ತು ಒಂದು ದೇಹವಾಗಿದ್ದರೆ, ಭಾರತ ಅದರ ಆತ್ಮವಾಗಿದೆ. ಇಂದು ಭೌತಿಕವಾದ ಮತ್ತು ಗ್ರಾಹಕವಾದದ ಅತಿರೇಕಗಳಿಂದ ಅನೇಕ ಸಮಾಜಗಳು ವಿಶ್ವದಲ್ಲಿ ನಾಶವಾಗಿವೆ. ಭಾರತ ಮಾತ್ರ ಸಂತಶ್ರೇಷ್ಠರಿಂದ ಸಾಕಾರಗೊಂಡ ತನ್ನ ಆಧ್ಯಾತ್ಮಿಕ ಜ್ಞಾನ ಮತ್ತು ಬುದ್ಧಿಮತ್ತೆಗಳಿಂದಾಗಿ ಈ ಸವಾಲಿನಿಂದ ತನ್ನನ್ನು ತಾನು ರಕ್ಷಿಸಿಕೊಂಡಿದೆ ಎಂದರು. ಪ್ರಾಚೀನ ನಾಗರಿಕತೆಗಳಾದ ಗ್ರೀಸ್, ಈಜಿಪ್ಟ್, ರೋಮ್‌ನಂತಹ ಸಂಸ್ಕೃತಿಗಳು ಇಂದು ಜಗತ್ತಿನ ಭೂಪಟದಿಂದ ಅಳಿಸಿಹೋಗಿವೆ. ಆದರೆ ನಮ್ಮ ಭಾರತದಲ್ಲಿ ಇರುವ ಕೆಲವು ಅನನ್ಯತೆಗಳ ಕಾರಣದಿಂದಾಗಿ ಇದು ನಾಶವಾಗದೆ ಉಳಿದಿದೆ. ಭಾರತವು ಹೊಂದಿರುವ ಆಧ್ಯಾತ್ಮಿಕ ಜ್ಞಾನವನ್ನು ವಿಶ್ವ ಹೊಂದಿಲ್ಲ.

ಈ ಬಾರಿ ಮುಂಗಾರು ಸಾಮಾನ್ಯಕ್ಕಿಂತ ಕಡಿಮೆ

- ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ
- ಎಲ್‌ನಿನೊ ಪರಿಣಾಮದಿಂದ ಮಳೆ ಪ್ರಮಾಣ ಕಡಿಮೆ

ಹೊಸದಿಲ್ಲಿ/ಬೆಂಗಳೂರು: ಈ ವರ್ಷದ ಮುಂಗಾರು ಮಳೆ ಸಾಮಾನ್ಯ ಮಟ್ಟಕ್ಕಿಂತ ಕಡಿಮೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಮುನ್ಸೂಚನೆ ನೀಡಿದ್ದು, ಎಲ್‌ನಿನೊ ಪರಿಣಾಮದಿಂದ ಮಳೆಯ ಪ್ರಮಾಣ ಕುಗ್ಗುವ ಆತಂಕ ವ್ಯಕ್ತವಾಗಿದೆ. 2026ರ ಮಳೆಗಾಲದಲ್ಲಿ ದೇಶದಾದ್ಯಂತ ಸರಾಸರಿ ಮಳೆಯ ಪ್ರಮಾಣವು ದೀರ್ಘಾವಧಿ ಸರಾಸರಿ(ಎಲ್‌ಪಿಎ)ಯ ಶೇ.92 ಮಾತ್ರವಾಗಿರಬಹುದು. ಸಾಮಾನ್ಯವಾಗಿ ಶೇ.96ರಿಂದ ಶೇ.104 ನಡುವಿನ ಮಳೆಯನ್ನೇ ಸಾಮಾನ್ಯ ಎಂದು ಪರಿಗಣಿಸಲಾಗುತ್ತದೆ. ಈ ಹಿನ್ನೆಲೆ, ಈ ವರ್ಷದ ಮುಂಗಾರು ಸಾಮಾನ್ಯಕ್ಕಿಂತ ಕಡಿಮೆ ಆಗಿರಲಿದೆ ಎಂಬ ಸೂಚನೆ ದೊರೆತಿದೆ. ಹವಾಮಾನ ತಜ್ಞರ ಪ್ರಕಾರ, ಪ್ರಸ್ತುತ ನ್ಯೂಟ್ರಲ್ ಸ್ಥಿತಿಯಲ್ಲಿರುವ ಹವಾಮಾನ ವ್ಯವಸ್ಥೆ ಜೂನ್ ನಂತರ ಎಲ್‌ನಿನೊ ಸ್ಥಿತಿಗೆ ತಿರುಗುವ ಸಾಧ್ಯತೆ ಹೆಚ್ಚಾಗಿದೆ. ಎಲ್‌ನಿನೊ ಉಂಟಾದ ವರ್ಷಗಳಲ್ಲಿ ಸಾಮಾನ್ಯವಾಗಿ ಭಾರತದಲ್ಲಿ ಮಳೆಯ ಪ್ರಮಾಣ ಕಡಿಮೆಯಾಗುವುದು ಕಂಡುಬಂದಿದೆ. ಭಾರತದ ಕೃಷಿ ವ್ಯವಸ್ಥೆ ಮುಂಗಾರು ಮೇಲೆ ಬಹುಮಟ್ಟಿಗೆ ಅವಲಂಬಿತವಾಗಿದೆ. ದೇಶದ ಒಟ್ಟು ವಾರ್ಷಿಕ ಮಳೆಯ ಸುಮಾರು ಶೇ.70 ಮಳೆ ಈ ಅವಧಿಯಲ್ಲೇ ಸುರಿಯುತ್ತದೆ. ಹೀಗಾಗಿ ಮಳೆಯ ಕೊರತೆ ಉಂಟಾದರೆ ಕೃಷಿ ಉತ್ಪಾದನೆ, ಜಲ ಸಂಪನ್ಮೂಲ ಹಾಗೂ ಗ್ರಾಮೀಣ ಆರ್ಥಿಕತೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

ಇಂದು ಬಿಜೆಪಿ ಸಿಎಂ ಆಯ್ಕೆ ?

ಪಾಟ್ನಾ: ಬಿಹಾರದಲ್ಲಿ ಮೊದಲ ಬಾರಿಗೆ ಬಿಜೆಪಿ ನೇತೃತ್ವದ ಸರ್ಕಾರ ರಚನೆಗೆ ವೇದಿಕೆ ಸಿದ್ಧವಾಗುತ್ತಿದೆ. ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಏ.14ರಂದು ನಡೆಯುವ ಕೊನೆಯ ಸಚಿವ ಸಂಪುಟ ಸಭೆಯ ನಂತರ ರಾಜೀನಾಮೆ ಸಲ್ಲಿಸುವ ಸಾಧ್ಯತೆ ಇದೆ. ಮಂಗಳವಾರ ಬಿಜೆಪಿ ಶಾಸಕರ ಸಭೆ ನಡೆಯಲಿದ್ದು, ನಂತರ ಎನ್‌ಡಿಎ ಶಾಸಕರ ಸಭೆಯಲ್ಲಿ ಹೊಸ ನಾಯಕನ ಆಯ್ಕೆ ನಡೆಯಲಿದೆ. ಕೇಂದ್ರ ವೀಕ್ಷಕರಾಗಿ ಶಿವರಾಜ್ ಸಿಂಗ್ ಚೌಹಾಣ್ ಭಾಗವಹಿಸಲಿದ್ದಾರೆ. ನಿತೀಶ್ ಕುಮಾರ್ ತಮ್ಮ ರಾಜೀನಾಮೆ ನಿರ್ಧಾರವನ್ನು ಸಚಿವ ಸಂಪುಟಕ್ಕೆ ತಿಳಿಸಿ, ರಾಜ್ಯಪಾಲರಿಗೆ ಸಲ್ಲಿಸಲಿದ್ದಾರೆ. ಇತ್ತೀಚೆಗೆ ರಾಜ್ಯಸಭೆಗೆ ಸ್ಪರ್ಧಿಸುವುದಾಗಿ ಘೋಷಿಸಿದ್ದ ಅವರು, ತಮ್ಮ ರಾಜಕೀಯ ಪಥದಲ್ಲಿ ಹೊಸ ಹಂತಕ್ಕೆ ಸಾಗುತ್ತಿದ್ದಾರೆ. ಡಿಸಿಎಂ ಸಾಮ್ರಾಟ್ ಚೌಧರಿ ಮುಂದಿನ ಮುಖ್ಯಮಂತ್ರಿಯಾಗಿ ಆಯ್ಕೆಯಾಗುವ ಸಾಧ್ಯತೆ ಹೆಚ್ಚಿದೆ. ಜೆಡಿಯು ಮತ್ತು ಬಿಜೆಪಿ ನಡುವೆ ಸಮನ್ವಯ ಮುಂದುವರಿದಿದ್ದು, ಜೆಡಿಯು ಇದನ್ನು ಒಪ್ಪಿಕೊಂಡಂತಿದೆ. ಬಿಹಾರದಲ್ಲಿ ಬಿಜೆಪಿ ತನ್ನದೇ ಮುಖ್ಯಮಂತ್ರಿ ಹೊಂದುವ ಅವಕಾಶ ಮೊದಲ ಬಾರಿಗೆ ಸಿಗುತ್ತಿದೆ. ಆದರೆ, ಪಕ್ಷದಲ್ಲಿ ಇನ್ನೂ ಹಲವು ಹೆಸರುಗಳು ಚರ್ಚೆಯಲ್ಲಿವೆ.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರ್ಕಾರ ರಚನೆ: ಅಮಿತ್ ಶಾ ಭರವಸೆ

ಬಾಂಬ್‌ಗೆ ಉತ್ತರಿಸಲಿದ್ದಾರೆ ಬಂಗಾಳಿಗರು

ಬೀರ್‌ಭೂಮ್: ಪಶ್ಚಿಮ ಬಂಗಾಳದ ಮತದಾರರು ಹಿಂಸಾಚಾರಕ್ಕೆ ಮತದಾನದ ಮೂಲಕವೇ ಉತ್ತರ ನೀಡಲಿದ್ದಾರೆ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಸ್ಥಾಪಿಸಲಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸೋಮವಾರ ಆಶಾವಾದ ವ್ಯಕ್ತಪಡಿಸಿದ್ದಾರೆ.

ಬೀರ್‌ಭೂಮ್‌ನಲ್ಲಿ ಏ.23ರಂದು ಮೊದಲ ಹಂತದ ಮತದಾನ ನಡೆಯಲಿದ್ದು, ಏ.29ರಂದು ಎರಡನೇ ಹಂತದ ಮತದಾನ ನಡೆಯಲಿದೆ. ಮೇ 4ರಂದು ಮತ ಎಣಿಕೆ ನಿಗದಿಯಾಗಿದೆ. ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಟಿಎಂಸಿಯ ಗೂಂಡಾಗಳಿಗೆ ಮನೆಯಲ್ಲೇ ಇರಬೇಕು. ಇಲ್ಲವಾದರೆ, ಚುನಾವಣಾ ಫಲಿತಾಂಶದ ನಂತರ ಅಪರಾಧಿಗಳನ್ನು ಜೈಲಿಗೆ ಅಟ್ಟಲಾಗುವುದು ಎಂದು ಶಾ ಎಚ್ಚರಿಕೆ ನೀಡಿದ್ದಾರೆ.

5 ಕೈಗಾರಿಕಾವಲಯ ನಿರ್ಮಾಣ: ರಾಜ್ಯದಲ್ಲಿ ಹೂಡಿಕೆಯನ್ನು ಉತ್ತೇಜಿಸಲು ಐದು ಕೈಗಾರಿಕಾ ವಲಯಗಳನ್ನು ನಿರ್ಮಿಸುವುದಾಗಿ ಗೃಹ ಸಚಿವರು ಭರವಸೆ ನೀಡಿದ್ದಾರೆ. ರಾಷ್ಟ್ರೀಯ



ಭದ್ರತೆಗೆ ಸಂಬಂಧಿಸಿದಂತೆ, ಅಧಿಕಾರಕ್ಕೆ ಬಂದ 45 ದಿನಗಳಲ್ಲಿ ಬಾಂಗ್ಲಾದೇಶದ ಗಡಿಗೆ ಬೇಲಿ ಹಾಕಲು ಭೂಮಿ ಮಂಜೂರಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದಾಗಿ ಅವರು ಪ್ರತಿಜ್ಞೆ ಮಾಡಿದ್ದಾರೆ. ದೇಶದಿಂದ ಅಕ್ರಮ ವಲಸಿಗರನ್ನು ಹೊರಹಾಕುವುದು ಮತ್ತು ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರುವ ಬಗ್ಗೆಯೂ ಅವರು ಭರವಸೆ ನೀಡಿದ್ದಾರೆ.

5 ಸಾವಿರ ಕೋಟಿ ರೂ. ದುರುಪಯೋಗ: ಪ್ರಸ್ತುತ ಸರ್ಕಾರ, ವಿವಿಧ ಹಗರಣಗಳ ಮೂಲಕ 5,000 ಕೋಟಿ ರೂ.ಗಳನ್ನು ದುರುಪಯೋಗಪಡಿಸಿಕೊಂಡಿದೆ ಎಂದು ಶಾ ಆರೋಪಿಸಿದ್ದಾರೆ. ಬಿಜೆಪಿ ಪ್ರಣಾಳಿಕೆಯಲ್ಲಿ, 7ನೇ ವೇತನ ಆಯೋಗದ ಅನುಷ್ಠಾನ, ಮಹಿಳೆಯರಿಗೆ ಮತ್ತು ನಿರುದ್ಯೋಗಿ ಯುವಕರಿಗೆ ಮಾಸಿಕ 3,000 ರೂ.ಗಳನ್ನು ನೀಡುವುದು ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ಖಚಿತಪಡಿಸುವುದನ್ನು ಉಲ್ಲೇಖಿಸಲಾಗಿದೆ. ರೈತರ ಅನುದಾನವನ್ನು ವಾರ್ಷಿಕ 9,000 ರೂ.ಗಳಿಗೆ ಹೆಚ್ಚಿಸಲಾಗುವುದು, ಎಂದು ಅವರು ಹೇಳಿದ್ದಾರೆ.

ಭಯೋತ್ಪಾದನೆಗೆ ಈ ಹಿಂದಿನ ಕೇಂದ್ರ ಸರ್ಕಾರಗಳ ಪ್ರತಿಕ್ರಿಯೆಯನ್ನು ಅವರು ಟೀಕಿಸಿದರು. ಪ್ರಧಾನಿ ನರೇಂದ್ರ ಮೋದಿಯವರ ಯುವ ಸಬಲೀಕರಣ ಯೋಜನೆಗಳನ್ನು ಉಲ್ಲೇಖಿಸಿದ ಅವರು, ಡಬಲ್ ಇಂಜಿನ್ ಸರ್ಕಾರ, ಕೇಂದ್ರದ ಕಲ್ಯಾಣ ನಿಧಿಗಳು ನೇರವಾಗಿ ರಾಜ್ಯದ ಜನರನ್ನು ತಲುಪುವಂತೆ ಮಾಡುತ್ತದೆ ಎಂದು ಹೇಳಿದರು.

ಮುಂಬೈನಲ್ಲಿ ಸಕಲ ಗೌರವಗಳೊಂದಿಗೆ ನೆರವೇರಿದ ಅಂತ್ಯಕ್ರಿಯೆ

ಸಂಗೀತ ದಂತಕಥೆ ಆಶಾಗೆ ವಿದಾಯ

ಮುಂಬೈ: ಬಹು ಅಂಗಾಂಗ ವೈಫಲ್ಯದಿಂದಾಗಿ 92ನೇ ವಯಸ್ಸಿನಲ್ಲಿ ನಿಧನರಾದ ಸುಪ್ರಸಿದ್ಧ ಗಾಯಕಿ ಆಶಾ ಭೋಸ್ಲೆಯವರ ಅಂತ್ಯಕ್ರಿಯೆ ಸೋಮವಾರ ಶಿವಾಜಿ ಪಾರ್ಕ್‌ನಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ನಡೆಯಿತು. ಆಶಾ ಭೋಸ್ಲೆ ಅವರ ಪುತ್ರ ಆನಂದ್, ಹಿಂದು ಸಂಪ್ರದಾಯದಂತೆ ಅಂತಿಮ ವಿಧಿವಿಧಾನಗಳನ್ನು ನೆರವೇರಿಸಿದರು. ಸರ್ಕಾರಿ ಗೌರವದ ಅಂಗವಾಗಿ ಕುಶಾಲತೋಪುಗಳ ಗೌರವ ವಂದನೆ ಸಲ್ಲಿಸಲಾಯಿತು. ಸಹೋದರಿ ಉಷಾ ಮಂಗೇಶ್ಕರ್, ಸಹೋದರ ಹೃದಯನಾಥ್ ಮಂಗೇಶ್ಕರ್ ಮತ್ತು ಮೊಮ್ಮಗಳು ಜನೈ ಉಪಸ್ಥಿತರಿದ್ದರು.

ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್, ಉಪಮುಖ್ಯಮಂತ್ರಿಗಳಾದ ಏಕನಾಥ್ ಶಿಂದೆ ಮತ್ತು ಸುನೇತ್ರಾ ಪವಾರ್, ಕ್ರಿಕೆಟ್ ದಂತಕಥೆ ಸಚಿನ್ ತೆಂಡೂಲ್ಕರ್ ಹಾಗೂ ನಟರಾದ ಆಮೀರ್ ಖಾನ್ ಸೇರಿದಂತೆ ಹಲವಾರು ಗಣ್ಯರು ಅಂತಿಮ ನಮನ ಸಲ್ಲಿಸಿದರು.

ಗೀತ ನಮನ : ಅಂತ್ಯಕ್ರಿಯೆಗೆ ಮೊದಲು ಗಾಯಕರಾದ ಶಾನ್, ಸುದೇಶ್ ಭೋಸ್ಲೆ ಮತ್ತು ಅನೂಪ್ ಜಲೋಟಾ ಗೀತ ನಮನ ಸಲ್ಲಿಸಿದರು. ಲೋವರ್ ಪರೇಲ್‌ನಿಂದ ಶಿವಾಜಿ ಪಾರ್ಕ್‌ವರೆಗೆ ರಸ್ತೆಯ ಎರಡೂ ಬದಿಯಲ್ಲಿ ಸಾಲುಗಟ್ಟಿ ನಿಂತಿದ್ದ ಅಭಿಮಾನಿಗಳು ನೆಚ್ಚಿನ ಗಾಯಕಿಗೆ ಜಯಘೋಷ



ಹಾಕಿದರು. ಇದಕ್ಕೂ ಮೊದಲು, ಅವರ ಪಾರ್ಥಿವ ಶರೀರಕ್ಕೆ ರಾಷ್ಟ್ರಧ್ವಜ ಹೊದಿಸಿ, ಸಾರ್ವಜನಿಕರ ದರ್ಶನಕ್ಕಾಗಿ ಅವರ ನಿವಾಸದಲ್ಲಿ ಇರಿಸಲಾಗಿತ್ತು.

ಎಂಟು ದಶಕಗಳ ಸುದೀರ್ಘ ವೃತ್ತಿಜೀವನದಲ್ಲಿ ಭೋಸ್ಲೆ, ಸುಮಾರು 12,000 ಹಾಡುಗಳನ್ನು ಹಾಡಿದ್ದಾರೆ. ಪದ್ಮವಿಭೂಷಣ, ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಮತ್ತು ಮಹಾರಾಷ್ಟ್ರ ಭೂಷಣ ಗೌರವಗಳಿಗೆ ಪಾತ್ರರಾಗಿದ್ದ ಆಶಾ ಭೋಸ್ಲೆ ಭಾನುವಾರ ನಿಧನರಾಗಿದ್ದರು. ಫೆಬ್ರವರಿ 2022ರಲ್ಲಿ ತಮ್ಮ 92ನೇ ವಯಸ್ಸಿನಲ್ಲಿ ನಿಧನರಾಗಿದ್ದ ತಮ್ಮ ಸಹೋದರಿ ಲತಾ ಮಂಗೇಶ್ಕರ್ ಹಾದಿಯಲ್ಲೇ ಆಶಾ ಸಾಗಿದ್ದಾರೆ.

ನೋಯ್ಡಾ: ಹಿಂಸೆಗೆ ತಿರುಗಿದ ಪ್ರತಿಭಟನೆ

ಹೊಸದಿಲ್ಲಿ: ನೋಯ್ಡಾದ ಕೆಲವು ಭಾಗಗಳಲ್ಲಿ ವೇತನ ಹೆಚ್ಚಳಕ್ಕೆ ಒತ್ತಾಯಿಸಿ ಕಾರ್ಖಾನೆ ಕಾರ್ಮಿಕರ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿದೆ. ಪ್ರತಿಭಟನಾಕಾರರು ಕಲ್ಲು ತೂರಾಟ ನಡೆಸಿ, ವಾಹನಗಳಿಗೆ ಬೆಂಕಿಹಚ್ಚಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ನೋಯ್ಡಾದ ಸೆಕ್ಟರ್-84, ಫೇಸ್-2ರಲ್ಲಿ ಪ್ರತಿಭಟನಾಕಾರರು ಮತ್ತು ಸ್ಥಳೀಯ ಅಧಿಕಾರಿಗಳ ನಡುವೆ ಹಿಂಸಾತ್ಮಕ ಘರ್ಷಣೆ ನಡೆದು, ಭಾರೀ ಕಲ್ಲು ತೂರಾಟ ನಡೆದಿದೆ. ಈ ಪ್ರದೇಶದ ಖಾಸಗಿ ಕಂಪನಿಯೊಂದರ ಸೌಲಭ್ಯ ವ್ಯವಸ್ಥಾಪಕ ವಿವೇಕ್ ಸರಸ್ವತ್, ಪ್ರತಿಭಟನಾಕಾರರ ದೊಡ್ಡ ಗುಂಪು ಅನೇಕ ಸಂಸ್ಥೆಗಳನ್ನು ಗುರಿಯಾಗಿಸಿಕೊಂಡು ವಾಹನಗಳು ಮತ್ತು ಮೂಲಸೌಕರ್ಯಗಳನ್ನು ಹಾನಿಗೊಳಿಸಿದೆ ಎಂದು ಹೇಳಿದ್ದಾರೆ. ವಿವಿಧ ಕೈಗಾರಿಕಾ ಘಟಕಗಳ ಭಾರೀ ಸಂಖ್ಯೆ ಕಾರ್ಮಿಕರು ವೇತನ ಪರಿಷ್ಕರಣೆಗಾಗಿ ತಮ್ಮ ದೀರ್ಘಕಾಲದಿಂದ ಬಾಕಿ ಇರುವ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿ ಘೋಷಣೆಗಳನ್ನು ಕೂಗಿದ್ದಾರೆ. ಅಲ್ಲದೇ ಕೆಲ ಕಾರ್ಮಿಕರು ಕಾರ್ಖಾನೆ ಆಸ್ತಿಯನ್ನು ಧ್ವಂಸಗೊಳಿಸಿದ್ದಾರೆ. ಕೆಲವು ಪ್ರತಿಭಟನಾಕಾರರು ಕಲ್ಲು ತೂರಿದ್ದಾರೆ.

ಪ್ರಧಾನಿ ಅವರಿಂದ ಭೈರವೈಕ್ಯ ಮಂದಿರ ಲೋಕಾರ್ಪಣೆ ನಾಳೆ

ಮಂಡ್ಯ: ಆದಿಚುಂಚನಗಿರಿಯಲ್ಲಿ ನಿರ್ಮಿಸಲಾಗಿರುವ ಶ್ರೀ ಗುರು ಭೈರವೈಕ್ಯ ಮಂದಿರ ಕೇವಲ ಕಲ್ಲು-ಮಣ್ಣಿನ ಕಟ್ಟಡವಲ್ಲ. ಅದೊಂದು ಜೀವಂತ ಆಧ್ಯಾತ್ಮ ಧಾಮ. ದ್ರಾವಿಡ ವಾಸ್ತು ಶಿಲ್ಪ ಶೈಲಿಯಲ್ಲಿ ಮಂದಿರ ನಿರ್ಮಾಣಗೊಂಡು ಬುಧವಾರ (ಏ.15) ಪ್ರಧಾನಿ ನರೇಂದ್ರಮೋದಿ ಅವರಿಂದ ಲೋಕಾರ್ಪಣೆಗೊಳ್ಳಲಿದೆ ಎಂದು ಆದಿ ಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧಿಪತಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.ಶ್ರೀ ಕ್ಷೇತ್ರದ ಶ್ರೀ ಗುರು ಭೈರವೈಕ್ಯ ಮಂದಿರದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ನೂರು ಕೋಟಿ ರು.ಗೂ ಹೆಚ್ಚು ವೆಚ್ಚದಲ್ಲಿ ಮಂದಿರ ಒರಿಸ್ಸಾದ ಸೂರ್ಯದೇಗುಲದ ಕಲೆಯನ್ನು ಒಳಗೊಂಡು ಸುಂದರವಾಗಿ ರೂಪುಗೊಂಡಿದೆ. ಹೊಯ್ಸಳ, ಚೋಳ, ಚಾಲುಕ್ಯ ಹಾಗೂ ಗಂಗ ವಾಸ್ತು ಶಿಲ್ಪದ ಸಮ್ಮಿಶ್ರಣವನ್ನು ಕಾಣಬಹುದಾಗಿದೆ ಎಂದು ತಿಳಿಸಿದರು. ದ್ರಾವಿಡ ವಾಸ್ತು ಶಿಲ್ಪ ಶೈಲಿ ಸಹಸ್ರಾರು ವರ್ಷಗಳಿಂದ ದೈವಿಕ ಶಕ್ತಿಯ ದೃಶ್ಯಭಾಷೆ ಎಂದೇ ಪ್ರಸಿದ್ಧಿ ಪಡೆದಿದೆ. ಆಗಸಕ್ಕೆ ಚಾಚಿದ ಗೋಪುರಗಳು, ಶಿಲ್ಪಕಲೆಯ ಅದ್ಭುತ ಕೆತ್ತನೆಗಳು, ಬ್ರಹ್ಮಾಂಡ ನಿಯಮಗಳಿಗೆ ಅನುಸಾರವಾದ ವಿನ್ಯಾಸ. ಇವೆಲ್ಲವೂ ಕೇವಲ ಕಟ್ಟಡ ನಿರ್ಮಾಣವಲ್ಲ. ಅದೊಂದು ದೇವರ ಭಾಷೆಯನ್ನು ಕಲ್ಲಿನಲ್ಲಿ ಬರೆದ ಮಹಾಕಾವ್ಯ ಎಂದು ವರ್ಣಿಸಿದರು.

ಪ್ರಧಾನಿ ಮೋದಿಗೆ ಮೈಸೂರು ಪೇಟ

ಮೈಸೂರು: ಮಂಡ್ಯ ಜಿಲ್ಲೆಯ ನಾಗಮಂಗಲದ ಶ್ರೀ ಕ್ಷೇತ್ರ, ಆದಿಚುಂಚನಗಿರಿ ಮಠಕ್ಕೆ ಭೇಟಿ ನೀಡಲಿರುವ ಪ್ರಧಾನಿ ಮೋದಿಯವರಿಗೆಂದು ಮಹಾರಾಜರ ಪೇಟವೊಂದು ಸಿದ್ಧವಾಗಿದೆ. ಅಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮೈಸೂರು ಮಹಾರಾಜರ ಮಾದರಿ ಪೇಟವನ್ನು ಹಾಕಲಾಗುತ್ತದೆ. ಇದಕ್ಕಾಗಿ ವಸ್ತ್ರ ವಿನ್ಯಾಸಕ, ಕಲಾವಿದ ನಂದನ್ ಅವರ ಕೈಚಳಕದಲ್ಲಿ ಪೇಟ ಸಿದ್ಧಗೊಂಡಿದೆ.

ಪರಿಶೀಲನೆ...



ಮಂಡ್ಯ ಜಿಲ್ಲೆಯ ಆದಿಚುಂಚನಗಿರಿಯಲ್ಲಿ ನಿರ್ಮಿಸಲಾಗಿರುವ ಶ್ರೀ ಗುರು ಭೈರವೈಕ್ಯ ಮಂದಿರವನ್ನು ನಾಳೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಉದ್ಘಾಟಿಸಲಿರುವ ಹಿನ್ನೆಲೆಯಲ್ಲಿ ಸೋಮವಾರ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ದೇಶಿಕೇಂದ್ರ ಸ್ವಾಮಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪಿಯುಸಿ ವಿದ್ಯಾರ್ಥಿಗಳಿಗೂ ಇನ್ನು ಪಠ್ಯಪುಸ್ತಕ ಉಚಿತ

ಬೆಂಗಳೂರು: ಈವರೆಗೂ 1 ರಿಂದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಮಾತ್ರ ಇದ್ದ ಪಠ್ಯ ಪುಸ್ತಕ ಉಚಿತ ವಿತರಣೆ ಯೋಜನೆಯನ್ನು 2026-27ನೇ ಸಾಲಿನಿಂದ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ. ಈ ಹೊಸ ಯೋಜನೆ ಇದೇ ಸಾಲಿನಿಂದಲೇ ಜಾರಿಗೆ ಬರಲಿದೆ.

ರಾಜ್ಯ ಸರ್ಕಾರವು ಶೈಕ್ಷಣಿಕ ಕ್ಷೇತ್ರದಲ್ಲಿ ಮತ್ತೊಂದು ಮಹತ್ವದ ಹೆಜ್ಜೆ ಇಟ್ಟಿದ್ದು, ಇನ್ನು ಮುಂದೆ ಎಲ್ಲ ಸರ್ಕಾರಿ ಪಿಯು ಕಾಲೇಜುಗಳ ವಿದ್ಯಾರ್ಥಿಗಳು ತಮ್ಮ ಪಠ್ಯಪುಸ್ತಕಗಳನ್ನು ಉಚಿತವಾಗಿ ಪಡೆಯಲಿದ್ದಾರೆ. ಇದರಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗಲಿದೆ.

ರಾಜ್ಯಾದ್ಯಂತ ಸರ್ಕಾರಿ ಪಿಯು ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳ ಲಕ್ಷಾಂತರ ವಿದ್ಯಾರ್ಥಿಗಳು ಇದರ ಲಾಭ ಪಡೆಯಲಿದ್ದಾರೆ. ಈ ಮಹತ್ವದ ನಿರ್ಧಾರದಿಂದ ಗ್ರಾಮೀಣ ಭಾಗದ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯಲು ಹೆಚ್ಚಿನ ಅನುಕೂಲವಾಗಲಿದ್ದು, ಆರ್ಥಿಕ ಹೊರೆ ಕಡಿಮೆಯಾಗಲಿದೆ ಎಂದು ಶಾಲಾ ಶಿಕ್ಷಣ ಇಲಾಖೆ ತಿಳಿಸಿದೆ.

ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ 1 ರಿಂದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕ ಉಚಿತ, ಅಭ್ಯಾಸ ಪುಸ್ತಕ ಹಾಗೂ 1 ರಿಂದ ದ್ವಿತೀಯ ಪಿಯುವರೆಗೆ ದಿನಚರಿ ಪುಸ್ತಕ ವಿತರಣೆ ಸಂಬಂಧ ಶಿಕ್ಷಣ ಇಲಾಖೆಯು, ಸುಮಾರು 30.83 ಕೋಟಿ ರೂ.ಗಿಂತ ಹೆಚ್ಚು ಹಣದ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಿತ್ತು. ಶಿಕ್ಷಣ ಇಲಾಖೆ ಸಲ್ಲಿಸಿದ ಪ್ರಸಾವನೆಗೆ ಸರ್ಕಾರ ಸಹ ಒಪ್ಪಿಗೆ ಸೂಚಿಸಿದೆ. ಇನ್ನು 1 ರಿಂದ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಸರ್ಕಾರದ ಕಡೆಯಿಂದಲೇ ಪಠ್ಯ ಪುಸ್ತಕ ಹಾಗೂ ನೋಟ್ ಬುಕ್ ಉಚಿತವಾಗಿ ನೀಡುವುದರಿಂದ ಪೋಷಕರ ಹೊರೆ ತಪ್ಪಲಿದೆ.

ಕಿರುಸುದ್ದಿ

ಸರ್ಕಾರಿ ನೌಕರರ ವರ್ಗಕ್ಕೆ ಹೊಸ ಮಾರ್ಗಸೂಚಿ

ಬೆಂಗಳೂರು: ರಾಜ್ಯ ಸರ್ಕಾರವು 2026-27ನೇ ಸಾಲಿನ ಸರ್ಕಾರಿ ನೌಕರರ ವರ್ಗಾವಣೆಗೆ ಸಂಬಂಧಿಸಿದಂತೆ ಹೊಸ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ. ಈ ಬಾರಿಯ ವರ್ಗಾವಣೆ ಪ್ರಕ್ರಿಯೆಯಲ್ಲಿ ಸಂಪೂರ್ಣ ಪಾರದರ್ಶಕತೆ ಕಾಯ್ದುಕೊಳ್ಳಲು ಸರ್ಕಾರ ನಿರ್ಧರಿಸಿದೆ. ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ನೌಕರರು ತಮ್ಮ ಸೇವಾ ದಾಖಲೆಗಳನ್ನು ನಿಖರವಾಗಿ ಒದಗಿಸುವುದು ಕಡ್ಡಾಯವಾಗಿದೆ. ಕೇವಲ ವೈಯಕ್ತಿಕ ಬೇಡಿಕೆಗಳಲ್ಲದೆ, ಇಲಾಖೆಯ ಆಡಳಿತಾತ್ಮಕ ಅಗತ್ಯತೆಗಳನ್ನು ಪ್ರಮುಖ ಮಾನದಂಡವಾಗಿ ಪರಿಗಣಿಸಿ ವರ್ಗಾವಣೆ ಆದೇಶ ಹೊರಡಿಸಲಾಗುತ್ತದೆ. ಕೆಲವು ವಿಶೇಷ ಪ್ರಕರಣಗಳಲ್ಲಿ ಮಾನವೀಯ ನೆಲೆಯ ಮೇಲೆ ಆದ್ಯತೆ ನೀಡಲು ಮಾರ್ಗಸೂಚಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಆಸಕ್ತ ಮತ್ತು ಅರ್ಹ ನೌಕರರು ಅರ್ಜಿಗಳನ್ನು ಮೇ 31ರೊಳಗೆ ಸಲ್ಲಿಸಬೇಕೆಂದು ಸರ್ಕಾರ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಇಲಾಖೆಯ ಅಧಿಕೃತ ಜಾಲತಾಣ ಅಥವಾ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಿಇಟಿ ಫಲಿತಾಂಶಕ್ಕೆ ಅತ್ಯಧಿಕ ಅಂಕಗಳ ಪರಿಗಣನೆ

ಬೆಂಗಳೂರು: ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಪರೀಕ್ಷೆ- 1 ಮತ್ತು ಪರೀಕ್ಷೆ-2 ರಲ್ಲಿ ಪಡೆದ ಅಂಕಗಳ ಪೈಕಿ ಅತ್ಯಧಿಕ ಅಂಕಗಳನ್ನೇ ಸಿಇಟಿ ಫಲಿತಾಂಶಕ್ಕೆ ಪರಿಗಣಿಸಲಾಗುವುದು. ಈ ವಿಷಯದಲ್ಲಿ ಗೊಂದಲ ಬೇಡ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಸ್ಪಷ್ಟಪಡಿಸಿದ್ದಾರೆ.ಕೆಲ ಅಭ್ಯರ್ಥಿಗಳು ಪರೀಕ್ಷೆ-1ರಲ್ಲಿ ಪಡೆದ ಅಂಕಗಳನ್ನು ಉತ್ತಮಪಡಿಸಿಕೊಳ್ಳಲು ಎರಡನೇ ಪರೀಕ್ಷೆ ಕೂಡ ತೆಗೆದುಕೊಳ್ಳುತ್ತಿದ್ದಾರೆ. ಅಂತಹವರಿಗೆ ಕಳೆದ ವರ್ಷದಂತೆ ಎರಡೂ ಪರೀಕ್ಷೆಗಳಲ್ಲಿ ಪಡೆದ ಅತ್ಯಧಿಕ ಅಂಕಗಳನ್ನು ಸಿಇಟಿ ರ‍್ಯಾಂಕ್‌ಗೆ ಪರಿಗಣಿಸಲಾಗುತ್ತದೆ ಎಂದು ತಿಳಿಸಿದ್ದಾರೆ. ದ್ವಿತೀಯ ಪಿಯುಸಿಯ ಎರಡೂ ಪರೀಕ್ಷೆಗಳ ಫಲಿತಾಂಶ ಬಂದ ನಂತರವೇ ಸಿಇಟಿ ಫಲಿತಾಂಶ ಪ್ರಕಟಿಸುವುದು. ಹೀಗಾಗಿ ಎರಡನೇ ಪರೀಕ್ಷೆಯ ಅಂಕಗಳನ್ನು ಪರಿಗಣಿಸುವುದಿಲ್ಲ ಎನ್ನುವುದು ಸುಳ್ಳು. ಇಂತಹ ವದಂತಿಗಳಿಗೆ ಕಿವಿ ಕೊಡಬೇಡಿ ಎಂದು ಹೇಳಿದ್ದಾರೆ.

ವೈದ್ಯರ ನಿರ್ಲಕ್ಷ್ಯಕ್ಕೆ ಗರ್ಭಿಣಿ, ಮಗು ಸಾವು: ಆರೋಪ

ಬೆಳಗಾವಿ: ನಗರದಲ್ಲಿರುವ ಬಿಮ್ಸ್ ವೈದ್ಯರ ನಿರ್ಲಕ್ಷ್ಯಕ್ಕೆ ಗರ್ಭಿಣಿ ಮೃತಪಟ್ಟಿರುವ ಗಂಭೀರ ಆರೋಪಕ್ಕೆ ಸಂಬಂಧಿಸಿದಂತೆ ಬಿಮ್ಸ್ ಜಿಲ್ಲಾಸ್ಪತ್ರೆಯಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.ಬೆಳಗಾವಿ ತಾಲೂಕಿನ ತುರಮರಿ ಗ್ರಾಮದ ಗರ್ಭಿಣಿ ಈರಮ್ಮ ಈರಪ್ಪ ಶಿಗೀಹಳ್ಳಿ (21) ಅವರನ್ನು ಏಪ್ರಿಲ್ 10ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಸರಿಯಾದ ಚಿಕಿತ್ಸೆ ನೀಡದ ಕಾರಣ ಈರಮ್ಮ ಹಾಗೂ ಹೊಟ್ಟೆಯಲ್ಲಿದ್ದ ಶಿಶು ಮೃತಪಟ್ಟಿದೆ ಎಂದು ಕುಟುಂಬಸ್ಥರು ಬಿಮ್ಸ್ ಆಸ್ಪತ್ರೆಯ ವೈದ್ಯರ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ. ಭಾನುವಾರ ಮಧ್ಯರಾತ್ರಿ ಸಹಿ ಪಡೆದು ದೇಹವನ್ನು ಕಳುಹಿಸಲು ಯತ್ನಿಸಿದ್ದಾಗಿ ತಿಳಿದು ಬಂದಿದೆ. ನಿರ್ಲಕ್ಷ್ಯ ವಹಿಸಿದ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕುಟುಂಬಸ್ಥರು ಒತ್ತಾಯಿಸಿದರು. ಎಪಿಎಂಸಿ ಠಾಣೆಯ ಪೊಲೀಸರು ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮಗು ಹಾಗೂ ತಾಯಿ ಆಸ್ಪತ್ರೆಯಲ್ಲಿ ಮೃತಪಟ್ಟ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಕೊಲೆ ಪ್ರಕರಣ: ಒಂಬತ್ತು ಆರೋಪಿಗಳ ಬಂಧನ

ಧಾರವಾಡ: ಯೂತ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಫೈರೋಜ್ ಖಾನ್ ಪಠಾಣ ಹತ್ಯೆ ಪ್ರಕರಣದ 9 ಆರೋಪಿಗಳನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಹು-ಧಾ ಪೊಲೀಸ್ ಆಯುಕ್ತ ಶಶಿಕುಮಾರ್ ಹೇಳಿದರು.ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ಮೊಹ್ಮದ್ ಷಾ, ಸೈಯದಗೌಸ್ ಜಾನಿಷಾ, ಫರವೇಜ್ ಆಲಂ ಮಹಲ್ದಾರ್, ಸಮ್ಮೀರ್ ಅಹ್ಮದ್ ಮಕಾಂದಾರ, ಸದ್ದಾಹುಸೇನ್ ನವಲಗುಂದ, ಖೈಫ್ ರೆಹಮಾನ್, ಅರ್ಬಾಜ್ ಹಂಚಿನಾಳ, ಸೋಹಿಲಖಾನ್ ಹಾಲಭಾವಿ, ಮಕ್ತುಂ ಸೊಗಲದ ಎಂಬುವರನ್ನು ಬಂಧಿಸಲಾಗಿದೆ ಎಂದರು. ಬಂಧಿತರಲ್ಲಿ ಕೆಲವರು ಅಪರಾಧ ಹಿನ್ನೆಲೆ ಹೊಂದಿದ್ದು, ಆರೋಪಿಗಳು ಹಲವು ದಿನಗಳಿಂದ ನಿಗಾವಹಿಸಿ, ಸ್ಕೆಚ್ ಹಾಕಿ ಸಾಕಷ್ಟು ಪೂರ್ವ ತಯಾರಿಯೊಂದಿಗೆ ಮನೆಯಲ್ಲಿ ಪುರುಷರು ಇಲ್ಲದ್ದನ್ನು ಗಮನಿಸಿ ಫೈರೋಜ್‌ನ ಹತ್ಯೆ ಮಾಡಿದ್ದಾಗಿ ತಿಳಿಸಿದರು. ಮೊಹ್ಮದ್ ಷಾ ಮತ್ತು ಫೈರೋಜ್ ಪಠಾಣ ನಡುವೆ ವೈಯಕ್ತಿಕವಾದ ದ್ವೇಷವಿತ್ತು. ರಿಯಲ್ ಎಸ್ಟೇಟ್ ಸೇರಿ ಕೆಲ ವಿಷಯದಲ್ಲಿ ಫೈರೋಜ್ ಕಿರಿಕಿರಿ ಮಾಡುತ್ತಿದ್ದು, ಹೀಗಾಗಿ ಮೊಹ್ಮದ್ ಷಾ, ಹತ್ಯೆ ಮಾಡಿದ್ದಾಗಿ ವಿಚಾರಣೆಯಲ್ಲಿ ಒಪ್ಪಿಕೊಂಡಿದ್ದಾಗಿ ಹೇಳಿದರು.

ಸೂಕ್ತ ಸ್ಥಳ ಗುರುತಿಸಲು ಅಧಿಕಾರಿಗಳಿಗೆ ಎಂ.ಬಿ.ಪಾಟೀಲ್ ಸೂಚನೆ

ಮಂಡ್ಯಕ್ಕೆ ಕೈಗಾರಿಕಾ ಹಬ್

ಬೆಂಗಳೂರು: ಕೇಂದ್ರ ಸರಕಾರ, ಮಂಡ್ಯ ಜಿಲ್ಲೆಯಲ್ಲಿ ಎಆರ್‌ಎಐ (ಆಟೊಮೋಟೋವ್ ರೀಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ) ಕೇಂದ್ರ ಸ್ಥಾಪನೆಗೆ ಆಸಕ್ತಿ ತೋರಿದ್ದು ಅದಕ್ಕೆ ನಿಗದಿಪಡಿಸಿರುವ 100 ಎಕರೆಗಿಂತ ಪರ್ಯಾಯವಾಗಿ ಕನಿಷ್ಠ 500 ಎಕರೆಯಲ್ಲಿ ಪೂರಕ ಕೈಗಾರಿಕಾಭಿವೃದ್ಧಿ ಪಾರ್ಕ್ ಸ್ಥಾಪನೆ ಬಗ್ಗೆ ಸೂಕ್ತ ಸ್ಥಳ ಹುಡುಕಲು ಸಚಿವ ಎಂ.ಬಿ.ಪಾಟೀಲ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸೋಮವಾರ ವಿಧಾನಸೌಧದಲ್ಲಿ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಅಧಿಕಾರಿಗಳ ಜತೆ ಈ ಬಗ್ಗೆ ವಿಸ್ತೃತ ಮಾತುಕತೆ ನಡೆಸಿದರು. ಕೇವಲ 100 ಎಕರೆಯಲ್ಲಿ ಎಆರ್‌ಎಐ ಕೇಂದ್ರ ಸ್ಥಾಪಿಸಿದರೆ ಅದು ಕೇವಲ ಒಂದು ಕೇಂದ್ರವಾಗಿ ಇರುತ್ತದೆ. ಅದರ ಬದಲು ಪೂರಕ ಆಟೊಮೊಬೈಲ್ ಕ್ಷೇತ್ರದ ಅಭಿವೃದ್ಧಿಗೆ ಬೇಕಾಗುವಂತೆ ಕನಿಷ್ಠ 500 ಎಕರೆಯಲ್ಲಿ ಆ ಕೇಂದ್ರವೂ ಸೇರಿದಂತೆ ಕೈಗಾರಿಕಾ ಹಬ್ ಅಭಿವೃದ್ಧಿಪಡಿಸುವುದು ಸೂಕ್ತ. ಇದನ್ನು ಕೇಂದ್ರ ಸಚಿವ ಕುಮಾರಸ್ವಾಮಿ ಕೂಡ ಒಪ್ಪಿದ್ದಾರೆ. ಈ ಉದ್ದೇಶಕ್ಕಾಗಿ ಮಂಡ್ಯ ಜಿಲ್ಲೆಯಲ್ಲಿ ಇರುವ ಸರಕಾರಿ/ಖಾಸಗಿ ಜಮೀನನ್ನು ಗುರುತಿಸುವಂತೆ ವಿಶೇಷ ಜಿಲ್ಲಾಧಿಕಾರಿಗೆ ಸೂಚಿಸಲಾಗಿದೆ ಎಂದು ಸಚಿವ ಪಾಟೀಲ ತಿಳಿಸಿದರು.

ಮಂಡ್ಯ ಜಿಲ್ಲೆಯಲ್ಲಿ ಕೈಗಾರಿಕಾ ಹಬ್ ಅಭಿವೃದ್ಧಿಪಡಿಸುವ ಚಿಂತನೆ ನಡೆದಿದ್ದು, ಪರ್ಯಾಯ ಜಾಗ ಹುಡುಕಲು ಸಲಹೆ ನೀಡಲಾಗಿದೆ. ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಅಂಟಿಕೊಂಡಿರುವ ಬೆಳ್ಳೂರಿನ ಬಳಿ 2021ರಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ 425 ಎಕರೆ ಸ್ವಾಧೀನ ಪಡಿಸಿಕೊಳ್ಳಲಾಗಿದ್ದು, ಅದಕ್ಕೆ ಪರಿಹಾರ ವಿತರಣೆ ಮಾತ್ರ ಬಾಕಿ ಇದೆ. ಈ ಜಾಗವನ್ನೂ ಪರಿಶೀಲಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ ಎಂದು ಸಚಿವ ಪಾಟೀಲ್ ತಿಳಿಸಿದರು.

ಇದಲ್ಲದೆ, ಮಂಡ್ಯ ಸಮೀಪದ ತೂಬಿನಕೆರೆ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಿರುವ ಪಾಂಡವಪುರ ಹಾಗೂ ಮಂಡ್ಯ ತಾಲೂಕುಗಳ ಅಂಚಿನಲ್ಲಿಯೂ ಕೈಗಾರಿಕಾ ಹಬ್ ಸ್ಥಾಪಿಸಬಹುದು ಎಂದು ಸಭೆಯಲ್ಲಿ ಹಾಜರಿದ್ದ ಕೆಲವರು ಸಲಹೆ ನೀಡಿದರು. ಅಧಿಕಾರಿಗಳ ವರದಿ ಬಳಿಕ ಮತ್ತೊಂದು ಸುತ್ತು ಸಭೆ ಸೇರಲು ಸಭೆಯಲ್ಲಿ ತೀರ್ಮಾನಿಸಲಾಯಿತು.



ಮಂಡ್ಯ ಸೇರಿದಂತೆ ರಾಜ್ಯದ ಹಲವು ಕಡೆ ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಿದ್ದೇವೆ. ಕೈಗಾರಿಕೆ ಸ್ಥಾಪನೆಗೆ ಅಗತ್ಯ ಭೂಮಿ ಹಾಗೂ ಮೂಲಸೌಕರ್ಯ ಇದಗಿಸುವ ಬಗ್ಗೆಯೂ ಚರ್ಚೆ ನಡೆಸಿದ್ದೇವೆ.
■ **ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ**

ತಾವು ವಿಧಾನಸೌಧಕ್ಕೆ ಬರುವುದು ದೈವೇಚ್ಛೆ

ಬೆಂಗಳೂರು: ತಾವು ಮರಳಿ ವಿಧಾನಸೌಧ ಪ್ರವೇಶ ಮಾಡುವ ಬಗ್ಗೆ ಜನರ ಆಶೀರ್ವಾದ ಹಾಗೂ ಭಗವಂತನ ಇಚ್ಚೆ ನಿರ್ಧರಿಸುತ್ತದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ. ಸೋಮವಾರ ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಎರಡು ವರ್ಷಗಳ ಬಳಿಕ ವಿಧಾನಸೌಧಕ್ಕೆ ಬಂದಿದ್ದೇನೆ. ಭಗವಂತ ಎಲ್ಲವನ್ನೂ ನಿಗದಿ ಮಾಡುತ್ತಾನೆ ಅವನ ಇಚ್ಚೆ ಪ್ರಕಾರ ಕೆಲಸ ಮಾಡಬೇಕಾಗುತ್ತದೆ. ರಾಜ್ಯದಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿಯಾಗಿದ್ದು ಇಬ್ಬರೂ ಜತೆಗೂಡಿ ಮತ್ತೆ ವಿಧಾನಸೌಧಕ್ಕೆ ಬರಲು ಪ್ರಯತ್ನಿಸುತ್ತೇವೆ ಎಂದರು.

18,430 ಕೋಟಿ ರೂ. ಬಂಡವಾಳ ಹೂಡಿಕೆ

15,032 ಜನರಿಗೆ ಉದ್ಯೋಗ: ಸಿಎಂ



ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯಲ್ಲಿ ಒಟ್ಟು 18,430.44 ಕೋಟಿ ರೂ. ಮೊತ್ತದ ಬಂಡವಾಳ ಹೂಡಿಕೆ ಯೋಜನೆಗಳಿಗೆ ಅನುಮೋದನೆ ನೀಡಿದ್ದು, ಸುಮಾರು 15,032 ಜನರಿಗೆ ಉದ್ಯೋಗ ಲಭ್ಯವಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿಗಳ ಕಚೇರಿಯಿಂದ ಮಾಧ್ಯಮ ಪ್ರಕಟಣೆ ಹೊರಡಿಸಿದ್ದು, 11 ಹೊಸ ಬಂಡವಾಳ ಹೂಡಿಕೆ ಪ್ರಸ್ತಾವನೆಗಳು ಹಾಗೂ 6 ಹೆಚ್ಚುವರಿ ಬಂಡವಾಳ/ ವಿಸ್ತರಣಾ ಹೂಡಿಕೆ ಪ್ರಸ್ತಾವನೆಗಳು ಸೇರಿದಂತೆ ಒಟ್ಟು 17 ಯೋಜನಾ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿದೆ ಎಂದು ಮಾಹಿತಿ ನೀಡಿದೆ.

11 ಹೊಸ ಪ್ರಸ್ತಾವನೆಗಳಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟು 14,906.9 ಕೋಟಿ ರೂ. ಬಂಡವಾಳ ಹೂಡಿಕೆಯಾಗಲಿದ್ದು, ಸುಮಾರು 13,050 ಉದ್ಯೋಗ ಸೃಷ್ಟಿಯಾಗಲಿದೆ. 6 ಹೆಚ್ಚುವರಿ ಬಂಡವಾಳ ಪ್ರಸ್ತಾವನೆಗಳಿಂದ ರಾಜ್ಯದ ವಿವಿಧ ಜಿಲ್ಲೆಗಳಿಗೆ ಒಟ್ಟು 3,523.54 ಕೋಟಿ ರೂ.ಗಳ ಬಂಡವಾಳ ಹೂಡಿಕೆಯಾಗಲಿದ್ದು, ಸುಮಾರು 1,982 ಉದ್ಯೋಗ ಸೃಷ್ಟಿಯಾಗುತ್ತಿರುವುದಾಗಿ ತಿಳಿಸಿದೆ.

ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಎಂ.ಬಿ.ಪಾಟೀಲ್, ಕೆ.ಜೆ.ಜಾರ್ಜ್, ಪ್ರಿಯಾಂಕ್ ಖರ್ಗೆ, ಚಲುವರಾಯಸ್ವಾಮಿ, ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಸೇರಿದಂತೆ ಇತರರಿದ್ದರು.

ವಚನಾನಂದ ಸ್ವಾಮೀಜಿ ಪೀಠದಿಂದ ಪದಚ್ಯುತಿ

ದಾವಣಗೆರೆ: ಜಿಲ್ಲೆಯ ಹರಿಹರ-ಶಿವಮೊಗ್ಗ ರಸ್ತೆಯಲ್ಲಿರುವ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ಸೋಮವಾರ ನಡೆದ ಧರ್ಮದರ್ಶಿಗಳ ಸಭೆಯಲ್ಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿಯನ್ನು ಪೀಠದಿಂದ ಪದಚ್ಯುತಿಗೊಳಿಸಲಾಗಿದೆ. ಮಠದೊಳಗೆ ಧರ್ಮದರ್ಶಿಗಳ ಸಭೆ ನಡೆಯುತ್ತಿದ್ದ ವೇಳೆಯೇ ಮಠದ ಹೊರಗೆ ಲೆಕ್ಕ ಕೊಡುವಂತೆ ಧರ್ಮದರ್ಶಿಗಳಿಗೆ ಆಗ್ರಹಿಸಿ ಭಕ್ತರು ಪ್ರತಿಭಟನೆ ಕೈಗೊಂಡಿದ್ದರಿಂದ ಮಠದ ಸುತ್ತಮುತ್ತ ಉದ್ವಿಗ್ನ ವಾತಾವರಣ ನಿರ್ಮಾಣವಾಯಿತು. ಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ.ಉಮಾಪತಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಟ್ರಸ್ಟ್ ಕಾರ್ಯದರ್ಶಿ ಕೆ.ಎಂ.ಜ್ಯೋತಿಪ್ರಕಾಶ್ ಸೇರಿದಂತೆ 12 ಮಂದಿ ಧರ್ಮದರ್ಶಿಗಳು ಪಾಲ್ಗೊಂಡಿದ್ದರು. ಒಟ್ಟು 15 ಮಂದಿ ಧರ್ಮದರ್ಶಿಗಳಲ್ಲಿ ಸ್ವಾಮೀಜಿ ಸಹಿತ ಮೂವರು ಧರ್ಮದರ್ಶಿಗಳು ಸಭೆಗೆ ಗೈರಾಗಿದ್ದರು. ಸಭೆಯಲ್ಲಿ ಭಾಗವಹಿಸಿದ್ದ ಧರ್ಮದರ್ಶಿಗಳು ಹಾಗೂ ಪಂಚಮಸಾಲಿ ಸಮಾಜದ ರಾಜ್ಯ ಸಮಿತಿಯ ಆಹ್ವಾನಿತರು ಸೇರಿ ಸರ್ವಾನುಮತದಿಂದ ವಚನಾನಂದ ಸ್ವಾಮೀಜಿಯನ್ನು ಪೀಠದಿಂದ ಉಚ್ಚಾಟಿಸುವ ತೀರ್ಮಾನ ತೆಗೆದುಕೊಂಡಿದ್ದಾರೆ.

ನನಗೆ ಸಭೆಯ ನೋಟಿಸ್ ಕೊಡದೆ ಧರ್ಮದರ್ಶಿಗಳು ಏಕಪಕ್ಷೀಯವಾಗಿ ನನ್ನನ್ನು ಪದಚ್ಯುತಿಗೊಳಿಸಿರುವುದು ಹಾಸ್ಯಾಸ್ಪದ. ಮೊದಲು ಪೀಠ ಆಗಿದೆ, ಆಮೇಲೆ ಟ್ರಸ್ಟ್ ರಚನೆಯಾಗಿದೆ. ತೀರ್ಮಾನವನ್ನು ಭಕ್ತರಿಗೇ ಬಿಡುತ್ತೇನೆ. ಟ್ರಸ್ಟ್ ಸುಪ್ರೀಂ ಅಲ್ಲ, ಭಕ್ತರೇ ಸುಪ್ರೀಂ. ಭಕ್ತರೊಂದಿಗೆ ಚರ್ಚಿಸಿ ಮುನ್ನಡೆಯುತ್ತೇನೆ.
■ **ವಚನಾನಂದ ಶ್ರೀ**

ಮಹಿಳೆಯರಿಗೆ ಶೇ.33 ಮೀಸಲಾತಿ: ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸ್ವಾಗತ

ದೇಶ ನಿರ್ಮಾಣಕ್ಕಾಗಿ ನಾರಿಗೆ ಜವಾಬ್ದಾರಿ

ಬೆಂಗಳೂರು: ನಾರಿ ಶಕ್ತಿ ವಂದನಾ ಅಧಿನಿಯಮ ಕೇವಲ ನಮ್ಮನ್ನು ಕುರ್ಚಿಯಲ್ಲಿ ಕೂರಿಸಲು ಅಲ್ಲ, ದೇಶ ನಿರ್ಮಾಣಕ್ಕಾಗಿ ಜವಾಬ್ದಾರಿಯನ್ನು ನಮ್ಮೆಲ್ಲರಿಗೂ ಪ್ರಧಾನಿಯವರು ನೀಡುತ್ತಿದ್ದಾರೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ನಾರಿ ಶಕ್ತಿ ಫೋರಂ ವತಿಯಿಂದ ನಾರಿ ಶಕ್ತಿ ವಂದನೆ ಅಧಿನಿಯಮ 2026 (ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ನೀಡುವ ಮಸೂದೆ) ಕುರಿತು ನಗರದ ಪುರಭವನದಲ್ಲಿ ಸೋಮವಾರ ಆಯೋಜಿಸಿದ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಹಿಳಾ ಮೀಸಲಾತಿಯು ಒಂದು ಚರಿತ್ರಾರ್ಹ ತೀರ್ಮಾನ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಈ ನಿಟ್ಟಿನಲ್ಲಿ ಕ್ರಮ ಕೈಗೊಂಡಿದ್ದು, ಇದರಿಂದ ಮಹಿಳೆಯರ ಜವಾಬ್ದಾರಿ ಹೆಚ್ಚಾಗುತ್ತಿದೆ. ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಅವರು ಗ್ರಾಮ ಪಂಚಾಯತ್‌ಗಳಲ್ಲಿ ಮೀಸಲಾತಿ ನೀಡಿದ್ದನ್ನೂ ತಿಳಿಸಿದರು.

ಐತಿಹಾಸಿಕ ಕ್ಷಣಕ್ಕಾಗಿ ಕಾತರ: ವಿಜಯೇಂದ್ರ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ಬಹುದಶಕಗಳ ಕನಸು ಇದೀಗ ಈಡೇರಲಿದೆ. ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಶೇ. 33 ಮೀಸಲಾತಿ ಕೊಡುವ ಐತಿಹಾಸಿಕ ಕ್ಷಣಕ್ಕೆ ನಾವೆಲ್ಲರೂ ಕಾತರದಿಂದ ಎದುರು ನೋಡುತ್ತಿದ್ದೇವೆ. ಭಾರತವು 2047ಕ್ಕೆ ಅಭಿವೃದ್ಧಿಶೀಲ ರಾಷ್ಟ್ರವಾಗಿ ಪರಿವರ್ತನೆಯಾಗಲು ದೇಶದಲ್ಲಿ ಶೇ. 50ಕ್ಕಿಂತ ಹೆಚ್ಚಿರುವ ಮಹಿಳೆಯರಿಗೂ ಸಾಮಾಜಿಕ ನ್ಯಾಯ ಕೊಡಬೇಕು. ದೇಶದ ಮಹಿಳೆಯರಿಗೂ ರಾಜಕೀಯ ಪ್ರಾತಿನಿಧ್ಯ ನೀಡಬೇಕೆಂಬ ಸದುದ್ದೇಶದೊಂದಿಗೆ ಮೀಸಲಾತಿ ನೀಡಲು ಮೋದಿ ಅವರು ಮುಂದಾಗಿದ್ದಾರೆ ಎಂದು ವಿಶ್ಲೇಷಿಸಿದರು.

ದಿಲ್ಲಿಯ ಇಂದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ ಅವರ ಭಾಷಣ ಆಲಿಸಿದಾಗ ಮಹಿಳೆಯರ ಕುರಿತು ಅವರು ಇಟ್ಟಿರುವ ವಿಶ್ವಾಸ ವ್ಯಕ್ತವಾಗಿದೆ. ದೇಶದ ಮಹಿಳೆಯರು ದೇಶ ಮುನ್ನಡೆಸುವ ಕೆಲಸದಲ್ಲೂ ಭಾಗವಹಿಸಬೇಕೆಂದು ಮೋದಿಯವರು ಆಶಿಸಿದ್ದಾರೆ ಎಂದು ತಿಳಿಸಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಸಾಧನೆಯನ್ನೂ ಮೆಚ್ಚಿಕೊಂಡರು.

ಗ್ರಾಮೀಣ ಕ್ಷೇತ್ರದಲ್ಲಿ ಹೆಣ್ಣು ಮಗುವನ್ನು ಶಾಪ ಎಂಬಂತೆ ನೋಡಲಾಗುತ್ತಿತ್ತು. ಅದು ಶಾಪವಲ್ಲ; ಭಾಗ್ಯಲಕ್ಷ್ಮಿ ಎಂದು ತಿಳಿಸಿ ಆಗಿನ ಮುಖ್ಯಮಂತ್ರಿ ಯಡಿಯೂರಪ್ಪ ವಿಶೇಷ ಯೋಜನೆ ತಂದರು. ಅಷ್ಟೇ ಅಲ್ಲದೆ, ಬೈಸಿಕಲ್ ನೀಡುವ ಯೋಜನೆ ಜಾರಿಗೊಳಿಸಿ ಸ್ವಾಭಿಮಾನ ಹೆಚ್ಚಿಸಿದರು. ಗ್ರಾಮೀಣ ಹೆಣ್ಮಕ್ಕಳು ಸ್ವಾಭಿಮಾನಿ ಬದುಕನ್ನು ಕಾಣುವಂತಾಗಲು ಹೈನುಗಾರಿಕೆಗೆ ಪ್ರೋತ್ಸಾಹ ನೀಡಿದ್ದರು ಎಂದು ಸ್ಮರಿಸಿದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಕ್ಯಾನ್ಸರ್ ತಜ್ಞೆ ಪದ್ಮಶ್ರೀ ಪುರಸ್ಕೃತೆ ಡಾ. ವಿಜಯಲಕ್ಷ್ಮಿ ದೇಶಮಾನೆ, ಪದ್ಮಶ್ರೀ ಪುರಸ್ಕೃತೆ ಡಾ. ಸುಶೀಲಮ್ಮ, ಹಿರಿಯ ವಕೀಲೆ ಲಕ್ಷ್ಮೀ ಅಯ್ಯಂಗಾರ್, ಅಂತಾರಾಷ್ಟ್ರೀಯ ಕ್ರೀಡಾಪಟು ಅಶ್ವಿನಿ ನಾಚಪ್ಪ, ಲೇಖಕಿ ಸೀನು ಜೋಸೆಫ್, ಚಲನಚಿತ್ರ ನಟಿ ಮಾಳವಿಕ ಅವಿನಾಶ್, ಎಸ್.ಡಬ್ಲ್ಯೂ.ಸಿ ಮಾಜಿ ಅಧ್ಯಕ್ಷೆ ಸಿ. ಮಂಜುಳಾ ಮಾತನಾಡಿ, ಕೇಂದ್ರ ಸರ್ಕಾರವು ಮಹಿಳಾ ಮೀಸಲಾತಿ ಜಾರಿಗೆ ಮುಂದಾದುದನ್ನು ಶ್ಲಾಘಿಸಿದರು.



ದೇಶದ ಮಹಿಳೆಯರಿಗೂ ರಾಜಕೀಯ ಪ್ರಾತಿನಿಧ್ಯ ನೀಡಬೇಕೆಂಬ ಸದುದ್ದೇಶದೊಂದಿಗೆ ಮೀಸಲಾತಿ ನೀಡಲು ಮೋದಿ ಅವರು ಮುಂದಾಗಿದ್ದಾರೆ.
■ **ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ**

ಹಿಂದಿನ ಪದ್ಧತಿ ಅನುಸರಣೆ | ಹೊಸಬರಿಗೆ ಅವಕಾಶ ಬೇಕು ಎಂಬುದೂ ಸರಿ: ಜಿ.ಪರಮೇಶ್ವರ

ಸಂಪುಟ ಪುನರ್‌ರಚನೆ ಹೈಕಮಾಂಡ್‌ಗೆ ಬಿಟ್ಟದ್ದು

ಬೆಂಗಳೂರು: ಸಂಪುಟದಲ್ಲಿ ಅವಕಾಶ ಕಲ್ಪಿಸಲು ಹೈಕಮಾಂಡ್, ಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷರು ಒಟ್ಟಾಗಿ ಕುಳಿತು ತೀರ್ಮಾನ ತೆಗೆದುಕೊಳ್ಳಬೇಕು. ಹಿಂದಿನಿಂದಲೂ ಇದೇ ಪದ್ಧತಿ ನಡೆದು ಬರುತ್ತಿದೆ. ಈಗಲೂ ಅದನ್ನೇ ಅನುಸರಿಸುತ್ತಾರೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ವಿಶ್ವಾಸ ವ್ಯಕ್ತಪಡಿಸಿದರು.



ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ, ಹಿರಿಯ ಶಾಸಕರ ದೆಹಲಿ ಪ್ರವಾಸವನ್ನು ಗ್ಯಾಂಬ್ಲಿಂಗ್ ಎಂದು ಕರೆಯುವುದು ಸರಿಯಲ್ಲ, ಕೆಲವರು ಬಹಿರಂಗವಾಗಿ ಸಚಿವ ಸ್ಥಾನಕ್ಕಾಗಿ ಈ ಬೇಡಿಕೆ ಸಲ್ಲಿಸುತ್ತಿರಬಹುದು. ಅರ್ಹತೆ ಇದೆ ಎಂದು ಕೇಳುವುದರಲ್ಲಿ ಯಾವುದೇ ತಪ್ಪಿಲ್ಲ. ಅವಕಾಶ ಸಿಕ್ಕವರಿಗೆ ಮತ್ತೆ ಸಿಗುತ್ತಿದೆ. ಹೊಸಬರಿಗೆ ಅವಕಾಶ ಬೇಕು ಎಂಬುದೂ ಕೂಡ ಸರಿ ಎಂದು ಪರಮೇಶ್ವರ್ ತಿಳಿಸಿದರು.

ಪ್ರತಿ ಬಾರಿ ಸಂಪುಟ ಪುನರ್ ರಚನೆ ಮಾಡುವಾಗಲೂ ಕೆಲವು ಹಿರಿಯರನ್ನು ಉಳಿಸಿಕೊಂಡು ಕಿರಿಯರಿಗೆ ಅವಕಾಶ ಕಲ್ಪಿಸುವುದು ಸಾಮಾನ್ಯ ಎಂದರು. ಕೆಪಿಸಿಸಿ ಅಧ್ಯಕ್ಷರು ಹಾಗೂ ಸರ್ಕಾರದ ನಾಯಕತ್ವ ಬದಲಾವಣೆಯಂತಹ ಮಹತ್ವದ ನಿರ್ಧಾರಗಳು ಹೈಕಮಾಂಡ್ ಮಟ್ಟದಲ್ಲೇ ತೆಗೆದುಕೊಳ್ಳಬೇಕು. ರಾಜ್ಯ ಮಟ್ಟದಲ್ಲಿ ಯಾರೂ ಏನೇ ಹೇಳಿಕೆ ನೀಡಿದರೂ ಅದು ಪ್ರಯೋಜನಕ್ಕೆ ಬರುವುದಿಲ್ಲ, ಹೈಕಮಾಂಡ್ ನಾಯಕರು ಎಲ್ಲವನ್ನೂ ಗಮನಿಸುತ್ತಿರುತ್ತದೆ. ಹೈಕಮಾಂಡ್ ಮೌನವಾಗಿಲ್ಲ, ಸೂಕ್ತ ಸಮಯದಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷರಾಗುವ ಚರ್ಚೆ ನಡೆದಿಲ್ಲ: ತಮ್ಮನ್ನು ಮತ್ತೊಂದು ಅವಧಿಗೆ ಕೆಪಿಸಿಸಿ ಅಧ್ಯಕ್ಷರನ್ನಾಗಿ ಮಾಡುವ ಯಾವುದೇ ಚರ್ಚೆಗಳು ನಡೆಯುತ್ತಿಲ್ಲ, ಶಾಸಕರು ದೆಹಲಿಗೆ ಹೋಗಿರುವುದು ಸಂಪುಟ ಪುನರ್ ರಚನೆಗೆ ಒತ್ತಡ ಹೇರುವ ಸಲುವಾಗಿ, ಈ ಸಂದರ್ಭದಲ್ಲಿ ಪರಮೇಶ್ವರ್ ಅನುಭವಿ ಇದ್ದಾರೆ. ಅವರಿಗೆ ಮತ್ತೊಮ್ಮೆ ಅಧ್ಯಕ್ಷ ಸ್ಥಾನ ವಹಿಸಬೇಕು ಎಂಬ ಯಾವ ಪ್ರಸ್ತಾವ ಇಲ್ಲ, ಯಾರಿಂದ ಯಾವ ಮಾಹಿತಿಯನ್ನು ತೆಗೆದುಕೊಳ್ಳಬೇಕು ಎಂಬುದು ಹೈಕಮಾಂಡ್‌ಗೆ ಗೊತ್ತಿದೆ ಎಂದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಅಬ್ದುಲ್ ಜಬ್ಬಾರ್ ಟಿಕೆಟ್ ಕೇಳಿದ್ದರು, ಅವರಿಗೆ ಸಿಗಲಿಲ್ಲ, ಹೀಗಾಗಿ ಅವರು ಚುನಾವಣಾ ಪ್ರಚಾರದಲ್ಲಿ ಹೆಚ್ಚು ಭಾಗವಹಿಸಲಿಲ್ಲ. ನಂತರದ ಬೆಳವಣಿಗೆಯಲ್ಲಿ ಕೆಪಿಸಿಸಿಯ ಅಲ್ಪಸಂಖ್ಯಾತರ ಘಟಕ ಅಧ್ಯಕ್ಷ ಸ್ಥಾನಕ್ಕೆ ಜಬ್ಬಾರ್ ರಾಜೀನಾಮೆ ನೀಡಿದ್ದಾರೆ. ಮುಸ್ಲಿಂ ಮುಖಂಡರ ನಡುವೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಚರ್ಚೆಗಳಾಗುತ್ತಿವೆ. ಕೆಪಿಸಿಸಿ ಅಧ್ಯಕ್ಷರು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದರು.

ಜಮೀರ್ ಮನವೊಲಿಸಿದ್ದು ನಾನೇ: ಪರಮೇಶ್ವರ

ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರಿಗೆ ನಾನೇ ದೂರವಾಣಿಯಲ್ಲಿ ಮಾತನಾಡಿ, ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಬಂದು ಪ್ರಚಾರ ಮಾಡುವಂತೆ ಸಲಹೆ ನೀಡಿದ್ದೆ. ಕೇರಳದಲ್ಲಿ ಕೆ.ಸಿ.ವೇಣುಗೋಪಾಲ್ ಅವರ ಸೂಚನೆ ಮೇರೆಗೆ ಪ್ರಚಾರ ಮಾಡುತ್ತಿದ್ದೇನೆ. ಅವರು ಅನುಮತಿ ಕೊಟ್ಟರೆ ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಬರುತ್ತೇನೆ ಎಂದಿದ್ದರು. ಮುಖ್ಯಮಂತ್ರಿಯವರು ಕೂಡ ನನ್ನ ಎದುರಿಗೇ ಜಮೀರ್ ಅವರಿಗೆ ಕರೆ ಮಾಡಿ ಎರಡು ಕ್ಷೇತ್ರಗಳಲ್ಲೂ ಒಂದು ದಿನವಾದರೂ ಪ್ರಚಾರ ಮಾಡುವಂತೆ ಸೂಚಿಸಿದರು. ಅದರಂತೆ ಜಮೀರ್ ಎರಡು ದಿನ ಪ್ರಚಾರ ಮಾಡಿದ್ದಾರೆ ಎಂದು ಸಮರ್ಥಿಸಿಕೊಂಡರು.

ಮಹಿಳಾ ಮೀಸಲು ವಿದೇಯಕ ಪದ್ಮಶ್ರೀ ಸುಶೀಲಮ್ಮ ಸ್ವಾಗತ

ಬೆಂಗಳೂರು: ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ನೀಡಬೇಕು ಎಂದು ಹಲವು ವರ್ಷಗಳಿಂದ ಹೋರಾಟ ಮಾಡಿದ್ದೇವು, ಇದೀಗ ಪ್ರಧಾನಿ ನರೇಂದ್ರ ಮೋದಿ ಅವರ ಅಧಿಕಾರಾವಧಿಯಲ್ಲಿ ಸಾಕಾರವಾಗುತ್ತಿದೆ. ಇದು ದೇಶದ ಎಲ್ಲ ಮಹಿಳೆಯರಿಗೆ ಖುಷಿಯ ವಿಷಯ ಎಂದು ಸುಮಂಗಲಿ ಸೇವಾಶ್ರಮದ ಸ್ಥಾಪಕಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಡಾ.ಎಸ್.ಜಿ.ಸುಶೀಲಮ್ಮ ಹೇಳಿದರು.



ಆರ್.ಟಿ.ನಗರದ ಸುಮಂಗಲಿ ಸೇವಾ ಆಶ್ರಮದಲ್ಲಿ ಹಮ್ಮಿಕೊಂಡ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್ಲಾ ರಂಗದಲ್ಲಿ ಮಹಿಳೆಯರು ಸಾಧನೆ ಮಾಡಿದ್ದಾರೆ. ಇದರೊಂದಿಗೆ ರಾಜಕೀಯದಲ್ಲಿ ಹೆಚ್ಚು ಮೀಸಲು ಸಿಕ್ಕರೆ ಅವರಿಗೆ ಶಕ್ತಿ ಸಿಗಲಿದೆ. ಹಾಗಾಗಿ ನಾವು ಹಲವು ವರ್ಷಗಳಿಂದ ಹೋರಾಟ ಮಾಡುತ್ತಿದ್ದೇವೆ. ಇದೀಗ ಪ್ರಧಾನಿ ನರೇಂದ್ರ ಮೋದಿ ಅವರ ಅಧಿಕಾರಾವಧಿಯಲ್ಲಿ ಸಾಕಾರವಾಗುತ್ತಿದೆ ಎಂದರು.

ಮಹಿಳೆಯರಿಗೆ ಇಡೀ ಜಗತ್ತು ಆಳುವ ಶಕ್ತಿ ಇದೆ. ಕುಟುಂಬದಲ್ಲಿ ಸೌಟು ಹಿಡಿದವಳು ಎಂದು ಮೂಲೆಗುಂಪು ಮಾಡಿದಾಗ ನೋವಾಗುತ್ತಿತ್ತು. ಆದರೆ ನಾರಿಶಕ್ತಿ ದೊಡ್ಡದು, ಹಳ್ಳಿಯಿಂದ ರಾಷ್ಟ್ರಮಟ್ಟದವರೆಗೆ ಅವರು ಸಾಧಿಸಿ ತೋರಿಸಿದಾರೆ. ವಿಜ್ಞಾನಿಯಾಗಿ, ನ್ಯಾಯಾಧೀಶೆಯಾಗಿ, ಪೈಲೆಟ್ ಆಗಿ ದುಡಿಮೆ ಮಾಡುತ್ತಿದ್ದಾರೆ. ಬುಡಕಟ್ಟು ಜನರೂ ಪ್ರಸ್ತುತ ಮುಂದೆ ಬಂದಿದ್ದಾರೆ.

ಕಾಡು ಜನರೂ ಮೈಕ್ ಹಿಡಿದು ಮಾತನಾಡಲು ಆರಂಭಿಸಿದ್ದಾರೆ. ಇವರ ಕಲ್ಯಾಣಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಜಾರಿ ಮಾಡಿದ ಯೋಜನೆಗಳೇ ಸಾಕಷ್ಟು ಇವೆ ಎಂದರು.

Shri Sangam Sahakari Sakkare Karkhane Nyt., HidkalDam - 591107

Tal: Hukkeri, Dist: Belgaum, Karnataka State
E-mail: sangamsugars@yahoo.com
Ref No: SSSSKN/Tender/2026-27/22 Date: 13-04-2026

SHORT TERM TENDER NOTIFICATION FOR SALE OF
1) Loose Bagasse of 2025-26 Season - 1500 MT's

Interested parties may send their sealed offers.

Terms & Conditions:

- You have to pay non refundable Tender fee Rs. 2500.00.
- EMD @ 5% on quoted price to be submitted along with tender by DD in favour of Shri Sangam SSKN Hidakal Dam payable at Hukkeri/Belagavi.
- Last date for receipt of tender is on or before 22-04-2026 till 05.00 PM.
- Opening of Tender and negotiation of Tender will be intimate you separately.
- The entire value of allotted quantity of Molasses should be remitted within 3 days from the date of acceptance tender.
- The quantity indicated is tentative; it may increase or decrease as the case may be.
- Karakhane reserves the right to accept or reject any tender without assigning any reason.

FOR DETAILS CONTACT:
Chairman: 9538589499, Managing Director: 8884012838
Chief Chemist: 9113529926, Sales: 6366226745

Sd/- Managing Director Sd/- Chairman

CHANGE OF NAME

I, **SAFA NAAZ HANIF BAPUJI** (Old Name) Resident of At Muslimkeri, Post: Herangadi, Tq: Honnavar, Dist: Uttara Kannada - 581334, Karnataka State, have changed my name as **SAFA NAAZ MOHAMMED FAIZAN KATTEMANE** (New Name) for all purposes affidavit Dtd.: 11-04-2026 sworn before notary **S. G. Hegde**.

ಶಿವಮೊಗ್ಗ ಮೃಗಾಲಯ, ಹುಲಿ–ಸಿಂಹಧಾಮ, ಶಿವಮೊಗ್ಗ

No.ED/TLS/Job Notification/2026-27 ದಿನಾಂಕ: 09.04.2026

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಶಿವಮೊಗ್ಗ ಮೃಗಾಲಯ, ಹುಲಿ–ಸಿಂಹಧಾಮ, ಶಿವಮೊಗ್ಗದಲ್ಲಿ ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸಲು ಒಬ್ಬ ಪಶು ವೈದ್ಯಾಧಿಕಾರಿ (B.V.Sc. & A.H or M.V.Sc (Clinicals)) ರವರನ್ನು Technical & HR online interview ಮೂಲಕ ನೇಮಕಾತಿ ಮಾಡಿಕೊಳ್ಳಲಾಗುವುದು. ಸದರಿ ನೇಮಕಾತಿಯ ಸಂದರ್ಶನವನ್ನು ದಿನಾಂಕ:21.04.2026ರ ಬೆಳಗ್ಗೆ:11.00 ಘಂಟೆಗೆ ಆನ್‌ಲೈನ್ ಮೂಲಕ ನಿಗದಿಪಡಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೃಗಾಲಯದ ವೆಬ್‌ಸೈಟ್ ಆದ www.shivamoggazoo.com ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ ಹಾಗೂ ಯಾವುದೇ ಸ್ಪಷ್ಟೀಕರಣಕ್ಕಾಗಿ 6362443098 ಗೆ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕಾರ್ಯ ನಿರ್ವಾಹಕ ನಿರ್ದೇಶಕರು, ಶಿವಮೊಗ್ಗ ಮೃಗಾಲಯ, ಹುಲಿ–ಸಿಂಹಧಾಮ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್ಎಂಸಿಎ/ಶಿ/26–27/72/04/82

ಮಹಾನಗರ ಪಾಲಿಕೆ, ಕಲಬುರಗಿ

ದೂ.: 08472/ 278675 ಫ್ಯಾಕ್ಸ್ : 08472 / 260776 ಇ ಮೇಲ್: itstaff_ulb_gulbarga@yahoo.com

No: KMP/TS-01/CF/01/2026-27 ದಿನಾಂಕ: 09.04.2026

:: ಇ–ಪ್ರೊಕ್ಯುರಮೆಂಟ್ ಟೆಂಡರ ಪ್ರಕಟಣೆ ::

1) ಕಾಮಗಾರಿಯ ವಿವರ: Hiring of 40 Outsourced Gardeners for the maintenance of Public gardens under Kalaburagi Mahanagar Palike, 2) ಲೆಕ್ಕ ಶೀರ್ಷಿಕೆ: Corporation Fund, 3) ಟೆಂಡರಿಗಿಟ್ಟ ಮೊತ್ತ : 1,00,00,000.00, 4) ಗುತ್ತಿಗೆದಾರರ ಅರ್ಹತೆ: As per KPPP Portal, 5) ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ : **18–04–2026 ಬೆಳಗ್ಗೆ 11.00,** 6) ಟೆಂಡರ ಸಲ್ಲಿಸಲು ಅಂತಿಮ ದಿನಾಂಕ: **23.04.2026 ಸಾಯಂಕಾಲ 4:30 ಗಂಟೆಯವರೆಗೆ,** 7) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ: **24–04–2026 ಸಾಯಂಕಾಲ 4:35 ಗಂಟೆಯವರೆಗೆ,** 8) ಟೆಂಡರ ತೆರೆಯುವ ದಿನಾಂಕ ಆರ್ಥಿಕ : **27–04–2026 ಬೆಳಿಗ್ಗೆ 11:30 ಗಂಟೆಗೆ,** 9) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ : ಟೆಂಡರ ಫಾರಂ ಬೆಲೆ ರೂ. As per e-portal EMD ಮೊತ್ತ ರೂ. 2,00,000.00, 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಮತ್ತು ಮೋ. ನಂ. : ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ : 8867645422, 11) ಅಂತರಜಾಲ ತಾಣದ ವಿಳಾಸ : www.kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/29/ಕೆ.ಎಸ್.ಎಂ.ಸಿ.&ಎ/2025–26

ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ

ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.
ದೂರವಾಣಿ: 080–22255210

ಸಂಖ್ಯೆ: ಕಾಅ/ಕವಿ.1/ಎಇ–3/2026–27/02 ದಿನಾಂಕ: 10.04.2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

ಮೇಲ್ಕಂಡ ಇಲಾಖೆಯು ಸೂಚಿತ ಸ್ಥಳಗಳಲ್ಲಿ 16 ಸಂಖ್ಯೆಗಳ ಸಾರ್ವಜನಿಕ ಶೌಚಾಲಯಗಳ ದುರಸ್ತಿ ಹಾಗೂ ನವೀಕರಣ, ಪಾರ್ಟೀಷನ್ ಕಾಮಗಾರಿ, ಕಾರ್ ಪಾರ್ಕಿಂಗ್ ಶೆಡ್‌ನ ನವೀಕರಣ, ಫ್ಯಾಬ್ರಿಕೇಷನ್, ಫೈರ್ ಫೈಟಿಂಗ್ ಸಿಸ್ಟಮ್‌ನ ಸುಧಾರಣೆ, ರೀಟೈನಿಂಗ್ ವಾಲ್ ನಿರ್ಮಾಣಕ್ಕಾಗಿ ಪಿಎಂಸಿ (ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್‌ಸಲ್ಟೆಂಟ್) ಸೇವೆಗಳನ್ನು ಒದಗಿಸುವುದು ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ಒಟ್ಟು **03 ಕಾಮಗಾರಿಗಳಿಗೆ** ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (**https://kppp.karnataka.gov.in**) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಗಿಟ್ಟ ಅಂದಾಜು ಮೊತ್ತ: **ಕನಿಷ್ಠ ರೂ.6.52 ಲಕ್ಷಗಳು, ಗರಿಷ್ಠ ರೂ.281.43 ಲಕ್ಷಗಳು.** ಇಎಂಡಿ: **ಕನಿಷ್ಠ ರೂ.16,400/–, ಗರಿಷ್ಠ ರೂ.4,22,500/–** ಪ್ರತೀ ಕಾಮಗಾರಿಯ ಕಾಲಾವಧಿ: **3 ರಿಂದ 9 ತಿಂಗಳು (ಮಳೆಗಾಲ ಸೇರಿದಂತೆ).** ಕಾಮಗಾರಿಯ ದಸ್ತಾವೇಜು ಬೆಲೆ: ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ **ದಿನಾಂಕ: 17.04.2026, ಸಂಜೆ 5.00 ಗಂಟೆಯೊಳಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಮಗಾರಿಯ ಸಂಕ್ಷಿಪ್ತ ವಿವರ, ಇಂಡೆಂಟ್ ಸಂಖ್ಯೆಗಳು, ಅಂದಾಜು ಮೊತ್ತ, ಇಎಂಡಿ ಹಾಗೂ ಪಾವತಿಸುವ ವಿಧಾನ, ಕಾಲಾವಧಿ, ಮೀಸಲಾತಿ ಮತ್ತು ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮೂಲಕ ಪಡೆಯಬಹುದು.

ವಾಸಸಂಇ/ಉವಿ–ಸಿ.ಪಿ/160/ಕೆಎಸ್ಎಂಸಿಎ/2026–27 **ಸಹಿ/–ಕಾರ್ಯಪಾಲಕ ಅಭಿಯಂತರರು.**

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರವರ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ,
ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ.1, ಮುಂಡರಗಿ, ಗದಗ ಜಿಲ್ಲೆ.
Ph. No. 08371-295016 e-mail: eeslis1mdg@gmail.com

ಟೆಂಡರ್ ಪ್ರಕಟಣೆ
(ONLY THROUGH "KPP-Procurement" SYSTEM)

ಉಲ್ಲೇಖ: 1) ಈ ಕಚೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: 31/2026–27 ದಿನಾಂಕ: 08.04.2026

ಸಿಂಗಟಾಲೂರು ಏತ ನೀರಾವರಿ ಯೋಜನೆ ಎಡದಂಡೆ ಭಾಗದ ಮುಂಡರಗಿ ಶಾಖಾ ಕಾಲುವೆ ವ್ಯಾಪ್ತಿಯಲ್ಲಿನ ಅಚ್ಚುಕಟ್ಟು ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ (Micro Irrigation) ಕಲ್ಪಿಸುವ ಕಾಮಗಾರಿಗೆ ಯೋಜನಾ ವರದಿ/ಅಂದಾಜು ಪಟ್ಟಿಗಳನ್ನು ತಯಾರಿಸಲು Consultancy Service ಪಡೆಯುವ ಕಾಮಗಾರಿಗೆ ಉಲ್ಲೇಖ(1)ರ ಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿರುವಂತೆ, ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಪಿಪಿ–ಪೋರ್ಟಲ್ ಮೂಲಕ Work Indent No.4347 ರಂತೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅದರಂತೆ, ಸದರಿ ಕಾಮಗಾರಿಯ ಟೆಂಡರ್‌ಗೆ ಇಟ್ಟ ಮೊತ್ತವು (ಜಿ.ಎಸ್.ಟಿ. ಸೇರಿ) **ರೂ.48.25 ಲಕ್ಷ** ಆಗಿರುತ್ತದೆ ಹಾಗೂ ಈ ಕಾಮಗಾರಿಗೆ ಇ.ಎಂ.ಡಿ. ಮೊತ್ತವು **ರೂ.96500/–** ಆಗಿರುತ್ತದೆ.

ಇನ್ನುಳಿದಂತೆ, ಸದರಿ ಟೆಂಡರಿಗೆ ಸಂಬಂಧಿಸಿದ ಷರತ್ತು/ ನಿಯಮಾವಳಿಗಳ ಮಾಹಿತಿಯನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ **ದಿನಾಂಕ: 08.04.2026**ರ ನಂತರ "**https://kppp. karnataka.gov.in**" ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಯ ಟೆಂಡರ್‌ಗೆ ಬಿಡ್ಡನ್ನು ಸಲ್ಲಿಸಲು ಕೊನೆಯ **ದಿನಾಂಕ: 27.04.2026** ಎಂದು ಮತ್ತು ಟೆಂಡರ್ ತಾಂತ್ರಿಕ ಬಿಡ್ಡನ್ನು ತೆರೆಯುವ **ದಿನಾಂಕ: 28.04.2026** ಎಂದು ನಿಗದಿಪಡಿಸಿದೆ.

ಇನ್ನಿತರೆ ಹೆಚ್ಚಿನ ಮಾಹಿತಿಯನ್ನು **KPP-Procurement Helpdesk Phone No's: 080-46010000, 080-68948777, 09240214000 & 09240214001** ಸಂಪರ್ಕಿಸಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/–
ಕಾರ್ಯಪಾಲಕ ಅಭಿಯಂತರರು,
ಸಿಂಗಟಾಲೂರು ಏತ ನೀರಾವರಿ ಯೋಜನೆ,
ನಂ. 1 ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ,
ಮುಂಡರಗಿ, ಗದಗ ಜಿಲ್ಲೆ.

ವಾ.ಸಾ.ಸಂ.ಇ/ಕೊಪ್ಪಳ/21/
ದೇಶಪಾಂಡೆಪಬ್ಲಿಸಿಟಿ/2026–27

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ ,ಲೋಕೋಪಯೋಗಿ ಇಲಾಖೆ,
ಕೋಲಾರ ವಿಭಾಗ, ಕೋಲಾರ – 563101.

e-mail : eepwdkolar07@gmail.com, website: www.kpwd.gov.in, ದೂರವಾಣಿ ಸಂಖ್ಯೆ: 08152–222022

ಇ–ಟೆಂಡರ್ ಪ್ರಕಟಣೆ– ಕೆಡಬ್ಲ್ಯು – 2 &4 ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ– 02/2026–27 ದಿನಾಂಕ: 09.04.2026

ಕೋಲಾರ ಜಿಲ್ಲೆ ಲೋಕೋಪಯೋಗಿ ಇಲಾಖೆ ಬಂಗಾರಪೇಟೆ ಹಾಗೂ ಕೆ.ಜಿ.ಎಫ್ ತಾಲ್ಲೂಕು ವ್ಯಾಪ್ತಿಯಲ್ಲಿ **ಲೆಕ್ಕಶೀರ್ಷಿಕೆ: 4059–ಎಸ್.ಸಿ.ಪಿ ಮುಖ್ಯ ಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ, 5054–ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ, 8443–ಠೇವಣಿ ವಂತಿಗೆ** ಅಡಿಯಲ್ಲಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಅಂದಾಜು ಮೊತ್ತ: ಕನಿಷ್ಠ ರೂ.30.00 ಲಕ್ಷ ಮತ್ತು ಗರಿಷ್ಠ: 250.00 ಲಕ್ಷ **ಇ.ಎಂ.ಡಿ ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ನಮೂದಿಸಿರುತ್ತಾರೆ, ಕಾಲಾವಧಿ : 3–9 ತಿಂಗಳು ನಿರ್ವಹಿಸಲು ಕೆಡಬ್ಲ್ಯು–2&4** ರ ಕಾಮಗಾರಿಗೆ **ಅರ್ಹ ನೊಂದಾಯಿತ ಸಿವಿಲ್ ಗುತ್ತಿಗೆದಾರರಿಗೆ** ದ್ವಿ ಲಕೋಟೆ ಪದ್ಧತಿಯಲ್ಲಿ ಕೆಪಿಪಿಪಿ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು **ಕೆಡಬ್ಲ್ಯು–2&4** ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆಪಿಪಿ ಪೋರ್ಟಲ್ **(Viz., http://kppp.karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ನಿಗದಿತ ದಿನಾಂಕಗಳ ವಿವರ	(ಕ್ರಮ ಸಂಖ್ಯೆ 03 ರ ಕಾಮಗಾರಿಗೆ) ದ್ವಿ ಲಕೋಟೆ ಪದ್ಧತಿ	(ಕ್ರಮಸಂಖ್ಯೆ 1 ರಿಂದ 2ರ ಕಾಮಗಾರಿಗಳಿಗೆ) ಏಕ ಲಕೋಟೆ ಪದ್ಧತಿ
1. ವಿಚಾರಣೆಗೆ ಕೊನೆಯ ದಿನಾಂಕ:	ದಿನಾಂಕಃ 17.04.2026 ರಂದು 17.30 ಗಂಟೆ ವರೆಗೆ	ದಿನಾಂಕಃ 22.04.2026 ರಂದು 17.30 ಗಂಟೆ ವರೆಗೆ
2. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ (ಆನ್‌ಲೈನ್ ಮೂಲಕ)	ದಿನಾಂಕಃ 18.04.2026 ರಂದು 16.00 ಗಂಟೆ ವರೆಗೆ	ದಿನಾಂಕಃ 23.04.2026 ರಂದು 16.00 ಗಂಟೆ ವರೆಗೆ
3. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕಃ	ದಿನಾಂಕಃ 21.04.2026 ರಂದು 11.00 ಗಂಟೆಯ ನಂತರ	ದಿನಾಂಕಃ 24.04.2026 ರಂದು 11.00 ಗಂಟೆಯ ನಂತರ
4. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕಃ	ದಿನಾಂಕಃ 27.04.2026 ರಂದು 11.00 ಗಂಟೆಯ ನಂತರ	ದಿನಾಂಕಃ 29.04.2026 ರಂದು 11.00 ಗಂಟೆಯ ನಂತರ

ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕೆಪಿಪಿಪಿ ಪೋರ್ಟಲ್‌ನಲ್ಲಿ **(http://kppp.karnataka.gov.in)** ನಲ್ಲಿ ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು **ವಿಶೇಷ ಸೂಚನೆ:** ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋ.ಇ. ಕೋಲಾರ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:22/ಕೆಎಸ್ಎಂಸಿಎ/2026–27

CHANGE OF NAME

I, **VARSHA NANDODKAR** (Old Name) Resident of 4-A/6, Vinay Nivas Gyanba Garden Near Canara Bank Narayanapur, Dharwad - 580001, have changed my name as **VARSHA VINAYKUMAR NANDODKAR** (New Name) henceforth I will be called and recognized by new name for all future purposes, dated: 13/04/2026.

ಲೋಕೋಪಯೋಗಿ ಇಲಾಖೆ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.
ದೂ.: 08539 – 222318, ಇ–ಮೇಲ್: eepwdkpl2@gmail.com

ಸಂಖ್ಯೆ : ಕಾ.ನಿ.ಇಂ./ಲೋ.ಇ./ವಿ.ಕೊ./ಟೆಂ/ಕೆ.ಡಬ್ಲ್ಯೂ–4/2026–27/115 ದಿನಾಂಕ : 13–04–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಲೆಕ್ಕ ಶೀರ್ಷಿಕೆ : 2022–23 ನೇ ಸಾಲಿನ ಲೆಕ್ಕ ಶೀರ್ಷಿಕೆ : ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಮ್ಯಾಕ್ರೋ ಸಾಮಾಜಿಕೇತರ ಎಸ್.ಡಿ.ಪಿ. ಮತ್ತು 2025–26 ನೇ ಸಾಲಿನ 8443–ಠೇವಣಿ ವಂತಿಕೆ ಅಡಿಗಳಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999 – 2000 ರ ಪ್ರಕಾರ ಪಾರದರ್ಶಕತೆ ಆಕ್ಟ 2000 ರ ನಿಯಮದಂತೆ, ಸ್ಟಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು, ಕೆ.ಪಿ.ಪಿ.ಪಿ. ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು. ಒಟ್ಟು 2 ಕಾಮಗಾರಿಗಳಿಗೆ (ವರ್ಕ ಇಂಡೆಂಟ್ ಸಂಖ್ಯೆ : 33710 & 32982) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ : 22–04–2026 ಸಮಯ 16.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 24–04–2026 ಸಮಯ 11.00 ಗಂಟೆ ಆರ್ಥಿಕ ಬಿಡ್ ತೆರೆಯುವ ದಿನಾಂಕ : 29–04–2026 ಸಮಯ 11.30 ಗಂಟೆ ಕನಿಷ್ಟ ಅಂದಾಜು ಮೊತ್ತ ರೂ. 340.00 ಲಕ್ಷಗಳು ಹಾಗೂ ಗರಿಷ್ಟ ಅಂದಾಜು ಮೊತ್ತ ರೂ. 382.00 ಲಕ್ಷಗಳು ಇರುತ್ತದೆ.

ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ. ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ / ಸ್ಪಷ್ಟೀಕರಣ, ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರು,
ಲೋ.ಇ. ವಿಭಾಗ, ಕೊಪ್ಪಳ.

ಡಿಐಪಿಆರ್/ಕೊಪ್ಪಳ/20/ಮಣಿಪಾಲ್/2026–27

ಕ್ರಿಮಿ ನಂ. : 39/2026

ಮಾನ್ಯ 1ನೇ ಅಧಿಕ ಕಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಜೆ. ಎಮ್ ಎಫ್ ಸಿ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರ : **ಶ್ರೀ ಶಂಕರಪ್ಪ ತಂದೆ ಕಾಳಪ್ಪ ಬಡಿಗೇರ**
ವಿರುದ್ಧ
ಎದುರುಗಾರರು : **ಮಾನ್ಯ ಸಹಾಯಕ ಆಯುಕ್ತರು, ವ ಜನನ-ಮರಣ ನೋಂದಣಿ ಅಧಿಕಾರಿಗಳು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ**
ವಲಯ ಕಚೇರಿ ನಂ. 05, ವಿದ್ಯಾನಗರ, ಹುಬ್ಬಳ್ಳಿ

ನೋಟಿಸು

ಮೇಲ್ಕಂಡ ಪ್ರಕರಣವನ್ನು ಅರ್ಜಿದಾರನು ಮೃತ ತನ್ನ ತಾಯಿಯಾದ **ಶ್ರೀಮತಿ ದ್ಯಾಮವ್ವ ಕೋಂ. ಕಾಳಪ್ಪ ಬಡಿಗೇರ** ಇವರು ದಿನಾಂಕ: **10.05.1952** ರಂದು ಹುಬ್ಬಳ್ಳಿ ಶಹರ ದುರ್ಗದ ಓಣಿ, ಉಣಕಲ್ ಗ್ರಾಮದಲ್ಲಿ ಪೋತಿಯಾಗಿದ್ದು ಇರುತ್ತದೆ ಅಂತಾ, ಸದರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಈ ಅರ್ಜಿಯನ್ನು ದಾಖಲಿಸಿರುತ್ತಾರೆ.

ಸದರ ಮರಣ ದಾಖಲಾತಿ ಕುರಿತು ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತ ಸಂಬಂಧ ತಂಟೆ ತಕರಾರು ವಗೈರೆ ಇದ್ದಲ್ಲಿ ಅವರ ಹಾಜರಾತಿಗಾಗಿ ತಾ: **03.06.2026** ರಂದು ಬೆಳಗಿನ **11.00** ಗಂಟೆಗೆ ಮುದ್ದತ್ತು ನೇಮಿಸಿದ್ದು ಆ ದಿವಸ ಸದರಿಯವರು ತಾವಾಗಲಿ ತಮ್ಮ ವಕೀಲರ ಮುಖಾಂತರ ಹಾಜರಾಗತಕ್ಕದ್ದು ತಪ್ಪಿದಲ್ಲಿ ಪ್ರಕರಣವನ್ನು ನಿರ್ಣಯಿಸಲಾಗುವದು.

ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ 2026 ರ 04 ನೇ ತಿಂಗಳಿನ 07 ನೇ ಈ ದಿನದಂದು ಇದನ್ನು ಕೊಡಲಾಗಿದೆ.

ಸಹಿ/– ಕೋರ್ಟ ಮೊಹರು,
ಶಿರಸ್ತೇದಾರರು
1ನೇ ಅಧಿಕ ಕಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ
ಅರ್ಜಿದಾರರ ಪರ ವಕೀಲರು
ಸಹಿ/– **ಎಸ್.ಸಿ.ಭಾಂಡೇಕರ,** ವಕೀಲರು ಹುಬ್ಬಳ್ಳಿ
ಹುಬ್ಬಳ್ಳಿ ದಿನಾಂಕ : 07.04.2026

ಮೆ॥ ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಬಾಗಲಕೋಟ ಇವರ ನ್ಯಾಯಾಲಯದಲ್ಲಿ

ಕ್ರಿ. ಮಿ. ನಂ. 214/2025

ಅರ್ಜಿದಾರ : 1) ಭೀಮವ್ವ ಗಂ. ಬೆನಪ್ಪ ಬೆನಕಟ್ಟಿ
ವಿರುದ್ಧ
ಎದುರುದಾರರು : 1) ಮೆ॥ ತಹಶೀಲ್ದಾರ ಜನನ ಮತ್ತು ಮರಣ ವಿಭಾಗ ನವನಗರ–ಬಾಗಲಕೋಟ

ಸಾರ್ವಜನಿಕ ನೋಟಿಸು

ಮೇಲ್ಕಾಣಿಸಿದ ಪ್ರಕರಣದಲ್ಲಿ ಅರ್ಜಿದಾರಳ ತಂದೆಯಾದ ರಾಯಪ್ಪ ತಂ. ಹಣಮಪ್ಪ ಕುಂಚಗನೂರ ಇವರು ದಿನಾಂಕ: 01/06/1985 ರಂದು ಚಿಟಗನಕೊಪ್ಪ ಗ್ರಾಮದ ಮನೆಯಲ್ಲಿ ಮೃತವಾಗಿರುತ್ತಾನೆ ಅಂತಾ ದಿನಾಂಕವನ್ನು ನೋಂದಣಿ ಮಾಡುವ ಕುರಿತು ಎದುರುದಾರರ ವಿರುದ್ಧ ಆದೇಶ ಕೋರಿ ಈ ಮೆ॥ ನ್ಯಾಯಾಲಯದಲ್ಲಿ ಅರ್ಜಿಯನ್ನು ದಾಖಲಿಸಿರುತ್ತಾರೆ.

ಆದ್ದರಿಂದ ಸದರಿ ವಿಷಯದ ಸಂಬಂಧದಲ್ಲಿ ಯಾರಾದರೂ ಹಿತಾಸಕ್ತಿ ಉಳ್ಳವರು ಇದ್ದಲ್ಲಿ ದಿನಾಂಕ: 16/5/2026 ರಂದು ಮೆ॥ ಜೆ.ಎಮ್.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟ ಇವರ ನ್ಯಾಯಾಲಯದ ಮುಂದೆ ಹಾಜರಿದ್ದು ತಮ್ಮ ತಕರಾರುಗಳನ್ನು ಸಲ್ಲಿಸಲು, ಅದಕ್ಕೆ ತಪ್ಪಿದಲ್ಲಿ ಯಾರದೂ ಏನೂ ತಕರಾರು ಇರುವದಿಲ್ಲ ಅಂತಾ ಪರಿಗಣಿಸಿ ಮೆ॥ ರವರು ಮುಂದಿನ ವಿಚಾರಣೆಯನ್ನು ಕೈಗೆತ್ತಿಕೊಳ್ಳುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ಸದರಿ ನೋಟಿಸನ್ನು ಇವತ್ತು ದಿನಾಂಕ: 10/04/2026 ರಂದು ಮೆ॥ ನ್ಯಾಯಾಲಯದ ಶೀಲು ಹಾಗೂ ಸಹಿಯೊಂದಿಗೆ ಕೊಡಲಾಗಿದೆ.

ಸ್ಥಳ: ಬಾಗಲಕೋಟ
ದಿನಾಂಕ : 10–4–2026

ನ್ಯಾಯಾಲಯದ ಆದೇಶದೊಂದಿಗೆ
ಸಹಿ/– ಶಿರಸ್ತೆದಾರರು
ಮೆ॥ ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ.ಎಮ್.ಎಫ್.ಸಿ. ಬಾಗಲಕೋಟ
ಸಹಿ/– ಎಸ್. ಬಿ. ಗೌಡರ
ಅರ್ಜಿದಾರರ ಪರ ವಕೀಲರು

ಪುರಸಭಾ ಕಾರ್ಯಾಲಯ, ಹೊಳೆನರಸೀಪುರ

ದೂರವಾಣಿ ಮತ್ತು ಫ್ಯಾಕ್ಸ್ ಸಂಖ್ಯೆ:08175–273229 **email: tstaff_ulb_holenarasipur@yahoo.co.in**

ನಂ:ಪುಸಹೊನಪು/ಆ.ಶಾ/15ನೇ.ಹ/ಎಸ್.ಡಬ್ಲ್ಯೂ.ಎಂ/2026–27 ದಿನಾಂಕ: 10.04.2026

:: ಟೆಂಡರ್ ಪ್ರಕಟಣೆ :: (ಕೆಪಿಪಿಪಿ ಮುಖಾಂತರ)

ಹೊಳೆನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ 2025–26ನೇ ಸಾಲಿನ 15ನೇ ಹಣಕಾಸು ಮತ್ತು ಪುರಸಭಾ ಅನುದಾನದಡಿ ಈ ಕೆಳಕಂಡ ಯಂತ್ರೋಪಕರಣ/ವಾಹನ/ಸೇವೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999–2000 ನಿಯಮಗಳಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇ–ಪ್ರೊಕ್ಯೂರ್‌ಮೆಂಟ್ ಸೆಲ್, ಬೆಂಗಳೂರುರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಅರ್ಹ ಗುತ್ತಿಗೆದಾರರು ತಮ್ಮ ದರಗಳನ್ನು ಇ–ಪ್ರಕ್ಯೂರ್‌ಮೆಂಟ್ https://kppp.karnataka.gov.in/ಪೋರ್ಟಲ್ ಮೂಲಕ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್‌ಲೈನ್ ಮೂಲಕ ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿ ವಿವರಗಳು ಈ ಕೆಳಕಂಡಂತಿರುತ್ತದೆ. ಕ್ರಸಂ.ಕಾಮಗಾರಿಯ ವಿವರ: 1)ಹೊಳೆನರಸೀಪುರ ಪುರಸಭೆಗೆ ಅವಶ್ಯವಿರುವ ಸೆಕ್ಕಿಂಗ್ ಮತ್ತು ಜೆಟ್ಟಿಂಗ್ ಯಂತ್ರ ಖರೀದಿಸುವುದು. Indent No: DMA/2025-26/IND5801/CALL-2 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)55.00 ಇಎಂಡಿ ಮೊತ್ತ (ರೂ.ಗಳಲ್ಲಿ)137500–00 2)ಹೊಳೆನರಸೀಪುರ ಪುರಸಭಾ ಕಛೇರಿ ಕೆಲಸ ಕಾರ್ಯಗಳಿಗಾಗಿ ಹೊರಗುತ್ತಿಗೆ ಆಧಾರದ ಮೇಲೆ 2 (ಇಬ್ಬರು) ಕಂಪ್ಯೂಟರ್ ಆಪರೇಟರ್‌ಗಳನ್ನು ಒದಗಿಸುವುದು. Indent No: DMA/2025-26/SE7215/CALL-2 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)5.98 ಇಎಂಡಿ ಮೊತ್ತ (ರೂ.ಗಳಲ್ಲಿ)15000–00 3)ಹೊಳೆನರಸೀಪುರ ಪುರಸಭೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರು, ಇತರೆ ಸ್ವಚ್ಛತಾ ಸಿಬ್ಬಂದಿಗಳು ಮತ್ತು ಒಳಚರಂಡಿ ಸಿಬ್ಬಂದಿಗಳಿಗೆ ಬೆಳಗಿನ ಉಪಹಾರ ಸರಬರಾಜು ಮಾಡುವ ವಾರ್ಷಿಕ ಟೆಂಡರ್ Indent No: DMA/2025-26/SE7340/CALL-2 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)14.50 ಇಎಂಡಿ ಮೊತ್ತ (ರೂ.ಗಳಲ್ಲಿ)36250–00 4)ಹೊಳೆನರಸೀಪುರ ಪುರಸಭೆಗೆ ಅವಶ್ಯವಿರುವ 2 ಸಂಖ್ಯೆಯ ಆಟೋ ಟಿಪ್ಪರ್ ವಾಹನಗಳನ್ನು ಖರೀದಿಸುವುದು. Indent No: DMA/2026-27/IND6180 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)19.93 ಇಎಂಡಿ ಮೊತ್ತ (ರೂ.ಗಳಲ್ಲಿ)50000–00 ಕೆಪಿಪಿಪಿ ಪೋರ್ಟಲ್‌ನಲ್ಲಿ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18.04.2026 ಸಂಜೆ 5.30 ಗಂಟೆಗೆ. ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಸ್ವೀಕರಿಸಲಾದ ತಾಂತ್ರಿಕ ಬಿಡ್ ಟೆಂಡರ್‌ನ್ನು ತೆರೆಯುವ ದಿನಾಂಕ: 21.04.2026 ಬೆಳಿಗ್ಗೆ 11.00 ಗಂಟೆಗೆ. ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾದ ಟೆಂಡರ್‌ದಾರರ ಆರ್ಥಿಕ ಬಿಡ್ ಟೆಂಡರ್‌ನ್ನು ತೆರೆಯುವ ದಿನಾಂಕ: 23.04.2026 ಬೆಳಿಗ್ಗೆ: 11.00 ಗಂಟೆಗೆ * ಕೆಪಿಪಿಪಿ ಪೋರ್ಟಲ್‌ನಲ್ಲಿ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27.04.2026 ಸಂಜೆ 5.30 ಗಂಟೆಗೆ. ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಸ್ವೀಕರಿಸಲಾದ ತಾಂತ್ರಿಕ ಬಿಡ್ ಟೆಂಡರ್‌ನ್ನು ತೆರೆಯುವ ದಿನಾಂಕ: 29.04.2026 ಬೆಳಿಗ್ಗೆ 11.00 ಗಂಟೆಗೆ, ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾದ ಟೆಂಡರ್‌ದಾರರ ಆರ್ಥಿಕ ಬಿಡ್ ಟೆಂಡರ್‌ನ್ನು ತೆರೆಯುವ ದಿನಾಂಕ: 02.05.2026 ಬೆಳಿಗ್ಗೆ: 11.00 ಗಂಟೆಗೆ

ಸಹಿ/–ಮಾನ್ಯ ಆಡಳಿತಾಧಿಕಾರಿಗಳು, (ಪುರಸಭೆ ಹೊಳೆನರಸೀಪುರ) ಹಾಸನ ಉಪವಿಭಾಗ, ಹಾಸನ.
ಸಹಿ/– ಮುಖ್ಯಾಧಿಕಾರಿ. ಪುರಸಭೆ, ಹೊಳೆನರಸೀಪುರ

ವಾಸಾಸಂಇ/ಹಿಸನಿ/ಹಾಸನ/33/ಕೆಎಸ್ಎಂಸಿಎ/2026–27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ, ಕ.ನೀ.ನಿ.ನಿ. ಮ.ಬ.ದಂ.ಕಾ.ನಿ. ವಿಭಾಗ ನಂ–5, ರೋಣ–582209
Ph & Fax No. 08381-267247 E-mail id : knnldiv5@gmail.com

ಸಂ : ಕನೀನಿನಿ/ಮಬದ–5/ಪಿ.ಬಿ/ಟೆಂಡರ/2026–27/17 ದಿನಾಂಕ : 10.04.2026

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ ವೇದಿಕೆ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ. ಕಾಫಿ ಬೋರ್ಡ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ ಮಬದಕಾನಿ ವಿಭಾಗ ನಂ.05 ರೋಣ ಇವರ ಕಛೇರಿ ಮೂಲಕ ರೋಣ ವಿಭಾಗದ ಕಾರ್ಯವ್ಯಾಪ್ತಿಯಡಿ ಇರುವ 4701 ಲೆಕ್ಕ ಶೀರ್ಷಿಕೆಯ ಕಾಲುವೆ ಆಧುನೀಕರಣ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್‌ಗಳನ್ನು ದ್ವಿ–ಲಕೋಟೆ ಪದ್ಧತಿ ಮೂಲಕ ಕರೆಯಲಾಗಿದ್ದು ವಿವರಗಳು ಈ ಕೆಳಗಿನಂತಿವೆ.

Sl No	Name of Work	Approximate amount put to tender (In Rs.) (Exluding GST)	EMD Amount (in Rs.)	Stipulated period for Completion	Class of Contractors
1)	Earthwork and lining for remodeling of Distributary-56A of Malaprabha Right Bank Canal ch:2.00-4.16 km including structures (KNNL/2025-26/CN/WORK_INDENT4234)	**1,55,57,547.17**	**2,34,000.00**	**6** Months (Including monsoon)	KPWD Class-III & Above
2)	Earthwork and lining for remodeling of Distributary-56B of Malaprabha Right Bank Canal ch:5.00-9.00 km including structures (KNNL/2025-26/CN/WORK_INDENT4235)	**3,49,56,634.75**	**5,25,000.00**	**9** Months (Including monsoon)	KPWD Class-II & Above
3)	Earthwork and lining for remodeling of Distributary-56C of Malaprabha Right Bank Canal ch:2.00-4.50 km including structures (KNNL/2025-26/CN/WORK_INDENT4236)	**1,66,91,050.61**	**2,51,000.00**	**6** Months (Including monsoon)	KPWD Class-III & Above
4)	Earthwork and lining for remodeling of Distributary-57 of Malaprabha Right Bank Canal ch:14.00-17.00km including structures. (KNNL/2025-26/CN/WORK_INDENT4237)	**3,77,62,482.54**	**5,67,000.00**	**9** Months (Including monsoon)	KPWD Class-II & Above
5)	Earthwork and lining for remodeling of Itagi Distributary of Malaprabha Right Bank Canal ch:4.00-6.00 km including structures. (KNNL/2025-26/CN/WORK_INDENT4238)	**3,52,60,046.33**	**5,29,000.00**	**9** Months (Including monsoon)	KPWD Class-II & Above
6)	Earthwork and lining for remodeling of Itagi Distributary of Malaprabha Right Bank Canal ch:6.00-9.00 km including structures. (KNNL/2025-26/CN/WORK_INDENT4239)	**3,38,84,420.58**	**5,09,000.00**	**9** Months (Including monsoon)	KPWD Class-II & Above
7)	Earthwork and lining for remodeling of Itagi Distributary of Malaprabha Right Bank Canal ch:9.00-12.00 km including structures. (KNNL/2025-26/CN/WORK_INDENT4240)	**3,44,95,800.33**	**5,18,000.00**	**9** Months (Including monsoon)	KPWD Class-II & Above
8)	Earthwork and lining for remodeling of Itagi Distributary of Malaprabha Right Bank Canal ch:12.00-15.00 km including structures. (KNNL/2025-26/CN/WORK_INDENT4241)	**3,07,95,078.23**	**4,62,000.00**	**9** Months (Including monsoon)	KPWD Class-II & Above
9)	Earthwork and lining for remodeling of Itagi Distributary of Malaprabha Right Bank Canal ch:15.00-17.00 km including structures. (KNNL/2025-26/CN/WORK_INDENT4242)	**2,13,96,707.54**	**3,21,000.00**	**6** Months (Including monsoon)	KPWD Class-II & Above

ಬಿಡ್‌ಗಳನ್ನು ಸಲ್ಲಿಸಲು ಇಚ್ಛಿಸುವ ಗುತ್ತಿಗೆದಾರರು ಕೆ.ಪಿ.ಪಿ.ಪಿ ವೇದಿಕೆ ಮೂಲಕ ಮಾತ್ರ ಸಲ್ಲಿಸಬೇಕು. ಹೆಚ್ಚಿನ ವಿವರಗಳ ಕುರಿತಾದ ಮಾಹಿತಿಯನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ ಮಬದಕಾನಿ ವಿಭಾಗ ನಂ. 05 ರೋಣ ಇವರ ಕಛೇರಿಯಲ್ಲಿ ಕಛೇರಿ ಸಮಯದಲ್ಲಿ ಪಡೆಯುವುದು. ಟೆಂಡರ್ ದಾಖಲಾತಿಗಳನ್ನು KPPP.karnataka.gov.in ವೆಬ್‌ಸೈಟ್ ಮೂಲಕ ದಿನಾಂಕ : **13.04.2026** ರ ಬೆಳಿಗ್ಗೆ 11.00 ಘಂಟೆಗೆ ಪಡೆಯಬಹುದಾಗಿರುತ್ತದೆ. ಪ್ರೀ ಬಿಡ್ ಸಭೆಯ ದಿನಾಂಕ : **18.04.2026** ಬೆಳಿಗ್ಗೆ 11.00 ಘಂಟೆಗೆ ಸ್ಥಳ: ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ ಮಬದಕಾನಿ ವಿಭಾಗ ಸಂ. 05 ರೋಣ ಕಛೇರಿ ತಾ॥ ರೋಣ ಜಿ॥ ಗದಗ. ಟೆಂಡರ್ ವಿಚಾರಣೆಗಾಗಿ ಕೊನೆಯ ದಿನಾಂಕ : **21.04.2026** ರ ಸಾಯಂಕಾಲ 05:30 ಘಂಟೆವರೆಗೆ, ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **04.05.2026** ರ ಸಾಯಂಕಾಲ 04:30 ರವರೆಗೆ ಮತ್ತು ಟೆಂಡರ್‌ಗಳನ್ನು ತೆರೆಯುವ ದಿನಾಂಕ : **05.05.2026** ರ ಸಾಯಂಕಾಲ 5.30 ಘಂಟೆಗೆ. ಪೂರ್ಣವಿಲ್ಲದ ಟೆಂಡರ್‌ಗಳನ್ನು ಹಾಗೂ ಷರತ್ತುಬದ್ಧವಾಗಿ ಸಲ್ಲಿಸಿದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಅನುಮೋದಿಸುವ ಅಧಿಕಾರವನ್ನು ಹೊಂದಿರುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಸಹ ಹೊಂದಿರುತ್ತಾರೆ.

ಟೆಂಡರ್‌ಗಳ ಹೆಚ್ಚಿನ ಮಾಹಿತಿಯನ್ನು KPPP.karnataka.gov.in ಹಾಗೂ ಈ ಕಛೇರಿಯ ಮುಖಾಂತರ ಪಡೆಯಲು ಕೋರಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು
ಕನೀನಿನಿ ಮಬದಕಾನಿ ವಿಭಾಗ ನಂ. 5, ರೋಣ

ವಾಸಾಸಂಇ/ಗದಗ/ಕೆಎಸ್ಎಂಸಿಎ/18/2026–27

ಕಿರುಸುದ್ದಿ

ನಾನೂ ಸಚಿವ ಸ್ಥಾನದ ಆಕಾಂಕ್ಷಿ : ಕೋನರಡ್ಡಿ

ಧಾರವಾಡ: ನಾನು ಕೂಡ ಸಚಿವ ಸ್ಥಾನದ ಆಕಾಂಕ್ಷಿ. ರೈತರ ಕೋಟಾದಲ್ಲಿ ಸಚಿವ ಸ್ಥಾನ ನೀಡಲು ಮನವಿ ಮಾಡಿದ್ದು, ಸಚಿವ ಸ್ಥಾನ ನೀಡುವುದು ಸಿಎಂ, ಡಿಸಿಎಂ ಮತ್ತು ಹೈಕಮಾಂಡ್‌ಗೆ ಬಿಟ್ಟ ವಿಚಾರ ಎಂದು ಶಾಸಕ ಎನ್.ಎಚ್.ಕೋನರಡ್ಡಿ ಹೇಳಿದರು.

ಶಾಸಕರು ದೆಹಲಿ ಪರೇಡ್ ನಡೆಸಿದ ವಿಚಾರದ ಕುರಿತು ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೊದಲು ಸಿಎಂ-ಡಿಸಿಎಂ ಭೇಟಿಯಾಗಿ ಮಾರ್ಗದರ್ಶನ ಪಡೆದ ಬಳಿಕವೇ ದೆಹಲಿ ಹೋಗುವ ನಿರ್ಧಾರ ಕೈಗೊಳ್ಳುವುದಾಗಿ ತಿಳಿಸಿದರು.

ಈಗಾಗಲೇ ಉಭಯ ನಾಯಕರ ಸಮ್ಮುಖದಲ್ಲಿ ಹಿರಿಯರು ಮತ್ತು ಕಿರಿಯರು ಅಂತ ಎರಡು ಸಭೆಗಳಾಗಿವೆ. ಹಿರಿಯ ಶಾಸಕರು ದೆಹಲಿಗೆ ಹೋಗಿದ್ದಾರೆ. ಕಿರಿಯ ಶಾಸಕರು ಸ್ವಲ್ಪ ಗಮನಿಸಿದ ಬಳಿಕ ತೀರ್ಮಾನ ಕೈಗೊಳ್ಳುತ್ತೇವೆ ಎಂದು ಪ್ರಶ್ನೆಗೆ ಉತ್ತರಿಸಿದರು.

ಉಪಚುನಾವಣೆ ಕುರಿತು ಪ್ರತಿಕ್ರಿಯಿಸಿದ ಅವರು, ನನಗೆ ಬಾಗಲಕೋಟಿ ಜಿಲ್ಲೆಯ ಉಸ್ತುವಾರಿಯಾಗಿ ನೇಮಿಸಿದ್ದು, ಉಮೇಶ ಮೇಟಿ ಗೆಲ್ಲುವ ವಿಶ್ವಾಸವಿದೆ. ಅಲ್ಲದೇ, ದಾವಣಗೇರಿಯಲ್ಲೂ ಸಹ ಸಮರ್ಥ ಶಾವನೂರ ಗೆಲ್ಲುತ್ತಾರೆ ಎಂದು ಕೋನರಡ್ಡಿ ಹೇಳಿದರು

ಹಿರಿಯ ಸಂಶೋಧಕ ಕೃಷ್ಣ ಕೋಲ್ಹಾರ ಕುಲಕರ್ಣಿ ಅಭಿಪ್ರಾಯ
ಕಾಕಾ ಕಾರ್ಖಾನೀಸ್ ಕಾರ್ಯ ದೇಶಕ್ಕೆ ಮಾದರಿ

(ಚಂದ್ರಶೇಖರ ಹೊಸಮನಿ, ರಾಮಚಂದ್ರ ಸಾಂಗಲಿ ಗುರುಬಾಳ ನಾಮದಾರ, ಶ್ರೀರಂಗ ವೇದಿಕೆ)ವಿಜಯಪುರ: ಅಂಬೇಡ್ಕರ್ ಬರುವ ಪೂರ್ವದಲ್ಲಿ ಗಣೇಶ ಗೋವಿಂದ ಕಾರ್ಖಾನೀಸ್ ಅವರು ವಿಜಯಪುರ ಜಿಲ್ಲೆಯಲ್ಲಿ ದಲಿತರಿಗಾಗಿ ಶಾಲೆ ಮತ್ತು ಬೋರ್ಡಿಂಗ್ ತೆಗೆದು ಶಿಕ್ಷಣ ನೀಡಿದ್ದು ಯಾರು ಮರೆಯಬಾರದು ಎಂದು ಹಿರಿಯ ಸಂಶೋಧಕ ಕೃಷ್ಣ ಕೋಲ್ಹಾರ ಕುಲಕರ್ಣಿ ಹೇಳಿದರು.

ವಿಜಯಪುರ ನಗರದ ದರ್ಬಾರ್ ಪ್ರೌಢ ಶಾಲೆ ಮೈದಾನದಲ್ಲಿ ಮೇ ಸಾಹಿತ್ಯ ಮೇಳ ವಿಜಯಪುರ ಬಳಗ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಏಪ್ರಿಲ್ 10ರಿಂದ 14ರ ವರೆಗೆ 5ದಿನಗಳ ಕಾಲ ಹಮ್ಮಿಕೊಂಡಿರುವ ಬಿಜಾಪುರ ಬುದ್ಧ, ಬಸವ, ಬಾಬಾಸಾಹೇಬ ಅಂಬೇಡ್ಕರ್ ಪುಸ್ತಕ ಮೇಳದಲ್ಲಿ 4 ನೇ ದಿನದ ಮೊದಲ ಗೋಷ್ಠಿಯಲ್ಲಿ ಕಾಕಾ ಕಾರ್ಖಾನೀಸ್ ಸ್ಮರಣೆ ಕುರಿತು ಮುಖ್ಯ ಉಪನ್ಯಾಸ ನೀಡಿ ಅವರು ಮಾತನಾಡಿದರು.

ಹರಿಜನರ ನೆರಳು ಮೈ ಮೇಲೆ ಬಿದ್ದರೆ ಸ್ನಾನ ಮಾಡುತ್ತಿದ್ದ ಅಸ್ಪೃಶ್ಯತೆ ಆಚರಣೆ ದಿನಗಳಲ್ಲಿ ಕಾಕಾ ಕಾರ್ಖಾನೀಸ್‌ರು ಮನೆಯಲ್ಲಿ ವಿರೋಧ ಮತ್ತು ಸಮಾಜದಿಂದ ಬಹಿಷ್ಕಾರ ಅನುಭವಿಸಿ ಹರಿಜನರೊಂದಿಗೆ ಹರಿಜನರಾಗಿ ಹರಿಜನ ಸೇವಕ ಸಂಘವನ್ನು ಸ್ಥಾಪಿಸಿ ದಲಿತ ವಿದ್ಯಾರ್ಥಿಗಳಿಗೆ ಭಗವದ್ಗೀತೆ ಕಲಿಸಿ ಬ್ರಾಹ್ಮಣ ವಿದ್ಯಾರ್ಥಿಗಳೊಂದಿಗೆ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆಯುವಂತೆ ಮಾಡಿದ್ದು ಅವರ ದಲಿತ ಉದ್ದಾರಕ್ಕೆ ಹಿಡಿದ ಕೈಗನ್ನಡಿಯಾಗಿದೆ.



ಕಾಕಾ ದಲಿತರಿಗೆ ಕೇವಲ ಶಿಕ್ಷಣ ಮಾತ್ರ ಕಲಿಸಲಿಲ್ಲ ಅವರಿಗೆ ಹುಡುಕಾಡಿ ನೌಕರಿ ಕೊಡಸಿದರು. ಜೊತೆಗೆ ಅವರ ಮದುವೆ ಕೂಡಾ ಮಾಡಿಸಿದ್ದು ಅವರ ಅಗ್ರಗಣ್ಯ ಕೆಲಸವಾಗಿದೆ ಅಂತಹ ಮಹಾತ್ಮನನ್ನು ಸ್ಮರಿಸುವ ಕಾರ್ಯಮಾಡಿದ ಮೇ ಸಾಹಿತ್ಯ ಬಳಗದವರ ಕೆಲಸ ನಿಜಕ್ಕೂ ದೊಡ್ಡ ಕೆಲಸವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಹಿರಿಯ ಸಾಹಿತಿ ಬಿ.ಆರ್. ಬನಸೋಡೆ, ನಿವೃತ್ತ ನ್ಯಾಯಾಧೀಶ ವಸಂತ ಮುಳಸಾವಳಗಿ, ರಾಜಶೇಖರ ಯಡಹಳ್ಳಿ, ಸಾಬು ಚಲವಾದಿ, ರಫೀಕ್ ಟಪಾಲ ಎಂಜಿನಿಯರ್ ಮಾತನಾಡಿದರು.

ಮಲ್ಲಿಕಾರ್ಜುನ ಕೆಂಗನಾಳ, ಝಾಕೀರ್ ಬಾಗವಾನ, ಆಯುಬ ನಾಟಿಕಾರ, ಲಕ್ಕಪ್ಪ ಹರಿಜನ, ಹರೀಶ ಯಂಟಮಾನ, ಚಂದ್ರಶೇಖರ ನಾಲತವಾಡ, ಯಮನಪ್ಪ ಚಲವಾದಿ, ಬಿ.ಡಿ.ಪಾಟೀಲ, ಬಸವರಾಜ ಸೂಳಿಬಾವಿ, ಅನಿಲ ಹೊಸಮನಿ, ವಿದ್ಯಾವತಿ ಅಂಕಲಗಿ, ವೈ.ಎಚ್.ಲಂಬು, ಮಿಲನಕುಮಾರ ನಾಮದಾರ, ಸುರೇಶ ಸಿಂಧೂರ, ಶಂಕರ ಚಲವಾದಿ, ರಾಜೇಶ ತೊರವಿ, ಸವಿತಾ ವಗ್ಗರ, ಈಶ್ವರ ಅವಧಿ, ಸಾಬು ಚಲವಾದಿ, ಸುಲೋಚನಾ ಮಾಮಾದಾಪುರ, ನಾಗರಾಜ ಲಂಬು, ಕೆ.ಎಂ.ಕೂಡಲಗಿ, ವೈ.ಎಸ್. ಗುಣಕಿ, ಸೋಮು ರಣದೇವಿ, ಸುರೇಶ ಬಿಜಾಪುರ, ಚೆನ್ನು ಕಟ್ಟಿಮನಿ, ನೀಲಾಂಬಿಕಾ ಬಿರಾದಾರ, ಶಾರದಾ ಹೊಸಮನಿ, ಸವಿತಾ ವಾಘಮೋರೆ, ಸಂಘರ್ಷ ಹೊಸಮನಿ, ಸಿದ್ದಲಿಂಗ ಬಾಗೇವಾಡಿ, ಭರತಕುಮಾರ ಎಚ್.ಟಿ, ಕಲ್ಲಪ್ಪ ಶಿವಶರಣ, ಲಾಯಪ್ಪ ಇಂಗಳೆ, ಶರಣು ಕಿರಣಗಿ ಬಸವರಾಜ ಕಾಂಬಳೆ ಇದ್ದರು.

ಮಹಿಳಾ ಮೀಸಲಾತಿ ಅಪೂರ್ವ ಹೆಜ್ಜೆ: ಡಾ.ತುಂಗಳ



ವಿಜಯಪುರ: ಶಾಸನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಮಹತ್ವದ ಈ ಹಿಂದಿನ ದಿನಗಳಲ್ಲಿ ಚರ್ಚೆ ಬಂದಾಗ ಮಸೂದೆಯ ಪ್ರತಿಯನ್ನೇ ಹರಿದು ಹಾಕಿದ್ದರು. ಮಹಿಳೆಯಿಂದ ಆಡಳಿತ ಅಸಾಧ್ಯ ಎನ್ನುವ ಮನೋಭಾವನೆ ಇತ್ತು. ಆದರೆ, ಮಹಿಳೆ ಸಬಲಳು, ಆಕೆ ಆಡಳಿತ ನಡೆಸಲು ಸಮರ್ಥಳು ಎಂಬ ಸಕಾರಾತ್ಮಕ ಭಾವ ಮೂಡಿಸುವಲ್ಲಿ ಪ್ರಧಾನಿ ನರೇಂದ್ರ ಮೋದಿ ಯಶಸ್ವಿಯಾಗಿದ್ದು, ನಾರಿಶಕ್ತಿ ವಂದನ್ ಕಾಯ್ದೆಯ ಮೂಲಕ ಶಾಸನ ಸಭೆಗಳಲ್ಲಿ ಮಹಿಳಾ ಮೀಸಲಾತಿಗೆ ಅಪೂರ್ವ ಹೆಜ್ಜೆ ಇರಿಸಿದ್ದಾರೆ ಎಂದು ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಉಪಾಧ್ಯಕ್ಷೆ ಡಾ.ವಿಜಯಲಕ್ಷ್ಮೀ ತುಂಗಳ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಹಿಳೆಯನ್ನು ಸಶಕ್ತಗೊಳಿಸುವ ನಿಟ್ಟಿನಲ್ಲಿ ಪ್ರಧಾನಿ ಮೋದಿ ಅವರು ಅವರು ಅನೇಕ ಕಾರ್ಯಕ್ರಮ ಕೈಗೊಂಡರು. ಬೇಟಿ ಬಚಾವೋ ಬೇಟಿ ಪಡಾವೋ, ಉದ್ಯೋಗದಲ್ಲಿ ಮಹಿಳೆಯ ಸಿಂಹಪಾಲು ಹೀಗೆ ನಾನಾ ರೀತಿಯ ಕ್ರಮಗಳಿಂದಾಗಿ ಸ್ತ್ರೀ ಶಕ್ತಿ ಇನ್ನಷ್ಟು ಬಲಗೊಳ್ಳಲು ಸಾಧ್ಯವಾಗಿದೆ ಎಂದರು.

ಮಹಿಳಾ ಶಿಕ್ಷಣಕ್ಕೆ ಕೇಂದ್ರ ಸರ್ಕಾರ ನೀಡುತ್ತಿರುವ ಪ್ರೋತ್ಸಾಹ ಫಲವಾಗಿ ಉನ್ನತ ಮಟ್ಟದಲ್ಲಿದ್ದು, ಅಮೆರಿಕೆಯಲ್ಲಿ ಮಹಿಳೆಯರ ಉನ್ನತ ಶಿಕ್ಷಣ ಅಧ್ಯಯನ ಪ್ರಮಾಣ ಶೇ.34 ರಷ್ಟಿದ್ದರೆ, ನಮ್ಮ ಭಾರತದಲ್ಲಿ ಶೇ.43ರಷ್ಟು ಪ್ರಮಾಣದಲ್ಲಿ ಮಹಿಳೆ ಉನ್ನತ ಶಿಕ್ಷಣ ಪಡೆದುಕೊಳ್ಳುತ್ತಿದ್ದಾರೆ. ಭಾರತದಲ್ಲಿ ಅತಿ ಹೆಚ್ಚು ಅಂದರೆ ಶೇ.15 ರಷ್ಟು ಪ್ರಮಾಣದಲ್ಲಿ ಮಹಿಳಾ ಪೈಲೆಟ್‌ಗಳಿದ್ದಾರೆ. ಉಗ್ರಗಾಮಿಗಳಿಗೆ ತಕ್ಕ ಪಾಠ ಕಲಿಸುವ ಆಪರೇಷನ್ ಸಿಂದೂರ ಕಾರ್ಯಾಚರಣೆ ವಹಿಸಿದ್ದೂ ಸಹ ಮಹಿಳೆಯರೇ, ಈ ರೀತಿ ಮಹಿಳೆ ಸಬಲೀಕರಣದ ದಾರಿಯಲ್ಲಿ ಶರವೇಗದಲ್ಲಿ ಸಾಗಿದ್ದಾಳೆ ಎಂದರು.

ಶಾಸನ ಸಭೆಗಳಲ್ಲಿ ಶೇ.33ರಷ್ಟು ಮೀಸಲಾತಿ ಕಲ್ಪಿಸುವ ನಾರಿಶಕ್ತಿ ವಂದನ್ ಕಾಯ್ದೆ ಜಾರಿ ಒಂದು ಬದಲಾವಣೆಯ ಪರ್ವ, 20ಕ್ಕೂ ಹೆಚ್ಚು ರಾಜ್ಯಗಳಲ್ಲಿ ಶೇ.40ಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆ ಸಮರ್ಥವಾಗಿ ಆಡಳಿತ ಯಂತ್ರವನ್ನು ಮುನ್ನಡೆಸುತ್ತಿದ್ದಾರೆ ಎಂದರು.

ಈ ಹಿಂದೆ ಸ್ತ್ರೀಯರ ಹೆಸರಿನಲ್ಲಿ ಆಸ್ತಿ ಇರುವುದೇ ಅಪರೂಪವಾಗಿತ್ತು, ಆದರೆ ಕೇಂದ್ರ ಸರ್ಕಾರ ಪ್ರಧಾನಮಂತ್ರಿ ಆವಾಸ್ ಯೋಜನೆಯ ಮೂಲಕ ಶೇ.80ರಷ್ಟು ಮಹಿಳೆಯರಿಗೆ ಆಯಾ ಮನೆಯ ಮಾಲೀಕತ್ವ ನೀಡಿರುವುದು ಒಂದು ಅಪೂರ್ವ ಹೆಜ್ಜೆ ಎಂದರು.ಆಡಳಿತದಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚಾಗಬೇಕಿದೆ. ಮಹಿಳೆಯರಿಗೆ ಮತದಾನದ ಹಕ್ಕು ನೀಡಿದ ಡಾ.ಅಂಬೇಡ್ಕರ್ ಅವರನ್ನು ಪ್ರತಿನಿತ್ಯ ನೆನೆಯಬೇಕು. ಈ ಮತದಾನದ ಹಕ್ಕಿನ ಬಲದಿಂದಲೇ ಆಡಳಿತದಲ್ಲಿ ಒಳಗೊಳ್ಳುವಿಕೆ ಸಾಧ್ಯವಾಗಿದೆ ಎಂದರು.

ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಸ್ವಪ್ನಾ ಕಣಮುಚನಾಳ ಮಾತನಾಡಿ, ಈ ಮಹತ್ವದ ಕಾಯ್ದೆ ಜಾರಿಗೊಳಿಸಿದ ಪ್ರಧಾನಿ ಅವರನ್ನು ಅಭಿನಂದನೆ ನೀಡಲು ಮಿಸ್ ಕಾಲ್ ನೀಡುವ ಅಭಿಯಾನವನ್ನು ವಿಜಯಪುರದಲ್ಲಿ ಕೈಗೊಳ್ಳಲಾಗುತ್ತಿದೆ ಎಂದರು.ಶಿಲ್ಪಾ ಕುದರಗೊಂಡ, ಗೀತಾ ಚೌಧರಿ, ಈರಣ್ಣ ರಾವೂರ, ವಿಜಯ ಜೋಶಿ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ದುಡಿಯುವ ಕೈಗಳಿಗೆ ನೆರವಾದ ನರೇಗಾ ಯೋಜನೆ

ಕುಕನೂರು: ಸಮೀಪದಲ್ಲಿರುವ ಯಲಬುರ್ಗಾ ತಾಲೂಕಿನ ಹಿರೇಅರಳಿಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಹೊಸೂರ ಗ್ರಾಮದಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಕೈಗೊಳ್ಳಲಾದ ನಾಲಾ ಹೂಳೆತ್ತುವ ಕಾಮಗಾರಿಯಲ್ಲಿ ನರೇಗಾ ಯೋಜನೆಯ ಕೂಲಿಕಾರರು ಗೂಳೆ ಹೋಗದಂತೆ ತಡೆದು ಕೆಲಸ ನೀಡಲಾಯಿತು.



ಗ್ರಾಮದ 170 ಜನ ಅಕುಶಲ ಕೂಲಿಕಾರರ ಎನ್ ಎಂಆರ್ ತೆಗೆದು ಕೆಲಸದ ಹಂಚಿಕೆ ಮಾಡಲಾಗಿದೆ. ಕಳೆದ ಐದು ದಿನಗಳಿಂದ ನಿರಂತರ ಕೆಲಸ ಮಾಡುತ್ತಿದ್ದು, ದುಡಿಯುವ ಕೈಗಳಿಗೆ ಕೆಲಸ ನೀಡಲಾಗಿದೆ.

ತಾಲೂಕು ಐಇಸಿ ಸಂಯೋಜಕರಾದಶರಣಪ್ಪಹಾಳಕೇರಿ ಮಾತನಾಡಿ, ಗ್ರಾಮೀಣ ಪ್ರದೇಶದ ಅಕುಶಲ ಕೂಲಿಕಾರರು ನರೇಗಾ ಯೋಜನೆಯಡಿ ಮುಂದುವರಿದ ನಾಲಾ ಹೂಳೆತ್ತುವ ಕಾಮಗಾರಿಗಳಲ್ಲಿ ಕೆಲಸ ನೀಡಲಾಗುತ್ತಿದೆ. ಒಂದು ತಿಂಗಳ ನಿರಂತರ ಕೆಲಸ ಮಾಡಲು ಅವಕಾಶವಿದೆ. ಇದರಸದುಪಯೋಗ ಪಡೆಯಬೇಕು ಎಂದು ತಿಳಿಸಿದರು.

ಈಗಾಗಲೇ ಕೆಲಸದ ಬೇಡಿಕೆಯ ಅರ್ಜಿ ಸಲ್ಲಿಸಿದ ಕೂಲಿಕಾರರಿಗೆ ನಿರಂತರವಾಗಿಕೆಲಸನೀಡಲಾಗುತ್ತಿದೆ. ಕೆಲವು ಗ್ರಾಮ ಪಂಚಾಯತಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇನ್ನು ಕೆಲ ಗ್ರಾಪಂಗಳಲ್ಲಿ ಈ ತಿಂಗಳ ಗುರಿ ನಿಗದಿ ಮಾಡಲಾಗಿದ್ದು, ತಿಂಗಳಾಂತ್ಯದ ವೇಳೆಗೆ ಗುರಿ ಸಾಧಿಸಲು ತಿಳಿಸಲಾಗಿದೆ ಎಂದರು.ಸದರಿ ಕಾಮಗಾರಿ ಸ್ಥಳದಲ್ಲಿ ಫೇಸ್ ಅಥೆಂಟಿಕೇಶನ್ ಆಧಾರಿತವಾಗಿ ಹಾಜರಾತಿ ಹಾಕಲಾಗಿದೆ. ಕೂಲಿಕಾರ್ಮಿಕರ ಮುಖ ಗುರುತಿಸುವಿಕೆ ತಂತ್ರಜ್ಞಾನ ಬಳಸಿ ಕಾರ್ಮಿಕರ ನಿಖರವಾದ ಹಾಜರಾತಿಯನ್ನು ಪಡೆಯಲಾಯಿತು.

ಸಮುದಾಯತಾಂತ್ರಿಕಸಹಾಯಕ ಬಸೆಟೆಪ್ಪ ಅಂಗಡಿ, ಗ್ರಾಮ ಕಾಯಕ ಮಿತ್ರರಾದ ಶಾಂತಮ್ಮ ಅಂಗಡಿ ಅವರು ಮಾತನಾಡಿದರು. ಈ ವೇಳೆ ಕಾಯಕ ಬಂಧುಗಳು, ನೂರಾರು ಜನ ಕೂಲಿಕಾರರು ಹಾಜರಿದ್ದರು.

ಮುರಿದು ಬಿದ್ದ ಮದುವೆ: ಯುವತಿ ಆತ್ಮಹತ್ಯೆ

ವಿಜಯಪುರ/ಸಿಂದಗಿ ಮದುವೆ ನಿಶ್ಚಯಗೊಂಡಿದ್ದ ಯುವತಿಯೊಬ್ಬಳ ಪ್ರೇಮ ಪ್ರಕರಣ ಬಹಿರಂಗಗೊಂಡಿದಕ್ಕೆ ಯುವತಿ ಮನನೊಂದು ಬಾವಿಗೆ ಜಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಜಿಲ್ಲೆಯ ಸಿಂದಗಿ ತಾಲೂಕಿನ ಬಂದಾಳ ಗ್ರಾಮದಲ್ಲಿ ನಡೆದಿದೆ.



ಇಲ್ಲಿನ ಜಯಶ್ರೀ ಬಿರಾದಾರ (22) ಮೃತಪಟ್ಟ ಯುವತಿ. ಏ.27, 2026ರಂದು ಜಯಶ್ರೀ ಬಿರಾದಾರಗೆ ಮದುವೆ ನಿಶ್ಚಯವಾಗಿತ್ತು. ಯುವತಿಯ ಪ್ರಿಯಕರ ಶ್ರೀಶೈಲ ಬಡಾನೂರ ಕಿಡಿಗೇಡಿತನಕ್ಕೆ ಯುವತಿ ಜೀವ ಬಲಿಯಾಗಿದೆ.

ಪ್ರಿಯಕರ ಶ್ರೀಶೈಲ ಈತನು ಜಯಶ್ರೀ ಜೊತೆಗಿರುವ ಫೋಟೋಗಳನ್ನು ವರನ ಮನೆಯವರಿಗೆ ಕಳುಹಿಸಿದ್ದಾನೆ. ಬೇರೆ ಯುವಕನ ಜೊತೆಗೆ ಜಯಶ್ರೀ ಇರುವ ಫೋಟೋಗಳನ್ನು ಕಂಡ ವರನ ಮನೆಯವರು ಮದುವೆಗೆ ನಿರಾಕರಿಸಿದಕ್ಕೆ ಮದುವೆ ಮುರಿದು ಬಿದಿದ್ದೆ.

ಇದರಿಂದ ತೀವ್ರ ಮನನೊಂದಿದ್ದ ಯುವತಿ, ತನ್ನ ಪ್ರೇಮ ಪ್ರಕರಣ ಬಹಿರಂಗಗೊಂಡು, ಮಾನ- ಮರ್ಯಾದೆ ಹೋಯಿತು ಎಂದು ಮರ್ಯಾದೆಗೆ ಅಂಜಿ ಗ್ರಾಮದ ಮದಿನಾ ಮಸೀದಿ ಪಕ್ಕದ ಬಾವಿಯಗೆ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಈ ಘಟನೆಯಿಂದ ಆಘಾತಗೊಂಡಿರುವ ಯುವತಿಯ ತಾಯಿ ಸಾವಿತ್ರಿ, ತನ್ನ ಮಗಳ ಸಾವಿಗೆ ಕಾರಣವಾಗಿರುವ ಆರೋಪಿ ಶ್ರೀಶೈಲನನ್ನು ಬಂಧಿಸುವಂತೆ ಒತ್ತಾಯಿಸಿದ್ದಾಳೆ.

ಕಾಲುವೆಯಲ್ಲಿ ಎರಡು ಸುಟ್ಟ ಮೃತದೇಹ ಪತ್ತೆ
ಹತ್ಯೆ ಮಾಡಿರುವ ಶಂಕೆ

ಕುಕನೂರು: ಬಳಿ ಪೈಪ್‌ಲೈನ್ ಕಾಲುವೆಯಲ್ಲಿ ಎರಡು ಕೊಳೆತ ಮತ್ತು ಸುಟ್ಟ ಮೃತದೇಹಗಳು ಸೋಮವಾರ ಪತ್ತೆಯಾಗಿವೆ. ಮೃತರನ್ನು ಕುಕನೂರು ಪಟ್ಟಣದ ನಿವಾಸಿಗಳಾದ ರುದ್ರೇಶ್ ಗಂಗಾವತಿ (23) ಮತ್ತು ರವಿ ರಾಮಣ್ಣ ತಟ್ಟಿ (32) ಎಂದು ಗುರುತಿಸಲಾಗಿದೆ. ಪೊಲೀಸರು ಇದು ಕೊಲೆ ಎಂದು ಶಂಕಿಸಿ ತನಿಖೆ ನಡೆಸುತ್ತಿದ್ದಾರೆ. ಕುಕನೂರು ತಾಲೂಕಿನ ಮಸಬಹಂಚಿನಾಳ ಗ್ರಾಮದ ಸಮೀಪ ಭೀಕರ ಘಟನೆ ಬೆಳಕಿಗೆ ಬಂದಿದ್ದು, ಕೊಳೆತ ಹಾಗೂ ಸುಟ್ಟ ಸ್ಥಿತಿಯಲ್ಲಿ ಎರಡು ಮೃತದೇಹಗಳು ಪತ್ತೆಯಾಗಿರುವುದು ಸ್ಥಳೀಯರಲ್ಲಿ ಆತಂಕ ಮೂಡಿಸಿದೆ.ಕೊಪ್ಪಳ ರಸ್ತೆಯ ಪಕ್ಕದಲ್ಲಿ ಕುಡಿಯುವ ನೀರಿನ ಯೋಜನೆಗಾಗಿ ಪೈಪ್‌ಲೈನ್ ಅಳವಡಿಸಲು ತೋಡಲಾಗಿದ್ದ ಕಾಲುವೆಯಲ್ಲಿ ಈ ಮೃತದೇಹಗಳು ಪತ್ತೆಯಾಗಿವೆ. ಸ್ಥಳೀಯರು ದುರ್ಗಂಧ ಬರುತ್ತಿರುವುದನ್ನು ಗಮನಿಸಿ ಪರಿಶೀಲನೆ ನಡೆಸಿದಾಗ, ಕಾಲುವೆಯೊಳಗೆ ಕೊಳೆತ ಸ್ಥಿತಿಯಲ್ಲಿದ್ದ ಎರಡು ಶವಗಳು ಕಂಡುಬಂದವು. ತಕ್ಷಣವೇ ಈ ವಿಷಯವನ್ನು ಪೊಲೀಸರಿಗೆ ತಿಳಿಸಲಾಯಿತು.ಪ್ರಾಥಮಿಕ ತನಿಖೆಯ ಪ್ರಕಾರ, ಸುಮಾರು ನಾಲ್ಕು ರಿಂದ ಐದು ದಿನಗಳ ಹಿಂದೆ ಈ ಇಬ್ಬರನ್ನು ಹತ್ಯೆ ಮಾಡಿ ಬಳಿಕ ಶವಗಳನ್ನು ಇಲ್ಲಿ ತಂದು ಎಸೆದು ಹೋಗಿರುವ ಸಾಧ್ಯತೆ ಇದೆ ಎಂದು ಪೊಲೀಸರು ಶಂಕಿಸಿದ್ದಾರೆ. ಘಟನಾ ಸ್ಥಳಕ್ಕೆ ಕುಕನೂರು ಪೊಲೀಸ್ ಠಾಣೆಯ ಅಧಿಕಾರಿಗಳು ಭೇಟಿ ನೀಡಿ ಮಹಜರು ನಡೆಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಸರ್ಕಾರಿ ಸೇವೆಯಲ್ಲಿ ಆತ್ಮತೃಪ್ತಿ ಮುಖ್ಯ: ದೇಸಾಯಿ

ಸಿಂಧನೂರು : ಹಿಂದೆ ಸರಪಳಿ ಮೂಲಕ ಭೂ ಸಮೀಕ್ಷೆ ಅಥವಾ ಸರ್ವೆ ಮಾಡಲಾಗುತ್ತಿದ್ದು,ಈಗ ತಂತ್ರಜ್ಞಾನ ಸಾಕಷ್ಟು ಅಭಿವೃದ್ಧಿ ಹೊಂದಿದ್ದು,ಅವುಗಳನ್ನು ಬಳಸಿಕೊಂಡು ತ್ವರಿತವಾಗಿ ಭೂಮಾಪನ ಸರ್ವೆ ಕಾರ್ಯ ಕೈಗೊಳ್ಳುವ ಮೂಲಕ ರೈತರ ಹಿತ ಕಾಪಾಡುವಂತ ಭೂಮಾಪಕರ ಗೌರವ ಹೆಚ್ಚಿಸಲು ರಾಷ್ಟ್ರೀಯ ಭೂಮಾಪನ ದಿನಾಚರಣೆಯನ್ನು ಆಚರಿಸಲಾ ಗುತ್ತಿದೆ.

ಈ ದಿನಾಚರಣೆಯ ಅಂಗವಾಗಿ ನಗರದ ತಹ ಶೀಲ್ದಾರ್ ಕಾರ್ಯಾಲಯ ದಲ್ಲಿ ಭೂದಾಖಲೆಗಳ ಸಹಾ ಯಕ ನಿರ್ದೇಶಕರ ಕಛೇರಿ ಯ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಭೂಮಾಪನ ದಿನಾಚರಣೆಯಲ್ಲಿ ತಹಸೀಲ್ದಾರ ಅರುಣ್ ಹೆಚ್.ದೇಸಾಯಿ ಯವರು ಮಾತನಾಡಿ ಒತ್ತಡಗಳ ನಡುವೆ ಕಾರ್ಯನಿರ್ವಹಿಸುವ ಭೂಮಾಪಕರು ಎಲ್ಲರಿಗೂ ಒಳ್ಳೆಯವರಾಗಲು ಸಾಧ್ಯವಿಲ್ಲ, ಸರ್ಕಾರದ ಮಾರ್ಗ ಸೂಚಿಯನ್ವಯ ದಾಖಲೆಗಳ ಪ್ರಕಾರ ಕಾರ್ಯನಿರ್ವಹಿಸಿ ,ಆತ್ಮತೃಪ್ತಿ ಕಾಣಬೇಕು ಎಂದು ಸಲಹೆ ನೀಡಿದರು. ಏಕೆಂದರೆ ಸರ್ಕಾರಿ ಕೆಲಸವನ್ನು ನೌಕರರು ಸೇವೆಯಾಗಿ ಪರಿಗಣಿಸ ಬೇಕು,ಕಚೇರಿಗೆ ಆಗಮಿಸುವ ರೈತರು ಮತ್ತು ಸಾರ್ವಜನಿಕರಿಗೆ ಸಕಾಲದಲ್ಲಿ ಸೇವೆ ಒದಗಿಸುವ ಕೆಲಸ ಮಾಡಬೇಕು ಎಂದರು. ನಂತರ ಸರ್ಕಾರಿ ನೌಕರರ ಸಂಘದ ತಾಲ್ಲೂಕಾಧ್ಯಕ್ಷ ಚಂದ್ರಶೇಖರ ಹಿರೇಮಠ ಮಾತನಾಡಿ, ಸರ್ಕಾರಿ ನೌಕರರು ಯಾವುದೇ ಒತ್ತಡಗಳಿಗೆ ಮಣಿಯದೇ ಸರಕಾರದ ಸುತ್ತೋಲೆ ಮತ್ತು ಕಡತ ಅನುಸಾರ ಕೆಲಸ ಮಾಡಬೇಕು,ಸೇವೆಯಲ್ಲಿ ಇರುವವರೆಗೆ ಹುದ್ದೆಯ ಘನತೆಗೆ ಚ್ಯುತಿಬರದಂತೆ ಕಾರ್ಯನಿರ್ವಹಿಸಬೇಕು ಎಂದು ಕಿವಿಮಾತು ಹೇಳಿದರು. ತದನಂತರ ಭೂದಾಖಲೆಗಳ ಸಹಾಯಕ ನಿರ್ದೇಶಕ ಭೀಮರಾಜ ಹವಾಲ್ದಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಭೂದಾಖಲೆಗಳ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕಚೇರಿಯ ಸಿಬ್ಬಂದಿಗಳು ಅಚ್ಚುಕಟ್ಟಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.ಯಾವುದೇ ಲೋಪವಾಗದಂತೆ ಸಿಬ್ಬಂದಿ ಎಚ್ಚರಿಕೆ ವಹಿಸಿ ಕೆಲಸ ಮಾಡಬೇಕು.ಸರಕಾರದ ಸೇವೆಯಲ್ಲಿರುವ ನಾವುಗಳು ಆತ್ಮಗೌರವ, ಬಡಜನರ ಸೇವೆಯಲ್ಲಿ ಸಂತೃಪ್ತಿಯನ್ನು ಕಾಣಬೇಕು ಎಂದರು. ಸರ್ಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಆನಂದಮೋಹನ್ ಸೇರಿದಂತೆ ಭೂದಾಖಲೆಗಳ ಕಚೇರಿಯ ತಪಾಸಕರು, ಕಚೇರಿಯ ಭೂಮಾಪಕರು, ಸಿಬ್ಬಂದಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸಹೋದರಿಯರಿಬ್ಬರ ಮೃತದೇಹ ಪತ್ತೆ

ಕಲಬುರಗಿ: ಜಿಲ್ಲೆಯ ಯಡ್ರಾಮಿ ತಾಲೂಕಿನ ಇಜೇರಿ ಗ್ರಾಮದಲ್ಲಿ ಹೃದಯ ಕಲುಕುವ ಘಟನೆ ಬೆಳಕಿಗೆ ಬಂದಿದೆ. ಗ್ರಾಮದ ಬಾವಿಯಲ್ಲಿ ಇಬ್ಬರು ಬಾಲಕಿಯರ ಶವಗಳು ಪತ್ತೆಯಾಗಿದ್ದು, ಸ್ಥಳೀಯರಲ್ಲಿ ಆತಂಕ ಮತ್ತು ದುಃಖದ ವಾತಾವರಣ ನಿರ್ಮಾಣವಾಗಿದೆ.

ಮೃತ ಬಾಲಕಿಯರು ಸಹೋದರಿಯರಾಗಿದ್ದು, ಅವರ ವಯಸ್ಸು 16 ಮತ್ತು 17 ವರ್ಷ ಎಂದು ತಿಳಿದುಬಂದಿದೆ. ಶವಗಳು ಪತ್ತೆಯಾದ ಸಂದರ್ಭದಲ್ಲಿ ಇಬ್ಬರ ಕೈಗಳಿಗೂ ಹಗ್ಗ ಕಟ್ಟಿರುವ ಸ್ಥಿತಿಯಲ್ಲಿ ಕಂಡು ಬಂದಿದ್ದು, ಪ್ರಕರಣಕ್ಕೆ ಮತ್ತಷ್ಟು ನಿಗೂಢತೆ ಉಂಟುಮಾಡಿದೆ. ಈ ಘಟನೆಗೆ ನಿಖರ ಕಾರಣ ಏನು ಎಂಬುದು ಇನ್ನೂ ತಿಳಿದು ಬಂದಿಲ್ಲ. ಕುಟುಂಬಸ್ಥರು ಶವಗಳನ್ನು ಕಂಡು ದಿಗ್ಭ್ರಮೆಗೆ ಒಳಗಾಗಿದ್ದು,ಆಕ್ರಂದನ ಮುಗಿಲು ಮುಟ್ಟಿದೆ.

ಈ ಸಂಬಂಧ ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ. ಈ ಘಟನೆ ಆತ್ಮಹತ್ಯೆಯೋ ಅಥವಾ ಇನ್ನಾವುದೇ ಕಾರಣವೋ ಎಂಬುದನ್ನು ತಿಳಿಯಲು ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದಾರೆ.

ಆಶಾ ಭೋಸ್ಲೆ ನಿಧನಕ್ಕೆ ಸಂತಾಪ


ಹುಬ್ಬಳ್ಳಿ: ಭಾರತೀಯ ಚಿತ್ರರಂಗದ ಬಹುಭಾಷಾ ಹೆಸರಾಂತ ಹಿನ್ನಲೆ ಗಾಯಕಿ ನಿಧನರಾದ ಸುದ್ದಿ ತಿಳಿದು ದುಃಖವಾಗಿದ್ದು, ದಶಕಗಳ ಕಾಲ ಸಾವಿರಾರು ಹಾಡುಗಳನ್ನು ಹಾಡಿ ಪ್ರೇಕ್ಷಕರನ್ನು ರಂಜಿಸಿದ ಆಶಾ ಭೋಸ್ಲೆ ಚಿತ್ರರಂಗದ ಆಧಾರಸ್ತಂಭ ಆಗಿದ್ದರು ಎಂದು ಎಂದು ಶಾಸಕ ಮಹೇಶ ಟೆಂಗಿನಕಾಯಿ ಅವರು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

ಹಿಂದಿ ಚಿತ್ರರಂಗದಲ್ಲಿ ನಮ್ಮದೇ ಆದ ಛಾಪು ಮೂಡಿಸಿ ತಮ್ಮ ಸುಮಧುರ ಕಂಠದಿಂದ ಕೋಗಿಲೆಯ ಕಂಠದಿಂದ ಸ್ವರಗಳು ಬರುವ ಹಾಗೆ ಗಾನವನ್ನು ಪ್ರಸ್ತುತ ಪಡಿಸುತ್ತಿದ್ದರು. ಹಿಂದೂಸ್ತಾನಿ ಸಂಗೀತ ರಂಗದಲ್ಲಿ ಅನೇಕ ಮಹಾನ್ ಕಲಾವಿದರ ಹಾಡುಗಳನ್ನು ತಮ್ಮ ಕಂಠದಿಂದ ಹಾಡಿ ಪ್ರೇಕ್ಷಕರ ಮನಸಿಗೆ ಮುದ ನೀಡಿದ ಖ್ಯಾತಿ ಆಶಾ ಭೋಸ್ಲೆ ರವರದ್ದು ಅವರು ಇಂದು ನಮ್ಮೊಂದಿಗಿಲ್ಲ, ಭಗವಂತನು ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಕುಟುಂಬ ವರ್ಗಕ್ಕೆ ದುಃಖ ಭರಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇನೆ.

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	5215	5810
ಕಡಲೆಕಾಳು	1001	5655
ಉದ್ದಿನಬೇಳೆ	13465	13465
ಉದ್ದಿನಕಾಳು	1869	7310
ತೆಂಗಿನಕಾಯಿ	16000	32000
ಒಣ ಮೆಣಸಿನಕಾಯಿ	9697	49290
ಹೆಸರುಕಾಳು	2410	5350
ನೆಲಗಡಲೆ (ಶೇಂಗಾ)	5500	6916
ಹುರುಳಿ ಕಾಳು	3216	3216
ಜೋಳ	1517	4325
ಮೆಕ್ಕೆಜೋಳ	1661	2000
ಮಡಿಕೆ (ಮಟಕಿ)	5656	13352
ಸಾಸುವೆ	4009	4029
ನವಣೆ	2051	2051
ಈರುಳ್ಳಿ	500	1800
ಆಲೂಗಡ್ಡೆ	1300	1900
ಅಕ್ಕಿ	5289	6165
ಕುಸುಬೆ	5571	5616
ಸೋಯಾಬಿನ್	4290	5589
ತೊಗರಿ	4169	4169
ತೊಗರಿ ಬೇಳೆ	10400	10400
ಗೋಧಿ	1739	3195

ಕಿರುಸುದ್ದಿ



ಇಂದು ಚೆನ್ನೈನಲ್ಲಿ ಕೆಕೆಆರ್ ಹೋರಾಟ

ಚೆನ್ನೈ: ಕಳೆದ ನಾಲ್ಕು ಪಂದ್ಯಗಳಲ್ಲಿ ಮೊದಲ ಗೆಲುವಿನ ರುಚಿ ಕಂಡಿರುವ ಆತ್ಮವಿಶ್ವಾಸದಲ್ಲಿರುವ ಚೆನ್ನೈ ಸೂಪರ್ ಕಿಂಗ್ಸ್ ಈವರೆಗೆ ಮೂರು ಸೋಲು ಕಂಡಿರುವ ಕೆಕೆಆರ್ ಅನ್ನು ಎದುರಿಸಲಿದೆ. ಕೆಕೆಆರ್ ಪಂದ್ಯವೊಂದಕ್ಕೆ ಮಳೆ ಅಡ್ಡಿಯಾಗಿದ್ದರಿಂದ ಇನ್ನೂ ತನ್ನ ಗೆಲುವಿನ ಲಯ ಕಂಡುಕೊಂಡಿಲ್ಲ. ಈ ಪಂದ್ಯವನ್ನು ಗೆಲ್ಲುವುದು ಕೆಕೆಆರ್ ತಂಡಕ್ಕೆ ಬಹಳ ಮುಖ್ಯವಾಗಿದ್ದು, ಚೆನ್ನೈ ತವರಿನಲ್ಲಿ ಅದನ್ನು ಮಣಿಸುವುದು ಸುಲಭದ ಮಾತಲ್ಲ. ಎರಡು ಬಾರಿ ಐಪಿಎಲ್ ಫೈನಲ್ ಮತ್ತು ಒಂದು ಬಾರಿ ಚಾಂಪಿಯನ್ಸ್ ಲೀಗ್ ಫೈನಲ್‌ನಲ್ಲಿ ಸೆಣಸಾಡಿದ ಬದ್ಧ ಎದುರಾಳಿಗಳ ನಡುವಿನ ಪಂದ್ಯ ಚೆನ್ನೈನಲ್ಲಿ ಕುತೂಹಲ ಕೆರಳಿಸಿದೆ. ಪಂಜಾಬ್ ಕಿಂಗ್ಸ್ ವಿರುದ್ಧದ ಕೆಕೆಆರ್ ತವರಿನ ಪಂದ್ಯವು ಮಳೆಗೆ ರದ್ದಾಗಿತ್ತು. ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧ ಆರಂಭಿಕ ಸಂಜು ಸ್ಯಾಮ್ಸನ್ ಶತಕ ದಾಖಲಿಸಿದ್ದು, ಸಂಜು ಲಯ ಕಂಡುಕೊಂಡಿರುವುದು ಸಿಎಸ್‌ಕೆ ಡಗೌಟ್‌ನಲ್ಲಿ ನಿಟ್ಟುಸಿರು ಬಿಡುವಂತಾಗಿದೆ. ಮಾಜಿ ನಾಯಕ ಎಂಎಸ್ ಧೋನಿ ಇನ್ನೂ ಸಹ ಆಯ್ಕೆಯಾಗುವ ಹಂತದಲ್ಲಿಲ್ಲ. ಅವರು ಅಭ್ಯಾಸದಲ್ಲಿ ಮಾತ್ರ ಕಾಣಿಸುತ್ತಿದ್ದು, ಆಡುವ ಬಳಗದಲ್ಲಿ ಕಾಣಿಸಿಕೊಂಡಿಲ್ಲ. ಚೆಪಾಕ್‌ನಲ್ಲಿ ಚರುಣ್ ಚಕ್ರವರ್ತಿ ಅವರ ಅನುಭವವನ್ನು ಬಳಸಿಕೊಳ್ಳಲು ಕೆಕೆಆರ್ ಮುಂದಾಗಲಿದೆ.

ಡಗೌಟ್‌ನಲ್ಲಿ ಫೋನ್ ಬಳಸಿದ ರೋಮಿಗೆ ಬಿಸಿಸಿಐ ನೋಟಿಸ್

ಗುವಾಹಟಿ: ಆರ್‌ಸಿಬಿ ವಿರುದ್ಧದ ಐಪಿಎಲ್ ಪಂದ್ಯದ ವೇಳೆ ಡಗೌಟ್‌ನಲ್ಲಿ ಆಟಗಾರರ ಜತೆ ಕುಳಿತಿದ್ದಾಗ ಪಂದ್ಯದ ಸಮಯದಲ್ಲೇ ಮೊಬೈಲ್ ಫೋನ್ ಬಳಸಿ ನಿಯಮ ಉಲ್ಲಂಘಿಸಿದ್ದ ರಾಜಸ್ಥಾನ್ ರಾಯಲ್ಸ್ ಮ್ಯಾನೇಜರ್ ರೋಮಿ ಬಿಂದರ್ ಅವರಿಗೆ ಬಿಸಿಸಿಐ ಶೋಕಾಸ್ ನೋಟಿಸ್ ಕಳುಹಿಸಿದೆ. ಡಗೌಟ್‌ನಲ್ಲಿ ಮೊಬೈಲ್ ಫೋನ್ ಬಳಸುವ ಮೂಲಕ ರೋಮಿ ಬಿಂದರ್, ಬಿಸಿಸಿಐನ ಭ್ರಷ್ಟಾಚಾರ ವಿರೋಧಿ ಮತ್ತು ಭದ್ರತಾ ಘಟಕದ (ಎಸಿಎಸ್‌ಯು) ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಬಿಸಿಸಿಐ ನೋಟಿಸ್‌ಗೆ 48 ಗಂಟೆಗಳೊಳಗೆ ಬಿಂದರ್ ಮತ್ತು ರಾಜಸ್ಥಾನ್ ಫ್ರಾಂಚೈಸಿ ಉತ್ತರಿಸಬೇಕಾಗಿದೆ. ಡಗೌಟ್‌ನಲ್ಲಿ ಪಂದ್ಯದ ವೇಳೆ ಯುವ ಬ್ಯಾಟರ್ ವೈಭವ್ ಸೂರ್ಯವಂಶಿ ಜತೆ ಕುಳಿತಿದ್ದ ಅನುಭವಿ ಮ್ಯಾನೇಜರ್ ರೋಮಿ ಮೊಬೈಲ್ ಫೋನ್‌ನಲ್ಲಿ ಗುರುಟುತ್ತಿದ್ದರು.

ಅಲ್ಕರಾಜ್ ಮಣಿಸಿದ ಸಿನ್ನರ್ ಮೊಂಟೆ ಕಾರ್ಲೋ ಮಾಸ್ಟರ್

ಮೊಂಟೆ ಕಾರ್ಲೋ: ಫ್ರಾನ್ಸ್‌ನಲ್ಲಿ ನಡೆದ ಮೊಂಟೆ ಕಾರ್ಲೋ ಮಾಸ್ಟರ್ಸ್ ಫೈನಲ್‌ನಲ್ಲಿ ತಮ್ಮ ಬದ್ಧ ಎದುರಾಳಿ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರನ್ನು ನೇರ ಸೆಟ್‌ಗಳ ಅಂತರದಿಂದ ಮಣಿಸಿದ ಇಟಲಿಯ ಯಾನಿಕ್ ಸಿನ್ನರ್ ಚಾಂಪಿಯನ್ ಪಟ್ಟ ಅಲಂಕರಿಸಿದ್ದಾರೆ. ಕಳೆದ ತಿಂಗಳು ನಡೆದಿದ್ದ ಅಮೆರಿಕದ ಇಂಡಿಯನ್ ವೆಲ್ಸ್ ಮತ್ತು ಮಯಾಮಿ ಓಪನ್ ಟೂರ್ನಿಗಳಲ್ಲೂ ಸಿನ್ನರ್ ಚಾಂಪಿಯನ್ ಆಗಿದ್ದು, ಪ್ರಸಕ್ತ ಟೆನಿಸ್ ಋತುವಿನಲ್ಲಿ ಇದು ಮೂರನೇ ಪ್ರಶಸ್ತಿ ಗೆದ್ದು ಹ್ಯಾಟ್ರಿಕ್ ಗೆಲುವನ್ನು ಸಂಭ್ರಮಿಸಿದ್ದಾರೆ. ಭಾನುವಾರ ನಡೆದ ಫೈನಲ್‌ನಲ್ಲಿ ಅಲ್ಕರಾಜ್ ಅವರನ್ನು 7-6(5), 6-3 ನೇರ ಸೆಟ್‌ಗಳಿಂದ ಸೋಲಿಸಿದ ಸಿನ್ನರ್ ಮೊಂಟೆ ಕಾರ್ಲೋ ಮಾಸ್ಟರ್ಸ್ ಪ್ರಶಸ್ತಿಗೆ ಮುತ್ತಿಟ್ಟರು. ಇದರೊಂದಿಗೆ 24ರ ಹರೆಯದ ಸಿನ್ನರ್, ಸತತ ನಾಲ್ಕನೇ ಎಟಿಪಿ-1000 ಪ್ರಶಸ್ತಿ ಗೆದ್ದ ಕೇವಲ ಮೂರನೇ ಆಟಗಾರ ಎಂಬ ದಾಖಲೆಯನ್ನು ಬರೆದಿದ್ದಾರೆ. ಈ ಹಿಂದೆ ನೊವಾಕ್ ಜೊಕೊವಿಚ್ (ಸರ್ಬಿಯಾ) ಮತ್ತು ರಾಫೆಲ್ ನಡಾಲ್ (ಸ್ಪೇನ್) ಮಾತ್ರ ಈ ಸಾಧನೆಗೈದಿದ್ದರು. ಕಳೆದ ನವೆಂಬರ್‌ನಲ್ಲಿ ಎಟಿಪಿ ಫೈನಲ್‌ನಲ್ಲಿ ಮುಖಾಮುಖಿ ಆಗಿದ್ದ ಬಳಿಕ ಸಿನ್ನರ್ ಮತ್ತು ಅಲ್ಕರಾಜ್ ಮುಖಾಮುಖಿ ಆಗಿದ್ದರು. ತಮ್ಮ ಹಿಂದಿನ ಎಲ್ಲಾ 17 ಪಂದ್ಯಗಳನ್ನು ಗೆದ್ದಿರುವ ಸಿನ್ನರ್, 2015ರಲ್ಲಿ ಜೊಕೊವಿಚ್ ಬಳಿಕ ಒಂದೇ ಋತುವಿನಲ್ಲಿ ಆರಂಭಿಕ ಮೂರು ಎಟಿಪಿ-1000 ಪ್ರಶಸ್ತಿಯನ್ನು ಗೆದ್ದ ಆಟಗಾರನೆಂಬ ದಾಖಲೆ ಬರೆದಿದ್ದಾರೆ. ಇದೇ ರೀತಿ ಆವೆಮಣ್ಣಿನಲ್ಲಿ ತಮ್ಮ ಹಿಂದಿನ 17 ಪಂದ್ಯಗಳನ್ನು ಗೆದ್ದಿದ್ದ ಅಲ್ಕರಾಜ್ ಕಳೆದ ಋತುವಿನಲ್ಲಿ ಫ್ರೆಂಚ್ ಓಪನ್ ಮತ್ತು ರೋಮ್‌ನಲ್ಲಿ ಇಟಾಲಿಯನ್ ಓಪನ್ ಗೆದ್ದಿದ್ದರು. ವೃತ್ತಿಜೀವನದಲ್ಲಿ ಸಿನ್ನರ್ ಎದುರು ಅಲ್ಕರಾಜ್ 7ನೇ ಸೋಲುಂಡಿದ್ದು, ಇವರಿಬ್ಬರು ಮುಖಾಮುಖಿ ಗೆಲುವಿನ ಅಂತರವು 7-10 ತಲುಪಿದೆ.



ಮುಂಬೈ ಗೆಲುವಿಗೆ ಕೃಣಾಲ್, ಸುಯಶ್ ಅಡ್ಡಿ | ಬ್ಯಾಟಿಂಗ್‌ನಲ್ಲಿ ಮಿಂಚಿದ ಸಾಲ್ಟ್, ಪಾಟಿದಾರ್

ಗೆಲುವಿನ ಹಾದಿಗೆ ಮರಳಿದ ಆರ್‌ಸಿಬಿ

ಮುಂಬೈ: ತವರಿನ ಫೇವರಿಟ್ ಮುಂಬೈ ಇಂಡಿಯನ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) 18 ರನ್‌ಗಳಿಂದ ಜಯ ಸಾಧಿಸಿದೆ. ಈ ಗೆಲುವಿನೊಂದಿಗೆ ಆರ್‌ಸಿಬಿ ಗೆಲುವಿನ ಹಾದಿಗೆ ಮರಳಿದೆ.

ಆರ್‌ಸಿಬಿ ನೀಡಿದ 241 ರನ್ ಬೃಹತ್ ಸವಾಲನ್ನು ಬೆನ್ನತ್ತಿದ ಮುಂಬೈಗೆ ರಿಕೆಲ್ಟನ್ ಭರ್ಜರಿ ಆರಂಭವನ್ನು ನೀಡಿದ್ದರು. ಮುಂಬೈ ಮೊದಲ ಮೂರು ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 39 ರನ್, ನಾಲ್ಕು ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 48 ರನ್ ಎಂಬ ಉತ್ತಮ ಸ್ಥಿತಿಯಲ್ಲಿತ್ತು. ಸುಲಭದಲ್ಲಿ ಸೋಲು ಒಪ್ಪಿಕೊಳ್ಳಲು ಮುಂಬೈ ಸಿದ್ಧವಿರಲಿಲ್ಲ. ಆದರೆ ಕೃಣಾಲ್ ಪಾಂಡ್ಯ ಬೌಲಿಂಗ್ ಮಾಡಲು ಬಂದಂತೆ ಆಸ್ಕಿಂಗ್ ರೇಟ್ ಹೆಚ್ಚಾಯಿತು. ಇಂಪ್ಯಾಕ್ಟ್ ಪ್ಲೇಯರ್ ಆಗಿ ಮೈದಾನಕ್ಕಿಳಿದ ಯುವ ವೇಗಿ ರಸಿಕ್ ದಾರ್ ತಮ್ಮ ಮೊದಲ ಓವರ್‌ನಲ್ಲಿ ವೇರಿಯೇಷನ್ ಬಳಸಿಕೊಂಡು ಕೇವಲ 8 ರನ್ ನೀಡಿದ್ದರು. ಪವರ್ ಪ್ಲೇನಲ್ಲಿ ಎಸೆದಿದ್ದ ಎರಡು ಓವರ್‌ಗಳಲ್ಲಿ 15 ರನ್ ಅಷ್ಟೇ ಬಿಟ್ಟುಕೊಟ್ಟಿದ್ದರು.

ರೋಹಿತ್ ಮೈದಾನ ತೊರೆದ ಬಳಿಕ ರಿಕೆಲ್ಟನ್ ಮತ್ತು ತಿಲಕ್‌ರನ್ನು ಲೆಗ್‌ಸ್ಪಿನ್ನರ್ ಸುಯಶ್ ಒಂದೇ ಓವರ್‌ನಲ್ಲಿ ಪೆವಿಲಿಯನ್ ಕಳುಹಿಸಿದ್ದರು. ಗೂಗ್ಲಿಯಿಂದ 8ನೇ ಓವರ್ ಆರಂಭಿಸಿದ್ದ ಸುಯಶ್, ಸ್ಲಾಗ್ ಸ್ವೀಪ್‌ಗೆ ಯತ್ನಿಸಿದ ರಿಕೆಲ್ಟನ್ ಅವರನ್ನು ಬಲಿ ತೆಗೆದುಕೊಂಡಿದ್ದರು. ಟಾಪ್ ಎಜ್ ಆಗಿ ಭುವನೇಶ್ವರ್ ಕೈಗೆ ಸೇರಿತ್ತು. ಅದೇ ಓವರ್‌ನ ಐದನೇ ಎಸೆತವು ಔಟ್‌ಸೈಡ್ ಲೆಗ್‌ನಲ್ಲಿ ಬಂದಾಗ ಹೊಡೆಯುವ ಯತ್ನದಲ್ಲಿ ತಿಲಕ್ ವರ್ಮಾ ಶಾರ್ಟ್ ಫೈನ್ ಲೆಗ್‌ನಲ್ಲಿ ಕ್ಯಾಚಿತ್ತು ಔಟಾಗಿದ್ದರು.

ಬ್ಯಾಟಿಂಗ್‌ಗಿಳಿದ ಮುಂಬೈ ನಾಯಕ ಹಾರ್ದಿಕ್ ಪಾಂಡ್ಯ ಎದುರಿಸಿದ ಮೊದಲ ಎಸೆತದಲ್ಲೇ ಸಿಕ್ಸರ್ ಬಾರಿಸಿದ್ದರು. ಆದರೆ ಅಗತ್ಯವಿರುವ ರನ್ ರೇಟ್ ಹೆಚ್ಚುತ್ತಲೇ ಹೋಗಿತ್ತು. ಪಾಂಡ್ಯ ಸಿಕ್ಸರ್ ಹೊಡೆದಿದ್ದರಿಂದ ಸುಯಶ್ ಶರ್ಮಾ ಮೊದಲ ಓವರ್‌ನಲ್ಲಿ 8 ರನ್‌ಗಳು ಬಂದಿದ್ದವು. ಇಲ್ಲಿ ಸುಯಶ್ ಬೌಲಿಂಗ್‌ನ ಇಂಪ್ಯಾಕ್ಟ್ ಕಾಣಬಹುದು. ಕಳೆದ ಪಂದ್ಯದಲ್ಲಿ ಆರ್‌ಆರ್ ವಿರುದ್ಧ ಸುಯಶ್ ಲೆಗ್‌ಸ್ಪಿನ್ ಕೊರತೆಯನ್ನು ಆರ್‌ಸಿಬಿ ಕಂಡಿತ್ತು.



ಇನ್ನೊಂದು ಬದಿಯಲ್ಲಿ ಭಾರತದ ಟಿ20 ನಾಯಕ ಸೂರ್ಯ, ಕೃಣಾಲ್‌ರ ನಿಧಾನಗತಿಯ ಎಸೆತಕ್ಕೆ ಹೊಡೆಯುವ ಯತ್ನದಲ್ಲಿ ಶಾರ್ಟ್ ಲೆಗ್‌ನಲ್ಲಿ ಕ್ಯಾಚಿತ್ತಿದ್ದರು. ಆದರೆ ಸೂರ್ಯ ಅವರ 150 ಸ್ಟ್ರೈಕ್ ರೇಟ್‌ನ ಬ್ಯಾಟಿಂಗ್ ಮುಂಬೈಗೆ ಪ್ರಯೋಜನ ಸಿಗಲಿಲ್ಲ. ಸೂರ್ಯ ಔಟಾಗಿದ್ದಾಗ ಮುಂಬೈ ಗೆಲುವಿಗೆ 46 ಎಸೆತಗಳಲ್ಲಿ 120 ರನ್‌ಗಳ ಅಗತ್ಯವಿತ್ತು.

ರಥರ್‌ಫೋರ್ಡ್ ಸಿಕ್ಸರ್ ಮಳೆ: ಶೇರ್ಫಾನ್ ರಥರ್ ಫೋರ್ಡ್ ತಮ್ಮ ಸ್ಫೋಟಕ ಆಟ ಪ್ರದರ್ಶಿಸಿ, ಮುಂಬೈ ಸೋಲಿನ ಅಂತರ ಮತ್ತು ನೆಟ್ ರನ್‌ರೇಟ್ ಕುಸಿತ ಕಡಿಮೆಗೊಳಿಸಿದ್ದರು. ರಥರ್‌ಫೋರ್ಡ್ ಕೇವಲ 31 ಎಸೆತಗಳಿಂದ ಒಂದು ಬೌಂಡರಿ ಮತ್ತು 9 ಭರ್ಜರಿ ಸಿಕ್ಸರ್ ಗಳಿದ್ದ 71 ರನ್ ಗಳಿಸಿ ಅಜೇಯರಾಗಿ ಉಳಿದಿದ್ದರು.

ಹಿಟ್ ಮ್ಯಾನ್ ಹರ್ಟ್!

ಲಯದಲ್ಲಿ ಕಾಣಿಸಿಕೊಂಡಿದ್ದ ಮಾಜಿ ನಾಯಕ ರೋಹಿತ್ ಶರ್ಮಾ ಅತೀವ ಸ್ನಾಯು ಸೆಳೆತದಿಂದಾಗಿ ಬಳಲುತ್ತಿದ್ದರು. ಈ ವೇಳೆ ಮುಂಬೈ ಇಂಡಿಯನ್ಸ್ 7 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 72 ರನ್ ಗಳಿಸಿ ಉತ್ತಮ ಸ್ಥಿತಿಯಲ್ಲಿದ್ದಾಗ, ಹಿಟ್ ಮ್ಯಾನ್ ಗಾಯಾಳಾಗಿ ನಿವೃತ್ತಿ ಪಡೆದಿದ್ದರು. ಬಹುಶಃ ಇದೇ ಸಂದರ್ಭ ಅದೃಷ್ಟ ಆರ್‌ಸಿಬಿ ಪಾಲಿಗೆ ಒಲಿದಿತ್ತು. 13 ಎಸೆತಗಳಿಂದ 2 ಬೌಂಡರಿ ಮತ್ತು 1 ಸಿಕ್ಸರ್ ಒಳಗೊಂಡಿದ್ದ 19 ರನ್ ಗಳಿಸಿದ್ದರು.



- 462 ರನ್ - ಐಪಿಎಲ್‌ನಲ್ಲೇ ಆರ್‌ಸಿಬಿ-ಮುಂಬೈ ಹಣಾಹಣಿಯಲ್ಲಿ ಒಟ್ಟು ದಾಖಲಾದ ಅತ್ಯಧಿಕ ರನ್
- ಮುಂಬೈ ಪರ ಐಪಿಎಲ್‌ನಲ್ಲಿ 6,000 ರನ್ ಮೈಲಿಗಲ್ಲು ದಾಟಿದ ರೋಹಿತ್ ಶರ್ಮಾ
- ಮುಂಬೈ ಇಂಡಿಯನ್ಸ್ ವಿರುದ್ಧ 1,000 ರನ್ ಮೈಲಿಗಲ್ಲು ದಾಟಿದ ವಿರಾಟ್ ಕೊಹ್ಲಿ
- ಐಪಿಎಲ್‌ನಲ್ಲಿ ತಮ್ಮ ವೈಯಕ್ತಿಕ ಅತಿವೇಗದ ಅರ್ಧಶತಕ ದಾಖಲಿಸಿದ ರಜತ್ ಪಾಟಿದಾರ್

ಪಾಂಡ್ಯ ಸಹೋದರರ ಕಾದಾಟ!

ಬ್ಯಾಟಿಂಗ್‌ಗಿಳಿದ ಹಾರ್ದಿಕ್ ಅವರನ್ನು ಬೌನ್ಸರ್ ಮೂಲಕ ಕೃಣಾಲ್ ಸ್ವಾಗತಿಸಿದ್ದರು. ಕೃಣಾಲ್ ಬೌನ್ಸರ್‌ಗೆ ಹಾರ್ದಿಕ್ ರನ್ ಹೊಡೆದಿಲ್ಲ. ಪಾಂಡ್ಯ ಸಹೋದರರ ವೈಯಕ್ತಿಕ ಜೀವನದ ಭಿನ್ನಾಭಿಪ್ರಾಯ ಆಟದಲ್ಲೂ ಕಾಣಿಸಿತ್ತು. ಕಷ್ಟದ ಕ್ಯಾಚ್ ಕೈಚೆಲ್ಲಿ ಜೀವದಾನ ನೀಡಿದ್ದ ಕೃಣಾಲ್, ಹಾರ್ದಿಕ್ ಔಟಾದಾಗ ಜಿಗಿಯುತ್ತ ಸಂಭ್ರಮಿಸಿದ್ದರು. ಕೃಣಾಲ್ ರತ್ತ ನೋಡುತ್ತಲೇ ಹಾರ್ದಿಕ್ ಪೆವಿಲಿಯನ್ ಕಡೆ ನಡೆದಿದ್ದರು. ಡೀಪ್ ಎಸೆತದಲ್ಲಿ ರೊಮಾರಿಯೋಗೆ ಕ್ಯಾಚ್ ನೀಡಿ ಔಟಾಗಿದ್ದರು.

ರಜತ್ ಅವರಿಗೆ ಭಾರೀ ಪ್ರಶಂಸೆ

ಹಾರ್ದಿಕ್, ರೋಹಿತ್, ಸೂರ್ಯರಂತಹ ನಾಯಕರ ಅನುಭವದಿಂದ ಕೂಡಿದ್ದ ಮುಂಬೈ ವಿರುದ್ಧದ ನಾಯಕತ್ವ ಮತ್ತು ಬ್ಯಾಟಿಂಗ್‌ನಲ್ಲಿ ಮಿಂಚಿದ ಪಾಟಿದಾರ್‌ಗೆ ಕ್ರಿಕೆಟ್ ಅಭಿಮಾನಿಗಳಿಂದ ಭಾರೀ ಪ್ರಶಂಸೆ ವ್ಯಕ್ತವಾಗಿದೆ. ಪಂದ್ಯದಲ್ಲಿ ರಜತ್ 17 ಎಸೆತಗಳಲ್ಲಿ ಸ್ಫೋಟಕ ಅರ್ಧಶತಕ ದಾಖಲಿಸಿದ್ದರು. ಕಳೆದ ಐಪಿಎಲ್, ರಣಜಿಯಲ್ಲಿ ಅತ್ಯುತ್ತಮ ಪ್ರದರ್ಶನದ ಹೊರತಾಗಿಯೂ ರಜತ್, ಭಾರತ ತಂಡದಲ್ಲಿ ಸ್ಥಾನ ಪಡೆದಿಲ್ಲ.



ಸಂಕ್ಷಿಪ್ತ ಸ್ಕೋರ್

ಆರ್‌ಸಿಬಿ - 240/4 (20): ಸಾಲ್ಟ್ 78(36), ಪಾಟಿದಾರ್ 53(20), ಕೊಹ್ಲಿ 50(38), ಡೇವಿಡ್ ಔಟಾಗದೆ 34(16), ಠಾಕೂರ್ 32ಕ್ಕೆ 1.

ಮುಂಬೈ - 222/6 (20): ರಥರ್‌ಫೋರ್ಡ್ ಔಟಾಗದೆ 71(31), ಹಾರ್ದಿಕ್ 40, ರಿಕೆಲ್ಟನ್ 37, ಸೂರ್ಯ 33, ಸುಯಶ್ 47ಕ್ಕೆ 2, ಕೃಣಾಲ್ 26ಕ್ಕೆ 1.

ಹೈ-ಸ್ಕೋರಿಂಗ್ ಪಂದ್ಯ 18 ರನ್ನಿಂದ ಗೆದ್ದ ಆರ್‌ಸಿಬಿ

ಆರಂಭ ಕೊಟ್ಟ ಕೊಹ್ಲಿ, ಮತ್ತೆ ಟಿಮ್ ಆರ್ಭಟ

ಪಂದ್ಯಶ್ರೇಷ್ಠ: ಸಾಲ್ಟ್

ಪದೇ ಪದೆ ಚೆಂಡು ಪರೀಕ್ಷಿಸಿದ ಡೇವಿಡ್



ಮುಂಬೈ: ಆತಿಥೇಯ ಮುಂಬೈ ಇಂಡಿಯನ್ಸ್ ವಿರುದ್ಧ ಆರ್‌ಸಿಬಿ ಬ್ಯಾಟಿಂಗ್ ಮಾಡುತ್ತಿದ್ದಾಗ ಫೀಲ್ಡ್ ಅಂಪೈರ್‌ಗಳು ದಿಢೀರ್ ಚೆಂಡು ಬದಲಿಸಿದ್ದು, ಚೆಂಡಿನ ಆಕಾರದ ಬಗ್ಗೆ ಅನುಮಾನಿಸುವ ರೀತಿಯಲ್ಲಿ ಆರ್‌ಸಿಬಿ ಬ್ಯಾಟರ್ ಟಿಮ್ ಡೇವಿಡ್ ಪದೇ ಪದೆ ಚೆಂಡನ್ನು ಪರೀಕ್ಷಿಸಿದ ಘಟನೆ ನಡೆದಿತ್ತು. ಅಂಪೈರ್ ಕೈಗೆ ಚೆಂಡು ಹಿಂದಿರುಗಿಸಲು ತಡ ಮಾಡಿದ್ದಕ್ಕಾಗಿ ಮತ್ತು ಅಂಪೈರ್ ಆದೇಶವನ್ನು ಉಲ್ಲಂಘಿಸಿದ್ದಕ್ಕಾಗಿ ಡೇವಿಡ್‌ಗೆ ಪಂದ್ಯ ವೇತನದ ಶೇ.25 ದಂಡ ವಿಧಿಸಲಾಗಿದೆ. ಅಲ್ಲದೆ, ಲೆವೆಲ್-1 ಅಪರಾಧ ಅನ್ವಯ 1 ಡೀಮೆರಿಟ್ ಅಂಕ ನೀಡಲಾಗಿದೆ.

ಡೇವಿಡ್‌ಗೆ ಪಂದ್ಯ ವೇತನದ ಶೇ.25 ದಂಡ!

18ನೇ ಓವರ್‌ನಲ್ಲಿ ಹಾರ್ದಿಕ್ ಎಸೆತವನ್ನು ಡೇವಿಡ್ ಸಿಕ್ಸರ್‌ಗಟ್ಟಿದ ಬಳಿಕ ಅಂಪೈರ್‌ಗಳು ಚೆಂಡನ್ನು ಬದಲಾಯಿಸಿದ್ದರು. ಮೈದಾನದ ಔಟ್‌ಫೀಲ್ಡ್ ತೇವಾಂಶದಿಂದ ಚೆಂಡು ಬಹಳ ಒದ್ದೆಯಾಗಿದ್ದು, ಅಂಪೈರ್‌ಗಳು ನಿಯಮದಂತೆ ಹಳೆಯ ಚೆಂಡಿನ ಬಾಕ್ಸ್ ತರಿಸಿ ಚೆಂಡನ್ನು ಬದಲಿಸುವ ನಿರ್ಧಾರ ತಳೆದಿದ್ದರು. ಅಂಪೈರ್ ಚೆಂಡನ್ನು ವಾಪಸ್ ನೀಡುವಂತೆ ಕೇಳಿದರೂ ನೀಡಿರಲಿಲ್ಲ. ಇದರಿಂದ ಅಂಪೈರ್‌ಗಳ ಕೆಂಗಣ್ಣಿಗೆ ಟಿಮ್ ಗುರಿಯಾದರು. ಅಂಪೈರ್‌ಗಳು ಆಯ್ದ ಚೆಂಡನ್ನೇ ಕೈಗೆತ್ತಿದ ಡೇವಿಡ್, ಅದನ್ನು ಮೇಲಕ್ಕೆ ಹಾರಿಸಿ ಕ್ಯಾಚ್ ಮಾಡುತ್ತ ಚೆಂಡಿನ ಆಕಾರ ಮತ್ತು ತೂಕವನ್ನು ಪದೇ ಪದೇ ಪರೀಕ್ಷಿಸಿದ್ದರು. ಮೈದಾನದ ಅಂಪೈರ್ಸ್ ವೀರೇಂದ್ರ ಶರ್ಮಾ ಮತ್ತು ಸ್ವರೂಪಾನಂದ್ ಕಣ್ಣೂರ್ ಶಿಸ್ತು ಉಲ್ಲಂಘನೆ ಎಚ್ಚರಿಕೆ ನೀಡಿದ ನಂತರ ಡೇವಿಡ್ ಚೆಂಡು ಮರಳಿಸಿದ್ದರು. ಅಂಪೈರ್‌ಗಳಿಗೆ ಚೆಂಡನ್ನು ಹಿಂದಿರುಗಿಸಿ ಬ್ಯಾಟಿಂಗ್ ಮರಳುತ್ತಿದ್ದ ಡೇವಿಡ್ ಬಳಿ ಬಂದ ರೋಹಿತ್ ಶರ್ಮಾ ಏನೋ ಹೇಳಿದ್ದು, ಇಬ್ಬರೂ ನಗುತ್ತಿದ್ದರು.

ಕಳೆದ ಆವೃತ್ತಿಗಿಂತ ಬಹುಮಾನದ ಮೊತ್ತ ಶೇ.10 ಏರಿಕೆ

ಮಹಿಳಾ ಟಿ20 ವಿಶ್ವಕಪ್ ಬಹುಮಾನ ₹82 ಕೋಟಿ!

ದುಬೈ: ಮಹಿಳೆಯರ ಟಿ20 ವಿಶ್ವಕಪ್ 2026 ಪಂದ್ಯಾವಳಿಗೆ ದಾಖಲೆಯ 82 ಕೋಟಿ ರೂ. ಬಹುಮಾನದ ಮೊತ್ತವನ್ನು ಐಸಿಸಿ ಸೋಮವಾರ ಘೋಷಿಸಿದೆ. ಯುಎಇ ಆತಿಥ್ಯದಲ್ಲಿ ಆಯೋಜಿಸಲಾಗಿದ್ದ ಕಳೆದ ಆವೃತ್ತಿಯ ಬಹುಮಾನದ ಮೊತ್ತಕ್ಕಿಂತ ಇದು ಶೇ.10 ಹೆಚ್ಚಾಗಿದೆ. ಚಾಂಪಿಯನ್ ತಂಡ ಸುಮಾರು 21.8 ಕೋಟಿ ರೂ. ಪ್ರಶಸ್ತಿ ಮೊತ್ತ ಪಡೆಯಲಿದೆ.

ಇಂಗ್ಲೆಂಡ್ ಮತ್ತು ವೇಲ್ಸ್ ಆತಿಥ್ಯದಲ್ಲಿ ಜೂ.12ರಿಂದ ಜು.5ರವರೆಗೆ ಮಹಿಳಾ ಟಿ20 ವಿಶ್ವಕಪ್ ನಡೆಯಲಿದೆ. 24 ದಿನಗಳ ಟೂರ್ನಿಯಲ್ಲಿ 12 ತಂಡಗಳು ಒಳಗೊಂಡಿವೆ. ಪಂದ್ಯಾವಳಿಯ ಬಹುಮಾನದ ಮೊತ್ತ 87,64,615 ಡಾಲರ್ (ಅಂದಾಜು 82 ಕೋಟಿ ರೂ.) ಆಗಿರಲಿದೆ. ಜೂ.12ರಂದು ಬರ್ಮಿಂಗ್‌ಹ್ಯಾಮ್‌ನ ಎಜ್‌ಬಾಸ್ಟನ್‌ನಲ್ಲಿ ನಡೆಯಲಿರುವ ಉದ್ಘಾಟನಾ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್ ಮತ್ತು ಶ್ರೀಲಂಕಾ ಸೆಣಸಾಡಲಿವೆ. ಪಂದ್ಯಾವಳಿಯ ಫೈನಲ್ ಜು.5ರಂದು ಐತಿಹಾಸಿಕ ಲಾರ್ಡ್ಸ್ ಮೈದಾನದಲ್ಲಿ ನಡೆಯಲಿದ್ದು, ಒಟ್ಟು 7 ಕ್ರೀಡಾಂಗಣಗಳಲ್ಲಿ 33 ಪಂದ್ಯಗಳು ನಡೆಯಲಿವೆ. ಕಳೆದ ಆವೃತ್ತಿಯ (2024ರ) ಮಹಿಳಾ ಟಿ20 ವಿಶ್ವಕಪ್ ಯುಎಇ ಆತಿಥ್ಯದಲ್ಲಿ ನಡೆದಿತ್ತು. ಯುಎಇನಲ್ಲಿ 10 ತಂಡಗಳು ಸ್ಪರ್ಧಿಸಿದ್ದು, 79,58,077 ಡಾಲರ್ (72.4 ಕೋಟಿ ರೂ.) ಬಹುಮಾನದ ಮೊತ್ತವಿತ್ತು. ಈ ಆವೃತ್ತಿಯಲ್ಲಿ ಇನ್ನೂ ಎರಡು ತಂಡಗಳು (ಸ್ಕಾಟ್ಲೆಂಡ್ ಮತ್ತು ನೆದರ್‌ಲೆಂಡ್) ಸೇರ್ಪಡೆಯಾಗಿದ್ದು, ಬಹುಮಾನದ ಮೊತ್ತವೂ ಇನ್ನಷ್ಟು ಹೆಚ್ಚಾಗಿದೆ.

ವಿಜೇತರಿಗೆ 21.8 ಕೋಟಿ ರೂ.!

ಚಾಂಪಿಯನ್ ತಂಡವು 23,40,000 ಡಾಲರ್ (21.8 ಕೋಟಿ ರೂ.) ಪ್ರಶಸ್ತಿ ಮೊತ್ತವನ್ನು ಬಾಚಿಕೊಳ್ಳಲಿದೆ. ರನ್ನರ್‌ಅಪ್ ಪ್ರಶಸ್ತಿ ಗೆದ್ದ ತಂಡವು 11,70,000 (10 ಕೋಟಿ ರೂ.) ಪಡೆಯಲಿದೆ. ಉಳಿದಂತೆ ಸೆಮಿಫೈನಲಿಸ್ಟ್ ತಂಡಗಳೆರಡು ತಲಾ 6,75,000 ಡಾಲರ್ (6.29 ಕೋಟಿ ರೂ.) ಪಡೆಯಲಿವೆ. ಗುಂಪಿನ ಹಂತದಲ್ಲಿ, ಪ್ರತಿ ಪಂದ್ಯದ ವಿಜೇತ ತಂಡವು 31,154 ಡಾಲರ್ (29 ಲಕ್ಷ ರೂ.) ಪಡೆಯಲಿದೆ. ಎಲ್ಲಾ 12 ತಂಡಗಳು ಕನಿಷ್ಠಪಕ್ಷ 2,47,500 ಡಾಲರ್ (2.31 ಕೋಟಿ ರೂ.) ಬಹುಮಾನದ ಮೊತ್ತ ಪಡೆಯಲಿವೆ.

> ಮಹಿಳಾ ಕ್ರಿಕೆಟ್ ವೇಗದ ಪ್ರಗತಿ ಕಾಣುತ್ತಿದೆ. ಇದರಿಂದ ಐಸಿಸಿ ಮಹಿಳಾ ಟಿ20 ವಿಶ್ವಕಪ್ ಟೂರ್ನಿ 12 ತಂಡಗಳಿಗೆ ವಿಸ್ತರಿಸಿಕೊಂಡಿದೆ. ದಾಖಲೆಯ ಬಹುಮಾನದ ಮೊತ್ತವು ಪ್ರಬಲ, ಸ್ಪರ್ಧಾತ್ಮಕ ಜಾಗತಿಕ ಕ್ರೀಡೆಯನ್ನಾಗಿ ಮಹಿಳಾ ಕ್ರಿಕೆಟ್ ಬೆಳೆಸುವ ನಮ್ಮ ಬದ್ಧತೆಯನ್ನು ತೋರಿಸುತ್ತದೆ.
> ■ ಸಂಜೋಗ್ ಗುಪ್ತಾ, ಐಸಿಸಿ ಸಿಇಒ.

ಇಶಾನ್-ಕ್ಲಾಸನ್ 88 ರನ್ ಜತೆಯಾಟ

ಕಿಶನ್ ನಾಯಕನಾಟ, ಸನ್ ಉತ್ತಮ ಮೊತ್ತ



ಹೈದರಾಬಾದ್: ನಾಯಕ ಇಶಾನ್ ಕಿಶನ್ ಸ್ಫೋಟಕ ಬ್ಯಾಟಿಂಗ್‌ನಿಂದಾಗಿ ತವರಿನ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ವಿರುದ್ಧ ಸನ್‌ರೈಸರ್ಸ್ ಹೈದರಾಬಾದ್ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡ ಹೊರತಾಗಿಯೂ 216 ರನ್‌ಗಳ ದೊಡ್ಡ ಮೊತ್ತ ಕಲೆಹಾಕಿತು.

ಟಾಸ್ ಗೆದ್ದ ರಾಯಲ್ಸ್ ಕ್ಷೇತ್ರರಕ್ಷಣೆ ಆಯ್ದುಕೊಂಡಿದ್ದು, ಜೊಫ್ರಾ ಆರ್ಚರ್ ಎಸೆದಿದ್ದ ಮೊದಲ ಎಸೆತದಲ್ಲೇ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಸೊನ್ನೆ ಸುತ್ತಿದ್ದರಿಂದ ಸನ್‌ರೈಸರ್ಸ್ ಆಘಾತ ಅನುಭವಿಸಿತ್ತು. ಪವರ್‌ಪ್ಲೇನಲ್ಲಿ 50 ರನ್‌ಗಳ ಗಡಿ ದಾಟಿಸುವಷ್ಟರಲ್ಲಿ ಸನ್‌ರೈಸರ್ಸ್ ತನ್ನೆರಡೂ ಆರಂಭಿಕರ ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಆದರೆ ಮೂರನೇ ವಿಕೆಟ್‌ಗೆ ಜತೆಯಾದ ಹೈದರಾಬಾದ್ ನಾಯಕ ಕಿಶನ್ (91) ಮತ್ತು ಹೆನ್ರಿಚ್ ಕ್ಲಾಸನ್ (40) ಬೌಂಡರಿ ಸಿಕ್ಸರ್‌ಗಳೊಂದಿಗೆ 88 ರನ್‌ಗಳ ಮಹತ್ವದ ಜತೆಯಾಟ ಆಡಿದ್ದರು. ಕಿಶನ್ 44 ಎಸೆತಗಳಿಂದ 8 ಬೌಂಡರಿ ಮತ್ತು 6 ಸಿಕ್ಸರ್‌ಗಳನ್ನು ಒಳಗೊಂಡಿದ್ದ 91 ರನ್ ಬಾರಿಸಿದ್ದರು. ಕಿಶನ್ ವಿಕೆಟ್ ಪತನದ ಬಳಿಕವೂ ಕ್ಲಾಸನ್ ರಾಯಲ್ಸ್ ಬೌಲರ್‌ಗಳನ್ನು ಕೊಂಚ ಮಟ್ಟಿಗೆ ದಂಡಿಸಿದರು. ಕೊನೆಯಲ್ಲಿ ನಿತೀಶ್ ಕುಮಾರ್ ರೆಡ್ಡಿ (28) ಮತ್ತು ಔಟಾಗದೆ ಉಳಿದಿದ್ದ ಸಲೀಲ್ ಅರೋರ (24) ಬಿರುಸಿನ ಆಟದಿಂದ ಸನ್‌ರೈಸರ್ಸ್ ಮೊತ್ತವು 200ರ ಗಡಿ ದಾಟಿತು. ರಾಯಲ್ಸ್ ಪರ ಆರ್ಚರ್ 37ಕ್ಕೆ 2 ವಿಕೆಟ್ ಪಡೆದರು. ಉಳಿದಂತೆ ಸಂದೀಪ್ ಶರ್ಮಾ, ತುಷಾರ್ ದೇಶಪಾಂಡೆ ಮತ್ತು ನಾಯಕ ರಿಯಾನ್ ಪರಾಗ್ ತಲಾ 1 ವಿಕೆಟ್ ಪಡೆದರು.

ಒಂದೇ ಓವರ್‌ನಲ್ಲಿ 3 ವಿಕೆಟ್ ಕಳೆದುಕೊಂಡ ರಾಯಲ್ಸ್!

216 ರನ್ ಸವಾಲನ್ನು ಬೆನ್ನತ್ತಿದ್ದ ರಾಯಲ್ಸ್ ಒಂದೇ ಓವರ್‌ನಲ್ಲಿ 3 ವಿಕೆಟ್ ಕಳೆದುಕೊಂಡು ಆಘಾತ ಅನುಭವಿಸಿತು. ಎಲ್ಲಾ ತಂಡಗಳಿಗೂ ತಲೆನೋವು ಕೊಡುತ್ತಿದ್ದ ಸ್ಫೋಟಕ ಆರಂಭಿಕ ವೈಭವ್ ಸೂರ್ಯವಂಶಿ ಖಾತೆ ತೆರೆಯದೆ ಔಟಾಗಿದ್ದು, ಕಳೆದ ಪಂದ್ಯದ ಹೀರೋ ಧ್ರುವ್ ಜುರೇಲ್ (0), ಪ್ರಿಟೋರಿಸ್ (0) ಅವರನ್ನು ವೇಗಿ ಪ್ರಫುಲ್ ಹಿಂಜ್ ಮೊದಲ ಓವರ್‌ನಲ್ಲೇ ಪೆವಿಲಿಯನ್‌ಗೆ ಕಳುಹಿಸಿದ್ದರು.

ಸಂಕ್ಷಿಪ್ತ ಸ್ಕೋರ್

ಸನ್‌ರೈಸರ್ಸ್ 216/6 (20): ಕಿಶನ್ 91(44), ಕ್ಲಾಸನ್ 40(26), ನಿತೀಶ್ ರೆಡ್ಡಿ 28(13), ಸಲೀಲ್ 24(13)★.
ಆರ್ಚರ್ 37ಕ್ಕೆ 2, ಸಂದೀಪ್ 52ಕ್ಕೆ 1, ತುಷಾರ್ 55ಕ್ಕೆ 1, ಪರಾಗ್ 5ಕ್ಕೆ 1.

ಟೈಟಾನ್ಸ್-ಚೆನ್ನೈ ಪಂದ್ಯಗಳ ಮೈದಾನ ಅದಲು ಬದಲು

ಮುಂಬೈ: ಐಪಿಎಲ್ 2026ರಲ್ಲಿ ನಡೆಯಲಿರುವ ಗುಜರಾತ್ ಟೈಟಾನ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ನಡುವಿನ ಪಂದ್ಯಗಳ ಸ್ಥಳ ಅದಲು ಬದಲು ಮಾಡಿರುವುದಾಗಿ ಬಿಸಿಸಿಐ ಸೋಮವಾರ ಘೋಷಿಸಿದೆ.

ಏ.26ರಂದು ಗುಜರಾತ್‌ನಲ್ಲಿ ನಗರಸಭೆ ಚುನಾವಣೆ ಹಿನ್ನೆಲೆಯಿಂದ ಟೈಟಾನ್ಸ್ ಹಾಗೂ ಸಿಎಸ್‌ಕೆ ಐಪಿಎಲ್ ವೇಳಾಪಟ್ಟಿಯಲ್ಲಿ ಸ್ಥಳ ಅದಲು ಬದಲು ಮಾಡಲಾಗಿದೆ. ವೇಳಾಪಟ್ಟಿ ಪ್ರಕಾರ, ಏ.26ರಂದು ಮಧ್ಯಾಹ್ನ 3.30ಕ್ಕೆ ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಈ ಫ್ರಾಂಚೈಸಿಗಳೆರಡು ಮುಖಾಮುಖಿ ಆಗಬೇಕಿದ್ದು, ಈಗ ಈ ಪಂದ್ಯವನ್ನು ಚೆನ್ನೈನ ಚೆಪಾಕ್‌ನ ಎಂ.ಎ. ಚಿದಂಬರಂ ಸ್ಟೇಡಿಯಂನಲ್ಲಿ ಆಯೋಜಿಸಲಾಗುವುದು. ಅದೇ ರೀತಿ ಚೆಪಾಕ್‌ನಲ್ಲಿ ಮೇ.21ರ ರಾತ್ರಿ 7.30ಕ್ಕೆ ನಡೆಯಬೇಕಿದ್ದ ಪಂದ್ಯವನ್ನು ಅಹಮದಾಬಾದ್ ಸ್ಟೇಡಿಯಂನಲ್ಲಿ ಆಯೋಜಿಸಲಾಗುವುದು.



ಪಾದದ ಕೆಳಭಾಗದ ಗಾಯದಿಂದ ಬಳಲುತ್ತಿರುವ ವಿರಾಟ್

ಲಖನೌ ವಿರುದ್ಧ ಆಡ್ತಾರಾ ಕೊಹ್ಲಿ?

ಬೆಂಗಳೂರು: ವಾಂಖೇಡೆಯ ಅಪ್ಪಟ ಫ್ಲ್ಯಾಟ್ ಬ್ಯಾಟಿಂಗ್ ಪಿಚ್‌ನಲ್ಲಿ ಕೊಂಚ ನಿಧಾನಗತಿ ಬ್ಯಾಟಿಂಗ್ ನಡೆಸಿದ್ದ ವಿರಾಟ್ ಕೊಹ್ಲಿ ತಮ್ಮ ಎಂದಿನ ಲಯದಲ್ಲಿ ಕಾಣಿಸಿಕೊಂಡಿರಲಿಲ್ಲ. ಪಾದದ ಕೆಳಭಾಗದ ಗಾಯದಿಂದಾಗಿ ವಿರಾಟ್ ಕೊಹ್ಲಿ ನಿಧಾನಗತಿ ಆಟಕ್ಕೆ ಕಾರಣವೆಂದು ತಿಳಿದುಬಂದಿದ್ದು, ಅವರು ಬೆಂಗಳೂರಿನಲ್ಲಿ ಬುಧವಾರ ನಡೆಯುವ ಲಖನೌ ವಿರುದ್ಧ ಆಡುವ ಬಗ್ಗೆ ಸಂಶಯ ವ್ಯಕ್ತವಾಗಿದೆ.


ಮುಂಬೈ ವಿರುದ್ಧ ಫಿಲ್ ಸಾಲ್ಟ್ ಜತೆಗೂಡಿ ಆರ್‌ಸಿಬಿಗೆ ಉತ್ತಮ ಆರಂಭ ನೀಡಿದ್ದ ಕೊಹ್ಲಿ, ಸ್ವತಃ ತಮ್ಮ ಬ್ಯಾಟಿಂಗ್‌ನಿಂದ ಅತೃಪ್ತರಾಗಿ ಕಾಣಿಸಿಕೊಂಡಿದ್ದರು. 38 ಎಸೆತಗಳಿಂದ 50 ರನ್ ಗಳಿಸಿದ ಔಟಾಗಿದ್ದ ಕೊಹ್ಲಿ, ಪೆವಿಲಿಯನ್ ತೆರಳುತ್ತಿದ್ದಾಗ ತಮ್ಮ ಎರಡೂ ಗ್ಲೌಸ್‌ಗಳನ್ನು ಮತ್ತು ಹೆಲ್ಮೆಟ್ ಅನ್ನು ಡಗೌಟ್ ಮುಂದೆ ಎಸೆದು ಹತಾಶೆ ವ್ಯಕ್ತಪಡಿಸಿದ್ದರು. ಪಂದ್ಯಕ್ಕೂ ಮುನ್ನ ವಿರಾಟ್ ತೀವ್ರ ಜ್ವರ ಹೊಂದಿದ್ದರು, ಆದರೂ ಅವರು ಬ್ಯಾಟಿಂಗ್ ಮಾಡಲು ಮೈದಾನಕ್ಕಿಳಿದಿದ್ದರು ಎಂದೆಲ್ಲಾ ವದಂತಿ ಹಬ್ಬಿತ್ತು. ವಿರಾಟ್ ಬದಲಿಗೆ ಜೇಕಬ್ ಬೆಥೆಲ್ ಬದಲಿ ಕ್ಷೇತ್ರರಕ್ಷಕನಾಗಿ ಇಳಿದಿದ್ದರು. ಕೊಹ್ಲಿ ಪಾದದ ಕೆಳಭಾಗದ ನೋವಿನಿಂದ ಬಳಲುತ್ತಿದ್ದ ಕಾರಣ ಕ್ಷೇತ್ರರಕ್ಷಣೆಗೆ ಇಳಿದಿರಲಿಲ್ಲ ಎನ್ನಲಾಗಿದೆ. ಪಂದ್ಯ ಮುಗಿದ ಬಳಿಕ ಹ್ಯಾಂಡ್‌ಶೇಕ್ ನಡೆಸಲು ಮೈದಾನಕ್ಕಿಳಿದ ಕೊಹ್ಲಿ, ಕ್ರಿಕೆಟ್ ದೇವರು ಸಚಿನ್ ತೆಂಡುಲ್ಕರ್‌ರಿಂದ ಅಪ್ಪುಗೆ ಪಡೆದಿದ್ದರು. ಸಚಿನ್ ಸಹ ಕೊಹ್ಲಿ ಆರೋಗ್ಯ ವಿಚಾರಿಸಿದಂತಿತ್ತು. ಪಂದ್ಯ ಮುಗಿದ ಬಳಿಕ ನಾಯಕ ರಜತ್ ಪಾಟಿದಾರ್, ಆಲ್‌ರೌಂಡರ್ ಕೃಣಾಲ್ ಪಾಂಡ್ಯ ಸಹ ಕೊಹ್ಲಿ ಅನಾರೋಗ್ಯದ ಬಗ್ಗೆ ತುಟಿಪಿಟಿಕ್ ಎಂದಿಲ್ಲ. ಯಾವುದೇ ಮಾಹಿತಿ ಬಿಟ್ಟುಕೊಡದ ರಜತ್, ಕೊಹ್ಲಿ ಚೆನ್ನಾಗಿದ್ದಾರೆಂಬ ಭರವಸೆ ನನಗಿದೆ. ನಾನಿನ್ನೂ ಫಿಸಿಯೋ ಜತೆ ಮಾತನಾಡಿಲ್ಲ ಎಂದಿದ್ದರು. ಅದೇ ರೀತಿ ಕೃಣಾಲ್, ಕೊಹ್ಲಿ ಶೀಘ್ರ ಗುಣಮುಖರಾಗಲಿದ್ದಾರೆ ಎಂಬ ಭರವಸೆ ವ್ಯಕ್ತಪಡಿಸಿದ್ದರು.



ಸೈಮನ್ ವಿರುದ್ಧ ಫ್ಯಾನ್ಸ್ ಆಕ್ರೋಶ : ಸಾಲ್ಟ್, ಪಾಟಿದಾರ್ ಅಬ್ಬರದ ಆಟವಾಡಿದ್ದು, ಡೇವಿಡ್ ಡಗೌಟ್‌ನಲ್ಲಿ ತಯಾರಾಗಿ ನಿಂತಿದ್ದನ್ನು ತೋರಿಸಲಾಗಿತ್ತು. ಕೊಹ್ಲಿ ನಿಧಾನಗತಿಯಲ್ಲಿ ಬ್ಯಾಟ್ ಬೀಸುತ್ತಿದ್ದಾರೆ. ಅವರು ಹೊಡೆಬಡಿ ಆಡಬೇಕು ಅಥವಾ ರಿಟೈರ್ಡ್ ಹರ್ಟ್ ಔಟಾಗಿ ಇತರರಿಗೆ ಅವಕಾಶ ನೀಡಬೇಕೆಂದು ರಜತ್ ಸಂದೇಶ ರವಾನಿಸಬೇಕೆಂದು ಹೇಳಿದ್ದರು. ಕೊಹ್ಲಿ ಬ್ಯಾಟಿಂಗ್ ಬಗ್ಗೆ ತಿಳಿದುಕೊಂಡು ಮಾತನಾಡಬೇಕು ಎಂದು ಕೊಹ್ಲಿ ಅಭಿಮಾನಿಗಳು ಸೈಮನ್ ಅವರನ್ನು ರುಬ್ಬಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5953

5952 ಉತ್ತರ

ಎಡದಿಂದ ಬಲಕ್ಕೆ:
1.ಕೈಲಾಸವಾಸ 3.ನಾಸಿಕ
5.ಮಾಗಡಿ 6.ಹದಿನಾರು
9.ಕೇಸರಿಣಿ 10.ಗಾರುಡಿಗ
12.ಕೇಡುಗಾಲ 14.ಜನಪ
16.ನಕಲು 17.ಥಳಥಳಿಸು

ಮೇಲಿನಿಂದ ಕೆಳಕ್ಕೆ :
1.ಕೈತೋರು 2.ಮಾಸ
3.ನಾಡಿಗ 4.ಕಸ್ತೂರಿಮೃಗ
7.ಹವಣಿಸು 8.ಕೈಗಾರಿಕೇ
9.ಕೇಶವಪನ 11.ಮಜಲು
13.ಸುಜಲ 15.ಪಥ

ಎಡದಿಂದ ಬಲಕ್ಕೆ
1.ಕೇಸರಿ ಬಣ್ಣದ ಸಿಂಹದ ಗುರುತುಳ್ಳ ಧ್ವಜ (6)
5.ಬಾಳೆಹಣ್ಣು-ಸಕ್ಕರೆಯ ಸಿಹಿಖಾದ್ಯ (4)
7. ಸೆರೆಯಾಳು ಈಡ (2)
8.ಸುದರ್ಶನ ಚಕ್ರ ಹಿಡಿದವನು ತಿರುಗಿದ್ದಾನೆ (4)
9.ನಾಕದ ನಡುವೆ ಅಡಗಿದ ಸರ್ಪಗಳ ಪ್ರಪಂಚ (4)
10.ಮೂರು ತಿಂಗಳಿಗೊಮ್ಮೆ ಹೊರಡುವ ಪತ್ರಿಕೆ (4)
12.ಹಾರ ಹಾಕಿದ ದ್ವಾರಪಾಲಕ ತಿರುಗಿದ್ದಾನೆ (4)
14.ರಾಜಸುಖ ಪಡೆಯದ ಜಾನುವಾರು (2)
15.ಶೂರನ ಶಕ್ತಿಯನ್ನು ಆನೆಗೆ ಹೋಲಿಸಿ ಬಳಸುವ ಪದ (4)
17.ಬಿಲ್ವಿದ್ಯೆಯನ್ನು ಚೆನ್ನಾಗಿ ತಿಳಿದವನು (6)

ಮೇಲಿನಿಂದ ಕೆಳಕ್ಕೆ
2.ಸದಾ ನಿಜವನ್ನೇ ನುಡಿಯುವವನು (4)
3.ಮನುಷ್ಯನೂ ಹೌದು-ಅರ್ಜುನನೂ ಹೌದು (2)
4.ಸಂಗೀತದಲ್ಲಿ ಸ್ವರಗಳ ವಿಸ್ತಾರವಿದು (2)
6.ಮೈಮೇಲೆ ಚುಕ್ಕೆಗಳಿರುವ ಜಿಂಕೆ (3)
7.ಹಸ್ತಕೌಶಲ್ಯ-ನೈಪುಣ್ಯವಿದು (4)
9.ಒಂದು ಪ್ರದೇಶವನ್ನು ಆಳುವ ರಾಜ (4)
11.ಕೋಪದ ವರ್ತನೆಯುಳ್ಳವನು (3)
13.ಬುದ್ಧಿ ಕಡಿಮೆಯುಳ್ಳವನು-ಹುಂಬ (4)
15.ಮುದ್ದು ಮಕ್ಕಳಿಗೆ ತಿನ್ನಿಸಿದ ಔಷಧ (2)
16.ಕೋರಿಕೆಯಿಂದ ತಂದ ಹರಕು ಕಂಬಳಿ ತಿರುಗಿದೆ (2)





ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಬಗ್ಗೆ ಡಾ. ಬಾಬಾಸಾಹೇಬ ಅಭಿಪ್ರಾಯಗಳು

ಡಾ. ಬಿ.ಆರ್.ಅಂಬೇಡ್ಕರ್ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಚಳವಳಿಗಳ ಬಗ್ಗೆ ತೀಕ್ಷ್ಣ ವಿಮರ್ಶಾತ್ಮಕ ದೃಷ್ಟಿಕೋನ ಹೊಂದಿದ್ದರು. ಕಾಂಗ್ರೆಸ್ ಬಗ್ಗೆ ಅವರು ಅದು ವ್ಯಕ್ತಿಗಳ ಮೇಲೆ ಅವಲಂಬಿತವಾಗಿದ್ದು ಶಾಶ್ವತವಲ್ಲ ಎಂದು ಅಭಿಪ್ರಾಯಪಟ್ಟಿದ್ದರು. ಜಾತಿ ಆಧಾರಿತ ರಾಜಕೀಯದಿಂದ ಕಾಂಗ್ರೆಸ್ ಗೆಲುವು ಸಾಧಿಸುತ್ತದೆ ಮತ್ತು ಅಲ್ಪಸಂಖ್ಯಾತರ ಸಮಸ್ಯೆಗಳನ್ನು ಪ್ರಾಮಾಣಿಕವಾಗಿ ಪರಿಹರಿಸಲಿಲ್ಲ ಎಂದು ಟೀಕಿಸಿದ್ದರು. ಮಹಾತ್ಮ ಗಾಂಧಿಯವರ ನಾಯಕತ್ವವನ್ನೂ ಅವರು ಪ್ರಶ್ನಿಸಿ, ಏಕತೆ ತರಲು ವಿಫಲರಾದರು. ಅಹಿಂಸೆಯ ತತ್ವ ಕಾಂಗ್ರೆಸ್‌ನಲ್ಲಿ ದುರ್ಬಲಗೊಂಡಿದೆ ಮತ್ತು ಅಸ್ಪೃಶ್ಯತೆ ನಿವಾರಣೆಯಲ್ಲಿ ನಿಷ್ಠೆಯ ಕೊರತೆ ಇದೆ ಎಂದು ಅಂಬೇಡ್ಕರ್ ಹೇಳಿದ್ದರು. ಕಮ್ಯುನಿಸ್ಟ್ ತತ್ವದ ಬಗ್ಗೆ, ಹಿಂಸಾಚಾರ ಮತ್ತು ದಂಡಾಧಿಕಾರದ ಮೇಲೆ ಅವಲಂಬಿತವಾಗಿರುವುದನ್ನು ಅವರು ವಿರೋಧಿಸಿದ್ದರು. ಮಾನವ ಜೀವದ ಮೌಲ್ಯವನ್ನು ನಿರ್ಲಕ್ಷಿಸಲಾಗಿದೆ ಮತ್ತು ದೇಶದ ಭವಿಷ್ಯದ ಬಗ್ಗೆ ಸ್ಪಷ್ಟತೆ ಇಲ್ಲ ಎಂದು ಅಭಿಪ್ರಾಯಪಟ್ಟಿದ್ದರು. ಅವರ ದೃಷ್ಟಿಯಲ್ಲಿ, ಎರಡೂ ಚಿಂತನೆಗಳು ತಾತ್ವಿಕ ಮತ್ತು ಕಾರ್ಯಾತ್ಮಕ ದೋಷಗಳನ್ನು ಹೊಂದಿವೆ.

ಅಂಬೇಡ್ಕರ್ ರಾಜಕೀಯ ಚಿಂತನೆಗಳ ಸತ್ಯ

ಕಾಂಗ್ರೆಸ್ ಶಾಶ್ವತವಲ್ಲ

ಕಾಂಗ್ರೆಸ್ ಎಷ್ಟು ಕಾಲ ಉಳಿಯಲಿದೆ? ಕಾಂಗ್ರೆಸ್ ಎಂದರೆ ಪಂಡಿತ್ ನೆಹರೂ ಮತ್ತು ಪಂಡಿತ್ ನೆಹರೂ ಎಂದರೆ ಕಾಂಗ್ರೆಸ್. ಹಾಗೆಂದು ಪಂಡಿತ್ ನೆಹರೂ ಅಮರರೇ? ಈ ಪ್ರಶ್ನೆಗಳ ಬಗ್ಗೆ ಯೋಚಿಸುವ ಯಾರಿಗಾದರೂ ಸೂರ್ಯ ಮತತು ಚಂದ್ರ ಇರುವವರೆಗೂ ಕಾಂಗ್ರೆಸ್ ಉಳಿಯುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಒಂದು ದಿನ ಅದು ಅಂತ್ಯಗೊಳ್ಳಲೇಬೇಕು. (ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು- ಸಂಪುಟ 1).

ಕಾಂಗ್ರೆಸ್‌ನಿಂದ ಜಾತಿ ವ್ಯವಸ್ಥೆ ದುರ್ಬಳಕೆ

ಕಾಂಗ್ರೆಸ್ ಯಾವಾಗಲು ಜಯಿಸುತ್ತದೆ, ಹಾಗೆ ಗೋಚರಿಸುತ್ತೆ. ಆದರೂ ಕಾಂಗ್ರೆಸ್ಸೇ ಯಾಕೆ ಜಯಿಸುತ್ತೆ ಎಂದು ಯಾರೂ ಕೇಳುವುದಿಲ್ಲ, ಇದಕ್ಕುತ್ತರ, ಕಾಂಗ್ರೆಸ್ ಅಷ್ಟೊಂದೂ ಜನಪ್ರಿಯ. ಆದರೆ, ನೈಜ ಸತ್ಯವೇ ಬೇರೆ. ಕಾಂಗ್ರೆಸ್ ನಿರ್ದಿಷ್ಟ ಕ್ಷೇತ್ರಗಳಲ್ಲಿ ಯಾವ ಜಾತಿ ಬಹುಸಂಖ್ಯಾತವೋ ಆ ಜಾತಿಯ ಅಭ್ಯರ್ಥಿಗೆ ಟಿಕೆಟ್ ನೀಡುತ್ತೆ. ಜಾತಿಗೂ ಕಾಂಗ್ರೆಸ್‌ಗೂ ನಿಕಟ ಸಖ್ಯ. ಜಾತಿ ವ್ಯವಸ್ಥೆಯನ್ನು ದುರ್ಬಳಸಿಕೊಂಡು ಕಾಂಗ್ರೆಸ್ ಜಯಿಸುತ್ತದೆ. (ಡಾ.ಅಂಬೇಡ್ಕರ್ ಬರಹಗಳು ಮತ್ತು ಭಾಷಣ- ಸಂಪುಟ 1).

ಮುಸ್ಲಿಮರ ಬಗ್ಗೆ ಕಾಂಗ್ರೆಸ್ ಧೋರಣೆ

ಹಿಂದು ಮಹಾಸಭಾದೊಂದಿಗೆ ತುಲನೆ ಮಾಡಿದರೆ ತಾವೆಲ್ಲಿದ್ದೇವೆಂಬುದು ಮುಸಲ್ಮಾನರಿಗೆ ಗೊತ್ತು. ಇನ್ನೊಂದೆಡೆ, ಕಾಂಗ್ರೆಸ್ ಜತೆಗಿದ್ದರೂ ತಮಗೆ ಅಸ್ತಿತ್ವವೇ ಇಲ್ಲವೆಂಬುದು ಕೂಡ ಮುಸಲ್ಮಾನರಿಗೆ ಗೊತ್ತಿರುವ ವಿಚಾರ. ಯಾಕೆಂದರೆ ಮುಸಲ್ಮಾನರು ಮತ್ತು ಅಲ್ಪಸಂಖ್ಯಾತರ ವಿಚಾರ ಕಾಂಗ್ರೆಸ್ ಪಾಲಿಗೆ ರಾಜತಾಂತ್ರಿಕತೆಯಲ್ಲಿನ ಒಂದು ಆಟವಾಗಿದೆ. (ಡಾ.ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು - ಸಂಪುಟ 8).


ಮೋಪ್ಲಾ ಮತ್ತು ಕಾಂಗ್ರೆಸ್

ಮುಸಲ್ಮಾನರ ಭಾವನೆಗಳಿಗೆ ನೋವಾಗದಿರಲು ಕಾಂಗ್ರೆಸ್ ಅದ್ಯಾವ ರೀತಿ ಜಾಗರೂಕತೆ ವಹಿಸುತ್ತದೆ ಎಂಬುದಕ್ಕೆ, ಮೋಪ್ಲಾ ದೌರ್ಜನ್ಯಗಳಿಗೆ ಸಂಬಂಧಿಸಿ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿ ಅಂಗೀಕರಿಸಿರುವ ನಿರ್ಣಯ ಸಾಕ್ಷಿ (ಡಾ.ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು - ಸಂಪುಟ 8)



ಗಾಂಧೀಜಿ ಏಕತೆಯ ಹರಿಕಾರನಲ್ಲ

ಕಾಂಗ್ರೆಸ್ ದುಂಡುಮೇಜಿನ ಸಮಾವೇಶದ ನೇತೃತ್ವ ವಹಿಸಿ ಅದನ್ನು ಯಶಸ್ವೀಗೊಳಿಸಬೇಕೆಂದು ಪ್ರತಿಯೊರ್ವರು ನಿರೀಕ್ಷೆಪಟ್ಟಿದ್ದರು. ದುರದೃಷ್ಟವಶಾತ್ ಕಾಂಗ್ರೆಸ್ ಗಾಂಧಿಯನ್ನು ತನ್ನ ಪ್ರತಿನಿಧಿಯಾಗಿ ಆರಿಸಿತು. ಭಾರತದ ಹಿರಿಮೆಗರಿಮೆ ವ್ಯಾಖ್ಯಾನಿಸಲು ಇಂತಹ ಅನರ್ಹ ವ್ಯಕ್ತಿಯನ್ನು ಕಾಂಗ್ರೆಸ್ ಆರಿಸಕೂಡದಿತ್ತು . ಏಕತಾಶಕ್ತಿಯಾಗಲು ಗಾಂಧೀಜಿ ವಿಫಲರು. ತಾನು ತೀರಾ ಸಭ್ಯ ವ್ಯಕ್ತಿಯೆಂದು ತೋರ್ಪಡಿಸಿಕೊಳ್ಳುವ ಗಾಂಧೀಜಿ , ದುಂಡು ಮೇಜಿನ ಪರಿಷತ್‌ನಲ್ಲಿ ವರ್ತಿಸಿದ್ದು ತೀರಾ ವಿಭಿನ್ನವಾಗಿ. ಸಮಾವೇಶಕ್ಕೆ ಬರೋ ಮುನ್ನ ಸರಕಾರದೊಂದಿಗೆ ಮಾಡಿಕೊಂಡ ಯಶಸ್ವೀ ಸಂಧಾನ ಪರಿಣಾಮ, ಗಾಂಧೀಜಿ ಕಾಂಗ್ರೆಸ್ಸೇತರ ನಿಯೋಗವನ್ನು ತೀರಾ ತಿರಸ್ಕಾರಭಾವದಿಂದ ಕಂಡರು. ನೀವ್ಯಾರೂ ಏನೂ ಅಲ್ಲ, ಕಾಂಗ್ರೆಸ್‌ನ ಪ್ರತಿನಿಧಿಯಾಗಿ ಇಡೀ ದೇಶವನ್ನು ಪ್ರತಿನಿಧಿಸಿದ್ದು ತಾನೊರ್ವನೆ ಎಂದು ಅವರನ್ನು ಸಂದರ್ಭ ಸಿಕ್ಕಾಗ ಅಪಮಾನಿಸಿ ತಮ್ಮ ಸಂಕುಚಿತ ಪ್ರವೃತ್ತಿಯನ್ನು ಬಹಿರಂಗಪಡಿಸಿದರು. ಭಾರತೀಯ ನಿಯೋಗವನ್ನು ಒಗ್ಗಟ್ಟಾಗಿಸುವ ಬದಲು ಒಡಕನ್ನು ಬೃಹದಾಗಿಸಿದರು ಗಾಂಧಿ. ತನ್ಮೂಲಕ ಸ್ವಯಂ ಅಸಮರ್ಥ ವ್ಯಕ್ತಿಯೆಂದು ಸಾಬೀತುಪಡಿಸಿದರು. ಸಮಾವೇಶದಲ್ಲಿ ಚರ್ಚೆಗೊಂಡ ಹಲವು ಸಾಂವಿಧಾನಿಕ, ಕೋಮು ಸಂಬಂಧಿತ ಪ್ರಶ್ನೆಗಳಿಗೆ ಸೂಕ್ತವಾಗಿ ಉತ್ತರಿಸಲು ಗಾಂಧೀಜಿಗೆ ಅವಕಾಶವಿತ್ತಾದರೂ ಅವರು ರಚನಾತ್ಮಕ ಸ್ವರೂಪದ ಯಾವುದೇ ಅಭಿಪ್ರಾಯವಾಗಲಿ, ಸಲಹೆಗಳನ್ನಾಗಲಿ ನೀಡಲೇ ಇಲ್ಲ. ಸಮಾವೇಶಕ್ಕೆ ಮುನ್ನ ಪೂರಕ ಸಿದ್ಧತೆಗಳನ್ನೇ ಮಾಡಿರಲಿಲ್ಲ ಗಾಂಧೀಜಿ. (ಡಾ.ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು -ಸಂಪುಟ 9)



ಅಸ್ಪೃಶ್ಯತೆ ನಿರ್ಮೂಲನೆ ಬಗ್ಗೆ ಕಾಂಗ್ರೆಸ್ ಕಾಳಜಿ ಪ್ರಾಮಾಣಿಕವಲ್ಲ

ಮಹಾತ್ಮಾಜೀ, ನಾನು ಜನಿಸುವ ಮೊದಲೇ ತಾವು ಅಸ್ಪೃಶ್ಯತೆ ಪಿಡುಗಿನ ಬಗ್ಗೆ ಚಿಂತನೆ ಮಾಡಿರುವುದು ಸತ್ಯ. ಎಲ್ಲಾ ವಯೋವೃದ್ಧ, ಹಿರಿಯ ನಾಗರಿಕರು ವಯಸ್ಸಿನ ವಿಚಾರಕ್ಕೆ ಪ್ರಾಧಾನ್ಯತೆ ನೀಡುವುದು ಸಹಜ. ನಿಮ್ಮ ಕಾರಣಕ್ಕೆ ಕಾಂಗ್ರೆಸ್ ಅಸ್ಪೃಶ್ಯತೆ ಸಮಸ್ಯೆಗೆ ಮಾನ್ಯತೆ ಕೊಟ್ಟಿದೆ ಎಂಬುದು ಕೂಡ ಸತ್ಯ. ಆದರೆ, ಕಾಂಗ್ರೆಸ್ ಸಮಸ್ಯೆಗೆ ಔಪಚಾರಿಕ ಮಾನ್ಯತೆ ನೀಡಿದ್ದು ಬಿಟ್ಟರೆ ಬೇರೇನು ಮಾಡಿಲ್ಲ ಎಂದು ನಾನು ತಮ್ಮಲ್ಲಿ ನೇರ ಧೈರ್ಯದಿಂದ ಹೇಳುತ್ತೇನೆ. ಅಸ್ಪೃಶ್ಯರ ಉದ್ಧಾರಕ್ಕಾಗಿ ಕಾಂಗ್ರೆಸ್ ಪಕ್ಷ 20 ಲಕ್ಷ ವ್ಯಯಿಸಿದೆ ಎಂದು ತಾವು ಹೇಳುತ್ತೀರಿ, ಆದರೆ ಅದೆಲ್ಲವು ವ್ಯರ್ಥ. ಅಂತಹ ಬೆಂಬಲವಿರುತ್ತಿದ್ದಲ್ಲಿ ನಾನು ನನ್ನ ಜನರ ಆರ್ಥಿಕ ಸ್ಥಿತಿಗತಿಗಳಲ್ಲಿ ಗಮನಾರ್ಹ ಮಾರ್ಪಾಡುಗಳ ಸಾಕಾರಗೊಳಿಸುತ್ತಿದೆ, ಅವರ ಬದುಕಲ್ಲಿ ಬೆಳಕು ಮೂಡಿಸುತ್ತಿದ್ದೆ. ಕಾಂಗ್ರೆಸ್ ತನ್ನ ವೃತ್ತಿ-ಬಾಧ್ಯತೆಗಳ ವಿಚಾರದಲ್ಲಿ ಪ್ರಾಮಾಣಿಕವಾಗಿಲ್ಲ, ಪ್ರಾಮಾಣಿಕತೆ ಇರುತ್ತಿದ್ದಲ್ಲಿ, ಕಾಂಗ್ರೆಸ್ ಸದಸ್ಯನಾಗಲು ಖದ್ದರ್ ಧರಿಸಬೇಕೆಂದು ಹೇಗೆ ಷರತ್ತು ವಿಧಿಸಿದೆಯೋ ಅದೇ ತೆರ ಅಸ್ಪೃಶ್ಯತೆ ನಿರ್ಮೂಲನೆಯನ್ನೂ ಒಂದು ಶರ್ತವಾಗಿಸುತ್ತಿತ್ತು. (ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು -ಸಂಪುಟ 17)



ಕಮ್ಯೂನಿಸ್ಟ್ ಪಕ್ಷ ಬಗ್ಗೆ ಡಾ.ಅಂಬೇಡ್ಕರ್ ನಿಲುವು

ಬುದ್ಧ ಮತ್ತು ಕಾರ್ಲ್ಸ್ ಮಾರ್ಕ್ಸ್‌ಗಿರುವ ವ್ಯತ್ಯಾಸಗಳು: ವ್ಯಕ್ತಿಯ ನೈತಿಕ ಸ್ಥಿತಿಗತಿಗಳಲ್ಲಿ ಪರಿವರ್ತನೆಗಳ ಸೃಜಿಸಿ ಆತ ಸ್ವಯಂಪ್ರೇರಿತವಾಗಿ ಅಹಿಂಸಾ ಹಾದಿಯಲ್ಲಿ ಮುನ್ನಡೆಯುವಂತೆ ಮಾಡುವುದು ಬುದ್ಧನ ಸಿದ್ಧಾಂತ. ಕಮ್ಯೂನಿಸ್ಟರು ಅನುಸರಿಸುವ ಹಾದಿ ಸ್ಪಷ್ಟ, ಅಲ್ಪಾವಧಿಯದ್ದು ಮತ್ತು ತ್ವರಿತ. ಅವೆಂದರೆ, 1. ಹಿಂಸೆ, 2. ಶ್ರಮಜೀವಿಗಳ ಮೇಲೆ ದಬ್ಬಾಳಿಕೆ (ಡಾ.ಅಂಬೇಡ್ಕರ್ ಬರೆಹಗಳು ಮತ್ತು ಭಾಷಣಗಳು -ಸಂಪುಟ 3)

ಕಮ್ಯೂನಿಸ್ಟರ ಅರಾಜಕತೆ

ನಶಿಸಿಹೋಗುವ ರಾಜ್ಯದ ಸ್ಥಾನವನ್ನು ಇನ್ಯಾವುದು ಭರ್ತಿ ಮಾಡಲಿದೆ ಎಂಬ ಪ್ರಶ್ನೆಗೆ ಕಮ್ಯೂನಿಸ್ಟರು ತೃಪ್ತಿಕರ ಉತ್ತರವನ್ನು ಯಾವತ್ತೂ ಕೊಡಲಾರರು. ರಾಜ್ಯ ಯಾವಾಗ ನಶಿಸುವುದು ಎಂಬುದಕ್ಕಿಂತಲೂ ತೆರವಾಗುವ ರಾಜ್ಯದ ಸ್ಥಾನದ ಭರ್ತಿ ಯಾವುದರಿಂದ ಎಂಬುದು ಪ್ರಮುಖ ಪ್ರಶ್ನೆ. ತೆರವಾಗುವ ಜಾಗವನ್ನು ಅರಾಜಕತೆ-ಅವ್ಯವಸ್ಥೆಗಳು ಭರ್ತಿ ಮಾಡಲಿವೆಯೇ? ಹಾಗಾದಲ್ಲಿ ಕಮ್ಯೂನಿಸ್ಟ್ ರಾಜ್ಯ ನಿರ್ಮಾಣ ವ್ಯವಸ್ಥಿತ ಪ್ರಯತ್ನವೇ? (ಡಾ. ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು -ಸಂಪುಟ 3)

ಕಮ್ಯೂನಿಸ್ಟ್ ಸಿದ್ಧಾಂತದ ದೌರ್ಬಲ್ಯ

ಶಾಶ್ವತ ದಬ್ಬಾಳಿಕೆ ಅಥವಾ ನಿರಂಕುಶಪ್ರಭುತ್ವ ಕಮ್ಯೂನಿಸ್ಟರ ರಾಜಕೀಯ ಸಿದ್ಧಾಂತದಲ್ಲಿನ ದೌರ್ಬಲ್ಯ. ಇದನ್ನವರು ಸ್ವತಃ ಒಪ್ಪಿಕೊಂಡಿದ್ದಾರೆ. ಇದಲ್ಲದಿದ್ದರೆ ರಾಜ್ಯವು ನಶಿಸಿಹೋಗುವುದು ಅಥವಾ ಅವನತಿಗೊಳ್ಳುವುದು ಎಂಬುದು ಕಮ್ಯೂನಿಸ್ಟರ ಸಮರ್ಥನೆ. ಈ ಹಿನ್ನೆಲೆಯಲ್ಲಿ 2 ಪ್ರಶ್ನೆಗಳಿಗೆ ಅವರು ಉತ್ತರಿಸಬೇಕು. 1. ರಾಜ್ಯವು ನಶಿಸುವುದು ಅಥವಾ ಅವನತಿಹೊಂದುವುದು ಯಾವಾಗ? 2. ಹೀಗಾದಲ್ಲಿ ತೆರವಾಗುವ ಜಾಗ ಭರ್ತಿ ಯಾವುದರಿಂದ? ಮೊದಲ ಪ್ರಶ್ನೆಗೆ ನಿಶ್ಚಿತ ಕಾಲವನ್ನವರು ಕೊಡಲಾರರು. (ಡಾ. ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು -ಸಂಪುಟ 3)

ಮಾನವ ಜೀವ ಅಮೂಲ್ಯವಲ್ಲವೇ

ತಮ್ಮ ಅಮೂಲ್ಯ ಆಕಾಂಕ್ಷೆ ಅಥವಾ ಸ್ವಾರ್ಥ ಸಾಧನೆಗಾಗಿ ಇತರರ ಅಮೂಲ್ಯ ಸೊತ್ತು- ಜೀವಗಳನ್ನು ನಾಶಪಡಿಸಿಲ್ಲ ಎಂದು ಕಮ್ಯೂನಿಸ್ಟರು ಹೇಳಬಲ್ಲರೆ? ಅವರು ಖಾಸಗಿ ಸೊತ್ತುಗಳನ್ನು ನಾಶಪಡಿಸಿದ್ದಾರೆ. ಇದವರ ಪ್ರಕಾರ ಅಮೂಲ್ಯ ಅಥವಾ ಶ್ರೇಷ್ಠ ಸಾಧನೆ. ಆದರೆ ತಮ್ಮ ಸ್ವಾರ್ಥಕ್ಕಾಗಿ ಇತರರ ಅಮೂಲ್ಯ ಆಶೋತ್ತರಗಳನ್ನು, ಸೊತ್ತುಗಳನ್ನು ನಾಶಪಡಿಸಿಲ್ಲವೆಂದು ಕಮ್ಯೂನಿಸ್ಟರು ಹೇಳಬಲ್ಲರೆ, ತಮ್ಮ ಸ್ವಾರ್ಥಕ್ಕಾಗಿ ಅದೆಷ್ಟು ಜೀವಗಳನ್ನು ಅವರು ಸಾಯಿಸಿಲ್ಲ? ಮಾನವ ಜೀವಕ್ಕೆ ಬೆಲೆಯೇ ಇಲ್ಲವೆ? ಮಾಲೀಕನ ಪ್ರಾಣ ತೆಗೆಯದೆ ಆತನ ಸೊತ್ತುಗಳ ಹಿಡಿತಕ್ಕೆ ತೆಗೆಯಲು ಸಾಧ್ಯವಾಗಲಿಲ್ಲವೇ? (ಡಾ.ಬಾಬಾ ಅಂಬೇಡ್ಕರ್ ಬರೆಹಗಳು ಮತ್ತು ಭಾಷಣಗಳು -ಸಂಪುಟ -3).

ಕಮ್ಯೂನಿಸ್ಟರಿಂದ ಕಾರ್ಮಿಕರ ಶೋಷಣೆ

ಕಮ್ಯೂನಿಸ್ಟರ ಕಾರ್ಮಿಕ ಪರ ಹೋರಾಟಗಳ ಬಗ್ಗೆ ಹೇಳುವುದಾದರೆ, ಅದಕ್ಕೆ ತಾನು ಸೇರುವ ಸಾಧ್ಯತೆಗಳೇ ಇಲ್ಲವಾಗಿತ್ತು. ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಕಾರ್ಮಿಕರನ್ನು ಶೋಷಿಸಿದ ಕಮ್ಯೂನಿಸ್ಟರು ನನ್ನ ಬದ್ಧ ವೈರಿಗಳು. ತೃತೀಯ ದರ್ಜೆ ಕಾರ್ಮಿಕ ನಾಯಕರೆಲ್ಲರು ಕಮ್ಯೂನಿಸ್ಟರು. ಇವರು ತಪ್ಪು ಮಾರ್ಗದರ್ಶನದಿಂದಲೆ ರೂಪುಗೊಂಡ ನಾಯಕರು. ಕಾರ್ಮಿಕರನ್ನು ಅತ್ಯಂತ ಹೀನಾಯ ಸ್ಥಿತಿಗೆ ನೂಕಿದ್ದು ಇದೇ ಕಮ್ಯೂನಿಸ್ಟ್ ನಾಯಕರು. ಇಂದು ಕಾರ್ಮಿಕವರ್ಗದ ಬೆನ್ನೆಲುಬು ಪೂರ್ಣ ಮುರಿದಿದ್ದರೆ, ಮಾಲಕರು ತುಂಬು ಅಧಿಕಾರಯುಕ್ತ ಕಪಿಮುಷ್ಟಿ ಹೊಂದಿರಲು, ಯೂನಿಯನ್‌ವಾದವು ಅನಿಷ್ಟವಾಗಲು, ಒಂದು ಕಾಲದಲ್ಲಿ ಕಾರ್ಮಿಕ ಸಂಘಟನೆಗಳ ಮೇಲೆ ಹಿಡಿತ ಸಾಧಿಸೋ ಮುಖೇನ ಪಡೆದ ಅಧಿಕಾರವನ್ನು ಕಮ್ಯೂನಿಸ್ಟರು ಸಂಪೂರ್ಣ ದುರ್ಬಳಸಿದ್ದೇ ಮೂಲ ಕಾರಣ. (ಡಾ.ಅಂಬೇಡ್ಕರ್ ಬರೆಹಗಳು-ಭಾಷಣ -ಸಂಪುಟ 17 (ಭಾಗ 3).



ಕಮ್ಯೂನಿಸ್ಟರ ದ್ವಿಮುಖ ಧೋರಣೆಗಳು

ಕಾರ್ಮಿಕರ ಹಿತಕ್ಕಾಗಿ ಹೋರಾಡುವ ಕಾರ್ಮಿಕ ನಾಯಕರು ಯಾವುದೇ ರಾಜಕೀಯ ಪಕ್ಷಗಳ ಕೈಗೊಂಬೆಯಾಗಕೂಡದು. ಆದರೆ, ಈ ದೇಶದಲ್ಲಿ ಕಾರ್ಮಿಕರಿಗಾಗಿ ಸಮರ್ಪಣಾ ಭಾವದಿಂದ ಶ್ರಮಿಸುವ ನಾಯಕರಿಲ್ಲದಿರುವುದು ದುರದೃಷ್ಟಕರ.

ಮುಸ್ಲಿಮರ ತುಷ್ಟೀಕರಣ

ಎರಡು ವಿಚಾರಗಳನ್ನು ಅರ್ಥೈಸಿಕೊಳ್ಳುವಲ್ಲಿ ಕಾಂಗ್ರೆಸ್ ವಿಫಲವಾಗಿದೆ. ಮೊದಲಾಗಿ ತುಷ್ಟೀಕರಣಕ್ಕೂ ಇತ್ಯರ್ಥಕ್ಕೂ ವ್ಯತ್ಯಾಸವಿದೆ ಎಂಬುದನ್ನು ಕಾಂಗ್ರೆಸ್ ಅರಿತಿಲ್ಲ. ಈ ವ್ಯತ್ಯಾಸ ಅತ್ಯವಶ್ಯವಾದುದು. ಆಕ್ರಮಣಕೋರ ಅಥವಾ ದಾಳಿಕೋರ ನಿರಪರಾಧಿ ಜನರ ಕೊಲೆ, ಸುಲಿಗೆ, ಅತ್ಯಾಚಾರ ಮಾಡಿದ್ದರೂ, ದೊಂಬಿ ಹಿಂಸಾಚಾರ ತಾಂಡವಿಸಿದ್ದರೂ ಅವೆಲ್ಲಾ ಕೃತ್ಯಗಳನ್ನು ಮನ್ನಿಸಿ ಆತನನ್ನು ಖರೀದಿಸುವುದು ತುಷ್ಟೀಕರಣ. ಇತ್ಯರ್ಥವೆಂದರೆ ಇತ್ತಂಡಗಳೂ ಉಲ್ಲಂಘಿಸಲಾಗದ ಷರತ್ತು ಅಥವಾ ನಿರ್ಬಂಧಗಳನ್ನು ಹಾಕುವುದಾಗಿದೆ. ತುಷ್ಟೀಕರಣದಲ್ಲಿ ಆಕ್ರಮಣಕೋರನ, ಆಶೋತ್ತರಗಳಿಗೆ ಮಿತಿ ಎಂಬುದೇ ಇರುವುದಿಲ್ಲ. ಆದರೆ, ಇತ್ಯರ್ಥ ಪ್ರಕ್ರಿಯೆಯಲ್ಲಿ ಈ ಮಿತಿ ಇರುತ್ತೆ. ವಿನಾಯಿತಿ ನೀತಿಯು ಮುಸಲ್ಮಾನರ ಆಕ್ರಮಣಕಾರಿ ಪ್ರವೃತ್ತಿ ಬೆಳೆಯಲು ಬೆಂಬಲವಾಗುತ್ತೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಕಾಂಗ್ರೆಸ್ ವಿಫಲವಾಗಿದೆ. ತಮಗೆ ದೊರೆಯುವ ವಿನಾಯಿತಿಗಳು ಹಿಂದುಗಳ ಸೋಲಿನ ದ್ಯೋತಕ ಮತ್ತು ಹಿಂದುಗಳಿಗೆ ಪ್ರತಿಭಟಿಸುವ ಇಚ್ಛಾಶಕ್ತಿ ಇಲ್ಲ ಎಂಬುದಾಗಿ ಮುಸಲ್ಮಾನರು ತಪ್ಪಾಗಿ ವಿಶ್ಲೇಷಿಸುವುದು ಇನ್ನೂ ತೀರಾ ಹೇಯ. ಹಿಟ್ಲರನ ದಬ್ಬಾಳಿಕೆಗೆ ಹೆದರಿ ಆತನ ತುಷ್ಟೀಕರಣಕ್ಕೆ ಮುಂದಾಗಿದ್ದ ಮಿತ್ರರಾಷ್ಟ್ರಗಳು ಆ ಹಂತದಲ್ಲಿ ಅದೆಷ್ಟು ಹೆದರಿದ್ದವೋ, ಕಾಂಗ್ರೆಸ್‌ನ ತುಷ್ಟೀಕರಣ ನೀತಿಯು ಹಿಂದುಗಳನ್ನು ಅಷ್ಟೇ ಭೀತ ಸ್ಥಿತಿಗೆ ನೂಕಿದೆ. (ಡಾ.ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು -ಸಂಪುಟ 8)

ಅಹಿಂಸೆಯನ್ನು ಮಣ್ಣು ಮಾಡಿದ ಕಾಂಗ್ರೆಸ್

ಕಾಂಗ್ರೆಸ್‌ನಲ್ಲಿ ಅಹಿಂಸಾ ಸಿದ್ಧಾಂತಕ್ಕೆ ಜಾಗವೇ ಇಲ್ಲ, ಪಕ್ಷದ ಅಹಿಂಸಾ ಸಿದ್ಧಾಂತ ಭಯಾನಕವಾಗಿ ಕುಸಿದುಬಿಟ್ಟಿದೆ. ಅಹಿಂಸೆಯನ್ನು ವಸ್ತುಶ: ಹೂತುಹಾಕಲಾಗಿದೆ. ಕಳೆದ ಎರಡು ಮೂರು ವರ್ಷಗಳಿಂದ ಕಾಂಗ್ರೆಸ್ ಕಲಾಪಗಳನ್ನು ಓದಿದ ನನ್ನ ಮನಸ್ಸಲ್ಲಿ ಈ ರೀತಿ ಅಭಿಪ್ರಾಯ ಬಲವಾಗಿ ಮೂಡಿದೆ. (ಡಾ.ಬಾಬಾಸಾಹೇಬ್ ಅಂಬೇಡ್ಕರ್ ಬರೆಹಗಳು ಮತ್ತು ಭಾಷಣಗಳು -ಸಂಪುಟ 10)



ಸಂವಿಧಾನಕ್ಕೆ ಸಂಬಂಧಿಸಿ 1949 ನವೆಂಬರ್ 25ರಂದು ಶಾಸಕಾಂಗ ಸಭೆಯಲ್ಲಿ ಡಾ.ಅಂಬೇಡ್ಕರ್ ಅವರ ಸಮಾಪನ ಹೇಳಿಕೆಗಳು

ಸಂವಿಧಾನ ಬಗ್ಗೆ ಖಂಡನೆಗಳು ಬಹುತೇಕ ವ್ಯಕ್ತವಾಗಿರುವುದು ಎರಡು ವಲಯಗಳಿಂದ. ಅಂದರೆ ಕಮ್ಯೂನಿಸ್ಟ್ ಹಾಗೂ ಸಮಾಜವಾದಿ ಪಕ್ಷಗಳಿಂದ. ಯಾಕವರು ಸಂವಿಧಾನವನ್ನು ಖಂಡಿಸುತ್ತಾರೆ? ನಿಜವಾಗಿ ಇದೊಂದು ಕೆಟ್ಟ ಸಂವಿಧಾನ ಎಂಬುದು ಅವರು ಮುಂದಿಡುವ ಕಾರಣವೇ? ಆದರೆ ನಾನು ದೃಢವಾಗಿ ಹೇಳುತ್ತೇನೆ, ಖಂಡನೆ ವ್ಯಕ್ತಪಡಿಸುತ್ತಿರೋದು ಈ ಕಾರಣಕ್ಕಾಗಿ ಅಲ್ಲ. ಕಮ್ಯೂನಿಸ್ಟರು ಶ್ರಮಜೀವಿಗಳ ವಿರುದ್ಧ ದಬ್ಬಾಳಿಕೆ ಸಿದ್ಧಾಂತ ಆಧಾರಿತ ಸಂವಿಧಾನವನ್ನು ಅಪೇಕ್ಷಿಸಿದ್ದಾರೆ. ಸಮಾಜವಾದಿ ಪಕ್ಷೀಯರು ಎರಡು ವಿಚಾರಗಳನ್ನು ಬಯಸಿದ್ದಾರೆ. ಮೊದಲಾಗಿ, ತಾವು ಅಧಿಕಾರಕ್ಕೆ ಬಂದಲ್ಲಿ, ಪರಿಹಾರ ಪಾವತಿಗೆ ಅವಕಾಶವಿಲ್ಲದೆ ಎಲ್ಲಾ ಖಾಸಗಿ ಸೊತ್ತುಗಳನ್ನು ರಾಷ್ಟ್ರೀಕರಿಸಲು ಅಥವಾ ಸಮಾಜೀಕರಿಸಲು ಸಂವಿಧಾನ ಅವರಿಗೆ ಸ್ವಾತಂತ್ರ್ಯ ನೀಡಬೇಕು. ಎರಡನೆಯದಾಗಿ, ಸಂವಿಧಾನದಲ್ಲಿ ಉಲ್ಲೇಖಿತ ಮೂಲಭೂತ ಹಕ್ಕುಗಳು ಸಂಪೂರ್ಣ ನಿರಂಕುಶವಾಗಿರಬೇಕು, ಯಾವುದೇ ಮಿತಿರಹಿತವಾಗಿರಬೇಕು. ಯಾಕೆಂದರೆ, ಒಂದು ವೇಳೆ ಪಕ್ಷ ಅಧಿಕಾರಕ್ಕೆ ಬರಲು ವಿಫಲವಾದಲ್ಲಿ, ಕೇವಲ ಟೀಕೆ ಟಿಪ್ಪಣಿಗಲ್ಲ, ರಾಜ್ಯವನ್ನು ಕಿತ್ತೊಗೆವ ಸ್ವಾತಂತ್ರ್ಯ ಕೂಡ ತಮಗಿರಬೇಕೆಂಬುದು ಸಮಾಜವಾದಿಗಳ ಲೆಕ್ಕಾಚಾರವಾಗಿದೆ.

ಕಿರುಸುದ್ದಿ

ಶೇ.100ರಷ್ಟು ಸಾಧನೆ

ಮುಂಡರಗಿ: ಇಲ್ಲಿಯ ಸಮಾಜ ಕಲ್ಯಾಣ ಇಲಾಖೆ ಅಧೀನದಲ್ಲಿ ಬರುವ ಡಂಬಳ ಗ್ರಾಮದ ಡಾಕ್ಟರ್ ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದ ವಿದ್ಯಾರ್ಥಿಗಳು ಪಿಯುಸಿ ದ್ವಿತೀಯ ವರ್ಷದ ಪರೀಕ್ಷೆಯಲ್ಲಿ ಶೇ. ನೂರಕ್ಕೆ ನೂರರಷ್ಟು ಉತ್ತೀರ್ಣರಾಗಿದ್ದಾರೆ ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಉದಯಕುಮಾರ ಯಲಿವಾಳ ತಿಳಿಸಿದ್ದಾರೆ. ಅವರು ಈ ಕುರಿತು ಮಾಹಿತಿ ನೀಡಿ, ತಾಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು ಐದು ಮೆಟ್ರಿಕ್ ನಂತರದ ವಸತಿ ನಿಲಯಗಳಿದ್ದು ಇದರಲ್ಲಿ ಒಟ್ಟು 147 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 23 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ನಲ್ಲಿ, 80 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಡಾಕ್ಟರ್ ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ನಂತರದ ಬಾಲಕೀಯರ ವಸತಿ ನಿಲಯದಲ್ಲಿ ಒಟ್ಟು 58 ವಿದ್ಯಾರ್ಥಿನಿಯರು ಪರೀಕ್ಷೆ ಬರೆದಿದ್ದು, ಇದರಲ್ಲಿ 16 ವಿದ್ಯಾರ್ಥಿನಿಯರು ಡಿಸ್ಟಿಂಕ್ಷನ್ ನಲ್ಲಿ, 34 ವಿದ್ಯಾರ್ಥಿನಿಯರು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಡಾಕ್ಟರ್ ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದಲ್ಲಿ ಒಟ್ಟು 53 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಅದರಲ್ಲಿ 10 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ನಲ್ಲಿ, 34 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಪರಿಶಿಷ್ಟ ಪಂಗಡದ ಬಾಲಕರ ವಸತಿ ನಿಲಯದಲ್ಲಿ ಒಟ್ಟು 16 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದು ಇದರಲ್ಲಿ 11 ವಿದ್ಯಾರ್ಥಿಗಳು ಉತ್ತೀರ್ಣ, ಕಲಕೇರಿ ಗ್ರಾಮದಲ್ಲಿರುವ ಡಾಕ್ಟರ್ ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದಲ್ಲಿ ಒಟ್ಟು 12 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಇದರಲ್ಲಿ ಎಂಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಪಟ್ಟಣದ ಕಾಲೇಜು ಬಾಲಕಿಯರ ವಸತಿ ನಿಲಯದ ವಿದ್ಯಾರ್ಥಿನಿ ಸುನಿತಾ ಲಮಾಣಿ 578 ಅಂಕಗಳನ್ನು ಪಡೆದು 96.33 ಪ್ರತಿಶತ ಪಡೆಯುವ ಮೂಲಕ ತಾಲೂಕಿಗೆ ದ್ವಿತೀಯ ಸ್ಥಾನ ಪಡೆದಿದ್ದಾಳೆ. ಕಾಲೇಜು ಬಾಲಕರ ವಸತಿ ನಿಲಯ ಮುಂಡರಗಿಯ ವಿದ್ಯಾರ್ಥಿ ಸಂತೋಷ ಚೌಹಾಣ್ 576 ಅಂಕಗಳನ್ನು ಪಡೆದು ಶೇ.96ರಷ್ಟು ಅಂಕ ಪಡೆದಿದ್ದಾನೆ ಎಂದರು.

ಇಂದು ಮೆರವಣಿಗೆ

ಗದಗ: ಏ.14ರಂದು ಡಾ.ಬಿ.ಆರ್ ಅಂಬೇಡ್ಕರ್ ಅವರ 135ನೇ ಜಯಂತಿ ಹಾಗೂ ಡಾ.ಬಾಬು ಜಗಜೀವನ ರಾಂ ಅವರ 119ನೇ ಜನ್ಮದಿನಾಚರಣೆಯ ನಿಮಿತ್ತ ಬೆಳಗ್ಗೆ 9ಕ್ಕೆ ಗದಗ ಬೆಟಗೇರಿ ನಗರಸಭೆ ಆವರಣದಿಂದ ಮೆರವಣಿಗೆ ಗಾಂಧಿ ಸರ್ಕಲ್, ಮಹೇಂದ್ರಕರ ಸರ್ಕಲ್, ಟಾಂಗಾ ಕೂಟ್, ಬಸವೇಶ್ವರ ಸರ್ಕಲ್, ಜೋಡುಮಾರುತಿ ದೇವಸ್ಥಾನ, ಪ್ರವಾಸಿ ಮಂದಿರ, ಮುಳಗುಂದ ನಾಕಾ ಮುಖಾಂತರ ಡಾ.ಬಿ.ಆರ್. ಅಂಬೇಡ್ಕರ್ ಭವನವನ್ನು ಮಧ್ಯಾಹ್ನ 12ಕ್ಕೆ ತಲುಪಲಿದೆ. ನಂತರ ವೇದಿಕೆ ಕಾರ್ಯಕ್ರಮ ಜರುಗಲಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಬೇಡ್ಕರ್ ಜಯಂತಿ ಇಂದು

ಗದಗ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಏ.14ರಂದು ಸಂಜೆ 6ಕ್ಕೆ ತೋಂಟದ ಸಿದ್ದಲಿಂಗ ಶ್ರೀಗಳ ಕನ್ನಡ ಭವನ, ಕಸಾಪ ಕಾರ್ಯಾಲಯದಲ್ಲಿ ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಜಯಂತಿ ಅಂಗವಾಗಿ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ಚಿಂತನೆಗಳ ಕುರಿತು ಸಂಸ್ಕೃತಿ ಚಿಂತಕ ಡಾ.ಆರ್.ಎಲ್.ಹಂಸನೂರ ಮಾತನಾಡುವರು ಎಂದು ಕಿಶೋರಬಾಬು ನಾಗರಕಟ್ಟಿ, ದತ್ತಪ್ರಸನ್ನ ಪಾಟೀಲ, ಡಿ.ಎಸ್.ಬಾಪುರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಉಪನ್ಯಾಸ

ಗದಗ: ನಗರದ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯಾಲಯದಲ್ಲಿ ಏ.14 ರಂದು ಬೆಳಗ್ಗೆ 11ಕ್ಕೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ವೈರಾಗ್ಯನಿಧಿ ಅಕ್ಕಮಹಾದೇವಿ ಕುರಿತು ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ. ಅಧ್ಯಕ್ಷತೆ ಕೆ.ಎ. ಬಳಿಗೇರ ವಹಿಸುವರು. ಡಾ.ರಶ್ಮಿ ಅಂಗಡಿ, ಪ್ರೊ. ಪ್ರಕಾಶ ತಳವಾರ ಉಪನ್ಯಾಸ ಮಾಡುವರು. ಸುಧಾ ಹುಚ್ಚಣ್ಣವರ ಉಪಸ್ಥಿತರಿರುವರು ಎಂದು ಸಂಘಟಕರ ಪರವಾಗಿ ಬೂದಪ್ಪ ಅಂಗಡಿ ತಿಳಿಸಿದ್ದಾರೆ.

ಮಾರುಕಟ್ಟೆ ಧಾರಣೆ

ಗದಗ — ಕ್ವಿಂಟಲ್

ಗೆಜ್ಜಿ ಶೇಂಗಾ	4509-6919
ಅಜವಾನ	9525-9569
ಅಲಸಂದಿ	3659-6311
ಸಜ್ಜೆ	1679-1679
ಕಡಲೆ	2424-5490
ಉದ್ದು	2677-4239
ಔಡಲ	5021-5021
ಹೆಸರು	1009-8489
ಜೋಳ	1011-4637
ಗೋವಿನಜೋಳ	1405-1809
ಸಾಸವಿ	4611-4611
ಕುಸಬಿ	4019-5766
ಸೂರ್ಯಕಾಂತಿ	5006-5912
ಗೋಧಿ	1109-3521
ಹತ್ತಿ	7150-7200
ಶೇಂಗಾ	12571-12571



ಗದಗ: ಗಂಗಾಪುರ ಪೇಟೆಯಲ್ಲಿರುವ ದುರ್ಗಾದೇವಿ ಶಿಕ್ಷಣ ಸಮಿತಿಗೆ ಭೇಟಿ ನೀಡಿ, ಸಮಿತಿಯಿಂದ ಗೌರವ ಸ್ವೀಕರಿಸಿದ ಚಿಕ್ಕಬಳ್ಳಾಪೂರ ಜಿಲ್ಲೆಯ ಮುದ್ದೇನಹಳ್ಳಿ ಪ್ರಶಾಂತಿ ಬಾಲಮಂದಿರದ ಟ್ರಸ್ಟಿ ಎಂ.ಎಸ್. ಸತ್ಯನಾರಾಯಣ. ಮಜ್ಜೂರಿನ ಸತ್ಯಸಾಯಿ ವಾಣಿ ನಿಕೇತನ ಗುರುಕುಲದ ಚೇರ್ಮನ್ ಬಿ.ಎಸ್. ಗೋಣಿ, ಕಾರ್ಯಾಧ್ಯಕ್ಷ ಡಾ.ಸೀಮಾ, ಹಾಲುಮತ ಮಹಾಸಭಾದ ರಾಜ್ಯಾಧ್ಯಕ್ಷ ರುದ್ರಣ್ಣ ಗುಳಗುಳಿ, ಪ್ರೊ. ರಾಮಚಂದ್ರ ಜೋಗಿನ, ದುರ್ಗಾದೇವಿ ಶಿಕ್ಷಣ ಸಮಿತಿ ಅಧ್ಯಕ್ಷ ವೆಂಕಟೇಶ ಇಮರಾಪೂರ, ಉಪಾಧ್ಯಕ್ಷೆ ಮಲ್ಲಮ್ಮ ಕೊಪ್ಪದ, ಕಾರ್ಯದರ್ಶಿ ಕವಿತಾ ಇಮರಾಪೂರ, ನಿರ್ದೇಶಕ ಮೋಹನ ಇಮರಾಪೂರ ಇತರರಿದ್ದರು.

ಶಿಬಿರದಿಂದ ಮಕ್ಕಳಲ್ಲಿ ಆತ್ಮಸ್ಥೈರ್ಯ ವೃದ್ಧಿ

ನರಗುಂದ: ಮಕ್ಕಳಲ್ಲಿರುವ ಪ್ರತಿಭೆಯನ್ನು ಅನಾವರಣ ಗೊಳಿಸಲು ಉಚಿತವಾಗಿ ನಡೆಸುತ್ತಿರುವ ಶಿಬಿರದಲ್ಲಿ ಮಕ್ಕಳಲ್ಲಿ ಆತ್ಮಸ್ಥೈರ್ಯ, ದಿಟ್ಟತನ, ವೇದಿಕೆಯ ಭಯ, ಹೋಗಲಾಡಿಸುವಲ್ಲಿ ಮಹತ್ವದ ಪಾತ್ರ ವಹಿಸಲಾಗುತ್ತದೆ ಎಂದು ಪ್ರಜಾಪಿತ ಬ್ರ.ಕು ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ಬಿ.ಕೆ. ಪ್ರಭಕ್ಕ ಹೇಳಿದರು.

ನಗರದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ಮಕ್ಕಳಿಗಾಗಿ ಉಚಿತ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ ಮಾತನಾಡಿದರು.

ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ಶ್ರೀಕಾಂತ ದಂಡನಾಯಕ ಮಾತನಾಡಿ, ಕಿಶೋರಾವಸ್ಥೆಯಲ್ಲಿ ಪೋಷಕರು ಮಕ್ಕಳೊಡನೆ ಹೇಗೆ ವರ್ತಿಸಬೇಕು. ಅವರ ಬೇಕು ಬೇಡಿಕೆಗಳನ್ನು ಹೇಗೆ ನಿಭಾಯಿಸಬೇಕೆಂಬ ತಿಳುವಳಿಕೆ ಬಹಳ ಮಹತ್ವ ಪಡೆದಿದೆ ಎಂದರು. ಶಿಕ್ಷಕ ಎಸ್.ಎಲ್. ಮರಿಗೌಡ್ರ, ಮಾತನಾಡಿ, ವಿದ್ಯಾರ್ಥಿಗಳು ಮಾಡಲ್ಪಟ್ಟ ಚಿತ್ರಕಲೆ, ಜಲವರ್ಣ, ಓರೆಗಾಮಿ, ಪ್ರದರ್ಶನ ತುಂಬಾ ಚೆನ್ನಾಗಿದೆ ಮಕ್ಕಳು ನವ ಭಾರತದ ಪ್ರಜೆಗಳಾಗಿ ತಮ್ಮ ಜೀವನವನ್ನು ಪರಮಾತ್ಮನ ಆಶೀರ್ವಾದದೊಂದಿಗೆ ನಡೆಯಲಿ ಎಂದರು. ಶಂಕ್ರಣ್ಣ ಇಂಗಳಳ್ಳಿ, ರಾಘವೇಂದ್ರ, ಗೆಜ್ಜಿ, ಆರ್.ಎನ್. ಪಾಟೀಲ, ನಾಗರಾಜ ನಾಶಿ, ಉಮೇಶ್ ಸುಬೇದಾರ, ವಿಶಾಲ ವಾಳದ, ಶ್ರೀನಿವಾಸ, ಸುಧಾ ಮುಧೋಳೆ, ಪುರಸಭೆ ಸಿಬ್ಬಂದಿ ಕವಿತಾ, ಅಂಜಲಿ, ಮತ್ತು ಜೋಗನ್ನವರ, ಉಮಕ್ಕ ನಾಶಿ ಶೆಟ್ಟರ ನಿರೂಪಿಸಿದರು. ತ್ರಿವೇಣಿ ಅಂಗಡಿ ಸ್ವಾಗತಿಸಿದರು.



ನರಗುಂದ: ನಗರದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ಮಕ್ಕಳಿಗಾಗಿ ಉಚಿತ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ.ಶಿಬಿರದಲ್ಲಿ ಮಕ್ಕಳಿಂದ ತಾಯಂದಿರಿಗೆ ಪಾದಪೂಜೆ ನೆರವೇರಿಸಿ ದಿನನಿತ್ಯ ತಂದೆ ತಾಯಿಯ ಆಶೀರ್ವಾದದೊಂದಿಗೆ ನಮ್ಮ ಜೀವನವನ್ನು ಪ್ರಾರಂಭಿಸಬೇಕೆಂಬ ರೋಮಾಂಚಕರವಾದ ಒಂದು ಸಂದೇಶವನ್ನು ನೀಡಲಾಯಿತು. ವಿವಿಧ ಸ್ಪರ್ಧೆಗಳಲ್ಲಿ ಬಹುಮಾನ ಪಡೆದ ಮಕ್ಕಳಿಗೆ ಪಾರಿತೋಷಕ ಹಾಗೂ ಪ್ರಶಂಸನ ಪತ್ರ ನೀಡಲಾಯಿತು.

ಪಂಪ ಕನ್ನಡ ಸಾಹಿತ್ಯ ಭವನ ಕಟ್ಟಡ ಅಪೂರ್ಣ: ಜನರ ಅಸಮಾಧಾನ

ಶಿವಲಿಂಗಯ್ಯ ಹೊತಗಿಮಠ

ಲಕ್ಷ್ಮೇಶ್ವರ: ಸರ್ಕಾರದ ಅನುದಾನ ವಿಲ್ಲದಿರುವುದು ಹಾಗೂ ತಾಲೂಕಿನ ಕನ್ನಡ ಮನಸುಗಳ ನೀರಾಸಕ್ತಿಯೋ ಏನು ಗೊತ್ತಿಲ್ಲ ಆದಿಕವಿ ಪಂಪ ಕನ್ನಡ ಸಾಹಿತ್ಯ ಭವನ ಕಟ್ಟಡ ಹಲವು ವರ್ಷಗಳಿಂದ ಅರ್ಧಕ್ಕೆ ನಿಂತಿದೆ ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ತಿರುಲ್ಗನ್ನಡ ನಾಡು ಪುಲಿಗೇರಿ ಅಂದರೆ ಇಂದಿನ ಐತಿಹಾಸಿಕ ಲಕ್ಷ್ಮೇಶ್ವರ ಕುಮಾರವ್ಯಾಸ, ಪಂಪ, ವಿದ್ಯಾರಣ್ಯ, ಆದಯ್ಯರಂತ ಅನೇಕರು ನಡೆದಾಡಿದ ಊರು,ಕಲೆ ಸಾಹಿತ್ಯ ಸಂಸ್ಕೃತಿಗೆ ಹೆಸರು ವಾಸಿಯಾಗಿದೆ. ಕನ್ನಡ ನಾಡಿಗೆ ಲಕ್ಷೇಶ್ವರದ ಕೊಡುಗೆ ಅನನ್ಯ, ಆದರೆ ಅಂತಹ ನೆಲದಲ್ಲಿ ಇಂದಿಗೂ ಕನ್ನಡ ಸಾಹಿತ್ಯ ಚಟುವಟಿಕೆಗಳಿಗೆ ನಡೆಸಲಿಕ್ಕೆ ಒಂದು ನೆಲೆವಿಲ್ಲದಿರುವುದು ವಿಪರ್ಯಾಸವೆ ಸರಿ.

ಈಶ್ವರ ನಗರದ ಪುರಸಭೆ ನಿದೇಶನವನ್ನು 2005–06ರಲ್ಲಿ ಕಸಾಪ ತಾಲೂಕಾಧ್ಯಕ್ಷ, ಪ್ರೇಮಕ್ಕ ಬಿಂಕದಕಟ್ಟಿ ರಾಜ್ಯ ಪ್ರಶಸ್ತಿ ಪುರಸ್ಕೃತ ಪ್ರೊ. ಸಿ.ವಿ. ಕೆರಿಮನಿ ಶಿಕ್ಷಕ ಜಿ.ಎಸ್. ಗುಡಗೇರಿ ಸೇರಿದಂತೆ ಅನೇಕರು ನಿವೇಶನ ಪಡೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು, ನಂತರ 50 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಕನ್ನಡ ಸಾಹಿತ್ಯ ಭವನ ನಿರ್ಮಾಣ ಯೋಜನೆ ರೂಪುಗೊಂಡಿತು. 2019ರಲ್ಲಿ ಅಂದಿನ ಕಸಾಪ ಜಿಲ್ಲಾಧ್ಯಕ್ಷ ಶರಣು ಗೋಗೇರಿ, ತಾಲೂಕಾಧ್ಯಕ್ಷ ಡಾ.ಜಯಶ್ರೀ ಹೊಸಮನಿ ಪ್ರಯತ್ನದಿಂದ ಸುಮಾರು 15 ಲಕ್ಷ ರೂ.ವೆಚ್ಚದಲ್ಲಿ ಕಟ್ಟಡ ಕಾಮಗಾರಿಗೆ 2019ರ ಜೂ.17ರಂದು ಕಸಾಪ ಮಾಜಿ ಅಧ್ಯಕ್ಷ ಡಾ.ಮನು ಬಳಿಗಾರ ಭೂಮಿಪೂಜೆ ನೆರವೇರಿಸಿದ್ದರು. ಆದರೆ 15 ಲಕ್ಷ ರೂ. ಅನುದಾನದಲ್ಲಿ ಕಾಮಗಾರಿ ಗುತ್ತಿಗೆ ಪಡೆದಿದ್ದ ನಿರ್ಮಿತಿ ಕೇಂದ್ರದವರು ಅಡಿಪಾಯ ಹಾಕಿ ಕಾಲಂ ತುಂಬಿ ಕೈತೊಳೆದುಕೊಂಡಿದ್ದು ಅಲ್ಲಿ ಕಸ ಕಡ್ಡಿ ಬೆಳೆದು ಕನ್ನಡ ಸಾಹಿತ್ಯ ಭವನ ಅನಾಥವಾಗಿದೆ. ಲಕ್ಷ್ಮೇಶ್ವರ ತಾಲೂಕಿನಲ್ಲೇ ಅತ್ಯಧಿಕ ಕನ್ನಡಪರ ಚಟುವಟಿಕೆಗಳು ನಡೆಯುತ್ತಿದ್ದು ಸದ್ಯ ಇರುವ ಕಸಾಪ ಅಧ್ಯಕ್ಷ ಈಶ್ವರ ಮೆಡ್ಲೇರಿ ಹಾಗೂ ಪದಾಧಿಕಾರಿಗಳು ಉತ್ತಮವಾಗಿ ಕನ್ನಡ ಪಸರನ್ನು ಹರಡುತ್ತಿದ್ದಾರೆ. ಕೆಲವು ದಿನಗಳ ಹಿಂದೆ ಕನ್ನಡ ಸಾಹಿತ್ಯ ಅಭಿಮಾನಿಗಳು ಸಭೆ ಮಾಡಿ ಕಟ್ಟಡ ಪೂರ್ಣಗೊಳಿಸಲು ಯೋಜನೆ ಹಾಕಿಕೊಂಡರೂ ಕಾರ್ಯರೂಪಕ್ಕೆ ಬಂದಿಲ್ಲ . ಆದರೆ ತಾಲೂಕಿನಲ್ಲಿ ಕಸಾಪದ ಸದಸ್ಯರ ಸಂಖ್ಯೆ 500ಕ್ಕಿಂತಲೂ ಹೆಚ್ಚುವಿದ್ದು ಹತ್ತಾರು ಕನ್ನಡಪರ ಸಂಘಟನೆಗಳು ಹಾಗೂ ಸಾವಿರಾರು ಜನರು ಕನ್ನಡ ಸಾಹಿತ್ಯ ಅಭಿಮಾನಿಗಳು ಇದ್ದರೂ ಕಟ್ಟಡ ಪೂರ್ಣ ಗೊಳ್ಳದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.



> ಕಟ್ಟಡ ಪೂರ್ಣಗೊಳ್ಳಲು ಕನಿಷ್ಠ 40 ಲಕ್ಷ ಹಣಬೇಕು. ಈ ಬಗ್ಗೆ ಸ್ಥಳೀಯ ಶಾಸಕರ ಗಮನಕ್ಕೆ ತಂದಿದ್ದು ಸಕಾರಾತ್ಮಕವಾಗಿ ಸ್ಪಂದಿಸಿದ್ದು ಸಾಹಿತ್ಯ ಭವನ ನಿರ್ಮಿಸಲು ಕನ್ನಡ ಮನಸುಗಳು ಕೈಜೋಡಿಸಬೇಕು.
>
> ■ ಈಶ್ವರ ಮೆಡ್ಲೇರಿ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ

ದಿಗಂತ ವಿಶೇಷ

> ಕನ್ನಡ ಸಾಹಿತ್ಯ ಭವನ, ಅನುದಾನ ಕೊರತೆಯಿಂದ ಅರ್ಧಕ್ಕೆ ನಿಂತಿದ್ದು ಗಮನಕ್ಕೆ ಬಂದಿದ್ದು, ತಾಲೂಕು ಕಸಾಪ ಮನವಿ ಮೇರೆಗೆ ಶಾಸಕರ ಸ್ಥಳೀಯ ಅನುದಾನದಲ್ಲಿ ಸಾಹಿತ್ಯ ಭವನ ನಿರ್ಮಾಣಕ್ಕೆ ಅನುದಾನ ನೀಡುತ್ತೇನೆ
>
> ■ ಡಾ ಚಂದ್ರು ಲಮಾಣಿ, ಶಿರಹಟ್ಟಿ ಮತಕ್ಷೇತ್ರದ ಶಾಸಕ

ಬಿಸಿಲಿನ ತಾಪಕ್ಕೆ ಜನರಿಗೆ ಎಳೆನೀರಿನ ಆಸರೆ!

ರಮೇಶ ಮೋಟಿ

ನರಗುಂದ: ಕಾಲಮಾನಕ್ಕೆ ತಕ್ಕಂತೆ ಪ್ರಕೃತಿಯಲ್ಲಿ ವಿವಿಧ ವಸ್ತುಗಳಿಗೆ ಬೇಡಿಕೆ ಹೆಚ್ಚುವಂತೆ ಎಳನೀರಿಗೂ ಬೇಡಿಕೆ ಹೆಚ್ಚಿದೆ. ಬಿಸಿಲಿನ ತಾಪಮಾನ ತಡೆದುಕೊಳ್ಳಲು ಮತ್ತು ಜನರ ಆರೋಗ್ಯಕ್ಕೆ ಉಪಯುಕ್ತವಾದ ಎಳನೀರು ಬೇಕೆಬೇಕು. ಇದು ಕೇವಲ ತಂಪು ನಿಡಲ್ಲ ಬದಲಾಗಿ, ಆರೋಗ್ಯಕೆ ಬಹಳ ಉತ್ತಮವಾದದ್ದಾಗಿದೆ. ಅಲ್ಲದೇ ಇಂದಿನ ಬಿಸಿಲಿನ ತಾಪಕ್ಕೂ ಜನರಿಗೆ ಎಳನೀರೇ ಆಸರೆಯಾಗಿದೆ.



ನರಗುಂದ ಮಧ್ಯಭಾಗದಲ್ಲಿ ಹಾಯ್ದು ಹೋಗುವ ಹುಬ್ಬಳ್ಳಿ-ಸೊಲ್ಲಾಪೂರ ರಾಷ್ಟೀಯ ಹೆದ್ದಾರಿಯಲ್ಲಿ ಎಳನೀರು ಮಾರಾಟದ ತಾಣಗಳು ಕಾಣುತ್ತವೆ. 200 ಮೀ. ಅಂತರದಲ್ಲಿಯೇ 10 ಪಾಯಿಂಟ್‌ಗಳಿವೆ. ನಗರದೆಲ್ಲೆಡೆ ಇನ್ನೂ ಸಾಕಷ್ಟಿದ್ದು, ಹಲವು ಕಡೆಗಳಲ್ಲಿ ಎಳನೀರು ಮಾರಾಟ ಜೋರಾಗಿದೆ. ಎಳನೀರಿಗೆ ಸೀಸನ್ ಎಂಬುದು ಇಲ್ಲವೇ ಇಲ್ಲ. ಬೇಸಿಗೆ ಹೊರತುಪಡಿಸಿ ಉಳಿದ ದಿನಗಳಲ್ಲಿ ಕೂಡಾ ಎಳನೀರನ್ನು ಅನಾರೋಗ್ಯಕ್ಕೆ ಒಳಗಾದವರು ಆರೋಗ್ಯಕ್ಕಾಗಿ ಉಪಯೋಗಿಸುತ್ತಾರೆ. ಬೇಸಿಗೆ ಬಂತೆಂದರೆ ಆರೋಗ್ಯ ಚೆನ್ನಾಗಿರಲೆಂದು ಜನರು ಆಗಾಗ ಎಳನೀರು ಸೇವನೆ ಮಾಡುತ್ತಾರೆ. ಉರಿಮೂತ್ರ, ದೇಹದ ಉಷ್ಣತೆ, ಮಲಬದ್ಧತೆ ಸಮಸ್ಯೆಗಳನ್ನು ಎಳನೀರು ಪಾನೀಯ ನಿವಾರಿಸುತ್ತದೆ. ಸವದತ್ತಿ, ರಾಮದುರ್ಗ, ನರಗುಂದ ಹಾಗೂ ಬಾದಾಮಿ ತಾಲೂಕಿನಲ್ಲಿ ಮಲಪ್ರಭಾ ನದಿ ಹರಿಯುತ್ತದೆ. ಈ ತಾಲೂಕಗಳ ವ್ಯಾಪ್ತಿಯಲ್ಲಿ ಬರುವ ಮುನವಳ್ಳಿ, ಸಿಂದೋಗಿ, ಯಕ್ಕೇರಿ, ಕೊಣ್ಣೂರ, ಬೂದಿಹಾಳ, ಕಲ್ಲಾಪೂರ, ಸುರೇಬಾನ, ಮನಿಹಾಳ, ಕುಳಗೇರಿ ಹಾಗೂ ಅನೇಕ ದೂರದ ಸ್ಥಳಗಳಿಂದ ಎಳನೀರು ಕಾಯಿಗಳನ್ನು ತರಿಸಲಾಗುತ್ತದೆ.

ಉತ್ತಮ ಆರೋಗ್ಯ

25 ವರ್ಷಗಳಿಂದ ಎಳನೀರು ಮಾರಾಟದ ವೃತ್ತಿಯನ್ನು ವರ್ಷಪೂರ್ತಿ ನಡೆಸಿಕೊಂಡು ಬಂದಿದ್ದೇನೆ. ಅನೇಕ ಜನರಿಗೆ ಹೋಮ್ ಡಿಲೆವರಿ ಕೊಡುತ್ತೇನೆ. ಎಳನೀರು ಒಂದಕ್ಕೆ 40 ಹಾಗೂ 50 ಇದೆ. ದರದ ಬಗ್ಗೆ ಜನರು ಬಹಳ ಚರ್ಚೆ ಮಾಡಲ್ಲ, ಬೇಸಿಗೆ ಬಿಸಿಲು ಹೆಚ್ಚುತ್ತಿದೆ. ಎಳನೀರಿನ ಕಾಯಿ ದರ ಹೆಚ್ಚಾದರೂ ಆಗಬಹುದು. ಇಲ್ಲಿ ಆರೋಗ್ಯಕ್ಕೆ ಹೆಚ್ಚು ಮಹತ್ವ ಕೊಡಲಾಗುತ್ತಿದೆ ಎನ್ನುತ್ತಾರೆ ನರಗುಂದದ ಎಳನೀರು ವ್ಯಾಪಾರಿ ಚಂದ್ರಶೇಖರ ಹಡಪದ ಅವರು.



ಪ್ರತಿಭೆಗಳಿಗೆ ಸೂಕ್ತ ಅವಕಾಶ ಸಿಗಲಿ: ಬೊಮ್ಮಾಯಿ

ಗದಗ: ಹೆಣ್ಣು ಮಕ್ಕಳಲ್ಲಿ ಪ್ರತಿಭೆ ಮತ್ತು ಪ್ರಾಮಾಣಿಕತೆ ಹೆಚ್ಚಿರುತ್ತದೆ. ಪ್ರತಿಭೆಗೆ ಅವಕಾಶ ಕೊಟ್ಟರೆ ಅವರು ಬೆಳೆದು ಸಮಾಜಕ್ಕೆ ಕೊಡುಗೆ ಕೊಡುವ ಶಕ್ತಿ ಬರುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ತಾಲೂಕಿನ ಅಡವಿಸೋಮಾಪೂರ ಗ್ರಾಮದಲ್ಲಿ ಶರಣ ಬಸವೇಶ್ವರ ವಿದ್ಯಾಸಂಸ್ಥೆಯ ಎಂ.ಬಿ.ಪಾಟೀಲ್ ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯ, ಕಲಕೇರಿಯ ಕಾಲೇಜಿನ ವಿದ್ಯಾರ್ಥಿನಿ ಮಂಜುಳಾ ಹುಳಕಣ್ಣವರ ಪಿಯುಸಿ ದ್ವಿತೀಯ ವರ್ಷದ ಪರೀಕ್ಷೆಯಲ್ಲಿ ಮುಂಡರಗಿ ತಾಲೂಕಿಗೆ ಪ್ರಥಮ ಸ್ಥಾನ ಹಾಗೂ ಜಿಲ್ಲೆಗೆ ತೃತೀಯ ಸ್ಥಾನ ಪಡೆದಿದ್ದಕ್ಕೆ ಅಭಿನಂದಿಸಿ ಮಾತನಾಡಿದರು.

ತಾಯಿ ನೆನೆದು ಭಾವುಕರಾದ ಬೊಮ್ಮಾಯಿ, ತಾಯಿ ಎಲ್ಲರಿಗಿಂರಲೂ ಶ್ರೇಷ್ಠ. ಒಂಬತ್ತು ತಿಂಗಳು ಹೊತ್ತು ಹೆತ್ತು ಜನ್ಮ ಪೂರ್ವದಲ್ಲಿಯೇ ಜ್ಞಾನ, ಬುದ್ಧಿ ಶಕ್ತಿ ನೀಡಿರುತ್ತಾಳೆ. ತಾಯಿ ಗರ್ಭದಿಂದ ಭೂಗರ್ಭದವರೆಗೆ ನಮ್ಮ ಬದುಕಿದೆ ತಾಯಿಗೆ ಅವಕಾಶ ಸ್ಥಾನ ಕೊಡುವಲ್ಲಿ ನಾವು ಹಿಂದಿದ್ದೇವೆ. ಯಾವಾಗ ಪ್ರತಿಯೊಬ್ಬ ಪುರುಷನಿಗೆ ಮಹಿಳೆ ಸಮಾನ ಆಗುತ್ತಾಳೋ ಆಗ ಈ ದೇಶ ಅಭಿವೃದ್ಧಿ ಆಗುತ್ತದೆ. ಮಂಜುಳಾಳನ್ನು ನೋಡಿದಾಗ ನಮ್ಮ ತಾಯಿ ನೆನಪಾಗುತ್ತಾಳೆ. ಪ್ರತಿ ವರ್ಷ ತನಗೆ ಕಲಿಸಿದ ಶಿಕ್ಷಕರಿಗೆ ಸನ್ಮಾನ ಮಾಡುತ್ತಿದ್ದಳು. ಶಿಕ್ಷಕರ ಮೇಲೆ ಅಷ್ಟು ಗೌರವ ಇತ್ತು ಎಂದು ತಾಯಿ ನೆನೆದು ಭಾವುಕರಾದರು.

ನಾನು ಸಿಎಂ ಆಗಿ ಮೊದಲನೇ ನಿರ್ಧಾರ ರೈತರ ಮಕ್ಕಳಿಗೆ ಸ್ಕಾಲರ್ ಶಿಪ್ ಕೊಡಿಸುವುದು ಮಾಡಿದ್ದೆ. ಯಾಕೆಂದರೆ ರೈತರ ಮಕ್ಕಳು ಎಸ್ ಎಸ್‌ಎಲ್‌ಸಿ, ಪಿಯುಸಿಗೆ ವಿದ್ಯಾಭ್ಯಾಸ ಮಾಡಿ ಬಿಡುತ್ತಾರೆ. ಆದಕ್ಕೆ ಅವರ ಮನೆತನ ಮುಂದೆ ಬರಬೇಕು ಅನ್ನುವ ಕಾರಣಕ್ಕೆ ಅವರ ಮಕ್ಕಳಿಗೆ ವಿದ್ಯಾರ್ಥಿ ವೇತನ ಕೊಡಲು ತೀರ್ಮಾನ ಮಾಡಿದ್ದೆ. ಸುಮಾರು 11 ಲಕ್ಷ ಮಕ್ಕಳು ತೆಗೆದುಕೊಂಡಿದ್ದರು. ಅದು ಮುಂದುವರೆದಿಲ್ಲ, ರಾಜ್ಯದಲ್ಲಿ ನಮ್ಮ ಪಕ್ಷಕ್ಕೆ ಮತ್ತೆ ಅವಕಾಶ ಸಿಕ್ಕರೆ ಆ ಯೋಜನೆ ಮುಂದುವರೆಸುತ್ತೇವೆ. ಈ ಕಾರ್ಯಕ್ರಮ ಇತರ ಹೆಣ್ಣು ಮಕ್ಕಳಿಗೆ ಪ್ರೇರಣೆಯಾಗುತ್ತದೆ ಎಂದರು.

ಮಾಜಿ ಸಚಿವ ಎಸ್.ಎಸ್.ಪಾಟೀಲ್, ಬಿಜೆಪಿ ಜಿಲ್ಲಾಧ್ಯಕ್ಷ ರಾಜು ಕುರಡಗಿ ಸೇರಿದಂತೆ ಹಲವಾರು ಪ್ರಮುಖರು ಹಾಗೂ ಕಾಲೇಜಿನ ಪ್ರಾಚಾರ್ಯರು, ಸಿಬ್ಬಂದಿ ಉಪಸ್ಥಿತರಿದ್ದರು.



ಜಂಬುನಾಥ ಕಂಚ್ಯಾಣಿಗೆ ಗೌರವ ಪ್ರಶಸ್ತಿ, ಗುಂಡುರಾವ್ ದೇಸಾಯಿಗೆ ಪುಸ್ತಕ ಪ್ರಶಸ್ತಿ

ಮುಂಡರಗಿ: ಕಲಾ ಶಿಕ್ಷಣ-ಸಂಸ್ಕೃತಿ ಪ್ರತಿಷ್ಠಾನದ 2025ರ ಸಾಹಿತ್ಯ ಗೌರವ ಪ್ರಶಸ್ತಿ ಹಾಗೂ ಪುಸ್ತಕ ಪ್ರಶಸ್ತಿ ಪ್ರಕಟಿಸಿದ್ದು ವಿಜಯಪುರದ ಮಕ್ಕಳ ಸಾಹಿತಿ ಜಂಬುನಾಥ ಕಂಚ್ಯಾಣಿ ಅವರಿಗೆ ಗೌರವ ಪ್ರಶಸ್ತಿ, ಮಸ್ಕಿಯ ಸಾಹಿತಿ ಗುಂಡುರಾವ್ ದೇಸಾಯಿ ಅವರು ಪುಸ್ತಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಡಾ. ನಿಂಗು ಸೊಲಗಿ ತಿಳಿಸಿದ್ದಾರೆ.





ಸಾಹಿತ್ಯ ಹಾಗೂ ಶಿಕ್ಷಣ ಸಂವರ್ಧನೆಯಲ್ಲಿ ಸಕ್ರಿಯವಾಗಿದ್ದ ಮುಂಡರಗಿಯ ಶಿಕ್ಷಕಿ ಕಲಾವತಿ ನಿಂಗು ಸೊಲಗಿ ಅವರ ಸ್ಮರಣೆಯಲ್ಲಿ 2023ರಿಂದ ಪ್ರತಿವರ್ಷ ಈ ಪ್ರಶಸ್ತಿ ನೀಡುತ್ತಾ ಬಂದಿದ್ದು, ಗೌರವ ಪ್ರಶಸ್ತಿಯು ಹತ್ತು ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದ್ದರೆ, ಪುಸ್ತಕ ಪ್ರಶಸ್ತಿಯು ಐದು ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುತ್ತಿದೆ. ಗೌರವ ಪ್ರಶಸ್ತಿಗೆ ಆಯ್ಕೆಯಾಗಿರುವ ಜಂಬುನಾಥ ಕಂಚ್ಯಾಣಿಯವರು ನಾಲ್ಕು ದಶಕಗಳಿಂದ ಸಾಹಿತ್ಯ ಸೇವೆಯಲ್ಲಿ ತೊಡಗಿದ್ದು ಮಕ್ಕಳಿಗಾಗಿ ಕಥೆ, ಕವಿತೆ, ನಾಟಕ, ಕಾದಂಬರಿ, ವಿಜ್ಞಾನ ಸಾಹಿತ್ಯ ಸೇರಿದಂತೆ ಹಲವು ಪ್ರಕಾರಗಳಲ್ಲಿ 33 ಕೃತಿಗಳನ್ನು ಪ್ರಕಟಿಸಿದ್ದು ಹಲವಾರು ಮಕ್ಕಳ ಕಮ್ಮಟಗಳಲ್ಲಿ ಕ್ರಿಯಾಶೀಲವಾಗಿ ಭಾಗಿಯಾಗಿದ್ದಾರೆ. ಗುಂಡುರಾವ್ ದೇಸಾಯಿ ಅವರು ಕಳೆದ ಒಂದೂವರೆ ದಶಕದಿಂದ ಮಕ್ಕಳ ಸಾಹಿತ್ಯ ರಚನೆಯಲ್ಲಿ ತುಂಬಾ ಪ್ರಯೋಗಶೀಲರಾಗಿದ್ದು ಹಲವು ಕೃತಿಗಳನ್ನು ರಚಿಸಿದ್ದಾರೆ. 2025 ರಲ್ಲಿ ಪ್ರಕಟಗೊಂಡ ಇವರ ಚಾರ್ಲಿ ಚಾರ್ಲಿ ವ್ಹೇರ್ ಆರ್ ಯು ಎಂಬ ಮಕ್ಕಳ ಕಥಾ ಕೃತಿ ವಿಭಿನ್ನವಾಗಿದ್ದು ಪುಸ್ತಕ ಪ್ರಶಸ್ತಿಗೆ ಆಯ್ಕೆಯಾಗಿದೆ. ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಶಂಕರ ಹಲಗತ್ತಿ, ಚಂದ್ರಗೌಡ ಕುಲಕರ್ಣಿ, ವಿವೇಕಾನಂದಗೌಡ ಪಾಟೀಲ, ಬಸವರಾಜ ಗಾರ್ಗಿ, ಮಲ್ಲಿಕಾರ್ಜುನ ಸೊಲಗಿ, ಡಾ. ನಿಂಗು ಸೊಲಗಿ ಇದ್ದರು. ಏ.25ರಂದು ಧಾರವಾಡ ವಿದ್ಯಾವರ್ಧಕ ಸಂಘದ ರಾ.ಹ. ದೇಶಪಾಂಡೆ ಸಭಾಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ.

ಪೊಲೀಸ್ ಇಲಾಖೆಗೆ, ಸಾರ್ವಜನಿಕರಿಗೆ ಸದಾ ಋಣಿ: ಜಾಫರ್ ಬಚ್ಚೇರಿ

ಮುಂಡರಗಿ: ಪೊಲೀಸ್ ಠಾಣೆಗೆ ಬರುವವರೆಲ್ಲರೂ ಮಧ್ಯಮ ಹಾಗೂ ಅತ್ಯಂತ ಕಡು ಬಡವರು. ಹೀಗಾಗಿ ಠಾಣೆಗೆ ಬಂದ ಮಿಸ್ಸಿಂಗ್, ಕಿಡ್ನ್ಯಾಪ್, ಕೊಲೆ, ಕಳ್ಳತನ, ದರೋಡೆ, ಸುಲಿಗೆ, ಪೊಕ್ಸೋ ಪ್ರಕರಣ, ಬೈಕ್ ಕಳ್ಳತನ ಹೀಗೆ ಯಾವುದೇ ಪ್ರಕರಣ ಬೆನ್ನತ್ತಿ ಹೋದಾಗಲೂ ಇಲಾಖೆ ಪ್ರೋತ್ಸಾಹ ಹಾಗೂ ಎಲ್ಲರ ಆಶೀರ್ವಾದದ ಫಲವಾಗಿ ಯಶ್ವಿಯಾಗಿಯೇ ಬಂದಿರುವೆ ಎಂದು ಮುಂಡರಗಿ ಪೊಲೀಸ್ ಠಾಣೆಯ ಅಪರಾಧ ವಿಭಾಗದ ಹೆಡ್ ಕಾನ್ಸಟೇಬಲ್ ಜಾಫರ್ ಬಚ್ಚೇರಿ ಹೇಳಿದರು.

ಅವರು ಈಚೆಗೆ ಬೆಂಗಳೂರಿನಲ್ಲಿ ಕರ್ನಾಟಕ ಸರ್ಕಾರ ರಾಜ್ಯ ಪೊಲೀಸ್ ಇಲಾಖೆಗೆ ಕೊಡ ಮಾಡುವ 2025ನೇ ಸಾಲಿನ ಮುಖ್ಯಮಂತ್ರಿಗಳ ಪದಕ ಸ್ವೀಕರಿಸಿದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಗೆಳೆಯರ ಬಳಗದಿಂದ ಆಯೋಜಿಸಿದ್ದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು. ಕಳ್ಳತನಾದ ದಿನವೇ ಅನೇಕ ಪ್ರಕರಣಗಳನ್ನು ಇಲಾಖೆ ಸಹಕಾರದಿಂದ ಪತ್ತೇಹಚ್ಚಿದ್ದೇವೆ. ಹುಟ್ಟಿದ ತಾಲೂಕಿನಲ್ಲಿಯೇ 3 ಬಾರಿ ಸೇವೆ ಮಾಡಲು ಇಲಾಖೆ ಅವಕಾಶ ನೀಡಿದ್ದಕ್ಕೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿ ಋಣ ತೀರಿಸಿರುವೆ. ಹೀಗಾಗಿ ಇಲಾಖೆಗೆ, ಸಾರ್ವಜನಿಕರಿಗೆ ನಾನು ಸದಾ ಋಣಿಯಾಗಿರುವೆ ಎಂದರು.



ಮುಖಂಡ ಕರಬಸಪ್ಪ ಹಂಚಿನಾಳ, ಕೊಟ್ರೇಶ ಅಂಗಡಿ,ಎಸ್.ವಿ.ಪಾಟೀಲ, ರಜನಿಕಾಂತ ದೇಸಾಯಿ ಮಾತನಾಡಿದರು. ರಜನೀಕಾಂತ ದೇಸಾಯಿ ಸೇರಿದಂತೆ ಎಲ್ಲ ಗೆಳೆಯರ ಬಳಗದಿಂದ ಸನ್ಮಾನಿಸಲಾಯಿತು. ಎಸ್.ಡಿ.ಚವಡಿ, ಶಂಬುಲಿಂಗನಗೌಡ ಹಕ್ಕಂಡಿ, ಚಿನ್ನಪ್ಪ ವಡ್ಡಟ್ಟಿ, ಸಿದ್ದು ದೇಸಾಯಿ, ಸೋಮಶೇಖರ ಹಕ್ಕಂಡಿ, ವೆಂಕಟೇಶ ದೇಸಾಯಿ, ವಿರೇಶ ಹಡಗಲಿ, ಪ್ರಕಾಶ ದೇಸಾಯಿ, ಮುತ್ತು ಆಳವಂಡಿ, ಮಹೇಶ ಜಂತ್ಲಿ, ನಾಗೇಶ ಹುಬ್ಬಳ್ಳಿ, ಮೋಹನ್ ದೇಸಾಯಿ, ಪರಸಪ್ಪ ಕುಂಬಾರ, ತಿಪ್ಪಣ್ಣ ಕಟ್ಟೀಮನಿ, ಗ್ಯಾನಪ್ಪ ಶೀರಿ. ಶಿವಾನಂದ ಕಮತರ, ರಮೇಶಗೌಡ ಪಾಟೀಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ನಿಶ್ಚಿತ ಗುರಿ, ದೃಢತೆಯೊಂದಿಗೆ ಮುನ್ನುಗ್ಗಿ: ಮನೋಹರ

ಮುಂಡರಗಿ: ನಿಶ್ಚಿತ ಗುರಿ ಹಾಗೂ ದೃಢತೆಯೊಂದಿಗೆ ಪ್ರಯತ್ನಶೀಲರಾಗಿ ಮುನ್ನಡೆಯಬೇಕು. ತಂದೆ-ತಾಯಿಗಳ ಆಶಯದಂತೆ ಸದೃಢ ಮನಸ್ಥಿತಿಯವರಾಗಿ ಸಾವಧಾನ ಚಿತ್ತದಿಂದ ಅಭ್ಯಾಸ ಮಾಡುತ್ತ ಮುನ್ನಡೆ ಸಾಧಿಸಬೇಕೆಂದು ಶಾಲಾ ಶಿಕ್ಷಣ ಇಲಾಖೆಯ ಶಿಕ್ಷಣ ಸಂಯೋಜಕ ಮನೋಹರ ಹೇಳಿದರು.

ಅವರು ಪಟ್ಟಣದ ರಾಮೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಮುದಾಯದತ್ತ ಶಾಲಾ ಕಾರ್ಯಕ್ರಮದಲ್ಲಿ ಮಾತನಾಡಿದರು. ಶಾಲಾ ಮುಖ್ಯೋಪಾಧ್ಯಾಯ ಡಾ. ನಿಂಗು ಸೊಲಗಿ ಮಾತನಾಡಿ, ಪ್ರಯತ್ನಶೀಲರಿಗೆ ಖಂಡಿತ ಪುರಸ್ಕಾರ ದೊರೆಯುತ್ತದೆ. ಮಕ್ಕಳು ಓದಿನ ಅಭಿರುಚಿಯೊಂದಿಗೆ ಸದಾ ಸರಜನಶೀಲರಾಗಿ, ಕ್ರಿಯಾಶೀಲವಾಗಿರಬೇಕು. ರಜಾ ಅವಧಿಯಲ್ಲಿ ಮನೆಯ ಪ್ರತಿ ಚಟುವಟಿಕೆಗಳನ್ನು ಗಮನಿಸಿ ನೆರವಾಗಬೇಕು ಎಂದರು.



ಶಾಲೆಯಲ್ಲಿ ರಜಾ ಅವಧಿಯಲ್ಲಿ ನಿತ್ಯ ಬೆಳಗ್ಗೆ 10 ಗಂಟೆಯಿಂದ 12.30 ರವರೆಗೆ ಮುಕ್ತ ಕಲಿಕೆಗೆ ಪೂರಕ ತರಗತಿ ನಡೆಸುತ್ತಿದ್ದು, ಮಲ್ಟಿ ಮೀಡಿಯಾ ಆಧರಿಸಿ ಸ್ಪೋಕನ್ ಇಂಗ್ಲಿಷ್ ಮತ್ತು ಒಂದು ಗಂಟೆ ಮರದ ನೆರಳಿನಲ್ಲಿ ಕುಳಿತು ಗ್ರಂಥಾಲಯ ಪುಸ್ತಕಗಳ ಸೃಜನಶೀಲ ಓದಿಗೆ ಅವಕಾಶ ನೀಡಲಾಗುತ್ತಿದ್ದು ಮಕ್ಕಳು ಇದರ ಸದುಪಯೋಗ ಪಡೆದುಕೊಳ್ಳಲು ತಿಳಿಸಿದರು. 2025-26 ನೇ ಸಾಲಿನ ಫಲಿತಾಂಶ ಪ್ರಕಟಿಸಿ ಶಾಲಾ ಎಸ್ .ಡಿ.ಎಂ.ಸಿ. ಹಾಗೂ ಮಕ್ಕಳ ಪಾಲಕರೊಂದಿಗೆ ಚರ್ಚಿಸಲಾಯಿತು. ಪ್ರತಿ ತರಗತಿಯಲ್ಲಿ ಮೊದಲ ಮೂರು ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಎಸ್.ಡಿ.ಎಂ.ಸಿ. ಅಧ್ಯಕ್ಷ ಉಮೇಶ ದಂಡಿನ ಅಧ್ಯಕ್ಷತೆ ವಹಿಸಿದ್ದರು. ಎಸ್.ಡಿ. ಎಂಸಿ ಸದಸ್ಯರಾದ ವಿಠ್ಠಲ ಜಂಬಗಿ, ಪರಮೇಶ ದಂಡಿನ, ಲಕ್ಕಪ್ಪ ಗುಡಿ, ವೆಂಕಟೇಶ ಗಾಳೆಪ್ಪನವರ, ರಾಘವೇಂದ್ರ ಅಬ್ಬಿಗೇರಿ, ಮಲ್ಲಪ್ಪ ಸಜ್ಜೇರಿ, ತಿಮ್ಮಪ್ಪ ಹಿರೇಹೊಳಿ, ನಿವೃತ್ತ ಶಿಕ್ಷಕರಾದ ಪಿ.ಎಂ. ಲಾಂಡೆ, ಶಿಕ್ಷಕಿಯರಾದ ಶಿವಲೀಲಾ ಅಬ್ಬಿಗೇರಿ, ಪಿ. ಆರ್. ಗಾಡದ ಉಪಸ್ಥಿತರಿದ್ದರು. ಪಿ.ಆರ್. ಗಾಡದ ಸ್ವಾಗತಿಸಿದರು. ಎಂ.ಆರ್. ಗುಗ್ಗರಿ ವಂದಿಸಿದರು, ಬಿ.ಎಚ್. ಹಲವಾಗಲಿ ನಿರೂಪಿಸಿದರು.

ಅಸಮಾನತೆ ಕಿತ್ತು ಹಾಕಿದ ಬಸವಣ್ಣನವರು

ಗದಗ: ಸಮಾಜದಲ್ಲಿ ಆಳವಾಗಿ ಬೇರೂರಿದ್ದ ಅಸಮಾನತೆ ಕಿತ್ತು ಹಾಕಿ, ಮನುಷ್ಯರೆಲ್ಲ ಒಂದೇ ಎಂದು ಸಾರಿ ವ್ಯಕ್ತಿ ಕಲ್ಯಾಣದ ಜತೆಗೆ ಸಮಾಜ ಕಲ್ಯಾಣದ ಚಿಂತನೆ ಬಿತ್ತಿ ಆಚರಣೆ ಪ್ರಧಾನ ಸಿದ್ಧಾಂತ ವಿಶ್ವಗುರು ಬಸವಣ್ಣನವರು ರೂಪಿಸಿದರು ಎಂದು ಜಿಲ್ಲಾ ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಸುಧಾ ಹುಚ್ಚಣ್ಣವರ ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನಿಂದ ತೋಂಟದ ಸಿದ್ದಲಿಂಗ ಶ್ರೀಗಳ ಕನ್ನಡ ಭವನದಲ್ಲಿ ಜರುಗಿದ ಕಾಯಕ ಜೀವಿ ಸದಾನಂದ ಪಿಳ್ಳಿ ಅವರ ಸ್ಮರಣಾರ್ಥ ಜರುಗಿದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸನ್ಮಾನ ಸ್ವೀಕರಿಸಿದ ಪತ್ರಕರ್ತ ಶಿವಾನಂದ ಹಿರೇಮಠ ಮಾತನಾಡಿ, ತನಿಖಾ ವರದಿಗಳನ್ನು ಪ್ರಕಟಿಸಿದಾಗ ಪಟ್ಟಭದ್ರರಿಂದ ಅನೇಕ ಸಮಸ್ಯೆಗಳಿಗೆ ಪತ್ರಕರ್ತರು ಒಳಗಾಗುತ್ತಾರೆ. ಸಾಹಿತಿಗಳು ಮತ್ತು ಪತ್ರಕರ್ತರು ಜೊತೆಯಾಗಿ ಕಾರ್ಯ ಮಾಡಿದರೆ ಸಮಾಜದ ಓರೆಕೋರೆಗಳನ್ನು ತಿದ್ದಲು ಸಾಧ್ಯವಾಗುತ್ತದೆ ಎಂದರು. ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಸಮಾನತೆಯ ಮೂಲಕ ಸಾಮಾಜಿಕ ಸಂಸ್ಕೃತಿಯನ್ನು ಪರಿಚಯಿಸಿದ ಬಸವಣ್ಣನವರು ವಿಶ್ವದ ಸಾಂಸ್ಕೃತಿಕ ನಾಯಕರಾಗಿದ್ದಾರೆ ಎಂದರು. ಡಾ.ಸಹನಾ ಪಿಳ್ಳಿ, ಸುರೇಖಾ ಪಿಳ್ಳಿ, ಡಾ.ದತ್ತಪ್ರಸನ್ನ ಪಾಟೀಲ, ರಾಹುಲ ಗಿಡ್ನಂದಿ, ಡಿ.ಎಸ್.ಬಾಪುರಿ, ಕೆ.ಎಚ್. ಬೇಲೂರ, ಜಿ.ಬಿ.ಪಾಟೀಲ, ಅನ್ನದಾನಿ ಹಿರೇಮಠ, ಶಂಕರಪ್ಪ ಗಾಂಜಿ, ರಶ್ಮಿ ಅಂಗಡಿ, ಅಮರೇಶ ರಾಂಪೂರ, ಶೈಲಜಾ ಗಿಡ್ನಂದಿ, ಸಿ.ಎಂ. ಮಾರನಬಸರಿ, ಜಯಶ್ರೀ ಪಟ್ಟಣಶೆಟ್ಟಿ, ಬಿ.ಬಿ.ಹೊಳಗುಂದಿ ಇತರರಿದ್ದರು.



ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಪರೀಕ್ಷೆ ತರಬೇತಿ ಕಾರ್ಯಾಗಾರ

ನರಗುಂದ: ಸಂಗೀತ ಪರೀಕ್ಷೆಗಳು ಪ್ರಾಯೋಗಿಕ, ಶಾಸ್ತ್ರ ವಿಷಯ, ಶ್ರವಣ ಜ್ಞಾನ, ಅಧ್ಯಯನದ ಮೂಲಕ ಜರುಗುತ್ತವೆ ಎಂದು ಪ್ರಾಚಾರ್ಯ ಪಂ. ಶ್ರೀನಿವಾಸ ಇನಾಮದಾರ ಹೇಳಿದರು.

ಸ್ಥಳೀಯ ಭಾರತೀಯ ಸಂಗೀತ ವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ಅಖಿಲ ಭಾರತೀಯ ಗಾಂಧರ್ವ ಮಹಾವಿದ್ಯಾಲಯ ಮುಂಬೈ ಸಂಗೀತ ಪರೀಕ್ಷಾ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿಜಯನಗರ ಜಿಲ್ಲೆಯ ಜವಾಹರ ನವೋದಯದ ವಿದ್ಯಾಲಯದ ಸಂಗೀತ ಪ್ರಾಧ್ಯಾಪಕ ರಾಷ್ಟ್ರ ಪ್ರಶಸ್ತಿ ವಿಜೇತ ಯುವ ಗಾಯಕ ಪಂ. ಚಂದ್ರಕಾಂತ ಇನಾಮದಾರ ಅವರು ಪ್ರಶ್ನೆ ಪತ್ರಿಕೆ ಬಿಡಿಸುವ ಮೂಲಕ ಸಂಗೀತದ ವಿವಿಧ ಗೀತ ಪ್ರಕಾರಗಳಾದ ಬಡಾಖ್ಯಾಲ, ಛೋಟಾಖ್ಯಾಲ, ಧಮಾರ, ಧೃಪದ, ತರಾನಾ, ಪಾರಿಭಾಷಿಕ ಪದಗಳು ಮತ್ತು ಕೇರವಾ, ದಾದರಾ, ರೂಪಕ, ಝಪತಾಳ, ಏಕತಾಳ, ಚೌತಾಳ, ತ್ರಿತಾಲ, ಮಾಹಿತಿಯನ್ನು ಸವಿವರವಾಗಿ ನೀಡಿದರು.



ಈ ಕಾರ್ಯಾಗಾರದಲ್ಲಿ ಪ್ರಾರಂಭಿಕ ವಿಭಾಗದಲ್ಲಿ ಅಪೇಕ್ಷಾ ಕರ್ಕಿಕಟ್ಟಿ, ಅದ್ವಿಕಾ ಕರ್ಕಿಕಟ್ಟಿ, ಸಿರಿ ಬೆಂತೂರ, ಆರೋಹಿ ಗುಜಮಾಗಡಿ, ಅನ್ವಿತಾ ಅಡ್ಡಣಗಿ. ಪ್ರವೇಶಿಕಾ ಪ್ರಥಮ ವಿಭಾಗದಲ್ಲಿ ಕೃಷ್ಣವೇಣಿ ಕನಕರೆಡ್ಡಿ, ಮಾಣಿಕ್ಯ ಯರಗಟ್ಟಿ, ಸೃಷ್ಟಿ ಬೆಂತೂರ, ನಿತೀನ ಬಿ. ಹಾಗೂ ಪ್ರವೇಶಿಕಾ ಪೂರ್ಣ ವಿಭಾಗದಲ್ಲಿ ಪ್ರೇರಣಾ ಪೂಜಾರ, ವಸಂತ ಸುಳ್ಳದ, ಚೇತನ ಬಿ, ತರಬೇತಿ ಪಡೆದುಕೊಂಡರು. ಪ್ರಾಯೋಗಿಕತರಬೇತಿಯ ಗಾಯನಕ್ಕೆ ವಿದ್ಯಾಲಯದ ಪ್ರಾಚಾರ್ಯ ಪಂ. ಶ್ರೀನಿವಾಸ ಇನಾಮದಾರ ಹಾರ್ಮೋನಿಯಂ ಸಾಥ್ ಹಾಗೂ ನವಲಗುಂದದ ವಿಜಯೆಂದ್ರ ಕುಲಕರ್ಣಿ ತಬಲಾ ಸಾಥ್ ನೀಡಿದರು. ಗುರುಮಾತೆ ಗೀತಾ ಕರ್ಕಿಕಟ್ಟಿ ಮಾತನಾಡಿ, ಸಂಗೀತ ಪ್ರಾಯೋಗಿಕ ಪರೀಕ್ಷೆಯಲ್ಲಿ ಪರೀಕ್ಷಕರು ಕೇಳುವ ಪ್ರಶ್ನೆಗಳಿಗೆ ಗಡಿಬಿಡಿ ಮಾಡಿಕೊಳ್ಳದೆ ಸಮಾಧಾನದಿಂದ ಉತ್ತರಿಸಬೇಕು ಎಂದು ಪರಿಕ್ಷಾರ್ಥಿಗಳಿಗೆ ಹೇಳಿದರು.

ಏ.16ರಿಂದ ವಿಶೇಷ ಅಧಿವೇಶನ | ಬಿಜೆಪಿ ರಾಜ್ಯ ವಕ್ತಾರೆ ಸುರಭಿ ಹೊದಿಗೆರೆ ಮಾಹಿತಿ

ನಾರಿ ಶಕ್ತಿ ವಂದನ್ ಕಾಯ್ದೆ ದೇಶದ ಪರಿವರ್ತನಾತ್ಮಕ ಹೆಜ್ಜೆ

ಕಲಬುರಗಿ: ಸಶಕ್ತ ರಾಷ್ಟ್ರ ನಿರ್ಮಾಣದಲ್ಲಿ ನಾರಿಶಕ್ತಿಯ ಪಾತ್ರ ಅನನ್ಯ. ದಶಕಗಳ ಕಾಲ ಕೇಳಿ ಬರುತ್ತಿದ್ದ ಮಹಿಳಾ ಮೀಸಲಾತಿಯ ಕನಸು ಇದೀಗ ಸಾಕಾರವಾಗುವ ಐತಿಹಾಸಿಕ ಘಟ್ಟಕ್ಕೆ ತಲುಪಿದ್ದು, ಪ್ರಧಾನಿ ನರೇಂದ್ರ ಮೋದಿಯ ದೃಢ ಸಂಕಲ್ಪ, ದಿಟ್ಟ ನಾಯಕತ್ವ ರಾಜಕೀಯ ಇಚ್ಛಾಶಕ್ತಿಯಿಂದ ನಾರಿ ಶಕ್ತಿ ವಂದನ್ ಅಧಿನಿಯಮ ಜಾರಿಗೆ ಬರಲು ಸನ್ನದ್ಧವಾಗಿದೆ ರಾಜ್ಯ ಬಿಜೆಪಿ ವಕ್ತಾರೆ ಸುರಭಿ ಹೊದಿಗೇರೆ ತಿಳಿಸಿದರು.

ನಗರದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಬರುವ ಏ.16ರಿಂದ 18ರವರೆಗೆ ವಿಶೇಷ ಅಧಿವೇಶನ ನಡೆಯಲಿದ್ದು, ಈ ಮಹತ್ವದ ಕಾನೂನು ಜಾರಿಯಾದ ಬಳಿಕ ಲೋಕಸಭೆ ಮತ್ತು ದೇಶದ ಎಲ್ಲಾ ವಿಧಾನಸಭೆಯಲ್ಲಿ ಶೇ.33ರಷ್ಟು ಮಹಿಳೆಗೆ ಮೀಸಲಾತಿ ದೊರೆಯಲಿದೆ. ದೇಶದ ನಾರಿಯರು ರಾಜಕೀಯ ನಿರ್ಧಾರ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಅವಕಾಶ ಪಡೆಯಲಿದ್ದು, ಇದರಿಂದ ಮಹಿಳೆಯರಿಗೆ ಕೇವಲ ಪ್ರತಿನಿಧಿತ್ವವಷ್ಟೇ ಅಲ್ಲ, ದೇಶದ ಭವಿಷ್ಯ ರೂಪಿಸುವ ಅಧಿಕಾರ ಸಿಗಲಿದೆ ಎಂದರು.

ವಿಕಸಿತ ಭಾರತ ಕನಸನ್ನು ನನಸಾಗಿಸಲು. ದೇಶವನ್ನು ಮುನ್ನಡೆಸುವ ಮಹತ್ವದ ನಿರ್ಧಾರಗಳಲ್ಲಿ ಮಹಿಳೆಯರ ಧ್ವನಿ ಬಲವಾದಾಗ ಮಾತ್ರ ಸಮಗ್ರ ಅಭಿವೃದ್ಧಿ ಸಾಧ್ಯ. ಈ ದಿಕ್ಕಿನಲ್ಲಿ ನಾರಿ ಶಕ್ತಿ ವಂದನ್ ಒಂದು ಪರಿವರ್ತನಾತ್ಮಕ ಹೆಜ್ಜೆಯಾಗಿದೆ. ಸಮಾಜದ ಎಲ್ಲಾ ವರ್ಗಗಳ ಮಹಿಳೆಯರಿಗೆ ಹೊಸ ಆಶಾಕಿರಣವಾಗಿದೆ. ಪ್ರಧಾನಮಂತ್ರಿ ಮೋದಿ ಅವರ ನೇತೃತ್ವದಲ್ಲಿ ದೇಶ ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗುತ್ತಿರುವುದು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆಯ ಸಂಗತಿ ಎಂದರು.

15 ವರ್ಷಗಳ ಹಿಂದೆ ಸಂಸತ್ತಿನಲ್ಲಿ ಚರ್ಚೆಗೆ ಬಂದಾಗ ಕೆಲವು ರಾಜಕೀಯ ಪಕ್ಷದವರು ಮಸೂದೆಯ ಹಾಳೆ ಹರಿದು ಪ್ರಬಲ ವಿರೋಧ ವ್ಯಕ್ತಪಡಿಸಿದ್ದುಂಟು. ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ವಿರೋಧಿ ಮಾನಸಿಕತೆಯನ್ನು ತೋರಿಸಲಾಗಿತ್ತು.



> ನಾರಿಶಕ್ತಿಯ ಗೌರವ, ಸಮಾನ ಅವಕಾಶ ಮತ್ತು ಸಬಲೀಕರಣ ಸಾರುವ ಈ ಮಹತ್ವದ ನಿರ್ಧಾರ, ವಿಕಸಿತ ಭಾರತದ ನಿರ್ಮಾಣದ ಪಥದಲ್ಲಿ ಅಜರಾಮರವಾಗಿ ಇತಿಹಾಸದ ಪುಟದಲ್ಲಿ ಸದಾ ಉಳಿಯಲಿದೆ. ಸದಾಕಾಲ ವಿರೋಧ ವ್ಯಕ್ತಪಡಿಸಿ ಕಾಲಹರಣ ಮಾಡಿಕೊಂಡು ಬರುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಈ ಕುರಿತು ಪ್ರಶ್ನೆ ಕೇಳುವ ಯಾವ ನೈತಿಕತೆಯೂ ಇಲ್ಲ.
> ■ **ಸುರಭಿ ಹೊದಿಗೆರೆ,** ರಾಜ್ಯ ಬಿಜೆಪಿ ವಕ್ತಾರೆ

ಬಳಿಕ ಈ ಮಸೂದೆ ನನೆಗುದಿಗೆ ಬಿದ್ದಿತ್ತು. ಯುಪಿಎ 10 ವರ್ಷಗಳ ಅಧಿಕಾರದ ಅವಧಿಯಲ್ಲಿ ಇದನ್ನು ಮುಂದಕ್ಕೆ ತರಲಾಗಲಿಲ್ಲ,ನರೇಂದ್ರ ಮೋದಿ ಈ ದೇಶದ ಪ್ರಧಾನಿಯಾದ ಮೇಲೆ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಸೇರಿ ಎಲ್ಲ ಕ್ಷೇತ್ರಗಳಲ್ಲಿ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿ,ಇದೀಗ ಇದನ್ನು ಮುನ್ನೆಲೆಗೆ ತರುತ್ತಿದ್ದಾರೆ ಎಂದರು.

ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷ ಗೌರಿ ಚುಚಕೋಟಿ ಮಾತನಾಡಿ,ಮಸೂದೆ ಬೆಂಬಲಕ್ಕಾಗಿ ಮೋರ್ಚಾದಿಂದ ಸಹಿ ಸಂಗ್ರಹ ಅಭಿಯಾನ, ಮಹಿಳಾ ಸಮಾವೇಶ, ಮಿಸ್ ಕಾಲ್ ಅಭಿಯಾನ, ಬೈಕ್ ರ್ಯಾಲಿ ಆಯೋಜನೆ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷೆ ಸಂತೋಷಿರಾಣಿ ಪಾಟೀಲ್ ತೇಲ್ಕೂರ್ ಮಾತನಾಡಿ, ದೇಶದ ಮಹಿಳೆಯರ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡಿ,ಮಹಿಳೆಯರ ಕೂಗಿಗೆ ಸ್ಪಂದಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಸರ್ಕಾರ ದಿಟ್ಟ ನಿರ್ಧಾರ ತೆಗೆದುಕೊಂಡಿದ್ದು,ದೇಶದ ಕೋಟ್ಯಂತರ ಮಹಿಳೆಯರ ಪರ ಅಭಿನಂದನೆ. ಕಾನೂನಿನ ಚೌಕಟ್ಟಿನಲ್ಲಿ ಬಿಲ್ ಜಾರಿಯಾಗಬೇಕು ಎಂಬ ಕಾರಣಕ್ಕೆ ವಿಳಂಬವಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರಾಜ್ಯ ಕಾರ್ಯದರ್ಶಿ ಲಲಿತಾ ಅನಪುರ ಉಪಸ್ಥಿತರಿದ್ದರು.

ನಾರಿ ಶಕ್ತಿ ವಂದನ್ ಕಾಯ್ದೆ ದೇಶದ ಅಭಿವೃದ್ಧಿಗೆ ಪೂರಕ: ಶಾಸಕಿ ಜೊಲ್ಲೆ

ಬೆಳಗಾವಿ: ಮಹಿಳಾ ಸಬಲೀಕರಣದ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ 'ನಾರಿ ಶಕ್ತಿ ವಂದನಾ' ಕಾಯ್ದೆಯು ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹದ್ದು ಎಂದು ಶಾಸಕಿ ಶಶಿಕಲಾ ಜೊಲ್ಲೆ ಹೇಳಿದರು.

ಸೋಮವಾರ ನಗರದ ಸರ್ಕಿಟ್ ಹೌಸ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2028ರ ವೇಳೆಗೆ ಈ ಕಾಯ್ದೆಯ ಅನ್ವಯ ಬೆಳಗಾವಿ ಜಿಲ್ಲೆಯಿಂದಲೇ ಸುಮಾರು 6 ಮಹಿಳಾ ಶಾಸಕಿಯರು ವಿಧಾನಸಭೆ ಪ್ರವೇಶಿಸುವ ಅವಕಾಶ ಸಿಗಬಹುದು ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ಭಾರತದಲ್ಲಿ ರಾಜಕೀಯ ಕ್ಷೇತ್ರದಲ್ಲಿಯೂ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿಯನ್ನು ತರಲು ನಾರಿ ಶಕ್ತಿ ವಂದನಾ ಕಾನೂನನ್ನು ಪಿಎಂ ಮೋದಿ ಅವರು ಘೋಷಿಸಿರುವುದು ಸುವರ್ಣಾಕ್ಷರದಲ್ಲಿ ಬರೆದಿಡುವ ಸನ್ನಿವೇಶವಾಗಿದೆ. ಇದು ದೇಶದ ಸರ್ವಾಂಗೀಣ ವಿಕಾಸಕ್ಕೆ ಪೂರಕವಾಗಿದೆ. ಭವ್ಯ ಭಾರತದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರವನ್ನು ಈ ಕಾನೂನು ಹೆಚ್ಚಿಸಲಿದೆ. ದೇಶದ ಸುಧಾರಣೆಯಲ್ಲಿ ಮಹಿಳೆಯರು ಕೂಡ ನಿರ್ಣಯಾತ್ಮಕ ವಿಷಯಗಳನ್ನು ಮಂಡಿಸಬಹುದಾಗಿದೆ ಎಂದರು.

ಸ್ಥಳೀಯವಾದ ಸಮಸ್ಯೆಗಳನ್ನು ಲೋಕಸಭೆಯ ವರೆಗೂ ತೆಗೆದುಕೊಂಡು ಹೋಗಲು ಉತ್ತಮ ಅವಕಾಶವನ್ನು ನೀಡಿದೆ. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುತ್ತಲೇ. ಮಹಿಳೆಯರ ಮತದಾನದ ಸಂಖ್ಯೆ ಹೆಚ್ಚಾಗಿದೆ. ಸುಕನ್ಯಾ ಸಮೃದ್ಧಿ, ಬೇಟಿ ಬಚಾವೋ ಬೇಟಿ ಪಡಾವೋದಂತಹ ಯೋಜನೆಗಳೊಂದಿಗೆ ಹಲವಾರು ಯೋಜನೆಗಳನ್ನು ಮಹಿಳೆಯ ಹಿತದಲ್ಲಿ ಪಿಎಂ ಮೋದಿ ಅವರು ಜಾರಿಗೊಳಿಸಿದ್ದಾರೆ ಎಂದರು.

ಮಹಿಳೆಯರುಕೂಡಗ್ರಾಪಂನಿಂದಹಿಡಿದುಲೋಕಸಭೆಯ ವರೆಗೆ ಅಧಿಕಾರವನ್ನು ನೀಡಿದಾಗ ಮಾತ್ರ ಅದು ವಿಕಸಿತ ಭಾರತದ ಪರಿಕಲ್ಪನೆಯನ್ನು ಪೂರ್ಣಗೊಳಿಸಲಿದೆ. ನಾರಿ ಶಕ್ತಿ ವಂದನಾ ಕಾನೂನು ಭಾರತದ ಮಹಿಳೆಯರಿಗೆ ಒಂದು ಗೌರವವಾಗಿದೆ. ಮಹಿಳೆಯ ಮೇಲಿನ ದೌರ್ಜನ್ಯಗಳ ವಿರುದ್ಧವು ಲೋಕಸಭೆಯಲ್ಲಿ ಧ್ವನಿ ಎತ್ತಲೂ ಇದು ಪೂರಕವಾಗಿದೆ. ಹಲವಾರು ವಿರೋಧಗಳು ಕೇಳಿ ಬಂದರೂ ಕೂಡ ಪಿಎಂ ಮೋದಿ ಅವರು ಮಹಿಳೆಯರ ಹಿತದಲ್ಲಿ ಇದನ್ನು ಜಾರಿಗೊಳಿಸಿದ್ದಾರೆ ಎಂದರು.

2028ರಲ್ಲಿ ಬೆಳಗಾವಿ ಜಿಲ್ಲೆಯಿಂದ ಸುಮಾರು 6 ಜನ ಶಾಸಕರು ವಿಧಾನಸಭೆಗೆ ಹೋಗುವ ಅವಕಾಶ ಸಿಗಬಹುದು. ವನ್ ನೇಷನ್ ವನ್ ಎಲೆಕ್ಷನ್‌ನಲ್ಲಿಯೂ ಇದು ಸಹಾಯಕವಾಗಲಿದೆ. ಅಲ್ಲದೇ ಒಳ ಮೀಸಲಾತಿಯ ಗೊಂದಲವನ್ನು ಕೂಡ ವಿಶೇಷ ಅಧಿವೇಶನದಲ್ಲಿ ಪಿಎಂ-ಮೋದಿ ಅವರು ಪರಿಹರಿಸಲಿದ್ದಾರೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಈ ವೇಳೆ ಬಿಜೆಪಿ ನಗರಾಧ್ಯಕ್ಷೆ ಗೀತಾ ಸುತಾರ್, ಉಜ್ವಲಾ ಬಡವಣ್ಣಾಚೆ, ಶಿಲ್ಪಾ ಕೇಕರೆ ಸೇರಿದಂತೆ ಹಲವು ಮಹಿಳಾ ಮುಖಂಡರು ಕಾರ್ಯಕರ್ತರು ಇದ್ದರು.



ಕಿರುಸುದ್ದಿ

ಸಾರಿಗೆ ಬಸ್ ಪಲ್ಟಿ: 20 ಮಂದಿಗೆ ಗಾಯ



ದೇವರಹಿಪ್ಪರಗಿ: ಚಾಲಕನ ನಿಯಂತ್ರಣ ತಪ್ಪಿ ಬಸವನಬಾಗೇವಾಡಿ ಘಟಕದ ಬಸ್ ಪಲ್ಟಿಯಾದ ಘಟನೆ ಪಟ್ಟಣದ ಸಮೀಪ ಸಾತಿಹಾಳ ರಸ್ತೆಯ ಕ್ಯಾನಲ್ ಹತ್ತಿರದ ತಿರುವಿನಲ್ಲಿ ಸೋಮವಾರ ಸಂಜೆ 3-15ಕ್ಕೆ ನಡೆದಿದೆ. ಬಸವನಬಾಗೇವಾಡಿ ಘಟಕದ ಬಸ್ ಹೂವಿನ ಹಿಪ್ಪರಗಿದಿಂದ ಸಾತಿಹಾಳ ಮಾರ್ಗವಾಗಿ ದೇವರಹಿಪ್ಪರಗಿ ತೆರಳುತಿತ್ತು. ಈ ವೇಳೆ ಚಾಲಕನ ನಿಯಂತ್ರಣ ತಪ್ಪಿ ಅವಘಡ ಸಂಭವಿಸಿದೆ. ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ, ಬಸ್ಸಿನಲ್ಲಿದ್ದ ಸುಮಾರು 40 ಜನ ಪ್ರಯಾಣಿಕರಲ್ಲಿ 20 ಮಂದಿಗೆ ಗಾಯವಾಗಿದ್ದು, ಗಾಯಾಳುಗಳಿಗೆ ವಿಜಯಪುರ, ಸಿಂದಗಿ ಹಾಗೂ ಸ್ಥಳೀಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ಸ್ಥಳಕ್ಕೆ ದೇವರಹಿಪ್ಪರಗಿ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಕುರಿತು ದೇವರಹಿಪ್ಪರಗಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ದೇವರಹಿಪ್ಪರಗಿ ಮತಕ್ಷೇತ್ರದ ಶಾಸಕರಾದ ರಾಜುಗೌಡ ಪಾಟೀಲ ಕುದರಿಸಾಲವಾಡಗಿ ಅವರ ಸಹೋದರ ಸಚೀನಗೌಡ ಪಾಟೀಲ ಕುದರಿಸಾಲವಾಡಗಿ ಅವರು ಮದುವೆಯ ಕಾರ್ಯಕ್ರಮ ಮುಗಿಸಿಕೊಂಡು ಗ್ರಾಮಕ್ಕೆ ತೆರಳುವ ಸಂದರ್ಭದಲ್ಲಿ ಪಟ್ಟಣದ ಸಮೀಪ ಬಸ್ ಪಲ್ಟಿಯಾಗಿ ಹಲವಾರು ಪ್ರಯಾಣಿಕರು ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು. ಕೂಡಲೇ ಸ್ಥಳಕ್ಕೆ ಧಾವಿಸಿ ಪ್ರಯಾಣಿಕರನ್ನು ಸುರಕ್ಷಿತವಾಗಿ ಆಸ್ಪತ್ರೆಗೆ ಸೇರಿಸಲು ಆಂಬ್ಯುಲೆನ್ಸ್ ವ್ಯವಸ್ಥೆ ಕಲ್ಪಿಸಿ ಜಿಲ್ಲಾ ಹಾಗೂ ತಾಲೂಕ ಆರೋಗ್ಯ ಅಧಿಕಾರಿಗಳ ಜೊತೆ ಮಾತನಾಡಿ ವಿಜಯಪುರ, ಸಿಂದಗಿ ಹಾಗೂ ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ಪ್ರಯಾಣಿಕರನ್ನು ಸೇರಿಸಿ ಅವರ ಯೋಗ ಕ್ಷೇಮ ವಿಚಾರಿಸಿ ಮಾನವೀಯತೆ ಮೆರೆದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ನೇಮಕಾತಿ ಪ್ರಕ್ರಿಯೆ ಆರಂಭಕ್ಕೆ ಆಗ್ರಹ

ಇಂದಿನಿಂದ ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ

ಧಾರವಾಡ: ನೇಮಕಾತಿ ಪ್ರಕ್ರಿಯೆ ಪ್ರಾರಂಭ ಮತ್ತು ಕೆಪಿಎಸ್‌ಇ ಅಕ್ರಮ ತನಿಖೆಗೆ ಆಗ್ರಹಿಸಿ ಕರ್ನಾಟಕ ವಿದ್ಯಾರ್ಥಿಗಳ ಸಂಘ ಏ.14ರಂದು ಇಲ್ಲಿನ ಶಾರದಾ ಶಾಲೆ ರಸ್ತೆಯ ಬದಿಯಲ್ಲಿ ಅಹೋರಾತ್ರಿ ಅನಿರ್ದಿಷ್ಟಾವಧಿ ಧರಣಿ ಕೈಗೊಂಡಿದೆ ಎಂದು ಸಂಘಟನೆ ಅಧ್ಯಕ್ಷ ಯಲ್ಲಪ್ಪ ಹೆಗಡೆ ಹೇಳಿದರು.

ಕೆಪಿಎಸ್‌ಇ ಅಕ್ರಮ ತನಿಖೆಗೆ ಒತ್ತಾಯ

ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಈ ಮೊದಲು ಶ್ರೀನಗರ ವೃತ್ತದಿಂದ ಜ್ಯುಬ್ಲಿ ವೃತ್ತದವರೆಗೆ ನಡೆಸಲು ಉದ್ದೇಶಿಸಿದ 'ಭೀಮ ನಡಿಗೆ ಶೀಘ್ರ ನೇಮಕಾತಿ ಕಡೆಗೆ' ಪಾದಯಾತ್ರೆ ಕೈಬಿಟ್ಟು, ಶಾಂತಿಯುತ ಧರಣಿಗೆ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಪಾದಯಾತ್ರೆಗೆ ಪೊಲೀಸ್ ಇಲಾಖೆ ಅನುಮತಿ ನಿರಾಕರಿಸಿದೆ. ಅಲ್ಲದೇ, ಧರಣಿಗೆ ಭದ್ರತೆ ಹಾಗೂ ಅನುಮತಿ ನೀಡಲು ಕೋರಿದೆ. ಅನುಮತಿ ನೀಡದಿದ್ದರೂ ಧರಣಿ ನಡೆಸುತ್ತೇವೆ. ಪೊಲೀಸ್ ಲಾಠಿ, ಬೂಟಿನ ಏಟಿಗೆ ಅಂಜಲ್ಲ. ಬೇಕಿದ್ದರೆ ನಮ್ಮನ್ನು ಬಂಧಿಸಲಿ ಎಂದು ಸವಾಲು ಹಾಕಿದರು.

ಹಸಿರು ಸೇನೆ ಮತ್ತು ರೈತ ಸಂಘದ ಅಧ್ಯಕ್ಷ ಶಂಕರ ಅಂಬಲಿ, ಉದ್ಯೋಗಕ್ಕೂ ಹೋರಾಟ ಮಾಡುವುದು ಖೇದಕರ. ಆದರೆ, ಸರ್ಕಾರ ಹೋರಾಟವನ್ನೂ ಕೂಡ ಹತ್ತಿಕ್ಕುತ್ತಿದೆ. ಇದನ್ನು

> 'ಮಾಡು ಇಲ್ಲವೇ ಮಡಿ' ಘೋಷವಾಕ್ಯದಡಿ ಯಾರಿಗೂ ತೊಂದರೆ ನೀಡದೆ, ರಸ್ತೆ ತಡೆಯೂ ಮಾಡದೆ, ಶಾಂತಿಯುತವಾಗಿಯೇ ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ ಕೈಗೊಳ್ಳಲಿದೆ. ಇದಕ್ಕೆ ಪೊಲೀಸ್ ಇಲಾಖೆ ಅವಕಾಶ ಮಾಡಿಕೊಡಬೇಕು. ಇಲ್ಲವಾದಲ್ಲಿ ಮುಂದೆ ನಡೆಯುವ ಅನಾಹುತಗಳಿಗೆ ಪೊಲೀಸ್ ಇಲಾಖೆ ಮತ್ತು ಸರ್ಕಾರವೇ ಹೊಣೆ.
> ■ **ನಾಗರಾಜ ಛಲವಾದಿ,** ವಿದ್ಯಾರ್ಥಿ ಮುಖಂಡ

ಕೈಬಿಡದಿದ್ದರೆ ಉದ್ಯೋಗಾಕಾಂಕ್ಷಿಗಳಪರ ರೈತ ಸಂಘಟನೆ ಬೀದಿಗೆ ಇಳಿಯಲಿವೆ ಎಂದು ಎಚ್ಚರಿಸಿದರು.

ಪ್ರತಿಭಟನೆ ಹತ್ತಿಕ್ಕುವುದು ಸರ್ಕಾರಕ್ಕೆ ಶೋಭೆ ತರುವುದಿಲ್ಲ. ಏ.14ರಂದು ಬೆಳಗ್ಗೆ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ ಮೂಲಕ ಹೋರಾಟಕ್ಕೆ ಚಾಲನೆ ನೀಡಲಿದೆ. ಏ.15ರಂದು ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ ಕೈಗೊಳ್ಳಲಿದೆ. 500 ಜನರು ಪಾಲ್ಗೊಳ್ಳುವುದಾಗಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ವಿದ್ಯಾರ್ಥಿ ಮುಖಂಡ ರಾದ ಅರುಣ ಕೇಸರಳ್ಳಿ, ನಾಗರಾಜ ಘಂಟಿ, ಸುನೀಲ ಪೋಳ, ಕರುವತ್ತೆಪ್ಪ ದೊಡ್ಡಮನಿ, ಎಂ.ಆರ್.ಪಟ್ಟಣಶೆಟ್ಟಿ, ಚಾಣುಕ್ಯ, ಮಹೇಶ ಇದ್ದರು.

ಗಾಯಕಿ ಆಶಾ ಭೋಸ್ಲೆ ಕೊಡುಗೆ ಅಪಾರ: ಶೆಟ್ಟರ


ಹುಬ್ಬಳ್ಳಿ: ಬಾಲಿವುಡ್‌ನ ಖ್ಯಾತ ಹಿನ್ನೆಲೆ ಗಾಯಕಿ ಆಶಾ ಭೋಸ್ಲೆ ಅವರ ನಿಧನದ ಸುದ್ದಿ ತಿಳಿದು ಅತ್ಯಂತ ದುಃಖವಾಯಿತು. ಭಾರತದ ಸಂಗೀತ ಲೋಕಕ್ಕೆ ಅಪಾರ ಕೊಡುಗೆ ನೀಡಿದ ಅವರು, ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ ಎಂದು ಸಂಸದ ಜಗದೀಶ ಶೆಟ್ಟರ ಸಂತಾಪ ವ್ಯಕ್ತಪಡಿಸಿದರು. ಅವರ ಅಗಲುವಿಕೆಯಿಂದ ಸಂಗೀತ ಲೋಕಕ್ಕೆ ತುಂಬಲಾಗದ ನಷ್ಟವಾಗಿದೆ. 20ಕ್ಕೂ ಹೆಚ್ಚು ಭಾಷೆಗಳಲ್ಲಿ ಹಾಡುಗಳನ್ನು ಹಾಡಿ, ಸಂಗೀತ ಪ್ರಿಯರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದ ಇವರ ಕೊಡುಗೆ ಅವಿಸ್ಮರಣೀಯ.

ಭಗವಂತನು ಅವರ ಆತ್ಮಕ್ಕೆ ಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಸ್ಥರು ಹಾಗೂ ಅಭಿಮಾನಿಗಳಿಗೆ ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಸಂಸದ ಜಗದೀಶ ಶೆಟ್ಟರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದ್ವಿಭಾಷಾ ನೀತಿ ಜಾರಿಗೆ ಎಬಿವಿಪಿ ವಿರೋಧ

ರಾಜ್ಯಾದ್ಯಂತ ಪತ್ರ ಚಳವಳಿ: ದರ್ಶನ ಹೆಗಡೆ

ಹುಬ್ಬಳ್ಳಿ: ರಾಜ್ಯ ಸರ್ಕಾರ ದ್ವಿಭಾಷಾ ನೀತಿಯನ್ನು ಜಾರಿಗೆ ಮಾಡಲು ಹೊರಟ್ಟಿದ್ದನ್ನು ಖಂಡಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ರಾಜ್ಯಾದ್ಯಂತ ಪತ್ರ ಚಳವಳಿ ಏರ್ಪಡಿಸಿದ್ದು, ಹುಬ್ಬಳ್ಳಿಯಲ್ಲಿ ಎಬಿವಿಪಿ ರಾಜ್ಯ ಕಾರ್ಯದರ್ಶಿ ದರ್ಶನ ಹೆಗಡೆ ಸೋಮವಾರ ಚಾಲನೆ ನೀಡಿದರು.



ಬಳಿಕ ಮಾತನಾಡಿದ ಅವರು, ಪ್ರಸ್ತುತ ಜಾರಿಯಲ್ಲಿರುವ ಕನ್ನಡ, ಇಂಗ್ಲಿಷ್, ಹಿಂದಿ, ತಮಿಳು, ಉರ್ದು, ಮರಾಠಿ ಸೇರಿದಂತೆ ತ್ರಿಭಾಷ ಪದ್ಧತಿಯು ಕರ್ನಾಟಕ, ಭಾರತ ಮತ್ತು ಜಗತ್ತನ್ನು ಒಂದುಗೂಡಿಸುವ ಭಾವನಾತ್ಮಕ ವಿಚಾರವಾಗಿದೆ. ತ್ರಿಭಾಷಾ ಸೂತ್ರ ಎಂಬುವುದು ಯಾವುದೋ ಭಾಷೆಯ ಹೇರಿಕೆಗಾಗಿಯೊ ಅಥವಾ ಯಾವುದೋ ಹೋರಾಟದ ಫಲವಾಗಿ ಬಂದದ್ದಲ್ಲ, ಶಿಕ್ಷಣ ತಜ್ಞರ ಮತ್ತು ಶೈಕ್ಷಣಿಕ ಪರಿಣತರ ಅನೇಕ ವರ್ಷಗಳ ಯೋಚನೆಯಿಂದಾಗಿ ಮಕ್ಕಳ ಪ್ರತಿಭೆಯನ್ನು ಅನಾವರಣ ಗೊಳಿಸುವುದಕ್ಕಾಗಿ ಬಂದಂತಹ ನೀತಿಯಾಗಿದೆ ಎಂದರು.

ಭಾರತದಲ್ಲಿ ತ್ರಿಭಾಷಾ ಸೂತ್ರವು 1968ರಲ್ಲಿ ಜಾರಿಗೆ ಬಂದಿದೆ. ಅಂದಿನಿಂದ ಸ್ಥಳೀಯ ಭಾಷೆ, ಆಂಗ್ಲ ಭಾಷೆ ಮತ್ತು ಹಿಂದಿ ಭಾಷೆಯನ್ನು ಕಲಿಸುವ ಅಭಿಪ್ರಾಯವನ್ನು ಕೋಠಾರಿ ಕಮಿಷನ್ ಶಿಫಾರಸಿನಂತೆ ಬಹು ಭಾಷಾ ಸೌಹಾರ್ದತೆಯ ಮೇರೆಗೆ ಮಾಡಲಾಗಿತ್ತು.

ಆದರೆ, ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕಾದ ಸರ್ಕಾರವು ಪರೀಕ್ಷೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ದ್ವಿಭಾಷಾ ನೀತಿ ಎಂಬ ಗೊಂದಲವನ್ನು ಸೃಷ್ಟಿಸಿ, ಕನಿಷ್ಠ ಸಾಮಾನ್ಯ ಜ್ಞಾನವು ಇಲ್ಲದ ರೀತಿಯಲ್ಲಿ ವರ್ತಿಸಿ ವಿದ್ಯಾರ್ಥಿ ಸಮೂಹವನ್ನು ಏಕೆ ದಾರಿ ತಪ್ಪಿಸುವಂತಹ ನಿರ್ಧಾರವನ್ನು ತೆಗೆದುಕೊಂಡಿದೆ ಎಂಬುವುದೇ ಪ್ರಶ್ನೆ? ಎಂದರು.

ಈ ರೀತಿ ದ್ವಿಭಾಷಾ ಸೂತ್ರವನ್ನು ತರಲೇಬೇಕೆಂಬ ಯೋಚನೆ ಸರ್ಕಾರದ ಬಳಿ ಇದ್ದದ್ದೆ ಆದಲ್ಲಿ, ಈ ಮೊದಲೆ ಘೋಷಣೆ ಮಾಡಿ, ಸಾರ್ವಜನಿಕವಾಗಿ ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗಿತ್ತು. ಅದನ್ನು ಬಿಟ್ಟು ಯಾರದೋ ಒತ್ತಡಕ್ಕೆ ಮಣಿದು,ಪರೀಕ್ಷೆ ಸಂದರ್ಭದಲೇ ದ್ವಿಭಾಷಾ ನೀತಿಯ ಮುಖಾಂತರ ದೇಶೀಯ ಭಾಷೆಗಳನ್ನು ನಾಶಮಾಡಲು ಹೊರಟಿರುವ ರಾಜ್ಯ ಸರಕಾರದ ನಿಲುವನ್ನು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ತೀವ್ರವಾಗಿ ವಿರೋಧಿಸುತ್ತದೆ ಎಂದು ಹೇಳಿದರು.

ಈಗಾಗಲೇ ಆಂಗ್ಲ ಮಾಧ್ಯಮ ಶಾಲೆಗಳ ಹಾವಳಿಯಿಂದ ಕನ್ನಡ ಸೇರಿದಂತೆ ಪ್ರಾದೇಶಿಕ ಭಾಷೆಯ ಕುಂಠಿತವಾಗುತ್ತಿರುವುದು ನಮಗೆಲ್ಲ ಗೊತ್ತಿರುವ ಸಂದರ್ಭದಲ್ಲಿಯೇ ದೇಶಿಯ ಭಾಷೆಗಳ ನಾಶ ಮಾಡುವ ದ್ವಿಭಾಷಾ ನೀತಿಯು ನಮ್ಮ ಮಾತೃಭಾಷೆಯಾದ ಕನ್ನಡಕ್ಕೂ ಸಹ ಹೊಡೆತ ಕೊಡುವುದನ್ನು ಸರ್ಕಾರವು ಯೋಚಿಸಬೇಕಿದೆ. ಹಾಗಾಗಿ ಮಾನ್ಯ ಸರ್ಕಾರವು ಈ ದ್ವಿಭಾಷಾ ನೀತಿಯನ್ನು ಜಾರಿ ಮಾಡಬಾರದು ಎಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಆಗ್ರಹಿಸುತ್ತದೆ ಎಂದರು.

ಎಬಿವಿಪಿಯ ರಾಜ್ಯ ಎಂಜಿನಿಯರಿಂಗ್ ವಿದ್ಯಾರ್ಥಿಗಳ ಸಂಚಾಲಕ ಅಥರ್ವ ಚವ್ಹಾಣ್, ರಾಜ್ಯ ಕಾರ್ಯಕಾರಿಣಿ ಸದಸ್ಯ ಅನಮೋಲ್ ಕಲಬುರಗಿ, ಪ್ರಾಂತ ಹಾಸ್ಟೆಲ್ ಸಂಚಾಲಕ ಲೋಕೇಶ್ , ರಾಜ್ಯ ಕಾರ್ಯಕಾರಿಣಿ ಸದಸ್ಯೆ ಇಶಿಕಾ ,ನಗರ ಸಹ ಕಾರ್ಯದರ್ಶಿಗಳಾದ ಮನೋಜ್ ವಾಲ್ಮೆಕ್ , ತಿಲಕ್ ಕನಕಗಿರಿಮಠ, ಸುಜನ ಗಾಂಡೋಲಿ ಇದ್ದರು.

ಏ.18ರಂದು ಸೋಮನಾಥ ಜ್ಯೋತಿರ್ಲಿಂಗ ದರ್ಶನ

ಹಾವೇರಿ: ಇಲ್ಲಿನ ಶ್ರದ್ಧಾ ಭಕ್ತಿಯ ಕೇಂದ್ರ ಹುಕ್ಕೇರಿಮಠದಲ್ಲಿ ಏ.18ರಂದು ಒಂದು ಸಾವಿರ ವರ್ಷಗಳ ಪುರಾತನವಾದ ಮೂಲ ಸೋಮನಾಥ ಜ್ಯೋತಿರ್ಲಿಂಗದ ದರ್ಶನ ನಡೆಯಲಿದೆ ಎಂದು ಹುಕ್ಕೇರಿಮಠದ ಡಾ.ಸದಾಶಿವ ಮಹಾಸ್ವಾಮೀಜಿ ಹೇಳಿದರು.

ಶ್ರೀ ಹುಕ್ಕೇರಿಮಠದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದ್ವಾದಶ ಜ್ಯೋತಿರ್ಲಿಂಗುಗಳಲ್ಲಿ ಸೌರಾಷ್ಟ್ರದ ಸೋಮನಾಥ ಲಿಂಗವು ಒಂದಾಗಿದೆ. ಪುರಾತನ ಶ್ರದ್ಧಾಕೇಂದ್ರವಾದ ಸೋಮನಾಥದಲ್ಲಿ ನಿಧಿಯ ಆಸೆಗಾಗಿ ಘಜ್ನಿ ಮೊಹಮ್ಮದನು ದೇವಸ್ಥಾನದ ಮೇಲೆ ದಾಳಿ ನಡೆಸಿ ಧ್ವಂಸಗೊಳಿಸಿದ್ದನೆಂದು ಇತಿಹಾಸದಲ್ಲಿದೆ. ಆಗ 11 ಭಾಗಗಳಾಗಿ ಲಿಂಗ ಧ್ವಂಸವಾಗಿದ್ದವು. 1924ರಲ್ಲಿ ಶಂಕರಾಚಾರ್ಯರು 100 ವರ್ಷಗಳ ಕಾಲ ಗುಪ್ತವಾಗಿ ಸಂರಕ್ಷಿಸಲು ಅಗ್ನಿಹೋತ್ರಿಗಳಿಗೆ ತಿಳಿಸಿದ್ದರಂತೆ.

ಜತೆಗೆ ಈ ಶಿವಲಿಂಗವನ್ನು ಅಗ್ನಿಹೋತ್ರಿಗಳು ರಾಮ ಮಂದಿರ ಉದ್ಘಾಟನೆ ಬಳಿಕ ಬೆಂಗಳೂರಿನ ರವಿಶಂಕರ ಗುರೂಜಿ ಅವರಿಗೆ ತಲುಪಿಸಿದ್ದಾರೆ. ಅಲ್ಲಿಂದ ರಾಜ್ಯದ ಎಲ್ಲ ಕಡೆಗಳಲ್ಲಿ ಜ್ಯೋತಿರ್ಲಿಂಗ ದರ್ಶನ ಮಾಡಲಿಕ್ಕೆ, ಜ್ಯೋತಿರ್ಲಿಂಗದ ಪುಣ್ಯಫಲ ಭಕ್ತರಿಗೆ ಸಿಗಲಿ ಎಂಬ ಉದ್ದೇಶದಿಂದ ದರ್ಶನಾವಕಾಶ ಕಲ್ಪಿಸಲಾಗುತ್ತಿದೆ ಎಂದರು.

ಏ.18ರಂದು ಬೆಳಗ್ಗೆ 8.30ರಿಂದ 9.30ರವರೆಗೆ ಸಂಕಲ್ಪ, ರುದ್ರಾಭಿಷೇಕ ಹಾಗೂ 9.30ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಹಾಗೂ ಸಂಜೆ 4ರಿಂದ 7.30ರ ವರೆಗೆ ಸಾರ್ವಜನಿಕರಿಗೆ ಉಚಿತ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ವಿಶೇಷವಾಗಿ ಸಂಕಲ್ಪ, ರುದ್ರಾಭಿಷೇಕ ಮಾಡಿಸಲು ಇಚ್ಛಿಸುವ ಭಕ್ತರು ನಿಗದಿ ಮಾಡಿದ ಶುಲ್ಕವನ್ನು ಪಾವತಿಸಿ ಅಭಿಷೇಕ ನಡೆಸಬೇಕಾಗುತ್ತದೆ. ಆದ್ದರಿಂದ ಈ ದರ್ಶನವನ್ನು ಭಕ್ತರು ಪಡೆದುಕೊಂಡು ಪುನೀತರಾಗಬೇಕು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಭಾರತಿ ಜಂಬಗಿ, ಉಜ್ಜಪ್ಪ ಕೊಪ್ಪದ, ವಿಜಯಕುಮಾರ ಚಿನ್ನಿಕಟ್ಟಿ, ಸಾವಿತ್ರಮ್ಮ ಹೂಲಿಹಳ್ಳಿ ಇದ್ದರು.

ನೀಲಗಿರಿ ಮರಗಳ ಜಪ್ತಿ: ಆರೋಪಿಗಳ ಬಂಧನ



ಬೆಳಗಾವಿ: ಉಪ ಅರಣ್ಯ ಸಂರಕ್ಷಣಾಧಿಕಾರಿ ಎನ್.ಎ.ಕ್ರಾಂತಿ ಅವರ ನಿರ್ದೇಶದ ಮೇರೆಗೆ ಕಾಕತಿ ವಲಯದ ಭೂತರಾಮನಹಟ್ಟಿ ಅರಣ್ಯ ಪ್ರದೇಶದಲ್ಲಿ ತಡರಾತ್ರಿ ಅರಣ್ಯ ಇಲಾಖೆ ದಾಳಿ ನಡೆಸಿ ಅಕ್ರಮವಾಗಿ ನೀಲಗಿರಿ ಮರಗಳನ್ನು ಕಡಿದು ಸಾಗಿಸುತ್ತಿದ್ದ ವಾಹನ ಜಪ್ತಿ ಮಾಡಿ ಆರೋಪಿಗಳನ್ನು ಬಂಧಿಸಲಾಗಿದೆ. ರಾಜನಕಟ್ಟಿ ಗ್ರಾಮದ ಯಲ್ಲಪ್ಪಾ ಚಂದ್ರಪ್ಪಾ ಡುಮ್ಮನಾಯಕ ಹಾಗೂ ಬೆನಕನಹೊಳೆ ಗ್ರಾಮದ ಮಲ್ಲೇಶ ಮೇಖಲಿ ಎಂಬುವರು ನೀಲಗಿರಿ ಮರಗಳನ್ನು ಕಡಿದು ವಾಹನದಲ್ಲಿ ಸಾಗಿಸುತ್ತಿದ್ದ ವೇಳೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಈ ಸಂಬಂಧ ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ನಿಯಮಗಳು 1969ರಡಿ ಕಾಕತಿ ವಲಯ ಅರಣ್ಯ ಕಚೇರಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ತನಿಖೆ ಮುಂದುವರಿದಿದ್ದು, ಬೆನಕನಹೊಳೆ ಗ್ರಾಮದಲ್ಲಿ ದಾಸ್ತಾನು ಮಾಡಲಾಗಿದ್ದ ನೀಲಗಿರಿ ಮಾಲನ್ನೂ ಅಧಿಕಾರಿಗಳು ಜಪ್ತಿ ಪಡಿಸಿಕೊಂಡಿದ್ದಾರೆ. ದಾಳಿಯಲ್ಲಿ ಎಸಿಎಫ್ ನಾಗರಾಜ ಬಾಳೆಹೊಸೂರು, ಆರ್‌ಎಫ್‌ಒ ಶಿವಕುಮಾರ ಮಾಳಿ, ಡಿಆರ್ ಎಫ್‌ಒ ಆನಂದ ಜಯಗೌಡರ, ಬೀಟ್ ಫಾರೆಸ್ಟ್ ಗಳಾದ ರಾಹುಲ್ ಬೋಂಗಾಳೆ, ಶಂಕರ ಮನವಾಡಿ, ಚಾಮರಾಜ ಮುರುಗೋಡ, ರವಿ ಕಿಲಾರಿ, ಮಂಜುನಾಥ ಓಸಿ ಸೇರಿದಂತೆ ಹಲವು ಅರಣ್ಯ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಕಲಬುರಗಿ ಮಾರ್ಗವಾಗಿ ವಂದೇ ಭಾರತ ಸ್ಲೀಪರ್ ಸಂಚಾರ

ಕಲಬುರಗಿ: ಮುಂಬೈ ಮತ್ತು ಬೆಂಗಳೂರನ್ನು ಸಂಪರ್ಕಿಸುವ ವಂದೇ ಭಾರತ ಸ್ಲೀಪರ್ ರೈಲು ಇದೀಗ ಕಲಬುರಗಿ ಮಾರ್ಗವಾಗಿ ಸಂಚರಿಸಲಿರುವ ಮಹತ್ವದ ನಿರ್ಧಾರ ಪ್ರಕಟವಾಗಿದ್ದು, ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಇದೊಂದು ಸಿಹಿ ಸುದ್ದಿಯಾಗಿದೆ ಎಂದು ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಶರಣಬಸಪ್ಪ ಪಪ್ಪಾ ಹೇಳಿದರು.

ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಕೆಕೆಸಿಸಿಐಯೂ ಈ ಬೆಳವಣಿಗೆಯನ್ನು ಸ್ವಾಗತಿಸಿದ್ದು, ಇದು ದೀರ್ಘಕಾಲದ ಬೇಡಿಕೆಗೆ ಸಿಕ್ಕ ಪ್ರತಿಫಲ ಎಂದು ತಿಳಿಸಿದ್ದಾರೆ. ಇತ್ತೀಚೆಗೆ ಕೇಂದ್ರ ರೈಲ್ವೆ ಸಚಿವರಿಗೆ ಮುಂಬೈ-ಬೆಂಗಳೂರು ನಡುವೆ ವಂದೇ ಭಾರತ ಸ್ಲೀಪರ್ ರೈಲು ಘೋಷಣೆ ಮಾಡಿದ್ದರೂ, ಮಾರ್ಗದ ಬಗ್ಗೆ ಸ್ಪಷ್ಟತೆ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಕಲಬುರಗಿ ಭಾಗದ ಜನತೆ ಹಾಗೂ ಕೈಗಾರಿಕಾ ವಲಯದಲ್ಲಿ ಕುತೂಹಲ ಮೂಡಿತ್ತು. ಕೆಕೆಸಿಸಿಐ ನಿರಂತರವಾಗಿ ಕೇಂದ್ರ ಸರ್ಕಾರದ ಗಮನ ಸೆಳೆಯುತ್ತ ಬಂದಿದ್ದು, 2025 ಡಿ.17ರಂದು ರೈಲ್ವೆ ಸಚಿವರನ್ನು ಭೇಟಿ ಮಾಡಿ ಮನವಿ ಕೂಡ ಸಲ್ಲಿಸಿತ್ತು. ಬಳಿಕ 2026 ಏಪ್ರಿಲ್ 8ರಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರನ್ನು ಭೇಟಿಯಾಗಿ ಕಲಬುರಗಿ-ಬೆಂಗಳೂರು ನಡುವೆ ವೇಗವಾದ ರೈಲು ಸಂಪರ್ಕ ಕಲ್ಪಿಸುವಂತೆ ಒತ್ತಾಯಿಸಿತ್ತು ಎಂದು ಸ್ಮರಿಸಿದರು.



ಈ ಪ್ರಯತ್ನಗಳಿಗೆ ಸ್ಪಂದಿಸಿದ ಕೇಂದ್ರ ಸರ್ಕಾರ, ಮುಂಬೈ-ಬೆಂಗಳೂರು ವಂದೇ ಭಾರತ ಸ್ಲೀಪರ್ ರೈಲು ಕಲಬುರಗಿ ಮಾರ್ಗವಾಗಿ ಸಂಚರಿಸುವಂತೆ ನಿರ್ಧರಿಸಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ದೂರವಾಣಿ ಮೂಲಕ ಕೆಕೆಸಿಸಿಐ ಅಧ್ಯಕ್ಷ ಶರಣಬಸಪ್ಪ ಪಪ್ಪಾ ಅವರಿಗೆ ತಿಳಿಸಿದ್ದು, ಈ ನಿರ್ಧಾರವನ್ನು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ರಾಜ್ಯ ರೈಲ್ವೆ ಸಚಿವ ವಿ.ಸೋಮಣ್ಣ ಹಾಗೂ ಸಂಬಂಧಿತ ಅಧಿಕಾರಿಗಳ ಸಮಾಲೋಚನೆಯೊಂದಿಗೆ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಪ್ರದೇಶಕ್ಕೆ ಲಾಭ

ಮುಂಬೈ-ಕಲಬುರಗಿ-ಬೆಂಗಳೂರು ನಡುವಿನ ಸಂಪರ್ಕ ಮತ್ತಷ್ಟು ಬಲವಾಗಲಿದ್ದು, ವ್ಯಾಪಾರ, ಕೈಗಾರಿಕೆ ಹಾಗೂ ಉದ್ಯಮ ಚಟುವಟಿಕೆಗಳಿಗೆ ಉತ್ತೇಜನ ಸಿಗಲಿದೆ. ಪ್ರಯಾಣಿಕರಿಗೆ ವೇಗವಾದ ಹಾಗೂ ಸುಗಮ ಸಂಚಾರ ಸೌಲಭ್ಯ ಲಭ್ಯವಾಗಲಿದೆ. ಜೊತೆಗೆ ಕಲ್ಯಾಣ ಕರ್ನಾಟಕ ಪ್ರದೇಶದ ಆರ್ಥಿಕ ಅಭಿವೃದ್ಧಿಗೂ ಇದು ದೊಡ್ಡ ಬಲ ನೀಡಲಿದೆ. ಕೆಕೆಸಿಸಿಐ ಈ ನಿರ್ಧಾರಕ್ಕಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ, ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ರಾಜ್ಯ ರೈಲ್ವೆ ಸಚಿವ ವಿ.ಸೋಮಣ್ಣ ಹಾಗೂ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರಿಗೆ ಕೃತಜ್ಞತೆ ಸಲ್ಲಿಸಿದೆ. ಕಲ್ಯಾಣ ಕರ್ನಾಟಕ ಪ್ರದೇಶದ ಮೂಲಸೌಕರ್ಯ ಮತ್ತು ಕೈಗಾರಿಕಾ ಬೆಳವಣಿಗೆಗಾಗಿ ಮುಂದೆಯೂ ಸರ್ಕಾರದೊಂದಿಗೆ ಸಮನ್ವಯದಲ್ಲಿ ಕೆಲಸ ಮಾಡುವುದಾಗಿ ಕೆಕೆಸಿಸಿಐ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastem part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ವಿವಿಧೆಡೆ ಗುಡುಗು, ಮಿಂಚು ಸಹಿತ ಮಳೆ

ಕಾರವಾರ: ಸೋಮವಾರ ಬೆಳಗಿನ ಜಾವ ಜಿಲ್ಲೆಯ ವಿವಿಧೆಡೆ ಗುಡುಗು ಮಿಂಚು ಸಹಿತ ಮಳೆಯಾಯಿತು. ಪರಿಣಾಮ ಧಗೆ ಸ್ವಲ್ಪ ಕಡಿಮೆಯಾಗಿದೆ. ಘಟ್ಟದ ಕೆಲವೆಡೆ, ಕರಾವಳಿಯಲ್ಲಿ ಕೆಲವೆಡೆ ಮಳೆಯಾಯಿತು.ಹಳಿಯಾಳ ತಾಲೂಕಿನ ಗೊಂಡಳ್ಳಿ 25 ಮಿಲಿ ಮೀಟರ್, ತಡರಗಾಂವ್ ದಲ್ಲಿ 15.5 , ಚಿಬ್ಬಲಗೇರಿ 21.5, ಕಾರವಾರ ನಗರ 21.2, ಕದ್ರಾ 9 ದಲ್ಲಿ , ಮುಡಗೇರಿ 7 ಎಂ ಎಂ , ದಾಂಡೇಲಿ ಅಂಬಿಕಾನಗರದಲ್ಲಿ ತಲಾ 18.5 ಮಿಲಿ ಮೀಟರ್ ಮಳೆ ಸುರಿದಿದೆ. ಹಳಿಯಾಳದ ಭುಜಕಂಚಿಹಳ್ಳಿಯಲ್ಲಿ 7.5, ಹಾವಗಿಯಲ್ಲಿ 6 ಮಿಲಿ ಮೀಟರ್ , ಬೆಳವಟಗಿಯಲ್ಲಿ 5 ಎಂ . ಎಂ. ಮಳೆ ಸುರಿದಿದೆ.

ಇಂದು ಮದ್ಯ ಮಾರಾಟ ನಿಷೇಧ

ಕಾರವಾರ: ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಹಾಗೂ ಭೀಮಯಾತ್ರೆ ಪ್ರಯುಕ್ತ ಏ.14 ರಂದು ಬೆಳಗ್ಗೆ 6 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಶಿರಸಿ ಶಹರ, ಶಿರಸಿ ಹೊಸ ಮಾರುಕಟ್ಟೆ, ಹಾಗೂ ಬನವಾಸಿ ಪೋಲಿಸ್ ಠಾಣಾ ವ್ಯಾಪ್ತಿಗಳಲ್ಲಿರುವ ಎಲ್ಲಾ ರೀತಿಯ ಮದ್ಯ ಮಾರಾಟ, ಸಾಗಾಟ ಹಾಗೂ ಮದ್ಯದ ಅಂಗಡಿಗಳನ್ನು ಬಂದ್ ಮಾಡಿ ಜಿಲ್ಲಾಧಿಕಾರಿ ಕೆ. ಲಕ್ಷ್ಮಿ ಪ್ರಿಯಾ ಆದೇಶಿಸಿದ್ದಾರೆ.

ಕ್ರಿಕೆಟ್ ಬೆಟ್ಟಿಂಗ್: ಐವರ ಬಂಧನ

ದಾಂಡೇಲಿ: ನಗರದಲ್ಲಿ ಐಪಿಎಲ್ ಕ್ರಿಕೆಟ್ ಸೋಲು, ಗೆಲುವಿಗಾಗಿ ಬೆಟ್ಟಿಂಗ್ ಜೂಜಾಟಕ್ಕೆ ಸಂಬಂಧಪಟ್ಟಂತೆ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು, ಐವರು ಬಂಧನಕ್ಕೊಳಗಾಗಿದ್ದಾರೆ ನಗರದ ಅಂಬೇವಾಡಿಯ ಸರ್ಕಾರಿ ಪ್ರಾಥಮಿಕ ಶಾಲೆಯ ಹತ್ತಿರ ನಿರ್ಮಲ ನಗರದ ಅನಿಲ್ ಲಕ್ಷ್ಮಣ್ ಬಳ್ಳಾರಿ, ಟಿಆರ್‌ಟಿ ಕ್ರಾಸ್ ಹತ್ತಿರದ ಬಾಲರಾಜ ನಾಗೇಶ ಗಿರಿಯಾಲ ಹಾಗೂ ಶ್ರವಣ್ ಇವರು ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯ ಸೋಲು ಗೆಲುವಿಗಾಗಿ ಹಣವನ್ನು ತೊಡಗಿಸಿ ಜೂಜಾಟ ನಡೆಸುತ್ತಿರುವ ವೇಳೆ ಪೊಲೀಸರು ದಾಳಿ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಈ ಮೂವರನ್ನು ಬಂಧಿಸಿರುವ ಪೊಲೀಸರು ಅವರಿಂದ 25,000 ರೂ ನಗದು ಹಣ ಹಾಗೂ ಮೂರು ಮೊಬೈಲ್ ಮತ್ತು ಇನ್ನಿತರೆ ಸಾಮಗ್ರಿಗಳನ್ನು ವಶಪಡಿಸಿಕೊಂಡಿದ್ದಾರೆ. ನಗರ ಠಾಣೆಯ ಪಿಎಸ್‌ಐ ಅಮೀನ್ ಅತ್ತಾರ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ. ಮತ್ತೊಂದು ಪ್ರಕರಣದಲ್ಲಿ ನಗರದ ಅಂಬೇವಾಡಿಯಲ್ಲಿರುವ ಜಿ ಪ್ಲಸ್ ಟು ನಿವೇಶನದ ಹತ್ತಿರ ಬಾಂಬೆಚಾಳ ನಿವಾಸಿ ಇಮ್ಯಾನವೆಲ್ ಬೈಲಾ ಹಾಗೂ ಸುಭಾಸ ನಗರದ ಬಸವರಾಜ ಅಲಿಯಾಸ್ ಭರತ್ ನಾಗೇಶ್ ಗಿರಿಯಾಲ ಎಂಬ ಇಬ್ಬರು ಐಪಿಎಲ್ ಕ್ರಿಕೆಟ್ ಪಂದ್ಯಾವಳಿಗೆ ಸಂಬಂಧಪಟ್ಟಂತೆ ಹಣ ತೊಡಗಿಸಿ ಜೂಜಾಟ ನಡೆಸುತ್ತಿದ್ದರಲ್ಲದೆ, ಶ್ರವಣ ಎಂಬಾತನೊಂದಿಗೆ ಮೊಬೈಲ್ ಮೂಲಕ ಹಣ ತೊಡಗಿಸಿ ಬೆಟ್ಟಿಂಗ್ ಕಟ್ಟಿರುತ್ತಾರೆ. ಈ ಮೂವರನ್ನೂ ಬಂಧಿಸಿರುವ ಪೊಲೀಸರು ಇವರಿಂದ 3,000 ರೂ ನಗದು ಹಾಗೂ ಬೆಲೆಬಾಳುವ ಮೊಬೈಲಗಳನ್ನು ವಶಪಡಿಸಿಕೊಂಡಿದ್ದಾರೆ. ನಗರ ಠಾಣೆಯ ಅಪರಾಧ ವಿಭಾಗದ ಪಿಎಸ್‌ಐ ಕಿರಣ್ ಪಾಟೀಲ್ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62699	71199
ಬಿಳಿಗೋಟು	24299	38769
ಕೆಂಪುಗೋಟು	30189	36899
ಬೆಟ್ಟೆ	40799	52599
ರಾಶಿ	48600	53899
ಚಾಲಿ	44600	48709
ಬಿ.ಕಾಳುಮೆಣಸು	82299	82299

ಯಲ್ಲಾಪುರ	ಕನಿಷ್ಠ	ಗರಿಷ್ಠ
ರಾಶಿ	50719	59375
ಬೆಟ್ಟೆ	38711	50299
ಕೆಂಪುಗೋಟು	18909	38969
ಬಿಳಿಗೋಟು	16109	42499
ಚಾಲಿ	38479	48811
ಕೋಕಾ	13109	34899
ಕಾಳುಮೆಣಸು	55800	69269



ಶಿರಸಿ: ವಿದ್ಯಾಧರ ಕನ್ನಡ ಪ್ರತಿಷ್ಠಾನ ಮತ್ತು ಪ್ರಜ್ವಲ ಟ್ರಸ್ಟ್ ಶಿರಸಿ ಸಹಯೋಗದೊಂದಿಗೆ ಶಿರಸಿಯ ರಂಗಮದಾಮದಲ್ಲಿ ನಡೆದ ಕನ್ನಡ ನುಡಿ ತೇರು ಕಾರ್ಯಕ್ರಮದಲ್ಲಿ ಲೇಖಕಿ ಎನ್. ಆರ್.ರೂಪಶ್ರೀ ಯವರ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿನ ಸಾಧನೆಯನ್ನು ಪರಿಗಣಿಸಿ ಕನ್ನಡ ಚೂಡಾಮಣಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.ಈ ಸಂದರ್ಭದಲ್ಲಿ ವಿದ್ಯಾಧರ ಮುತಾಲಿಕ್ ದೇಸಾಯಿ ಮತ್ತಿತರರು ಉಪಸ್ಥಿತರಿದ್ದರು.

ಕ್ರಿಯಾಶೀಲತೆ ಹೆಚ್ಚಿಸಲು ಶಿಬಿರ ಸಹಾಯಕ

ಹೊನ್ನಾವರ: ಸಾಕ್ಷಿ ಶಿಕ್ಷಕರ ಬಳಗದ ವಿಭಿನ್ನ ಕಾರ್ಯ ಚಟುವಟಿಕೆಗಳಿಂದ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆ ಅನಾವರಣಗೊಳ್ಳಲು ಸಾಧ್ಯ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಜಯಶ್ರೀ ನಾಯ್ಕ ಹೇಳಿದರು. ಹೊರ ಭಾಗ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸಾಕ್ಷಿ ಶಿಕ್ಷಕರ ಬಳಗವು ಹಮ್ಮಿಕೊಂಡ ಬೇಸಿಗೆ ಶಿಬಿರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಈ ಶಿಬಿರದಲ್ಲಿ ಹಾಡು, ಕತೆಕಟ್ಟುವುದು, ಚಿತ್ರಕಲೆ, ಪೇಂಟಿಂಗ್, ಆಟಗಳು, ಯೋಗ ಪ್ರದರ್ಶನ, ಕ್ರಾಫ್ಟ್ ಮುಂತಾದ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲತೆ ಹೆಚ್ಚಿಸಲು ಸಾಧ್ಯ. ನಮ್ಮಲ್ಲಿರುವ ವಿದ್ಯಾರ್ಜನೆಯನ್ನು ಉಪಯೋಗಿಸಿಕೊಂಡು ಉತ್ತಮ ಬದುಕನ್ನು ಕಟ್ಟಿಕೊಳ್ಳಲು ಇಂತಹ ಶಿಬಿರಗಳು ಸಹಾಯಕವಾಗಲಿದೆ ಎಂದರು. ಮುಖ್ಯ ಅತಿಥಿ, ಶಿಕ್ಷಕ ಪಿ. ಆರ್. ನಾಯ್ಕ, ಎಸ್ ಡಿ ಎಂ ಸಿ ಅಧ್ಯಕ್ಷ ಮಂಜುಳಾ ಹರಿಕಾಂತ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಉದ್ಯಮಿ ರಾಮಚಂದ್ರ ಹರಿಕಾಂತ, ಶಾರದಾ ಶರ್ಮಾ, ರತ್ನಾಕರ ದೇಶಭಂಡಾರಿ, ಸುಭಾಷ ನಾಯ್ಕ ಇದ್ದರು. ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಪಿ.ಆರ್.ನಾಯ್ಕರನ್ನು, ಯೋಗ ಪಟು ಸಹರ್ಷ ಹರಿಕಾಂತರನ್ನು ಸನ್ಮಾನಿಸಿದರು. ಶಿಬಿರದ ಸಂಪನ್ಮೂಲ ವ್ಯಕ್ತಿಗಳಾಗಿ ವಿ.ಜಿ.ನಾಯ್ಕ, ಎಂ.ಎಸ್.ಹೆಗಡೆ, ಕೃಷ್ಣ ಅಂಬಿಗ, ಸಿ.ಡಿ.ಪಡುವಣಿ, ಜನಾರ್ಧನ ಹರನೀರು, ಮಂಜುಳಾ ಬಳಗು, ಗೀತಾ ಗೌಡ, ಪದ್ಮಾವತಿ ನಾಯ್ಕ, ಸಹ ಶಿಕ್ಷಕಿ ಜಯಶ್ರೀ ನಾಯ್ಕ ಇದ್ದರು. ಶಿಬಿರದಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ನಿವೃತ್ತ ದೈಹಿಕ ಶಿಕ್ಷಕಿ ಸಾಧನಾ ಬರ್ಗಿ ಕಲಿಕಾ ಸಾಮಗ್ರಿ ವಿತರಿಸಿದರು. ಮುಖ್ಯಾಧ್ಯಾಪಕ ಕೃಷ್ಣ ಹರಿಕಾಂತ ಸ್ವಾಗತಿಸಿದರು. ಸಾಕ್ಷಿ ಬಳಗದ ಸಂಚಾಲಕ ಜನಾರ್ಧನ್ ಹರನೀರು ಪ್ರಾಸ್ತಾವಿಕ ಮಾತನಾಡಿದರು. ವಿ.ಜಿ .ನಾಯ್ಕ ವಂದಿಸಿದರು.



ಹೊನ್ನಾವರ: ಹೊರ ಭಾಗ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸಾಕ್ಷಿ ಶಿಕ್ಷಕರ ಬಳಗವು ಹಮ್ಮಿಕೊಂಡ ಬೇಸಿಗೆ ಶಿಬಿರವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಜಯಶ್ರೀ ನಾಯ್ಕ ಉದ್ಘಾಟಿಸಿದರು.

ಬಂಡಿಹಬ್ಬ ಕೃತಿ ಬಿಡುಗಡೆ | ಶಾಂತಾರಾಮ ನಾಯಕ ಮಾತು

ನಿಗೂಢ ಸತ್ಯ ಅನಾವರಣಗೊಳಿಸಿದ ಕೃತಿ

ಅಂಕೋಲಾ: ಬಂಡಿಹಬ್ಬದ ಆಚರಣಾ ಪದ್ಧತಿ ಪುರಾತನ ನಾಗರಿಕತೆಗಳೊಂದಿಗೆ ನಂಟನ್ನು ಹೊಂದಿರುವುದು ವಿಸ್ಮಯಕಾರಿ ಸಂಗತಿಯಾಗಿದ್ದು ಕರಾವಳಿಯಲ್ಲಿ ಆಚರಿಸಲ್ಪಡುವ ಬಂಡಿಹಬ್ಬ ಜಗತ್ತಿನ ಅತ್ಯಂತ ಪ್ರಾಚೀನ ಜಾತ್ರೆ ಎಂಬ ನಿಗೂಢ ಸತ್ಯವನ್ನು ಬಂಡಿಹಬ್ಬ ಪುಸ್ತಕದ ಮೂಲಕ ಲೇಖಕ ವಿಘ್ನೇಶ್ವರ ಗುನಗಾ ಅವರು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸಿದ್ದಾರೆ ಎಂದು ಹಿರಿಯ ಸಾಹಿತಿ ಶಾಂತಾರಾಮ ನಾಯಕ ಹಿಚ್ಕಡ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ತಾಲೂಕಿನ ಶಕ್ತಿದೇವತೆ ಭೂಮ್ತಾಯಿ ಶಾಂತಾದುರ್ಗಾ ದೇವಾಲಯದ ಆವರಣದಲ್ಲಿ ನಡೆದ ಲೇಖಕ ವಿಘ್ನೇಶ್ವರ ಗುನಗಾ ಅವರ ಬಂಡಿಹಬ್ಬ ಪುಸ್ತಕ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಮೆಸಪಟೋಮಿಯಾ, ಈಜಿಪ್ತ್, ಗ್ರೀಕ್,ರೋಮನ್,ಮತ್ತು ಸಿಂಧೂ ನಾಗರಿಕತೆಗಳೊಂದಿಗೆ ಬಂಡಿಹಬ್ಬದ ಆಚರಣಾ ಪದ್ಧತಿಯ ನಂಟು ಇರುವುದನ್ನು ಲೇಖಕರು ಪುಸ್ತಕದಲ್ಲಿ ತಿಳಿಸಿದ್ದು ಬಂಡಿಹಬ್ಬ ಕೇವಲ ಒಂದು ಪ್ರಾದೇಶಿಕ ಉತ್ಸವವಲ್ಲ ಕರಾವಳಿಯ ಮಣ್ಣಿನಲ್ಲಿ ಪ್ರಾಚೀನ ಪರಂಪರೆ ಇಂದಿಗೂ ಜೀವಂತವಾಗಿರುವುದು ಹೆಮ್ಮೆಯ ಸಂಗತಿ ಎಂದರು.

ಪುಸ್ತಕ ಬಿಡುಗಡೆ ಮಾಡಿದ ಕರಾವಳಿ ಮುಂಜಾವು ವ್ಯವಸ್ಥಾಪಕ ಸಂಪಾದಕ ಗಂಗಾಧರ ಹೀರೆಗುತ್ತಿ ಮಾತನಾಡಿ, ಜನರಲ್ಲಿ ದೇವರ ಪರಿಕಲ್ಪನೆಯ ಆರಂಭದ ಸಮಯದಿಂದಲೇ ಗ್ರಾಮ ದೇವರುಗಳ ಆರಾಧನೆಯೂ ನಡೆದು ಬಂದಿರುವುದು ಪುಸ್ತಕದಲ್ಲಿ ತರ್ಕಬದ್ಧವಾಗಿ ನಿರೂಪಿಸಲಾಗಿದ್ದು, ವೈಜ್ಞಾನಿಕತೆಯನ್ನು ಮೀರಿಸುವ ತಾಂತ್ರಿಕ ಆಚರಣೆ ಬಂಡಿಹಬ್ಬದಲ್ಲಿ ಇಂದಿಗೂ ಕಾಣಸಿಗುತ್ತದೆ ಲೇಖಕ ವಿಘ್ನೇಶ್ವರ ಗುನಗಾ ಅವರು ಪ್ರಾಚೀನ ಜಾತ್ರೆಯ ಪದ್ಧತಿಗಳನ್ನು ಅಧ್ಯಯನ ಮತ್ತು ದಾಖಲೆಗಳ ಮೂಲಕ ಉಲ್ಲೇಖಿಸಿದ್ದಾರೆ ಎಂದರು.

ಶ್ರೀಶಾಂತಾದುರ್ಗಾ ದೇವಾಲಯದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಸುಭಾಷ ನಾರ್ವೇಕರ ಮಾತನಾಡಿ, ಮಣ್ಣಿನ ಮೂಲ ಅಸ್ಮಿತೆಯ ಸಾಂಸ್ಕೃತಿಕ ದಸ್ತಾವೇಜಿನಂತೆ ಬಂಡಿಹಬ್ಬ ಪುಸ್ತಕ ಮೂಡಿಬಂದಿದೆ ಎಂದರು.

ಹೊಸದಿಗಂತ ಪತ್ರಿಕೆಯ ಹುಬ್ಬಳ್ಳಿ ಆವೃತ್ತಿಯ ಮುಖ್ಯಸ್ಥ ವಿಠ್ಠಲದಾಸ ಕಾಮತ ಮಾತನಾಡಿ ನಿಸರ್ಗ ಮತ್ತು ಪೂರ್ವಜರನ್ನು ದೇವರ ರೂಪದಲ್ಲಿ ಆರಾಧಿಸುವುದು ಗ್ರಾಮ ದೇವರುಗಳ ಜಾತ್ರೆಯಾಗಿರುವ ಬಂಡಿಹಬ್ಬದ ವಿಶೇಷತೆಯಾಗಿದ್ದು ವಿಘ್ನೇಶ್ವರ ಗುನಗಾ ಅವರ ಬಂಡಿಹಬ್ಬ ಒಂದು ಅತ್ಯುತ್ತಮ ಕೃತಿ ಎಂದರು. ಕೃತಿ ಪರಿಚಯಿಸಿದ ವಿಮರ್ಶಕ ಪ್ರೊ.ಶ್ರೀಧರ ನಾಯಕ, ಮಾನಶಾಸ್ತ್ರ ಸಮಾಜ ಶಾಸ್ತ್ರ ತತ್ವಶಾಸ್ತ್ರದ ಮೌಲ್ಯಯುತ ಅನುಭವ ಹಾಗೂ ನಿರಂತರಅಧ್ಯಯನದೊಂದಿಗೆ ವಿಶ್ಲೇಷಿಸಲ್ಪಟ್ಟಿರುವ ಕೃತಿ ಇದಾಗಿದೆ ಎಂದರು. ಕೃತಿಕಾರ ವಿಘ್ನೇಶ್ವರ ಗುನಗಾ ಮಾತನಾಡಿ ಬಂಡಿಹಬ್ಬವನ್ನು ಹೋಲುವ ಉತ್ಸವಗಳು ಸಾವಿರಾರು ವರ್ಷಗಳ ಹಿಂದೆ ಪ್ರಾಚೀನ ನಾಗರಿಕತೆಗಳಲ್ಲಿ ಆಚರಣೆಯಲ್ಲಿದ್ದ ಕುರಿತಂತೆ ದಾಖಲೆಗಳು ಸಿಗುತ್ತವೆ ಕರಾವಳಿಯಲ್ಲಿ ಬಂಡಿಹಬ್ಬದ ಪರಂಪರೆ ಇಂದಿಗೂ ಜೀವಂತವಾಗಿದೆ ಎಂದರು.

ಕೈಗಾ ನೌಕರರ ಸಂಘದ ಅಧ್ಯಕ್ಷ ಜಗದೀಶ ಗುನಗಾ ಸ್ವಾಗತಿಸಿದರು, ಶಿಕ್ಷಕ ರಾಜೇಶ ನಾಯಕ ಕಾರ್ಯಕ್ರಮ ನಿರೂಪಿಸಿದರು, ಸಾಹಿತಿ ಮಹಾಂತೇಶ ರೇವಡಿ ವಂದಿಸಿದರು.



ದಾಸ್ತಾನು ಕೊರತೆಯಾಗದಿರಲಿ: ಶಾಸಕ ಹೆಬ್ಬಾರ್

ಶಿರಸಿ: ಇರಾನ್-ಅಮೇರಿಕಾ ಯುದ್ಧದಂತಹ ಜಾಗತಿಕ ವಿದ್ಯಮಾನಗಳಿಂದ ರಸಗೊಬ್ಬರ ಪೂರೈಕೆಯಲ್ಲಿ ವ್ಯತ್ಯಯವಾಗುವ ಆತಂಕವಿದ್ದು, ಜಿಲ್ಲೆಗೆ ಬಂದಿರುವ ಗೊಬ್ಬರ ಯಾವುದೇ ಕಾರಣಕ್ಕೂ ಹೊರಜಿಲ್ಲೆಗೆ ಹೋಗದಂತೆ ಅಧಿಕಾರಿಗಳು ಹದ್ದಿನ ಕಣ್ಣಿಡಬೇಕು ಎಂದು ಶಾಸಕ ಶಿವರಾಮ ಹೆಬ್ಬಾರ್ ಸೂಚಿಸಿದರು.

ಸೋಮವಾರ ನಗರದ ಮಿನಿ ವಿಧಾನಸೌಧದಲ್ಲಿ ಆಯೋಜಿಸದ್ದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಳೆಗಾಲ ಆರಂಭವಾಗುತ್ತಿದ್ದಂತೆಯೇ ರಸಗೊಬ್ಬರಕ್ಕೆ ಬೇಡಿಕೆ ಹೆಚ್ಚುತ್ತದೆ. ಈ ಸಮಯದಲ್ಲಿ ದಾಸ್ತಾನು ಕೊರತೆಯಾಗದಂತೆ ಕೃಷಿ ಅಧಿಕಾರಿಗಳು ಖಾಸಗಿ ವರ್ತಕರ ಜೊತೆ ಸಂಪರ್ಕದಲ್ಲಿರಬೇಕು. ರೈತರಿಗೆ ಗೊಬ್ಬರದ ಸಮಸ್ಯೆ ಎದುರಾದರೆ ಅಧಿಕಾರಿಗಳೇ ಹೊಣೆ ಎಂದು ಎಚ್ಚರಿಸಿದರು.

ಕ್ಷೇತ್ರದ ಹಳೆಯ ಅರಣ್ಯ ಅತಿಕ್ರಮಣದಾರರನ್ನು ಒಕ್ಕಲೆಬ್ಬಿಸದಂತೆ ನೋಡಿಕೊಳ್ಳುವುದು ನನ್ನ ಜವಾಬ್ದಾರಿ. ಅರಣ್ಯ ಇಲಾಖೆಯ ಕಿರಿಕಿರಿ ಸಹಿಸುವುದಿಲ್ಲ ಎಂದು ತಿಳಿಸಿದ ಅವರು, ಹೊಸ ಅತಿಕ್ರಮಣಕ್ಕೆ ಬೆಂಬಲವಿಲ್ಲ ಎಂದರು.

ತಾಲೂಕಿನ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಕೊರತೆ ಇರುವುದು ಸಭೆಯ ಗಮನಕ್ಕೆ ಬಂದಿತು. ಈ ವೇಳೆ ಮಾತನಾಡಿದ ಶಾಸಕರು, ವೈದ್ಯರ ಕೊರತೆ ನೆಪದಲ್ಲಿ ಬನವಾಸಿ ಭಾಗದ ವೈದ್ಯರನ್ನು ಬೇರೆಡೆಗೆ ನಿಯೋಜಿಸಿ ಅಲ್ಲಿನ ರೋಗಿಗಳಿಗೆ ತೊಂದರೆ ನೀಡಬಾರದು. ಮುಖ್ಯವಾಗಿ ಆಸ್ಪತ್ರೆಗಳಲ್ಲಿ ಅನಗತ್ಯ ಶಸ್ತ್ರಚಿಕಿತ್ಸೆ ಬದಲು ಸಹಜ ಹೆರಿಗೆಗೆ ಆದ್ಯತೆ ನೀಡಬೇಕು ಎಂದರು.

ಸಭೆಯ ಆರಂಭದಲ್ಲಿ ಶಿರಸಿ-ಹುಬ್ಬಳ್ಳಿ ರಸ್ತೆ ದುರಸ್ತಿ ಬಗ್ಗೆ ಕಾಂಗ್ರೆಸ್ ನಾಯಕ ಸುನೀಲ್ ನಾಯ್ಕ ಆಕ್ಷೇಪ ವ್ಯಕ್ತಪಡಿಸಿದಾಗ ಶಾಸಕರು ಗರಂ ಆದರು. ಇದು ರಾಷ್ಟ್ರೀಯ ಹೆದ್ದಾರಿಯಾಗಿದ್ದು, ಕೇಂದ್ರದ ವ್ಯಾಪ್ತಿಗೆ ಬರುತ್ತದೆ. ನಾನು ಹಲವು ಬಾರಿ ಪತ್ರ ಬರೆದಿದ್ದೇನೆ. ಈ ಬಗ್ಗೆ ಸಂಸದರನ್ನು ಪ್ರಶ್ನಿಸುವುದು ಸೂಕ್ತಎಂದು ಉತ್ತರಿಸಿದರು. ಸಮಸ್ಯೆಗಳ ಕುರಿತಾದ ಹೋರಾಟಗಳಿಗೆ ಕೈಜೋಡಿಸುವಂತೆ ಸುನೀಲ್ ನಾಯ್ಕ ಆಗ್ರಹಿಸಿದರು.ತಹಶೀಲ್ದಾರ್ ಪಟ್ಟರಾಜ ಗೌಡ, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಡಾ. ಬಿ.ಪಿ. ಸತೀಶ ಸೇರಿದಂತೆ ವಿವಿಧ ಇಲಾಖಾಧಿಕಾರಿಗಳು, ಬನವಾಸಿ ಭಾಗದ ದ್ಯಾಮಣ್ಣ ದೊಡ್ಮನಿ, ಬಸವರಾಜ ದೊಡ್ಮನಿ, ಗಣಪತಿ ನಾಯ್ಕ ಇದ್ದರು.

ಅಗತ್ಯ ಕ್ರಮವಹಿಸಿ

ಅಡಿಕೆ ಬೆಳೆಯ ಎಲೆಚುಕ್ಕಿ ರೋಗಕ್ಕೆ ತೋಟಗಾರಿಕೆ ಇಲಾಖೆ ಸೂಕ್ತ ಮಾರ್ಗದರ್ಶನ ನೀಡಬೇಕು ಮತ್ತು ವಿಳಂಬವಾಗಿರುವ ಬೆಳೆ ವಿಮೆ ಹಂಚಿಕೆ ಕುರಿತು ಕ್ರಮ ವಹಿಸಬೇಕು ಎಂದು ತಿಳಿಸಿದರು.



ಕುಡಿಯುವ ನೀರು ಪೂರೈಕೆಗೆ ಅಧಿಕಾರಿಗಳ ಭರವಸೆ



ಗೋಕರ್ಣ: ಇಲ್ಲಿನ ಹಲವೆಡೆ ಕುಡಿಯುವ ನೀರು ಪೂರೈಕೆಯಾಗದ ಸ್ಥಳಗಳಿಗೆ ಮಾಜಿ ಗ್ರಾಪಂ ಸದಸ್ಯರ ಜೊತೆ ಅಧಿಕಾರಿಗಳು ಭೇಟಿ ನೀಡಿ ಸರಿಪಡಿಸುವ ಭರವಸೆ ನೀಡಿದ್ದಾರೆ.

ರಸ್ತೆ ನಿರ್ಮಾಣದಿಂದ ಪೈಪ್ ಲೈನ್ ಹಾಳಾಗಿ ನಾಲ್ಕು ತಿಂಗಳಿಂದ ನೀರು ಪೂರೈಕೆಯಾಗದೆ ತೊಂದರೆಯಾಗುತ್ತಿದ್ದ ಅಜ್ಜಿಹಕ್ಕಲದ ಸ್ಥಳ ವೀಕ್ಷಿಸಿ ನೂತನ ಪೈಪ್ ಲೈನ್ ಅಳವಡಿಸಿ ನೀರು ಸರಬರಾಜು ಮಾಡುವಂತೆ ಕುಡಿಯುವ ನೀರು ಸರಬರಾಜು ಇಲಾಖೆಯ ಸಹಾಯಕ ಅಭಿಯಂತರ ರಾಘವೇಂದ್ರ ನಾಯ್ಕ ಸೂಚಿಸಿದರು.

ಚೌಡಗೇರಿ, ಕೆಇಬಿ.ಗ್ರೀಡ್ ಮತ್ತಿತರ ಕಡೆ ಅವೈಜ್ಞಾನಿಕ ಪೈಪ್ ಲೈನ್ ನಿಂದ ನೀರು ಪೂರೈಕೆಯಲ್ಲಿ ತೊಡಕಾಗುತ್ತಿರುವ ಬಗ್ಗೆ ತಿಳಿದು ಅಗತ್ಯವಿದ್ದಲ್ಲಿ ಗೇಟ್ ವಾಲ್ ಅಳವಡಿಸಿ ಸಮರ್ಪಕವಾಗಿ ನೀರು ಪೂರೈಸಲು ಗ್ರಾಮ ಪಂಚಾಯತ ಅಧಿಕಾರಿಗಳಿಗೆ ತಿಳಿಸಿದರು. ಸರಿಯಾಗಿ ನೀರು ಸಿಗದೆ ತೊಂದರೆಯಾಗುತ್ತಿರುವ ಬಗ್ಗೆ ಮಾಜಿ. ಗ್ರಾಮ ಪಂಚಾಯತ ಸದಸ್ಯರ ಬಳಿ ಈ ಭಾಗದ ಜನರು ತಿಳಿಸಿದ್ದು, ತಕ್ಷಣ ಅಧಿಕಾರಿಗಳನ್ನ ವಿಷಯ ತಿಳಿಸಿ ಸಮಸ್ಯೆ ಬಗೆಹರಿಸುವ ಕಾರ್ಯ ಮಾಡಿದ್ದಾರೆ.

ಈ ವೇಳೆ ಗ್ರಾಪಂ ಆಡಳಿತಾಧಿಕಾರಿಯಾದ ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಮೋಹನ ನಾಯ್ಕ, ಕುಡಿಯುವ ನೀರು ಸರಬರಾಜು ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಮೀನಾಕ್ಷಿ , ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ವಿ.ಎ.ಪಟಗಾರ, ಕಾರ್ಯದರ್ಶಿ ಮಂಜುನಾಥ, ಮಾಜಿ ಗ್ರಾಪಂ ಸದಸ್ಯರಾದ ರಮೇಶ ಪ್ರಸಾದ, ಗಣಪತಿ ನಾಯ್ಕ ಉಪಸ್ಥಿತರಿದ್ದರು.

ಏ.17ಕ್ಕೆ ಕಬಡ್ಡಿ ಪಂದ್ಯಾವಳಿ

ಭಟ್ಕಳ : ಕರ್ನಾಟಕ ವಿಶ್ವವಿದ್ಯಾಲಯ ಸಂಯೋಜನೆಗೊಳಪಟ್ಟ ಅಂತರ ಮಹಾವಿದ್ಯಾಲಯಗಳ ತೃತೀಯ ವಲಯ ಮಟ್ಟದ ಕಬಡ್ಡಿ ಪಂದ್ಯಾವಳಿ ಪಟ್ಟಣದ ಗುರು ಸುಧೀಂದ್ರ ಕಾಲೇಜಿನಲ್ಲಿ ಏ. 16 ಮತ್ತು 17ರಂದು ಆಯೋಜಿಸಲಾಗಿದೆ.ತೃತೀಯ ವಲಯ ಮಟ್ಟದ ಕಾಲೇಜುಗಳ ತಂಡಗಳು ಹೆಚ್ಚಿನ ಮಾಹಿತಿಗಾಗಿ ವಿನಾಯಕ ನಾಯ್ಕ, ದೈಹಿಕ ನಿರ್ದೇಶಕರನ್ನು ಸಂಪರ್ಕಿಸುವಂತೆ ಪ್ರಾಂಶುಪಾಲ ಶ್ರೀನಾಥ ಪೈ ತಿಳಿಸಿದ್ದಾರೆ.

ರಾಜೇಶ ಮಳಗೀಕರಗೆ ಸನ್ಮಾನ



ಹಳಿಯಾಳ: ಪಟ್ಟಣದ ಪೊಲೀಸ್ ಠಾಣೆಯ ರೂಢಿಗತ ತಪಾಸಣೆಗಾಗಿ ಉತ್ತರ ಕನ್ನಡ ಜಿಲ್ಲೆಯ ಪೊಲೀಸ್ ಅಧೀಕ್ಷಕ ದೀಪನ್.ಎಮ್.ಎನ್ ಭೇಟಿ ನೀಡಿ ದಾಖಲಾತಿಗಳನ್ನು ಪರಿಶೀಲಿಸಿದರು. ಇತ್ತೀಚೆಗೆ ಬಿದ್ರೊಳ್ಳಿ ಹತ್ಯಾಕಾಂಡದ ಆರೋಪಿಗಳಿಗೆ ಜೀವಾವಧಿ ಶಿಕ್ಷೆಗೆ ಗುರಿಯಾಗುವಂತೆ ವಾದಿಸಿ ಗೆದ್ದಿದ್ದ ಸರ್ಕಾರಿ ಅಭಿಯೋಜಕ ರಾಜೇಶ ಮಳಗೀಕರರವರಿಗೆ ಪೊಲೀಸ್ ಅಧೀಕ್ಷಕ ದೀಪನ್.ಎಮ್ ಎನ್ ರವರು ಸನ್ಮಾನಿಸಿದರು.ಹಲವಾರು ಕೇಸುಗಳನ್ನು ಯಶಸ್ವಿಯಾಗಿ ಭೇದಿಸಿದ ಸಿಬ್ಬಂದಿಗೆ ಪ್ರಶಂಸಾ ಪತ್ರ ನೀಡಿ ಗೌರವಿಸಿದರು. ಸಿಪಿಐ ಜಯಪಾಲ್ ಪಾಟೀಲ್, ಪಿಎಸ್‌ಐ ಬಸವರಾಜ ಮಬನೂರ, ಕೃಷ್ಣ ಗೌಡ ಅರಕೇರಿ ಮತ್ತು ಸಿಬ್ಬಂದಿ ಮಾಹಿತಿ ನೀಡಿದರು.



ಮುಂಡಗೋಡ: ತಾಲೂಕಾ 8ನೇ ಕನ್ನಡ ಸಾಹಿತ್ಯ ಸಮ್ಮೇಳನದ ಆಮಂತ್ರಣ ಪತ್ರಿಕೆಯನ್ನು ಶಾಸಕ ಶಿವರಾಮ ಹೆಬ್ಬಾರವರು ಬಿಡುಗಡೆಗೊಳಿಸಿದರು. ಸಮ್ಮೇಳನದ ಸರ್ವಾಧ್ಯಕ್ಷರಾದ ಡಾ.ಪಿ.ಪಿ.ಛಬ್ಬಿ, ಕಸಾಪ ಅಧ್ಯಕ್ಷ ವಸಂತ ಎಸ್ ಕೊಣಸಾಲಿ, ಗೌರವ ಕಾರ್ಯದರ್ಶಿಗಳಾದ ಎಸ್.ಡಿ. ಮುಡೆಣ್ಣವರ, ಕಾರ್ಯಕಾರಿ ಸಮಿತಿ ಸದಸ್ಯರಾದಸುಭಾಸಡೋರಿ, ಚಿದಾನಂದ ಪಾಟೀಲ, ಸುಭಾಸ್ ವಡ್ಡರ ಸೇರಿದಂತೆ ಇತರರಿದ್ದರು.

ವಿದ್ಯಾಭಾರತಿ ಶಾಲೆಗೆ ನ್ಯಾಷನಲ್ ಅವಾರ್ಡ್

ಭಟ್ಕಳ: ಪಟ್ಟಣದ ವಿದ್ಯಾಭಾರತಿ ಆಂಗ್ಲ ಮಾಧ್ಯಮ ಪ್ರೌಢಶಾಲೆ ರಾಜ್ಯಮಟ್ಟದಲ್ಲಿ ಅತ್ಯಂತ ಅರ್ಹ ಶಿಕ್ಷಕ, ಸಿಬ್ಬಂದಿ ಹೊಂದಿರುವುದಕ್ಕಾಗಿ 2026ರ ನ್ಯಾಷನಲ್ ಸ್ಕೂಲ್ ಅವಾರ್ಡ್ ಲಭಿಸಿದೆ. ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ವಿದ್ಯಾಭಾರತಿ ಶಾಲೆಯ ಪ್ರಾಂಶುಪಾಲೆ ರೂಪಾ ರಮೇಶ ಖಾರ್ವಿ, ಭಟ್ಕಳ ಎಜ್ಯುಕೇಶನ್ ಟ್ರಸ್ಟಿನ ಟ್ರಸ್ಟಿ ಮೆನೆಜರ್ ರಾಜೇಶ ನಾಯಕ, ಹಾಗೂ ಟ್ರಸ್ಟಿ ರಮೇಶ ಖಾರ್ವಿ ಅವರಿಗೆ ಪ್ರದಾನ ಮಾಡಲಾಯಿತು. ವಿದ್ಯಾಭಾರತಿ ಶಾಲೆಯ ಉತ್ತಮ ಸಾಧನೆಗೆ ಶಾಲೆಯ ಆಡಳಿತ ಮಂಡಳಿ, ಪೋಷಕರು ಮತ್ತು ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.



ಪರಿವಾರ ದೇವತೆಗಳ ಪುನರ್ ಪ್ರತಿಷ್ಠಾಪನೆ

ಹೊನ್ನಾವರ: ತಾಲೂಕಿನ ಮೂರುಕಟ್ಟೆಯ ಸಾರ್ವಜನಿಕ ಶ್ರೀ ಮಹಾಸತಿ ಮತ್ತು ಶ್ರೀ ನಾಗ ಚೌಡೇಶ್ವರಿ ದೇವರ ನವೀಕೃತ ಶಿಲಾ ಮಂದಿರ ಲೋಕಾರ್ಪಣೆ ಮತ್ತು ಮಹಾಸತಿ ಹಾಗೂ ಪರಿವಾರ ದೇವತೆಗಳ ಪುನರ ಪ್ರತಿಷ್ಠಾಪನೆಯು ಭಾನುವಾರ ವಿಜೃಂಭಣೆಯಿಂದ ನಡೆಯಿತು. ಪುರಾತನಕಾಲದಿಂದಲೂ ಜಾಗೃತ ಶಕ್ತಿ ಸ್ಥಳವಾದ ಶ್ರೀದೇವರನ್ನು ಪೂಜಿಸಿಕೊಂಡು ಬಂದಿದ್ದು, ದೇವಸ್ಥಾನದ ಗರ್ಭಗುಡಿಯು ಶಿಥಿಲಗೊಂಡಿದ್ದರಿಂದ ನೂತನ ಸಮಿತಿಯವರ ಇಚ್ಛಾಶಕ್ತಿಯಿಂದ ನವೀಕೃತ ಶಿಲಾಮಂದಿರ ಲೋಕಾರ್ಪಣೆ ಮಾಡಲಾಯಿತು. ವೇದಮೂರ್ತಿ ಸದಾನಂದ ಭಟ್ ಇವರ ನೇತೃತ್ವದಲ್ಲಿ ಎರಡು ದಿನ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆದವು. ಮಧ್ಯಾಹ್ನ ಮಹಾಪೂಜೆ ನಂತರ ಅನ್ನ ಸಂತರ್ಪಣೆ ನಡೆಯಿತು. ಸಚಿವ ಮಂಕಾಳು ವೈದ್ಯ, ಮಾಜಿ ಶಾಸಕ ಸುನೀಲ ನಾಯ್ಕ ಅಪಾರ ಭಕ್ತರು ದೇವರ ದರ್ಶನ ಪಡೆದರು.



ಬೇಸಿಗೆ ಶಿಬಿರ ಉದ್ಘಾಟನೆ | ವಿ.ಡಿ.ನಾಯಕ ಕಿವಿಮಾತು

ಮಕ್ಕಳಲ್ಲಿ ಶಿಸ್ತು, ಸಮಯಪಾಲನೆ ರೂಢಿಸಬೇಕು

ಅಂಕೋಲಾ: ಮಕ್ಕಳು ಶಿಸ್ತು ಮತ್ತು ಸಮಯಪಾಲನೆಯನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಜೀವನದಲ್ಲಿ ಯಶಸ್ವಿಯಾಗಲು ಸಾಧ್ಯ ಎಂದು ವಿಶ್ರಾಂತ ಶಿಕ್ಷಕ, ಶಿಬಿರದ ಗೌರವಾಧ್ಯಕ್ಷ ವಿ.ಡಿ. ನಾಯಕ ಹೇಳಿದರು.

ಅವರು ನೀನಾಸಂ ರಂಗ ತಜ್ಞರು ಮತ್ತು ಅಂಕೋಲಾದ ಸಂಗಾತಿ ರಂಗಭೂಮಿಯ ವತಿಯಿಂದ ಏರ್ಪಡಿಸಲಾಗಿರುವ 18 ನೇ ವರ್ಷದ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಮಕ್ಕಳಲ್ಲಿ ಕ್ರಿಯಾಶೀಲತೆ ಹೆಚ್ಚಿಸಲು ಇಂತಹ ಶಿಬಿರಗಳು ಸಹಕಾರಿ. ಇದರ ಸಂಪೂರ್ಣಪ್ರಯೋಜನ ಪಡೆದು ಬದುಕು ರೂಪಿಸಿಕೊಳ್ಳುವಂತೆ ಅವರು ಮಕ್ಕಳಿಗೆ ಕಿವಿಮಾತು ಹೇಳಿದರು.

ವಂದಿಗೆ ಗ್ರಾ.ಪಂ ಮಾಜಿ ಅಧ್ಯಕ್ಷೆ ಪುಷ್ಪಲತಾ ನಾಯಕ ಮಾತನಾಡಿ,ರಜೆಯ ದಿನಗಳಲ್ಲಿ ಮಕ್ಕಳಲ್ಲಿರುವ ಪ್ರತಿಭೆ ಅನಾವರಣಕ್ಕೆ ಇದೊಂದು ಸುವರ್ಣ ಅವಕಾಶ ಎಂದರು.

ನಿನಾಸಂನ ತರಬೇತುದಾರರಾದ ಭಾರತಿ ಮಾತನಾಡಿ ಮಕ್ಕಳಿಗೆ ನಾವು ಮೊಬೈಲ್‌ನಿಂದ ದೂರ ಇರುವಂತೆ ಹೇಳಿತ್ತೇವೆದಾರೂ ಇದಕ್ಕೆ ಪರ್ಯಾಯವನ್ನು ನೀಡುತ್ತಿಲ್ಲ. ಇಂತಹ ಶಿಬಿರಗಳು ಮಕ್ಕಳ ಬೆಳವಣಿಗೆಗೆ ಪೂರಕ ಎಂದರು.

ಯೋಗ ಶಿಕ್ಷಕಿ ಶೋಭಾ ಶೆಟ್ಟಿ ಮಾತನಾಡಿ, ಯೋಗದ ಮೂಲಕ ಸದೃಢ, ಸಶಕ್ತ ಶರೀರ ಹೊಂದಬೇಕು ಎಂದರು. ಪತ್ರಕರ್ತ ವಿಠ್ಠಲದಾಸ ಕಾಮತ್ ಅಧ್ಯಕ್ಷತೆ ವಹಿಸಿದ್ದರು. ಶಿಬಿರದ ಪ್ರಧಾನಸಂಚಾಲಕ ಕೆ. ರಮೇಶ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿ, ಸತತವಾಗಿ 18ನೇ ವರ್ಷದಲ್ಲಿ ಬೇಸಿಗೆಶಿಬಿರ ಮುಂದುವರೆದಿದ್ದು ಇದಕ್ಕೆ ಪಾಲಕರು ಮತ್ತು ಮಕ್ಕಳ ಆಸಕ್ತಿ ಅಗತ್ಯವಿದೆ ಎಂದರು.

ಕಾರ್ಯಕ್ರಮ ನಿರ್ವಹಿಸಿದ ತಿಮ್ಮಣ್ಣ ಭಟ್ಟ ವಂದಿಸಿದರು. ವೇದಿಕೆಯಲ್ಲಿ ಮಂಗಲಾ ಹರಿಕಂತ್ರ, ಪಾರ್ವತಿ ಹರಿಕಂತ್ರ, ದೇವಿಕಾ, ವಿನಾಯಕ ಶೆಟ್ಟಿ, ಸಂಗೀತಾ, ರಾಜು ಗೌಡ ಇದ್ದರು.



ಇಂದು ಕದಂಬೇಶ್ವರ ವರ್ಧಂತಿ ಉತ್ಸವ

ಅಂಕೋಲಾ: ತಾಲೂಕಿನ ಕುಂಬಾರಕೇರಿಯ ಪುರಾತನ ಪ್ರಸಿದ್ಧ ಶ್ರೀ ಕದಂಬೇಶ್ವರ ದೇವಾಲಯದ ವಾರ್ಷಿಕ ವರ್ಧಂತಿ ಉತ್ಸವ ಕಾರ್ಯಕ್ರಮ ಏ.14ಮತ್ತು 15ರಂದು ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ ಏ.14ರಂದು ಸಂಜೆ ಪುಣ್ಯಾಹ ಹವನ, ಕೌತುಕ ಬಂಧನ,ಕಲಶ ಸ್ಥಾಪನೆ, ರಾಕೋಘ್ನ ಅಘೋರಾಸ್ತ್ರ ಹವನ ನಡೆಯಲಿದ್ದು, ಏ. 15ರಂದು ಬೆಳಗ್ಗೆ ನವಗ್ರಹ ಹೋಮ, ಕಲಾಹವನ, ಪೂರ್ಣಾಹುತಿ, ಮಹಾಪೂಜೆ, ಪ್ರಸಾದ ವಿತರಣೆ ಮಧ್ಯಾಹ್ನ 1 ಗಂಟೆಯಿಂದ 3 ಗಂಟೆವರೆಗೆ ಅನ್ನಸಂತರ್ಪಣೆ ನಡೆಯಲಿದೆ.ರಾತ್ರಿ 9.30 ರಿಂದ ನುರಿತ ಕಲಾವಿದರ ಕೂಡುವಿಕೆಯಲ್ಲಿ ಚಂದ್ರಹಾಸ ಚರಿತ್ರೆ ಪೌರಾಣಿಕ ಯಕ್ಷಗಾನ ಪ್ರದರ್ಶನ ನಡೆಯಲಿದ್ದು ಶಂಕರ ಭಟ್ಟ ಬ್ರಹ್ಮೂರು ಅವರ ಹಿಮ್ಮೇಳ, ಸುಬ್ರಹ್ಮಣ್ಯ ಚಿಟ್ಟಾಣಿ, ಗುರು ಭಟ್ಟ, ವೀರೇಂದ್ರ ವಂದಿಗೆ, ರಾಜು ಅವುದಳ್ಳಿ, ನಾಗೇಂದ್ರ ಮೂರುರು

ಸಂತೋಷ ಹೆಮ್ಮಾಡಿ, ರಕ್ಷಿತ ಕುಳಿಮನೆ, ರೋಶನಿ ನಾಯ್ಕ ಮೊದಲಾದವರ ಮುಮ್ಮೇಳ ಇರಲಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಹಕರಿಸುವಂತೆ ದೇವಾಲಯದ ವತಿಯಿಂದ ಕೋರಲಾಗಿದೆ.



ಅನುಷ್ಠಾನಗೊಳ್ಳದ ಕಾಳಿ ಏತ ನೀರಾವರಿ ಯೋಜನೆ

ಮಾತು ತಪ್ಪಿದ ಆಡಳಿತದ ವಿರುದ್ಧ ಆಕ್ರೋಶ

ಹಳಿಯಾಳ: ಕಾಳಿ ನದಿ ಏತ ನೀರಾವರಿ ಯೋಜನೆ ಅನುಷ್ಠಾನಕ್ಕೆ ಮಾರ್ಚ್ 16 ರಂದು ನಡೆದ ಹಳಿಯಾಳ ಬಂದ್ ವೇಳೆ ನೀಡಿದ್ದ ಏಪ್ರಿಲ್ 2 ರ ಗಡುವು ಮುಕ್ತಾಯ ಗೊಂಡು ಹನ್ನೆರಡು ದಿನ ಕಳೆದರೂ ಇನ್ನೂ ಕುಂಭಕರ್ಣ ನಿದ್ರೆಯಲ್ಲಿದೆ ಎಂದು ಆರೋಪಿಸಿ ರೈತ ಮುಖಂಡರಿಂದ ಆಕ್ರೋಶ ವ್ಯಕ್ತವಾಗಿದೆ.

ಸೋಮವಾರ ಹಠಾತ್ತನೆ ತಹಶೀಲ್ದಾರ ಕಚೇರಿಗೆ ಬಂದ ರೈತ ಮುಖಂಡರುಗಳು ತಹಶೀಲ್ದಾರ ಫಿರೋಜ್ಷಾ ಸೋಮನಕಟ್ಟಿ ಯವರನ್ನು ಹಳಿಯಾಳ ಬಂದ್ ವೇಳೆ ತೆಗೆದುಕೊಂಡಿದ್ದ ಜವಾಬ್ದಾರಿಯುತ ಹೇಳಿಕೆ ಬಗ್ಗೆ ಪ್ರಶ್ನಿಸಿದರಲ್ಲದೇ ಯೋಜನೆ ಇನ್ನೂ ಕಾರ್ಯಗತಗೊಳ್ಳದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ತಹಶೀಲ್ದಾರರ ಹೇಳಿಕೆಯಿಂದ ಮತ್ತು ಸಮಜಾಯಿಷಿಯಿಂದ ಸಂತುಷ್ಟಗೊಳ್ಳದ ರೈತ ಮುಖಂಡರುಗಳು ಆಕ್ರೋಶಗೊಂಡು ತಹಶೀಲ್ದಾರರನ್ನು ತರಾಟೆಗೆ ತೆಗೆದುಕೊಂಡು ಕಾಮಗಾರಿಗೆ ಸಂಬಂಧಿಸಿದ ಇಂಜಿನಿಯರ್ ಹಾಗೂ ಅಧಿಕಾರಿಗಳನ್ನು ಕೂಡಲೇ ಸ್ಥಳಕ್ಕೆ ಕರೆಯಿಸಲು ಪಟ್ಟುಹಿಡಿದರು.

ಕಾಮಗಾರಿ ಅನುಷ್ಠಾನದ ಪ್ರಾರಂಭಿಕ ಹಂತದಲ್ಲೇ ಮೊದಲ ಪಂಪ್‌ಸೆಟ್ ಚಾಲನೆ ಆದ ತುಸು ಸಮಯದಲ್ಲೇ ಪೈಲೈನ್ ಒಡೆದು ಕಾಮಗಾರಿ ತುರ್ತು ಬಂದ್ ಆಗಿದ್ದು, ಕಳಪೆ ಕಾಮಗಾರಿಗೆ ಉದಾಹರಣೆಯಾಗಿದ್ದು ಈ ಕಾಮಗಾರಿಯ ಸಂಪೂರ್ಣ ತನಿಖೆ ಆಗ ಬೇಕಾಗಿದ್ದು ಹಳಿಯಾಳ ಕ್ಷೇತ್ರಕ್ಕೆ ಬರುವ ಯಾವುದೇ ಯೋಜನೆಗಳು ಯಾಕೆ ಮಹತ್ವ ಕಳೆದುಕೊಂಡು ಸರ್ಕಾರದ ಹಣ ಪೋಲಾಗುತ್ತಿದೆ ಎನ್ನುವುದು ಸಾರ್ವಜನಿಕರಿಗೆ ನೇರಾನೇರವಾಗಿ ತಿಳಿದಿರುವ ವಿಷಯವಾಗಿದ್ದು ಯಾವುದೇ ಯೋಜನೆ ಅನುಮೋದನೆ ಮೊದಲು ಇದುವರೆಗೂ ಅಧಿಕಾರಿಗಳಿಂದ ಹಳಿಯಾಳದ ಬೆಳವಣಿಗೆ ಮತ್ತು ಮುಂದಿನ ದಿನಗಳಲ್ಲಿ ಆಗ ಬಹುದಾದ ಬೇಡಿಕೆಗಳ ಸಮಗ್ರವಾದ ವೈಜ್ಞಾನಿಕ ಅಧ್ಯಯನ ಮಾಡದೇ ಬೇಕಾಬಿಟ್ಟಿ ಸಾರ್ವಜನಿಕ ಹಣವನ್ನು ಯಾರದೋ ಜೇಬನ್ನು ತುಂಬಿಸಲು ಅನುಮೋದನೆ ನೀಡಿದಂತಿದ್ದು, ಒಂದು ವೇಳೆ ನನ್ನ ಆಪಾದನೆ ಸುಳ್ಳೆಂದಾದಲ್ಲಿ ದೃಢವಾದ ಸಾಕ್ಷಿ ಆಧಾರಗಳನ್ನು ಪ್ರಸ್ತುತ ಪಡಿಸುವ ಧೈರ್ಯ ತೋರಲಿ ಎಂದು ರೈತ ಮುಖಂಡ ನಾಗೇಂದ್ರ ಜಿವೋಜಿ ಸವಾಲೆಸೆದರು.ಹಳಿಯಾಳ ಕ್ಷೇತ್ರದ ಎಲ್ಲಾ ಕಾಮಗಾರಿಗಳೂ ಕಳಪೆಯಾಗಿದ್ದು ಕೇವಲ ದುಡ್ಡು ಹೊಡೆಯುವ ಯೋಜನೆಗಳಾಗಿವೆ ಎಂದು ರೈತ ಮುಖಂಡ ಶಂಕರ ಕಾಜಗಾರ ಆರೋಪಿಸಿದರು.ಕೂಡಲೇ ಉನ್ನತ ಮಟ್ಟದ ತನಿಖೆ ಆಗಲೇ ಬೇಕು ಎಂದು ರೈತ ಮುಖಂಡರುಗಳು ತಹಶೀಲ್ದಾರರಿಗೆ ಒತ್ತಾಯಿಸಿದ್ದಾರೆ.ಈ ಸಂದರ್ಭದಲ್ಲಿ ರೈತ ಮುಖಂಡರುಗಳಾದ ಶಂಕರ ಕಾಜಗಾರ, ಮಹೇಶ ಪಾಳೇಕರ, ಪುಂಡ್ಲೀಕ ಗೋಡಿಮನಿ, ಸಾತುರಿ ಗೋಡಿಮನಿ, ಸುಭಾಶ ಸಾವಂತ ಉಪಸ್ಥಿತರಿದ್ದರು.



ಕಿರುಸುದ್ದಿ

ಇಂದು ಗುರುರಾಯರ ದಿನಾಚರಣೆ

ಹಾವೇರಿ: ನಗರದ ರಾಯರ ಬಳಗದ ವತಿಯಿಂದ ನಾಳೆ ದಿನಾಂಕ 14 ರಂದು ಹಾವೇರಿ ನಗರದ ಕೃಷ್ಣ ದೇವಸ್ಥಾನದ ಶ್ರೀ ಲಕ್ಷ್ಮಿ ನಾರಾಯಣ ಸಭಾಭವನದಲ್ಲಿ ಸಂಜೆ 5 ಗಂಟೆಗೆ ಶ್ರೀ ಗುರುರಾಯರ ದಿನಾಚರಣೆಯನ್ನು ಹಮ್ಮಿಕೊಂಡಿದೆ. ಈ ಕಾರ್ಯಕ್ರಮದಲ್ಲಿ ಬೆಂಗಳೂರಿನ ಪಂಡಿತ್ ಬ್ರಹ್ಮಣ್ಯಾಚಾರ್ ಇವರಿಂದ ಪ್ರವಚನ ನೀಡಲಿದ್ದಾರೆ ಹಾಗೂ ಯಲ್ಲಾಪುರದ ಕುಮಾರಿ ವಿಭಾ ಹೆಗಡೆ ಅವರಿಂದ ಭಕ್ತಿ ಸಂಗೀತ ಜರುಗಲಿದೆ. ತಬಲಾ ವಾದಕರಾಗಿ ರಾಜೇಂದ್ರ ಭಾಗವತ್ ಹಾಗೂ ರವೀಂದ್ರ ಮಳಗಿ ಸಂವಾದಿನಿ ನುಡಿಸಲಿದ್ದಾರೆ ಎಂದು ಹಾವೇರಿಯ ರಾಯರ ಬಳಗ ಪ್ರಕಟಣೆಯಲ್ಲಿ ತಿಳಿಸಿದೆ.

ಏ.23ರಿಂದ ಶಿಕ್ಷಣ ಶಿಬಿರ

ಸಿದ್ದಾಪುರ: ತಾಲೂಕಿನ ರಾಮದೇವಮಠ ಗೋಸ್ವರ್ಗದಲ್ಲಿ ಏ.23ರಿಂದ ಮೇ 10 ರವರೆಗೆ ಹವ್ಯಕ ವಟುಗಳಿಗಾಗಿ ಶ್ರೀ ರಾಘವೇಂದ್ರಭಾರತೀ ವಟು ಶಿಕ್ಷಣ ಶಿಬಿರವನ್ನು ಆಯೋಜಿಸಲಾಗಿದೆ. ಆಸಕ್ತ ವಟುಗಳ ಹೆಸರನ್ನು ನೋಂದಣಿ ಮಾಡಲು ಏ.15 ರವರೆಗೆ ಅವಕಾಶವಿದೆ. ಮೊದಲು ನೋಂದಾಯಿಸಿದ 50 ಅರ್ಜಿಗಳಿಗೆ ಆದ್ಯತೆ ನೀಡಲಾಗುತ್ತದೆ. ನೋಂದಾವಣಿ ಅರ್ಜಿಯು ಭಾನ್ಕುಳಿ ಶ್ರೀ ರಾಮದೇವಮಠದಲ್ಲಿ ಲಭ್ಯವಿದ್ದು ಈ ಕುರಿತು ಹೆಚ್ಚಿನ ಮಾಹಿತಿಗಾಗಿ 9482625742 ನಂಬರನ್ನು ಸಂಪರ್ಕಿಸಬಹುದು ಎಂದು ತಿಳಿಸಲಾಗಿದೆ.

ಜಂಬುನಾಥ ಕಂಚ್ಯಾಣಿ, ಗುಂಡುರಾವ್ ದೇಸಾಯಿ ಪ್ರಶಸ್ತಿಗೆ ಆಯ್ಕೆ

ಮುಂಡರಗಿ: ಕಲಾ ಶಿಕ್ಷಣ-ಸಂಸ್ಕೃತಿ ಪ್ರತಿಷ್ಠಾನದ 2025ರ ಸಾಹಿತ್ಯ ಗೌರವ ಪ್ರಶಸ್ತಿ ಹಾಗೂ ಪುಸ್ತಕ ಪ್ರಶಸ್ತಿ ಪ್ರಕಟಿಸಿದ್ದು ವಿಜಯಪುರದ ಮಕ್ಕಳ ಸಾಹಿತಿ ಜಂಬುನಾಥ ಕಂಚ್ಯಾಣಿ ಅವರಿಗೆ ಗೌರವ ಪ್ರಶಸ್ತಿ, ಮಸ್ಕಿಯ ಸಾಹಿತಿ ಗುಂಡುರಾವ್ ದೇಸಾಯಿ ಅವರು ಪುಸ್ತಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಡಾ. ನಿಂಗು ಸೊಲಗಿ ತಿಳಿಸಿದ್ದಾರೆ. ಸಾಹಿತ್ಯ ಹಾಗೂ ಶಿಕ್ಷಣ ಸಂವರ್ಧನೆಯಲ್ಲಿ ಸಕ್ರಿಯವಾಗಿದ್ದ ಮುಂಡರಗಿಯ ಶಿಕ್ಷಕಿ ಕಲಾವತಿ ನಿಂಗು ಸೊಲಗಿ ಅವರ ಸ್ಮರಣೆಯಲ್ಲಿ 2023ರಿಂದ ಪ್ರತಿವರ್ಷ ಈ ಪ್ರಶಸ್ತಿ ನೀಡುತ್ತಾ ಬಂದಿದ್ದು, ಗೌರವ ಪ್ರಶಸ್ತಿಯು ಹತ್ತು ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದ್ದರೆ, ಪುಸ್ತಕ ಪ್ರಶಸ್ತಿಯು ಐದು ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುತ್ತಿದೆ. ಗೌರವ ಪ್ರಶಸ್ತಿಗೆ ಆಯ್ಕೆಯಾಗಿರುವ ಜಂಬುನಾಥ ಕಂಚ್ಯಾಣಿಯವರು ನಾಲ್ಕು ದಶಕಗಳಿಂದ ಸಾಹಿತ್ಯ ಸೇವೆಯಲ್ಲಿ ತೊಡಗಿದ್ದು ಮಕ್ಕಳಿಗಾಗಿ ಕಥೆ, ಕವಿತೆ, ನಾಟಕ, ಕಾದಂಬರಿ, ವಿಜ್ಞಾನ ಸಾಹಿತ್ಯ ಸೇರಿದಂತೆ ಹಲವು ಪ್ರಕಾರಗಳಲ್ಲಿ 33 ಕೃತಿಗಳನ್ನು ಪ್ರಕಟಿಸಿದ್ದು ಹಲವಾರು ಮಕ್ಕಳ ಕಮ್ಮಟಗಳಲ್ಲಿ ಕ್ರಿಯಾಶೀಲವಾಗಿ ಭಾಗಿಯಾಗಿದ್ದಾರೆ. ಗುಂಡುರಾವ್ ದೇಸಾಯಿ ಅವರು ಕಳೆದ ಒಂದೂವರೆ ದಶಕದಿಂದ ಮಕ್ಕಳ ಸಾಹಿತ್ಯ ರಚನೆಯಲ್ಲಿ ತುಂಬಾ ಪ್ರಯೋಗಶೀಲರಾಗಿದ್ದು ಹಲವು ಕೃತಿಗಳನ್ನು ರಚಿಸಿದ್ದಾರೆ. 2025 ರಲ್ಲಿ ಪ್ರಕಟಗೊಂಡ ಇವರ ಚಾರ್ಲಿ ಚಾರ್ಲಿ ವ್ಹೇರ್ ಆರ್ ಯು ಎಂಬ ಮಕ್ಕಳ ಕಥಾ ಕೃತಿ ವಿಭಿನ್ನವಾಗಿದ್ದು ಪುಸ್ತಕ ಪ್ರಶಸ್ತಿಗೆ ಆಯ್ಕೆಯಾಗಿದೆ. ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಶಂಕರ ಹಲಗತ್ತಿ, ಚಂದ್ರಗೌಡ ಕುಲಕರ್ಣಿ, ವಿವೇಕಾನಂದಗೌಡ ಪಾಟೀಲ, ಬಸವರಾಜ ಗಾರ್ಗಿ, ಮಲ್ಲಿಕಾರ್ಜುನ ಸೊಲಗಿ, ಡಾ. ನಿಂಗು ಸೊಲಗಿ ಇದ್ದರು. ಏ.25ರಂದು ಧಾರವಾಡ ವಿದ್ಯಾವರ್ಧಕ ಸಂಘದ ರಾ.ಹ. ದೇಶಪಾಂಡೆ ಸಭಾಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದೆ.

ಇಂದು ಮೆರವಣಿಗೆ

ಗದಗ: ಏ.14ರಂದು ಡಾ.ಬಿ.ಆರ್ ಅಂಬೇಡ್ಕರ್ ಅವರ 135ನೇ ಜಯಂತಿ ಹಾಗೂ ಡಾ.ಬಾಬು ಜಗಜೀವನ ರಾಂ ಅವರ 119ನೇ ಜನ್ಮದಿನಾಚರಣೆಯ ನಿಮಿತ್ತ ಬೆಳಗ್ಗೆ 9ಕ್ಕೆ ಗದಗ ಬೆಟಗೇರಿ ನಗರಸಭೆ ಆವರಣದಿಂದ ಮೆರವಣಿಗೆ ಗಾಂಧಿ ಸರ್ಕಲ್, ಮಹೇಂದ್ರಕರ ಸರ್ಕಲ್, ಟಾಂಗಾ ಕೂಟ್, ಬಸವೇಶ್ವರ ಸರ್ಕಲ್, ಜೋಡುಮಾರುತಿ ದೇವಸ್ಥಾನ, ಪ್ರವಾಸಿ ಮಂದಿರ, ಮುಳಗುಂದ ನಾಕಾ ಮುಖಾಂತರ ಡಾ.ಬಿ.ಆರ್. ಅಂಬೇಡ್ಕರ್ ಭವನವನ್ನು ಮಧ್ಯಾಹ್ನ 12ಕ್ಕೆ ತಲುಪಲಿದೆ. ನಂತರ ವೇದಿಕೆ ಕಾರ್ಯಕ್ರಮ ಜರುಗಲಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಉಪನ್ಯಾಸ

ಗದಗ: ನಗರದ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯಾಲಯದಲ್ಲಿ ಏ.14 ರಂದು ಬೆಳಗ್ಗೆ 11ಕ್ಕೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ವೈರಾಗ್ಯನಿಧಿ ಅಕ್ಕಮಹಾದೇವಿ ಕುರಿತು ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ. ಅಧ್ಯಕ್ಷತೆ ಕೆ.ಎ. ಬಳಿಗೇರ ವಹಿಸುವರು. ಡಾ.ರಶ್ಮಿ ಅಂಗಡಿ, ಪ್ರೊ. ಪ್ರಕಾಶ ತಳವಾರ ಉಪನ್ಯಾಸ ಮಾಡುವರು. ಸುಧಾ ಹುಚ್ಚಣ್ಣವರ ಉಪಸ್ಥಿತರಿರುವರು ಎಂದು ಸಂಘಟಿಕರ ಪರವಾಗಿ ಬೂದಪ್ಪ ಅಂಗಡಿ ತಿಳಿಸಿದ್ದಾರೆ.



ಹಾವೇರಿ: ಎಸ್ಪಿ ಕಚೇರಿಯಲ್ಲಿ ಸೋಮವಾರ ಮೊಬೈಲ್ ಕಳೆದುಕೊಂಡಿದ್ದವರಿಗೆ ಪತ್ತೆ ಮಾಡಿದ ಮೊಬೈಲ್‌ಗಳನ್ನು ಎಸ್ಪಿ ಯಶೋಧಾ ವಂಟಗೋಡಿ ಹಸ್ತಾಂತರಿಸಿದರು.

ಪಿಯು ಫಲಿತಾಂಶ: ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳ ಉತ್ತಮ ಸಾಧನೆ

ಬಂಕಾಪುರ: ನಾರಾಯಣಪೂರ ಸರ್ಕಾರಿ ಪದವಿ ಪೂರ್ವ ಕಾಲೇಜಿನ 2025-26 ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆಯಲ್ಲಿ 93.33% ಫಲಿತಾಂಶ ಬಂದಿದ್ದು, 9 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲಿ, 27 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ, ಹಾಗೂ 3 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಮಹೇಶ್ವರಿ ಹೊನ್ನಣ್ಣವರ, (92.83%) ಕಾವ್ಯಾ ವಿ ಗಿರ್ಜಿ ಹಾಗೂ ಸೌಜನ್ಯ ಬಮ್ಮನಗೌಡ್ರ, ಸಮವಾಗಿ (91.83%) ಹೇಮಾವತಿ ಸಣ್ಣ ಬಸಪ್ಪನವರ ಹಾಗೂ ನಾಗವೇಣಿ ನಿಕಂ (91.17%) ಅಕ್ಷತಾ ಹೊನ್ನಣ್ಣವರ (88.83%) ಪಡೆದಿದ್ದಾರೆ.

ಕಲಾ ವಿಭಾಗದಲ್ಲಿ ಭಾವನಾ ತಂಡೂರ 522 ಅಂಕಗಳು, ನಿರಂಜನ ಶಿಗ್ಗಾವಿ 519 ಸ್ವಪ್ನಾ ಕೋಲಕಾರ 517 ಅಂಕ ಪಡೆದಿದ್ದು ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಕಾಲೇಜು ಉಪನ್ಯಾಸಕರು ಹಾಗೂ ಮಕ್ಕಳ ಪಾಲಕರು, ಗ್ರಾಮಸ್ಥರು ಕಾಲೇಜು ಪ್ರಾ. ಗುಲ್ಜಾರ ಯಾಸ್ಮಿನ್, ಉಪನ್ಯಾಸಕರಾದ ಸವಿತಾ ದೊಡ್ಮನಿ, ಸಂತೋಷ ಬಡಿಗೇರ ಉಮೇಶ ಹೊನ್ನಣ್ಣವರ, ಸತೀಶ ಎನ್.ಭಾರತಿ ಪವಾಡಿ ಹಾಗೂ ರಾಜು ಕುರಗೋಡಿ ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದ್ದಾರೆ.



ಸಿದ್ದಾಪುರ: ಕ್ಷೇತ್ರದಲ್ಲಿ ಬಾಲ ಭಾರತೀ ಸಂಘಟನೆ ಆಯೋಜಿಸಿರುವ ಸಂಸ್ಕಾರ ಸುಧಾಮಕ್ಕಳ ಶಿಬಿರದ ಸಂದರ್ಭದಲ್ಲಿ ಅನಂತ ಯಕ್ಷಕಲಾ ಪ್ರತಿಷ್ಠಾನದವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಧನ ಸಹಾಯ ಯೋಜನೆಯ ಸಹಯೋಗದಲ್ಲಿ ಸಂಘಟಿಸಿದ್ದ ಪ್ರಥಮ ಪ್ರಯೋಗ ಏಕ ವ್ಯಕ್ತಿ ಪ್ರದರ್ಶನ ಯಕ್ಷರಾಮ ಕಥಾ ಕಾರ್ಯಕ್ರಮವನ್ನು ಶ್ರೀ ಬ್ರಹ್ಮಾನಂದ ಭಾರತೀ ಶ್ರೀಗಳು ಉದ್ಘಾಟಿಸಿದರು.

ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಸೂಚನೆ

ರಸಗೊಬ್ಬರ ಸಮರ್ಪಕ ಪೂರೈಕೆಯಾಗಲಿ

ಹಾವೇರಿ: ಮುಂಬರುವ ಪೂರ್ವ ಮುಂಗಾರು ಹಾಗೂ ಮುಂಗಾರಿನಲ್ಲಿ ತಾಲೂಕಿನಲ್ಲಿ ಯಾವುದೇ ರೀತಿಯಲ್ಲಿ ರಸಗೊಬ್ಬರದ ಕೊರತೆಯಾಗಬಾರದು. ದಾಸ್ತಾನಿದೆ ಎಂಬ ನೆಪ ಹೇಳದೆ ರಸಗೊಬ್ಬರ, ಬೀಜ, ಕೀಟನಾಶಕಗಳ ಸಮರ್ಪಕ ಪೂರೈಕೆಯಾಗಬೇಕು, ತಾಲೂಕಿನ 35 ಸೊಸೈಟಿಗಳಿಗೆ ಪ್ರಥಮ ಆದ್ಯತೆ ನೀಡಿ ಎಂದು ವಿಧಾನಸಭೆ ಉಪಸಭಾಧ್ಯಕ್ಷ, ಶಾಸಕ ರುದ್ರಪ್ಪ ಲಮಾಣಿ ಕೃಷಿ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ತಾಲೂಕ ಪಂಚಾಯಿತಿ ಸಾಮರ್ಥ್ಯ ಸೌಧದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ತಾಲೂಕ ಮಟ್ಟದ ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ರೈತರ ಬೇಡಿಕೆಗಿಂತಲೂ ಹೆಚ್ಚುವರಿ ದಾಸ್ತಾನು ಮಾಡಿಟ್ಟುಕೊಳ್ಳಿ ಎಂದರು.

ಕೃಷಿ ಇಲಾಖೆ ಸಹಾಯಕ ನಿರ್ದೇಶಕ ವೀರಭದ್ರಪ್ಪ ಮಾತನಾಡಿ, ತಾಲೂಕಿನಲ್ಲಿ 20,471 ಮೆಟ್ರಿಕ್ ಟನ್ ಗೊಬ್ಬರಕ್ಕೆ ಬೇಡಿಕೆ ಇದೆ. ಕಾಂಪ್ಲೆಕ್ಸ್ ಗೊಬ್ಬರದ ಸಮಸ್ಯೆ ಇಲ್ಲ, 7048 ಟನ್ ಈವರೆಗೆ ಪೂರೈಸಲಾಗಿದೆ. ಯೂರಿಯಾ 8,400 ಮೆ. ಟನ್ ಬೇಡಿಕೆ ಇದ್ದು, 1,594 ಟನ್ ದಾಸ್ತಾನಿದೆ. ಏಪ್ರಿಲ್ ಮೊದಲ ವಾರದಲ್ಲಿ 1,227 ಟನ್ ಖರೀದಿ ಮಾಡಿದ್ದಾರೆ ಎಂದು ವಿವರಿಸಿದರು.

ಕೆಸಿಸಿ ಬ್ಯಾಂಕಿನ ನಿರ್ದೇಶಕ ಕೊಟ್ರೇಶಪ್ಪ ಬಸೇಗಣ್ಣಿ ಮಾತನಾಡಿ, ರಸಗೊಬ್ಬರ ಸ್ಟಾಕ್ ಇದೆ ಎಂದು ಸುಮ್ಮನೇ ಕೂಡ್ರದಿರಿ. ಈಗಾಗಲೇ ಒಂದೆರಡು ಮಳೆ ಆಗಿದ್ದು, ರೈತರು ಭೂಮಿ ಸಿದ್ದತೆ ಮಾಡಿಕೊಳ್ಳುತ್ತಿದ್ದಾರೆ. ನೀರಾವರಿ ಇದ್ದವರು ಸದ್ಯ ಕಬ್ಬು, ಮೆಣಸಿನಗಿಡ, ಹತ್ತಿ ಬೆಳೆ ಹಾಕಿದ್ದಾರೆ. ಇವರಿಗೆ ಯೂರಿಯಾ ಬೇಕಾಗಿದೆ. ತಾಲೂಕಿನಲ್ಲಿರುವ 35 ಸೊಸೈಟಿಗಳಿಗೆ ಪ್ರಥಮ ಆದ್ಯತೆ ನೀಡಿ ರಸಗೊಬ್ಬರ ಪೂರೈಸಿ ಎಂದು ಒತ್ತಾಯಿಸಿದರು.



ಅಧಿಕಾರಿಗಳಿಗೆ ಸೂಚನೆ

ಕಾಲುವೆ ಸ್ವಚ್ಛ ಮಾಡದಿದ್ರೆ ನಿದ್ದೆ ಮಾಡೋಕೆ ಬಿಡಲ್ಲ: ಸಭೆಯಲ್ಲಿದ್ದ ತಹಸೀಲ್ದಾರ ಶರಣಮ್ಮ ಕೆ. ಅವರು ಶಾಸಕರ ಅನುಮತಿಯೊಂದಿಗೆ ತಾಲೂಕಿನಲ್ಲಿರುವ ಯುಟಿಪಿ ಕಾಲುವೆ, ಚಾನೆಲ್, ಹಳ್ಳಗಳಲ್ಲಿ ಬೆಳೆದ ಜಂಗಲ್‌ನ್ನು ಅಧಿಕಾರಿಗಳು ಸ್ವಯಂಪ್ರೇರಿತರಾಗಿ ಕಟಾವು ಮಾಡಿಸಬೇಕು ಹಾಗೂ ಮಣ್ಣು, ಕಲ್ಲು ಹೂಳೆತ್ತುವಂತೆ ತುಂಗಾ ಮೇಲ್ದಂಡೆ ಯೋಜನೆ, ಸಣ್ಣ ನೀರಾವರಿ ಇಲಾಖೆ ಹೀಗೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಹಾವೇರಿ ವಿಧಾನಸಭಾ ಕ್ಷೇತ್ರದಲ್ಲಿ ಮೇ ಅಂತ್ಯದೊಳಗೆ 12ಕ್ಕೂ ಹೆಚ್ಚು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ. ಈ ಗ್ರಾಮಗಳಲ್ಲಿ ಖಾಸಗಿ ಬೊರವೆಲ್ ಮೂಲಕ ನೀರು ಪೂರೈಸಲು ಸಿದ್ಧತೆ ಮಾಡಿಕೊಂಡಿದ್ದೇವೆ ಎಂದು ಗ್ರಾಮೀಣ ಕುಡಿವ ನೀರು ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು. ಶುದ್ಧ ಕುಡಿವ ನೀರು ಘಟಕ ಸ್ಥಗಿತಗೊಂಡಿರುವ ಗ್ರಾಮಗಳ ಬಗ್ಗೆ ಮಾಹಿತಿ ಕೇಳಿದ ಶಾಸಕರು, ಸುಮಾರು 20 ಘಟಕಗಳು ಬಂದ್ ಆಗಿವೆ ಎಂದಾಗ, ಇಲಾಖೆಯಲ್ಲಿ ಅನುದಾನವಿದ್ದರೆ ದುರಸ್ಥಿ ಮಾಡಿಸಿ, ನಿರ್ವಹಣೆಗೆ ಗ್ರಾಪಂ ಅಥವಾ ಏಜೆನ್ಸಿಯವರಿಗೆ ಕೊಡಿ. ಇಲ್ಲವಾದರೆ ಗ್ರಾಪಂ, ಏಜೆನ್ಸಿಯವರನ್ನು ಕರೆದು ಸಭೆ ಮಾಡಿ, ನಿರ್ವಹಣೆಗೆ ಹಸ್ತಾಂತರ ಮಾಡಿ ಎಂದರು.

> ಇತ್ತೀಚೆಗೆ ಗಲ್ಫ್ ರಾಷ್ಟ್ರಗಳಲ್ಲಿ ಯುದ್ಧ ನಡೆಯುತ್ತಿದ್ದು, ಕಚ್ಚಾ ಸಾಮಗ್ರಿಗಳು ಸಿಗದ ಕಾರಣ ಬರುವ ದಿನಗಳಲ್ಲಿ ರಸಗೊಬ್ಬರ ಅಭಾವ ಸೃಷ್ಟಿಯಾಗಲಿದೆ. ಅಂತಹ ವದಂತಿಗಳಿಗೆ ಆಸ್ಪದ ನೀಡದೇ ಶೀಘ್ರದಲ್ಲಿ ಜಂಟಿ ಕೃಷಿ ನಿರ್ದೇಶಕರು, ಜಿಲ್ಲಾಧಿಕಾರಿಗಳ ಜತೆಗೆ ಚರ್ಚಿಸಿ ಸಮರ್ಪಕ ಗೊಬ್ಬರ ಪೂರೈಸಿ.
> ■ ರುದ್ರಪ್ಪ ಲಮಾಣಿ, ಶಾಸಕ

ತಾಲೂಕ ಮಟ್ಟದ ತ್ರೈಮಾಸಿಕ ಕೆಡಿಪಿ ಸಭೆ ಇದ್ದರೂ ಸಹಿತ ಹಲವಾರು ಬಾರಿ ದೂರವಾಣಿ ಕರೆ ಮಾಡಿದರೂ ಸಭೆಗೆ ಹಾಜರಾಗದೆ ಗೈರಾದ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡುವಂತೆ ಶಾಸಕ ರುದ್ರಪ್ಪ ಲಮಾಣಿ ತಾಪಂ ಇಒ ಪರಮೇಶ ಹುಬ್ಬಳ್ಳಿ ಅವರಿಗೆ ಸೂಚಿಸಿದರು.

ಉಳಿದಂತೆ ಲೋಕೋಪಯೋಗಿ, ಶಿಕ್ಷಣ ಇಲಾಖೆ, ಪಂಚಾಯತ್‌ರಾಜ್ ಇಂಜನೀಯರಿಂಗ್ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿದರು. ತಾಪಂ ಆಡಳಿತಾಧಿಕಾರಿ ಮೋಹನ್ ದಂಡಿನ, ಬಸವೇಶಗೌಡ ಪಾಟೀಲ ಸೇರಿದಂತೆ ತಾಲೂಕಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಮನೆ ಹಕ್ಕುಪತ್ರ ವಿತರಿಸಿದ ಶಾಸಕ

ಹಾನಗಲ್ಲ: ಸ್ವಂತ ಮನೆಯಲ್ಲಿದ್ದರೂ ದಾಖಲೆಗಳಿಲ್ಲದ ಕಾರಣ ಯಾವುದೇ ಸಮಯದಲ್ಲಿ ಒಕ್ಕಲೇಳುವ ಭಯದಲ್ಲಿದ್ದ ತಾಲೂಕಿನ 13 ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಭೂ ಗ್ಯಾರಂಟಿ ಮೂಲಕ ನೆಮ್ಮದಿಯಿಂದ ಬದುಕು ನಡೆಸಲು ಅಧಿಕೃತ ದಾಖಲೆ ನೀಡಿ ಮನೆ ಹಕ್ಕುಪತ್ರ ಒದಗಿಸಲಾಗುತ್ತಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಚಿಕ್ಕಾಂಶಿ ಹೊಸೂರು ಗ್ರಾಮದಲ್ಲಿ ತಾಲೂಕಾಡಳಿತದಿಂದ ಚಿಕ್ಕಾಂಶಿ ಹೊಸೂರು, ಕ್ಯಾಸನೂರು ಹಾಗೂ ಮತ್ತಿಹಳ್ಳಿ ಗ್ರಾಮಗಳ 450 ಕ್ಕೂ ಹೆಚ್ಚು ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಿ, ಮಾತನಾಡಿ, ಈಗಾಗಲೇ ತಾಲೂಕಿನ 8 ಸಾವಿರ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸುವ ಕಾರ್ಯ ಚಾಲನೆ ಪಡೆದಿದೆ. ಇನ್ನೂ ನಾಲ್ಕೈದು ಸಾವಿರ ಕುಟುಂಬಗಳಿಗೆ ಹಕ್ಕುಪತ್ರ ಒದಗಿಸುವ ಕಾರ್ಯದಲ್ಲಿ ತಾಲೂಕಾಡಳಿತ ಅತ್ಯಂತ ಕಾಳಜಿಯಿಂದ ಕೆಲಸ ಮಾಡುತ್ತಿದೆ ಎಂದರು.

ತಾಲೂಕು ತಹಶೀಲ್ದಾರ್ ರೇಣುಕಾ ಎಸ್. ಮಾತನಾಡಿ, ಮನೆ ಇದ್ದರೂ ಅದರ ಹಕ್ಕಿಗಾಗಿ ಕಾಯಬೇಕಾದ ಫಲಾನುಭವಿಗಳಿಗೆ ಈಗ ಹಕ್ಕುಪತ್ರ ನೀಡಲಾಗುತ್ತಿದೆ. ಮನೆ ಮೇಲೆ ತಮ್ಮ ಹಕ್ಕು ಪ್ರತಿಪಾದಿಸಿ ಹಲವು ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗಿದ್ದು, ಇಡೀ ರಾಜ್ಯದಲ್ಲಿಯೇ ಅತೀ ಹೆಚ್ಚು ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಿದ ಶ್ರೇಯಸ್ಸು ಹಾನಗಲ್ಲ ತಾಲೂಕಿನದ್ದು ಎಂದರು.

> ಪ್ರಸ್ತುತ ಅವಧಿಯಲ್ಲಿ 30 ಕೋಟಿ ರೂ. ವೆಚ್ಚದಲ್ಲಿ ಗ್ರಾಮೀಣ ರಸ್ತೆ ಸುಧಾರಣೆ ಕಾಮಗಾರಿ ಚಾಲ್ತಿಯಲ್ಲಿವೆ. ಇನ್ನೂ 20 ಕೋಟಿ ರೂ. ಅನುದಾನ ಗ್ರಾಮೀಣ ರಸ್ತೆ ಕಾಮಗಾರಿಗೆ ಬಿಡುಗಡೆಗೊಳ್ಳಲಿದೆ. ಅತಿ ಶೀಘ್ರ ಚಿಕ್ಕಾಂಶಿ ಹೊಸೂರು ಗ್ರಾಮದಲ್ಲಿ ಅಲ್ಪಸಂಖ್ಯಾತರ ವಸತಿ ಶಾಲೆ ಆರಂಭವಾಗಲಿದ್ದು, ಕಟ್ಟಡ ಕಾಮಗಾರಿಗೆ 16 ಕೋಟಿ ರೂ. ಬಿಡುಗಡೆಯಾಗಿದೆ.
> ■ ಶ್ರೀನಿವಾಸ ಮಾನೆ, ಶಾಸಕ

ತಾಪಂ ಮಾಜಿ ಅಧ್ಯಕ್ಷ ಸಿದ್ದನಗೌಡ ಪಾಟೀಲ, ಕೆಪಿಸಿಸಿ ಸದಸ್ಯರಾದ ಟಾಕನಗೌಡ ಪಾಟೀಲ, ಖ್ವಾಜಾಮೊಹಿದ್ದೀನ್ ಜಮಾದಾರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹನುಮಂತಪ್ಪ ಮರಗಡಿ, ಮಂಜು ಗೊರಣ್ಣನವರ, ಮುಖಂಡರಾದ ಈರಣ್ಣ ಬೈಲವಾಳ, ವೀರಭದ್ರಗೌಡ ಪಾಟೀಲ, ಶಿವಾನಂದಪ್ಪ ಈಳಿಗೇರ, ಹರೀಶ ಈಳಿಗೇರ, ಮಲ್ಲಿಕಾರ್ಜುನಗೌಡ ಪಾಟೀಲ, ಸದಾಶಿವಗೌಡ ಪಾಟೀಲ, ನಾಗರಾಜ ಗಾಜೀಪುರ, ಹರೀಶ ಈಳಿಗೇರ, ರಾಜೇಂದ್ರ ರಡ್ಡೇರ, ರಾಜಕುಮಾರ ಜೋಗಪ್ಪವರ, ಮಾರ್ತಾಂಡಪ್ಪ ಮಣ್ಣಮ್ಮನವರ, ಮಾರುತಿ ಕಮಾಟಿ ಮತ್ತಿತರರಿದ್ದರು.



ಸೃಷ್ಟಿಕ್ರಿಯೆ ಕಾವ್ಯದ ಮೂಲಗುಣ

ರಾಣೆಬೆನ್ನೂರು: ಸೃಷ್ಟಿಕ್ರಿಯೆ ಎನ್ನುವುದು ಕಾವ್ಯದ ಮೂಲಗುಣ. ಸಿಟ್ಟು, ಆಕ್ರೋಶ, ನೋವು, ನಲಿವು ಉಂಟಾದಾಗ ಕಾವ್ಯ ಹುಟ್ಟಿಕೊಳ್ಳುತ್ತದೆ. ಲೋಕದ ಸಂಕಟ ತಲ್ಲಣ ಅನುಭವಗಳನ್ನು ಕಾವ್ಯಮಯವಾಗಿಸುವನೇ ಕವಿ ಎಂದು ಶಿಗ್ಗಾವಿಯ ಹಿರಿಯ ಸಾಹಿತಿ ಶಕುಂತಲಾ ಹೇಳಿದರು.

ರಾಣೆಬೆನ್ನೂರು ನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾವೇರಿ ಜಿಲ್ಲಾ ಚಕೋರ ಸಾಹಿತ್ಯ ವಿಚಾರ ವೇದಿಕೆಯು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಕಾರದಲ್ಲಿ ಏರ್ಪಡಿಸಿದ್ದ ಜಿಲ್ಲಾಮಟ್ಟದ ಕವಿ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸುಮ್ಮನೆ ಬರೆದ ಸಾಲುಗಳು ಕವಿತೆಯಾಗಲಾರವು ಕವಿತೆ ಬರೆಯುವುದು ಒಂದು ಕಲೆ, ಬರೆದ ಕವಿತೆಯನ್ನು ವಾಚನ ಮಾಡುವ ಮೂಲಕ ಕೇಳುವರಿಗೆ ಮುಟ್ಟಿಸುವುದು ಒಂದು ಕಲೆ ಇಂಥ ಸಾಮರ್ಥ್ಯವನ್ನು ಮೈಗೂಡಿಸಿಕೊಳ್ಳ ಬೇಕೆಂದು ಸಲಹೆ ನೀಡಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯ ಸಂಚಾಲಕ ಡಾ.ಮಲ್ಲಿಕಾರ್ಜುನ ಮಾನ್ಪಡೆ ಜಿಲ್ಲಾಮಟ್ಟದ ಕವಿಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿ, ಕವಿಗಳು ತಮ್ಮ ಸೃಜನಶೀಲತೆಯ ಮೂಲಕ ಸಮಾಜದ ಸಮಸ್ಯೆಗಳು, ಸಂಸ್ಕೃತಿ ಮತ್ತು ಮೌಲ್ಯಗಳನ್ನು ಜನರಿಗೆ ತಲುಪಿಸುವ ಮಹತ್ವದ ಹೊಣೆಗಾರಿಕೆಯನ್ನು ಹೊಂದಿದ್ದಾರೆ. ಇಂದಿನ ಕಾಲಘಟ್ಟದಲ್ಲಿ ಸಾಹಿತ್ಯವು ಕೇವಲ ಮನರಂಜನೆಗೆ ಸೀಮಿತವಾಗದೇ, ಸಮಾಜ ಪರಿವರ್ತನೆಗೆ ದಾರಿದೀಪವಾಗಬೇಕು ಎಂದು ಅಭಿಪ್ರಾಯ ಪಟ್ಟರು.

ಹಾವೇರಿ ಜಿಲ್ಲಾ ಚಕೋರ ಸಾಹಿತ್ಯ ವಿಚಾರ ವೇದಿಕೆ ಜಿಲ್ಲಾ ಸಂಚಾಲಕ ಮಾರುತಿ ತಳವಾರ ಪ್ರಾಸ್ತಾವಿಕ ನುಡಿಗಳನಾಡಿದರು.

ಹಾವೇರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಲಿಂಗಯ್ಯ ಹಿರೇಮಠ ರಾಣೆಬೆನ್ನೂರು ತಾಪಂ ಮಾಜಿ ಅಧ್ಯಕ್ಷ ರೈತ ಮುಖಂಡ ರವೀಂದ್ರ ಗೌಡ ಪಾಟೀಲ್, ರಾಣೆಬೆನ್ನೂರು ಅಂಬೇಡ್ಕರ್ ಸೇವಾ ಸಂಸ್ಥೆಯ ಅಧ್ಯಕ್ಷ ಶ್ರೀಧರ್ ಚಲವಾದಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಕಸಾಪ ತಾಲೂಕ ಅಧ್ಯಕ್ಷ ಪ್ರಭಾಕರ್ ಶಿಗ್ಲಿ, ಶಿವಕುಮಾರ ಚನ್ನಪ್ಪನವರ ಶೇಖರ್ ಭಜಂತ್ರಿ ಮತ್ತಿತರರು ಉಪಸ್ಥಿತರಿದ್ದರು. ಜಿಲ್ಲೆಯ 25ಕವಿಗಳು ಕವಿತೆಗಳನ್ನು ವಾಚನ ಮಾಡಿದರು. ದ್ರಾಕ್ಷಾಯಿಣಿ ಉದಗಟ್ಟಿ ಅವರು ನಿರೂಪಿದರು, ರೇಖಾ ರಮಾಳದ ಸ್ವಾಗತಿಸಿದರು, ವಿನಾಯಕ ಬಾರ್ಕಿ ವಂದಿಸಿದರು.



210 ಮೊಬೈಲ್ ಫೋನ್ ಮರಳಿಸಿದ ಪೊಲೀಸರು

ಹಾವೇರಿ: ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರು ಕಳೆದುಕೊಂಡಿದ್ದ ಹಾಗೂ ಕಳ್ಳತನವಾಗಿದ್ದ 210 ಮೊಬೈಲ್ ಫೋನ್‌ಗಳನ್ನು ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್ (ಸಿಇಐಆರ್) ಪೋರ್ಟ್‌ಲ್ ಸಹಾಯದಿಂದ ಪೊಲೀಸರು ಪತ್ತೆ ಹಚ್ಚಿದ್ದಾರೆ.

ಜಿಲ್ಲೆಯಲ್ಲಿ ಕಳುವಾಗಿದ್ದ ಹಾಗೂ ಕಾಣೆಯಾಗಿದ್ದ ಮೊಬೈಲ್‌ಗಳ ಪತ್ತೆಗಾಗಿ ಕೈಗೊಂಡ ವಿಶೇಷ ಕಾರ್ಯಾಚರಣೆಯಲ್ಲಿ ಮಹತ್ವದ ಸಾಧನೆಯಾಗಿದ್ದು, ಜಿಲ್ಲಾ ಪೊಲೀಸ್ ಇಲಾಖೆಯು ಒಟ್ಟು 42ಲಕ್ಷ ರೂ. ಮೌಲ್ಯದ 210 ಮೊಬೈಲ್‌ಗಳನ್ನು ಪತ್ತೆಹಚ್ಚಿ ವಶಪಡಿಸಿಕೊಂಡಿದ್ದು ದಕ್ಷಿಣ ಭಾರತದಲ್ಲಿಯೇ ನಿಗದಿತ ಅವಧಿಯಲ್ಲಿ ಅತೀ ಹೆಚ್ಚು ಮೊಬೈಲ್ ರಿಕವರಿ ಆದ ಜಿಲ್ಲೆ ಎಂಬ ಖ್ಯಾತಿಗೆ ಪಾತ್ರವಾಗಿದೆ.

2023ರ ಜನವರಿ 1ರಿಂದ 13 ಏಪ್ರಿಲ್ 2026ರವರೆಗೆ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ಕಳವು ಹಾಗೂ ಕಾಣೆಯಾಗಿರುವ ಮೊಬೈಲ್ ಪ್ರಕರಣಗಳ ಆಧಾರದ ಮೇಲೆ ಶೋಧ ಕಾರ್ಯ ನಡೆಸಲಾಯಿತು. ಈ ಅವಧಿಯಲ್ಲಿ ಕಳೆದುಹೋಗಿದ್ದ ಮೊಬೈಲ್‌ಗಳನ್ನು ಪತ್ತೆಹಚ್ಚುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.



ತಾಂತ್ರಿಕ ನೆರವಿನಿಂದ ಕಾರ್ಯಾಚರಣೆ: ಮೊಬೈಲ್ ಪತ್ತೆಗೆ ಡಿಒಟಿ ಸಹಯೋಗದಲ್ಲಿ ಸಿಇಐಆರ್ ಪೋರ್ಟಲ್‌ನ್ನು ಬಳಸಲಾಗಿದೆ. ಈ ತಾಂತ್ರಿಕ ವ್ಯವಸ್ಥೆಯ ಮೂಲಕ ಕಳುವಾದ ಫೋನ್‌ಗಳ ಐಎಂಇಐ ಸಂಖ್ಯೆಗಳನ್ನು ಟ್ರ್ಯಾಕ್ ಮಾಡಿ, ಅವುಗಳನ್ನು ವಿವಿಧ ಸ್ಥಳಗಳಿಂದ ವಶಪಡಿಸಿಕೊಳ್ಳಲಾಗಿದೆ. ಈ ಕಾರ್ಯಾಚರಣೆ ಜಿಲ್ಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಮಹತ್ವದ ಹೆಜ್ಜೆಯಾಗಿ ಪರಿಣಮಿಸಿದ್ದು, ತಂತ್ರಜ್ಞಾನ ಬಳಕೆಯಿಂದ ಅಪರಾಧ ನಿಯಂತ್ರಣ ಸಾಧ್ಯವೆಂಬುದಕ್ಕೆ ಇದು ಉತ್ತಮ ಉದಾಹರಣೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಪತ್ತೆಯಾದ ಮೊಬೈಲ್‌ಗಳನ್ನು 13 ಏಪ್ರಿಲ್ 2026ರಂದು ಸಂಬಂಧಿಸಿದ ಮಾಲೀಕರಿಗೆ ಹಸ್ತಾಂತರ ಮಾಡುವ ಪ್ರಕ್ರಿಯೆ ಆರಂಭಿಸಲಾಗಿದೆ. ಹಲವು ಜನರು ತಮ್ಮ ಕಳೆದುಹೋದ ಮೊಬೈಲ್‌ಗಳನ್ನು ಮತ್ತೆ ಪಡೆಯುತ್ತಿರುವುದರಿಂದ ಸಂತೋಷ ವ್ಯಕ್ತಪಡಿಸಿದ್ದಾರೆ. ಜಿಲ್ಲಾ ಪೊಲೀಸ್ ಇಲಾಖೆ ಸಾರ್ವಜನಿಕರಿಗೆ ಮನವಿ ಮಾಡಿದ್ದು, ಮೊಬೈಲ್ ಕಳುವಾದ ತಕ್ಷಣವೇ ಸಮೀಪದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ, ಪೋರ್ಟಲ್‌ನಲ್ಲಿ ಮಾಹಿತಿ ನೀಡುವಂತೆ ಸಲಹೆ ನೀಡಿದೆ. ಇದರಿಂದ ಮೊಬೈಲ್‌ಗಳನ್ನು ಶೀಘ್ರವಾಗಿ ಪತ್ತೆಹಚ್ಚಲು ಸಾಧ್ಯವಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.


> ಜನ ನಿಬಿಡ ಸ್ಥಳಗಳಲ್ಲಿ ಸಾರ್ವಜನಿಕರು ಮೊಬೈಲ್ ಮತ್ತಿತರ ಬೆಲೆ ಬಾಳುವ ವಸ್ತುಗಳ ಬಗ್ಗೆ ಜಾಗ್ರತಿ ವಹಿಸಬೇಕು. ಒಂದೊಮ್ಮೆ ಕಳುವಾದರೆ, ತಡಮಾಡದೆ ಕೂಡಲೇ ಸಮೀಪದ ಪೊಲೀಸ್ ಠಾಣೆಯಲ್ಲಿ ದೂರು ನೀಡಬೇಕು. ದೂರು ನೀಡಲು ವಿಳಂಬ ಮಾಡಬಾರದು.
> ■ ಯಶೋಧಾ ವಂಟಗೋಡಿ, ಎಸ್‌ಪಿ, ಹಾವೇರಿ.

ವಿವಿಧ ತರಬೇತಿಗೆ ಅರ್ಜಿ ಆಹ್ವಾನ

ಹಾವೇರಿ: ಉತ್ತರ ಕನ್ನಡ ಜಿಲ್ಲೆ ಹಳಿಯಾಳ ಕೆನರಾ ಬ್ಯಾಂಕ್ ದೇಶಪಾಂಡೆ ಆರ್ ಸೆಟ್ ತರಬೇತಿ ಸಂಸ್ಥೆಯಲ್ಲಿ ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ ಮತ್ತು ಯುವತಿಯರಿಗೆ ಮೇ ಮಾಹೆಯಲ್ಲಿ ಬ್ಯೂಟಿಪಾರ್ಲರ್, ಹಪ್ಪಳ, ಉಪ್ಪಿನಕಾಯಿ ಮತ್ತು ಮಸಾಲಾ ಪೌಡರ್ ತಯಾರಿಕೆ ಉಚಿತ ತರಬೇತಿ ಆಯೋಜಿಸಿದೆ. ತರಬೇತಿಯು ಊಟ ಮತ್ತು ವಸತಿಯೊಂದಿಗೆ ಉಚಿತವಾಗಿರುತ್ತದೆ. ಅಭ್ಯರ್ಥಿಗಳು 18 ರಿಂದ 50ವರ್ಷದೊಳಗಿರಬೇಕು. ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ ಮತ್ತು ಯುವತಿಯರಿಗೆ ಆದ್ಯತೆ ನೀಡಲಾಗುವುದು. ಆಸಕ್ತ ಅಭ್ಯರ್ಥಿಗಳು ಏ.30ರೊಳಗಾಗಿ ತಮ್ಮ ಹೆಸರು, ವಿಳಾಸ ನೋಂದಾಯಿಸಲು ಕೆಳಕಂಡ ದೂರವಾಣಿ ಸಂಪರ್ಕಿಸಬಹುದು ಅಥವಾ ವೆಬ್‌ಸೈಟ್ https://rsrtihaliyal.org ನಲ್ಲಿ ಸಹ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆ, ಹಳಿಯಾಳ ಉತ್ತರ ಕನ್ನಡ ಜಿಲ್ಲೆ ಈ ವಿಳಾಸಕ್ಕೆ ಸಂಪರ್ಕಿಸಲು ಕೋರಲಾಗಿದೆ.

ಇಂದು ಡಾ.ಬಾಬೂಜಿ, ಡಾ.ಅಂಬೇಡ್ಕರ್ ಜಯಂತಿ

ಹಾವೇರಿ: ಜಿಲ್ಲಾಡಳಿತ, ಜಿಪಂ, ಸಮಾಜ ಕಲ್ಯಾಣ ಇಲಾಖೆ, ನಗರಸಭೆ ಹಾಗೂ ಪರಿಶಿಷ್ಟ ಜಾತಿ ಒಕ್ಕೂಟಗಳ ಸಹಯೋಗದಲ್ಲಿ ಹಸಿರು ಕ್ರಾಂತಿಯ ಹರಿಕಾರ, ಭಾರತದ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನರಾಮ್ ಅವರ 119ನೇ ಜನ್ಮ ದಿನಾಚರಣೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮ ಏ. 14ರಂದು ಬೆಳಗ್ಗೆ 11 ಗಂಟೆಗೆ ಹಾವೇರಿ ನಗರದ ಡಾ. ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜರುಗಲಿದೆ. ಇದಕ್ಕೂ ಮೊದಲು ಬೆಳಗ್ಗೆ 9 ಗಂಟೆಗಗೆ ನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಹಾಗೂ ಮಹಾನ್ ನಾಯಕರ ಭಾವಚಿತ್ರ ಮೆರವಣಿಗೆ ಹೊರಡಲಿದೆ.





ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ ಹಾಗೂ ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ ಅವರ ಗೌರವಾನ್ವಿತ ಉಪಸ್ಥಿತಿಯಲ್ಲಿ, ಜವಳಿ, ಕಬ್ಬು ಅಭಿವೃದ್ಧಿ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಾನಂದ ಪಾಟೀಲ ಅವರು ಉದ್ಘಾಟನೆ ನೆರವೇರಿಸಲಿದ್ದಾರೆ. ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಮಾಜಿ ಮುಖ್ಯ ಮಂತ್ರಿಗಳು ಹಾಗೂ ಸಂಸದರಾದ ಬಸವರಾಜ ಬೊಮ್ಮಾಯಿ ಅವರ ಗೌರವ ಉಪಸ್ಥಿತಿಯಲ್ಲಿ, ಶಾಸಕರು ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷರಾದ ರುದ್ರಪ್ಪ ಮಾನಪ್ಪ ಲಮಾಣಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಬ್ಯಾಡಗಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ, ಹೆಸ್ಕಾಂ ಅಧ್ಯಕ್ಷ ಅಜೀಮಪೀರ್ ಖಾದ್ರಿ, ಕರ್ನಾಟಕ ರಾಜ್ಯ ಗ್ಯಾರಂಟಿ ಪ್ರಾಽಕಾರ ಉಪಾಧ್ಯಕ್ಷ ಎಸ್.ಆರ್. ಪಾಟೀಲ, ಕರ್ನಾಟಕ ಗಡಿ ಪ್ರದೇಶದ ಅಭಿವೃದ್ಧಿ ಪ್ರಾಽಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ವಿಧಾನ ಪರಿಷತ್ ಶಾಸಕರಾದ ಪ್ರೊ. ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ, ಶಾಸಕರಾದ ಶ್ರೀನಿವಾಸ ಮಾನೆ, ಯು.ಬಿ. ಬಣಕಾರ, ಪ್ರಕಾಶ ಕೋಳಿವಾಡ, ಯಾಸೀರ ಅಹ್ಮದಖಾನ್ ಪಠಾಣ, ನಗರಾಭಿವೃದ್ಧಿ ಪ್ರಾಽಕಾರದ ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಽಕಾರ ಅಧ್ಯಕ್ಷ ಎಂ.ಎಂ. ಹಿರೇಮಠ ಹಾಗೂ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಽಕಾರದ ಅಧ್ಯಕ್ಷ ಎಂ.ಎಂ. ಮೈದೂರ ಅವರು ಭಾಗವಹಿಸಲಿದ್ದಾರೆ.

ಸಾಹಿತಿ ಹಾಗೂ ನಿವೃತ್ತ ಮುಖ್ಯೋಪಾಧ್ಯಾಯ ಹನುಮಂತಗೌಡ ಗೊಲ್ಲರ ಅವರು ಡಾ.ಬಿ.ಆರ್.ಅಂಬೇಡ್ಕರ್ ಕುರಿತು ಹಾಗೂ ಶಿಕ್ಷಕ ಮಹದೇವಪ್ಪ ಕರಿಯಣ್ಣನವರ ಅವರು ಡಾ.ಬಾಬು ಜಗಜೀವನರಾಮ್ ಅವರ ಕುರಿತು ಉಪನ್ಯಾಸ ನೀಡಲಿದ್ದಾರೆ.

ಹೊಸ ಬಸ್‌ಗಳ ಸಂಚಾರಕ್ಕೆ ಚಾಲನೆ



ಹಾವೇರಿ: ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾವೇರಿ ವಿಭಾಗದ ವತಿಯಿಂದ ಹಾವೇರಿ-ಬೆಂಗಳೂರು, ಹುಬ್ಬಳ್ಳಿ-ಹಾವೇರಿ-ಬೆಂಗಳೂರು ಹಾಗೂ ದಾವಣಗೆರೆ-ಹಾವೇರಿ-ಪಣಜಿ ಮಾರ್ಗದಲ್ಲಿ ಕಾರ್ಯಾಚರಣೆಯಲ್ಲಿರುವ ಸಾರಿಗೆಗಳಿಗೆ ಹೊಸ ಬಸ್‌ಗಳ ಸಂಚಾರಕ್ಕೆ ಉಪ ಸಭಾಪತಿ, ಶಾಸಕ ರುದ್ರಪ್ಪ ಲಮಾಣಿ ಸೋಮವಾರ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಎಂ.ಎಂ. ಹಿರೇಮಠ, ತಾಲೂಕಾಧ್ಯಕ್ಷ ಎಂ.ಎಂ. ಮೈದೂರು, ಕೆಸಿಸಿ ಬ್ಯಾಂಕ್ ನಿರ್ದೇಶಕ ಕೊಟ್ರೇಶಪ್ಪ ಬಸೇಗಣ್ಣಿ, ಹಾವೆಮುಲ್ ನಿರ್ದೇಶಕ ಬಸವೇಶಗೌಡ ಪಾಟೀಲ, ಹಾವೇರಿ ವಿಭಾಗದ ವಿಭಾಗೀಯ ಸಾರಿಗೆ ಅಧಿಕಾರಿ ಅಶೋಕ ಪಾಟೀಲ್, ಹಾವೇರಿ ಘಟಕ ವ್ಯವಸ್ಥಾಪಕ ಪ್ರಶಾಂತ ಸಂಗ್ರೇಶಿ, ಸಂಚಾರ ನಿರೀಕ್ಷಕ ಟಿ.ಕೆ. ನದಾಫ್, ಕುಮಾರ ತೋಟಗೇರ, ಸಿಬ್ಬಂದಿ ಮೇಲ್ವಿಚಾರಕ ಹನುಮಂತ ಸಂಕ್ಲೀಪುರ, ಬಸ್ ನಿಲ್ದಾಣಾಧಿಕಾರಿ ಕೆ.ಎಂ. ಲಮಾಣಿ, ಬಿ.ಆರ್. ತಡಸದ ಹಾಗೂ ವಿಭಾಗದ ಚಾಲನಾ ಸಿಬ್ಬಂದಿ ಇದ್ದರು.

ಕಿರುಸುದ್ದಿ

ಶ್ರೀಗುಪ್ತಾದೇವಿ ಜಾತ್ರಾ ಮಹೋತ್ಸವ ನಾಳೆ

ಯಮಕನಮರಡಿ: ಸಮೀಪದ ಹಬ್ಬಾಳ ಗ್ರಾಮದ ಶ್ರೀಗುಪ್ತಾದೇವಿ ಜಾತ್ರಾ ಮಹೋತ್ಸವವು ಏ.15ರಿಂದ ಏ.18ರವರೆಗೆ ವಿಜೃಂಭಣೆಯಿಂದ ನಡೆಯಲಿದೆ. ಏ.15ರಂದು ರಾತ್ರಿ 8.21ಕ್ಕೆ ಸಕಲ ವಾದ್ಯಗಳೊಂದಿಗೆ ಗುಪ್ತಾದೇವಿಯ ಉಡಿ ತುಂಬುವ ಕಾರ್ಯಕ್ರಮ. ರಾತ್ರಿ ರೇಣುಕಾ ಯಲ್ಲಮ್ಮ ನಾಟಕ, ಏ.16ರಂದು ಶ್ರೀಗುಪ್ತಾದೇವಿಯ ನೈವದ್ಯ ಕಾಯಕ್ರಮ, ಏ.17 ರಂದು ಬೆಳಿಗ್ಗೆ ದಂಡವತ ಕಾಯಕ್ರಮ ಅಂಬಲಿ ಕೊಡಗಳ ಭವ್ಯ ಮೆರವಣಿಗೆ ಮಧ್ಯಾನ್ಹ ಮಹಾಪ್ರಸಾದ ಕಾಯಕ್ರಮ, ಏ.18 ರಂದು ಗ್ರಾಮಸ್ತರಿಂದ ಶ್ರೀಗುಪ್ತಾದೇವಿಗೆ ನೈವೆಧ್ಯ ಕಾಯಕ್ರಮ ಹಾಗೂ ಮುಂಜಾನೆ 8ಕ್ಕೆ ಹಲ್ಲು ಹಚ್ಚದ ಒಂದು ಹೋರಿ ಒಂದು ಕುದುರೆ ಗಾಡಿ ಶಯತ್ತು, ಒಂದು ಎತ್ತು ಒಂದು ಕುದುರೆ ಗಾಡಿ ಓಟ, 9 ಕ್ಕೆ ಜೋಡು ಕುದುರೆ ಗಾಡಿ ಓಟ,8:30 ಕ್ಕೆ ಜೋಡೆತ್ತಿನಗಾಡಿ ಓಟ, ರಾತ್ರಿ ಹೆಂಡತಿ ಟೂರಿಗೆ ಗಂಟಬಾರಿಗೆ ನಾಟಕ, ಹೆಚ್ಚಿನ ಮಾಹಿತಿಗಾಗಿ ಮೊ,ನಂ,7353145506 ಹಾಗೂ ಶ್ರೀಗುಪ್ತಾದೇವಿ ಜಾತ್ರಾ ಮಹೋತ್ಸವ ಸಮಿತಿಯವರನ್ನು ಸಂಪರ್ಕಿಸಲು ಕೋರಲಾಗಿದೆ.



ಕರ್ನಾಟಕ ಪರ ನಿರ್ಣಯ ಅಂಗೀಕಾರ ಕುರಿತು ಚರ್ಚೆ

ಬೆಳಗಾವಿ : ಏ.2ರಂದು ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಜರುಗಿದ ಕನ್ನಡ ಜಾಗೃತಿ ಸಮಿತಿಯ ಸಭೆಯಲ್ಲಿ ಕನ್ನಡ ಭವನದ ವಿಷಯ ಮತ್ತು ಪಾಲಿಕೆಯ ಸಭೆಯಲ್ಲಿ ಕರ್ನಾಟಕ ಪರವಾದ ನಿರ್ಣಯಗಳನ್ನು ಅಂಗಿಕರಿಸಬೇಕೆಂಬ ಕನ್ನಡ ಸಂಘಟನೆಗಳ ಒತ್ತಾಯದ ಬಗ್ಗೆ ಚರ್ಚೆಯಾಗಿದೆ. ಸಮಿತಿಯ ಸದಸ್ಯ ರಾಜಶೇಖರ ತಳವಾರ ಅವರು ಈ ನಿರ್ಣಯಗಳನ್ನು ಸಭೆಯಲ್ಲಿ ಮಂಡಿಸಿದ್ದಾರೆ.

ಪಾಲಿಕೆಯ ಜಾಗೆಯಲ್ಲಿ, ರಾಜ್ಯ ಸರ್ಕಾರದ ಅನುದಾನದಲ್ಲಿ ನೆಹರೂ ನಗರದಲ್ಲಿ ನಿರ್ಮಿಸಿದ ಕನ್ನಡ ಭವನವನ್ನು ಸರಕಾರದ ವಶಕ್ಕೆ ತೆಗೆದುಕೊಳ್ಳುವ ಸಂಬಂಧ ಮುಂದಿನ ಕ್ರಮ ಕೈಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. ಪಾಲಿಕೆಯ ಸಭೆಯಲ್ಲಿ ಕರ್ನಾಟಕ ಪರವಾಗಿ ಗೊತ್ತುವಳಿಗಳನ್ನು ಅಂಗಿಕರಿಸಲು ಮಹಾಪೌರರನ್ನು ವಿನಂತಿಸಲು ಸಭೆ ನಿರ್ಧರಿಸಿದೆ.



ಸ್ಪೂರ್ತಿಗೆ ಶೇ.98 ರಷ್ಟು ಅಂಕ

ನೇಸರಗಿ: ಇಲ್ಲಿನ ನಿವಾಸಿ ವೀರಣ್ಣ ಗೆಜ್ಜಿ ಇವರ ಪುತ್ರಿ ಸ್ಪೂರ್ತಿ ವೀರಣ್ಣ ಗೆಜ್ಜಿ ಇತ್ತೀಚೆಗೆ ನಡೆದ ದ್ವಿತೀಯ ಪಿಯುಸಿ ವಿಜ್ಞಾನ ಪರೀಕ್ಷೆಯಲ್ಲಿ ಶೇ.98 ಅಂಕ ಗಳಿಸಿದ್ದಾಳೆ. ಅವಳ ಈ ಸಾಧನೆಗೆ ಪಾಲಕರು ಹರ್ಷ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದಲ್ಲಿ ಸುರೇಶ ನಾವಲಗಟ್ಟಿ, ಅವಳ ಸಾಧನೆ ಇನ್ನೂ ಮುಂದುವರಿಯಲಿ ಎಂದು ಹಾರೈಸಿ, ಸತ್ಕರಿಸಿದ್ದಾರೆ. ಇವಳು ಕೊಣ್ಣೂರ ವಿಜ್ಞಾನ ಪದವಿ ಪೂರ್ವ ವಿದ್ಯಾಲಯ ಯಲ್ಲಟ್ಟಿ(ಬನಹಟ್ಟಿ) ಇಲ್ಲಿ ವಿದ್ಯಾಭ್ಯಾಸ ಮಾಡಿದ್ದು, ಕಾಲೇಜಿಗೆ ಐದನೇ ಸ್ಥಾನ ಪಡೆದಿದ್ದಾಳೆ. ಇಲ್ಲಿನ ಪ್ರಾಚಾರ್ಯರು, ಶಿಕ್ಷಕ ವೃಂದ ಅಭಿನಂದನೆಗಳನ್ನು ತಿಳಿಸಿದರು.



ಅಪರಿಚಿತ ವ್ಯಕ್ತಿ ಶವ ಪತ್ತೆ

ಹಿರೇಬಾಗೇವಾಡಿ : ಇಲ್ಲಿಯ ಎಪಿಎಂಸಿ ಸಂಕಿರ್ಣದ ಬಳಿ ಅಪರಿಚಿತ ವ್ಯಕ್ತಿ (55-60)ಶವ ಪೊಲೀಸರಿಗೆ ಭಾನುವಾರ ದೊರೆತಿದೆ. ಮೃತ ವ್ಯಕ್ತಿ ಶನಿವಾರದಿಂದ ಅಸ್ವಸ್ಥನಾಗಿ ಅಲ್ಲಿ ಬಿದ್ದಿದ್ದ ಎನ್ನಲಾಗಿದೆ. ತಿಳಿ ನೀಲಿ ಬಣ್ಣದ ಟೀ-ಶರ್ಟ್, ಜಿನ್ಸ್ ಪ್ಯಾಂಟ್ ಧರಿಸಿದ್ದು, 5.30 ಅಡಿ ಎತ್ತರ. ಸಾಧಾರಣ ಕಪ್ಪು ಮೈಬಣ್ಣ ಹೊಂದಿದ್ದಾನೆ. ತಲೆಯಲ್ಲಿ ಕಿರಿದಾದ ಕಪ್ಪು ಬಿಳಿ ಕೂದಲು. ಮೃತ ವ್ಯಕ್ತಿ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ ಹಿರೇಬಾಗೇವಾಡಿ ಪೊಲೀಸ್ ಠಾಣೆ ದೂ: 0831-2405280 ನ್ನು ಸಂಪರ್ಕಿಸಲು ತಿಳಿಸಿದ್ದಾರೆ.



ಅಳಗವಾಡಿ : ಗ್ರಾಮದಲ್ಲಿ ಕುಡಿಯುವ ನೀರಿನ ಅಭಾವ ಉಂಟಾದ ಹಿನ್ನೆಲೆಯಲ್ಲಿ ರಾಮಣ್ಣ ಶಿರಗೂರೆ ಅವರು ನೀರಿನ ಟ್ಯಾಂಕ್ ಮೂಲಕ ಜನರಿಗೆ ಉಚಿತವಾಗಿ ನೀರು ಸರಬರಾಜು ಮಾಡುವ ಮೂಲಕ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಜಿಲ್ಲಾದ್ಯಂತ ಮದ್ಯ ಮಾರಾಟ ನಿಷೇಧ ಇಂದು

ಬೆಳಗಾವಿ : ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆಯಂದು ಬೆಳಗಾವಿ ನಗರ ಮತ್ತು ತಾಲೂಕಿನಾದ್ಯಂತ ಮುಂಜಾಗ್ರತಾ ಕ್ರಮವಾಗಿ ಮದ್ಯ ಮಾರಾಟವನ್ನು ನಿಷೇಧಿಸಿ ಪೊಲೀಸ್ ಆಯುಕ್ತರು ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದಾರೆ. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಬೆಳಗಾವಿ ನಗರದಲ್ಲಿ ಏ.14 ರಂದು ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಆಚರಿಸಲಾಗುತ್ತಿದ್ದು, ಈ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಪೊಲೀಸ್ ಇಲಾಖೆ ಸನ್ನದ್ಧವಾಗಿದೆ. ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿ ಹಾಗೂ ಪೊಲೀಸ್ ಆಯುಕ್ತ ಬೊರಸೆ ಭೂಷಣ್ ಗುಲಬರಾವ್ ಅವರು ಕರ್ನಾಟಕ ಅಬಕಾರಿ ಕಾಯ್ದೆ ಮತ್ತು ಪೊಲೀಸ್ ಕಾಯ್ದೆಯಡಿ ತಮಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಅಂದು ಬೆಳಗಾವಿ ತಾಲೂಕಿನಾದ್ಯಂತ 'ಡ್ರೈ ಡೇ' ಘೋಷಿಸಿದ್ದಾರೆ.

ಏ. 14 ಇಂದು ಬೆಳಗ್ಗೆ 6 ಗಂಟೆಯಿಂದ ಮಧ್ಯರಾತ್ರಿ 12ಗಂಟೆಯವರೆಗೆ ಜಿಲ್ಲೆಯ ಎಲ್ಲಾ ಮದ್ಯದ ಅಂಗಡಿಗಳು, ವೈನ್ ಶಾಪ್ ಗಳು, ಬಾರ್ ಮತ್ತು ರೆಸ್ಟೋರೆಂಟ್ ಹಾಗೂ ಕ್ಲಬ್ಗಳನ್ನು ಕಡ್ಡಾಯವಾಗಿ ಮುಚ್ಚತಕ್ಕದ್ದು. ಅಲ್ಲದೆ ಕೆಎಸ್‌ಬಿಸಿಎಲ್ ಡಿಪೋಗಳಿಂದ ಮದ್ಯದ ಸರಬರಾಜನ್ನು ಕೂಡ ಸ್ಥಗಿತಗೊಳಿಸುವಂತೆ ಸೂಚಿಸಲಾಗಿದೆ. ಈ ಅವಧಿಯಲ್ಲಿ ಮದ್ಯ ಮಾರಾಟ ಅಥವಾ ಸಾಗಾಣಿಕೆ ಮಾಡುವುದು ಕಂಡುಬಂದಲ್ಲಿ ಸಂಬಂಧಪಟ್ಟವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಆಯುಕ್ತರು ಎಚ್ಚರಿಸಿದ್ದಾರೆ.



ಯಮಕನಮರಡಿ: ಸಮೀಪದ ಕೆಎಂ ನಾಗನೂರು ಗ್ರಾಮದಲ್ಲಿ ಇತ್ತೀಚೆಗೆ ಹೃದಯಾಘಾತದಿಂದ ನಿಧನರಾಗಿದ್ದ ಶಾಲಾ ಶಿಕ್ಷಕ ರವಿ ಅಗಸರವರ ಮನೆಗೆ ಸಚಿವ ಸತೀಶ ಜಾರಕಿಹೊಳಿ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ಅಪಾರ ಸಚಿವರ ಅಭಿಮಾನಿಗಳು ಉಪಸ್ಥಿತರಿದ್ದರು.

ಕುಡಿಯುವ ನೀರಿನ ಕೊರತೆಯಾಗದಂತೆ ಕ್ರಮ ವಹಿಸಿ: ಶಾಸಕ ಡಿ.ಎಂ.ಐಹೊಳೆ

ರಾಯಬಾಗ: ತಾಲೂಕಿನ ಪ್ರತಿ ಗ್ರಾಮಗಳಲ್ಲಿರುವ ಜನ-ಜಾನುವಾರುಗಳಿಗೆ ಬೇಸಿಗೆ ಮುಗಿಯುವವರೆಗೆ ನೀರಿನ ಅಭಾವ ಆಗದಂತೆ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ನೋಡಿಕೊಳ್ಳಬೇಕೆಂದು ಶಾಸಕ ಡಿ.ಎಂ. ಐಹೊಳೆ ಹೇಳಿದರು.



ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಕುಡಿಯುವ ನೀರಿನ ಟಾಸ್ಕ್ ಫೋರ್ಸ್ ಸಭೆಯಲ್ಲಿ ಮಾತನಾಡಿ, ಬೇಸಿಗೆ ಸಮಯದಲ್ಲಿ ಜನರಿಗೆ ಮತ್ತು ಜಾನುವಾರುಗಳಿಗೆ ಕುಡಿಯುವ ನೀರು ಒದಗಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ನೀರಿನ ಅಭಾವ ಇರುವ ಬಗ್ಗೆ ಪಿಡಿಒಗಳು ತಹಶೀಲ್ದಾರ್‌ರ ಗಮನಕ್ಕೆ ತಂದರೆ, ಟ್ಯಾಂಕರ್ ಮೂಲಕ ನೀರು ಒದಗಿಸಲು ಕ್ರಮ ಕೈಗೊಳ್ಳುತ್ತಾರೆ ಎಂದರು.

ಬೇಸಿಗೆ ಮುಗಿಯುವವರೆಗೆ ಹೆಸ್ಕಾಂ ಇಲಾಖೆಯವರು ಗ್ರಾಮ ಪಂಚಾಯತಿಯೊಂದಿಗೆ ಸಹಕಾರ ನೀಡಬೇಕೆಂದು ಶಾಸಕರು ಹೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು. ತಹಶೀಲ್ದಾರ್ ಮಹಾದೇವ ಸಣಮುರಿ ಮಾತನಾಡಿ, ತಾಲೂಕಿನ ಬಹುತೇಕ ಕೆರೆಗಳಲ್ಲಿ ನೀರು ಇರುವುದರಿಂದ ಹಾಗೂ ಸದ್ಯದಲ್ಲಿ ಎಲ್ಲ ಕಾಲುವೆಗಳಿಗೆ ನೀರು ಹರಿಸುವುದರಿಂದ ಈ ಬಾರಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿ ಉದ್ಭವಿಸುವುದಿಲ್ಲ, ಆದರೂ ಎಲ್ಲ ಪಿಡಿಒಗಳು ತಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಯ ಓಣಿಗಳಲ್ಲಿ, ತೋಟಪಟ್ಟಿಗಳಲ್ಲಿ ನೀರಿನ ಅಭಾವ ಕಂಡು ಬಂದರೆ ಮುಂಚಿತವಾಗಿ ತಮ್ಮ ಗಮನಕ್ಕೆ ತಂದರೆ, ಅದಕ್ಕೆ ಸೂಕ್ತ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.

ಕೆಲವೊಂದು ತೋಟಪಟ್ಟಿಗಳ ಹೊರತು ಪಡಿಸಿ, ಇನ್ನುಳಿದ ಕಡೆಗಳಲ್ಲಿ ಏಪ್ರೀಲ್ ಅಂತ್ಯದ ವರೆಗೆ ಕುಡಿಯುವ ನೀರಿನ ಅಭಾವ ಇರುವುದಿಲ್ಲ. ಕೃಷ್ಣಾ ನದಿ ತೀರದ ಗ್ರಾಮಗಳಲ್ಲಿ ನದಿ ನೀರು ಇರುವವರಿಗೆ ಕುಡಿಯುವ ನೀರಿನ ಅಭಾವ ಇರುವುದಿಲ್ಲ ಎಂದು ಎಂದು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

ಈ ವೇಳೆ ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ, ತಾಪಂ ಇಒ ಅರುಣ ಮಾಚಕನೂರ, ಪಿಡಬ್ಲ್ಯೂಡಿ ಎಇಇ ಆರ್.ಬಿ.ಮನುವಡ್ಡರ, ಪಿಎಸ್‌ಐ ಪ್ರಕಾಶ ಮಾನೆ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ವಿಠ್ಠಲ ಚಂದರಗಿ, ಕೃಷಿ ಅಧಿಕಾರಿ ವಿನೋದ ಮಾವರಕರ, ಹೆಸ್ಕಾಂ ಅಧಿಕಾರಿ ವೈ. ಎಸ್ ಸನಮನಿ, ಎಸ್.ಆರ್. ಮಾಂಗ, ವಿ.ಆರ್. ಭಜಂತ್ರಿ, ವಿ.ಆರ್. ಬಳ್ಳಾರಿ, ಕಲ್ಪನಾ ಕಾಂಬಳೆ, ಭಾರತಿ ಕಾಂಬಳೆ ಹಾಗೂ ತಾಲೂಕಾಧಿಕಾರಿಗಳು, ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು ಇದ್ದರು.

ಎಲ್ಲ ಸಮಾಜದವರು ಬಸವ ಜಯಂತಿಯಲ್ಲಿ ಪಾಲ್ಗೊಳ್ಳಿ: ಬಲರಾಮ

ಹುಕ್ಕೇರಿ: ಎಲ್ಲ ಸಮಾಜದವರು ಬಸವ ಜಯಂತಿಯಲ್ಲಿ ಪಾಲ್ಗೊಂಡು ಆಚರಿಸಬೇಕು. ಆಗ ಮಾತ್ರ ಬಸವೇಶ್ವರರ ತತ್ವ, ಆಚಾರ-ವಿಚಾರಗಳ ಪಾಲನೆ ಮಾಡಿದಂತಾಗುತ್ತದೆ ಎಂದು ತಹಶೀಲ್ದಾರ್ ಬಲರಾಮ ಕಟ್ಟಿಮನಿ ಹೇಳಿದರು.

ನಗರದ ತಹಶೀಲ್ದಾರ್ ಕಾರ್ಯಾಲಯದಲ್ಲಿ ಸೋಮವಾರ ನಡೆದ ಬಸವ ಜಯಂತಿ ಆಚರಣೆ ಕುರಿತು ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ತಾಲೂಕಾಡಳಿತದ ಅಧಿಕಾರಿಗಳು, ಮುಖಂಡರು ಈ ಸಭೆಗೆ ಬೆರಳೆಣಿಕೆಯಷ್ಟು ಆಗಮಿಸಿದ್ದು ವಿಷಾದಕರ ಎಂದರು. ಆದರಂತೆ ಬಸವ ಜಯಂತಿ ಆಚರಣೆ ಪೂರ್ವಭಾವಿ ಸಭೆಯಲ್ಲಿ ಎಲ್ಲರು ಭಾಗವಹಿಸಿ ತಮ್ಮ ಅಭಿಪ್ರಾಯ ತಿಳಿಸಿದ್ದು, ತಾಲೂಕಾಡಳಿತಕ್ಕೆ ಹರ್ಷ ತರುತ್ತಿತ್ತು ಎಂದರು.

ಮುಖಂಡರಾದ ಸುಭಾಸ ನಾಯಿಕ, ಭೀಮಾನಂದ ಮುದಕನ್ನವರ, ಸಂಜು ಹಾವಣ್ಣವರ, ರಾಮಗೌಡ ಪಾಟೀಲ ಮಾತನಾಡಿ, ಬೇರೆ ಜಯಂತಿಗಳ ಸಭೆಗಳಿಗೆ ಆಗಮಿಸುವ ಅಧಿಕಾರಿಗಳು ಬಸವ ಜಯಂತಿಯ ಸಭೆಗೆ ಆಗಮಿಸದಿರುವುದು ನಮಗೆ ನೋವು ತಂದಿದೆ. ಗೈರು ಹಾಜರಿದ್ದವರ ಮೇಲೆ ಸೂಕ್ತ ಕ್ರಮಕೈಗೊಳ್ಳಬೇಕು. ಕಾಟಾಚಾರಕ್ಕೆ ಎಚ್ಚರಿಕೆ ಪತ್ರ ಕಳುಹಿಸುವ ಬದಲಾಗಿ ಜಿಲ್ಲಾಡಳಿತಕ್ಕೆ ಗೈರಾದ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡುವಂತೆ ಒತ್ತಾಯಿಸಿದರು. ಏ.19ರಂದು ಬೆಳಿಗ್ಗೆ 9ಕ್ಕೆ ಸ್ಥಳೀಯ ಅಡವಿಸಿದ್ದೇಶ್ವರ ಮಠದ ಬಳಿ ತಾಲೂಕಾಡಳಿತದ ಸಹಯೋಗದಲ್ಲಿ ಎತ್ತುಗಳ ಮೆರವಣಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಏ.20ರಂದು ಸರ್ಕಾರಿ ಕಚೇರಿಗಳಲ್ಲಿ ಬಸವೇಶ್ವರರ ಭಾವಚಿತ್ರ ಪೂಜೆ ನೆರವೇರಿಸಿ ನಗರದ ಪ್ರಮುಖ ಬೀದಿಗಳಲ್ಲಿ ಬಸವೇಶ್ವರರ ಭಾವಚಿತ್ರದ ಮೆರವಣಿಗೆ ನಡೆಯಲಿದೆ ಎಂದರು.

ಈ ವೇಳೆ ಗ್ರೇಡ್-2 ತಹಶೀಲ್ದಾರ್ ಪ್ರಕಾಶ ಕಲ್ಲೋಳಿ, ಶಿರಸ್ತೆದಾರ ಅನಿತಾ ಎಸ್ಯಾಗೋಳ, ಅಧಿಕಾರಿಗಳಾದ ಆರ್.ಬಿ.ನಾಯ್ಕರ, ಪ್ರಶಾಂತ ಮುನ್ನೋಳಿ, ಗುರುಶಾಂತ ಪಾವಟೆ, ಹೊಳೆಪ್ಪ ಎಚ್., ಶೈಲಾ ಪಾಟೀಲ, ಅರ್ಜುನ ಮಸರಗುಪ್ಪಿ ಮುಖಂಡ ಭೀಮಪ್ಪ ಚೌಗಲಾ, ಪ್ರೇಮ ಚೌಗಲಾ, ಸಂಜು ಹಾವಣ್ಣವರ, ಆನಂದಜಿರಲಿ, ಕಬೀರ ಮಲೀಕ, ರವಿ ಪರಕನಟ್ಟಿ, ಪರಗೌಡ ಪಾಟೀಲ, ಬಿ.ಕೆ. ಸದಾಶಿವ ಇದ್ದರು. ಪ್ರಕಾಶ ಕಲ್ಲೋಳಿ ಸ್ವಾಗತಿಸಿದರು. ಬಸವರಾಜ ನಾಂದೂರಕರ ನಿರೂಪಿಸಿ, ವಂದಿಸಿದರು.



ಭೀಮ ಘರ್ಜನೆ ಕಾರ್ಯಕ್ರಮ ಇಂದು

ಚನ್ನಮ್ಮನ ಕಿತ್ತೂರ: ಸಮೀಪದ ಬೈಲೂರು ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ ಅವರ 135ನೇ ಜಯಂತಿ ಅಂಗವಾಗಿ ಏ.14ರಂದು ಸಂಜೆ 6ಕ್ಕೆ ಭೀಮ ಘರ್ಜನೆ ಕಾರ್ಯಕ್ರಮ ನಡೆಯಲಿದೆ ಯಮಕನಮರಡಿಯ ಹುಣಶಿಕೊಳ್ಳಮಠದ ಸಿದ್ದಬಸವ ದೇವರು ಸಾನಿಧ್ಯ ವಹಿಸಲಿದ್ದು, ಶಾಸಕ ಬಾಬಾಸಾಹೇಬ ಪಾಟೀಲ ಅಧ್ಯಕ್ಷತೆ ವಹಿಸುವರು, ಬೈಲಹೊಂಗಲ ಡಿಎಸ್‌ಪಿ ಡಾ. ವೀರಯ್ಯ ಹಿರೇಮಠ, ನಿವೃತ್ತ ಮುಖ್ಯ ಶಿಕ್ಷಕ ಶಂಕರ ದಂಡಿನ, ಸಮಾಜ ಸೇವಕ ಹಬೀಬ ಶಿಲೆದಾರ, ನಿವೃತ್ತ ಶಿಕ್ಷಕ ಮಹಾದೇವ ಗಿರಿಯಾಲ, ಪಿಡಿಒ ಈಶ್ವರ ಹಡಪದ, ಕಿತ್ತೂರು ಕಸಾಪ ತಾಲೂಕಾ ಘಟಕದ ಪ್ರಧಾನ ಕಾರ್ಯದರ್ಶಿ ವಿ.ಎಸ್. ನಂದಿಹಳ್ಳಿ, ಖಾನಾಪೂರ ತಾಲೂಕಾ ಕರವೇ ಅಧ್ಯಕ್ಷ ವಿಠ್ಠಲ ಹಿಂಡಲಕರ, ಮಾಜಿ ಜಿಪಂ ಸದಸ್ಯ ಅಶೋಕ ಛಲವಾದಿ ಹಾಗೂ ಪ್ರಕಾಶ ಶಿವಣ್ಣವರ, ಪಕ್ಕೀರಪ್ಪ ಜಾಂಗಟಿ, ಮಂಜುನಾಥ ಶಿಡ್ಲವ್ವಗೋಳ ಹಾಗೂ ಇತರರು ಭಾಗವಹಿಸಲಿದ್ದು, ಈ ನಿಮಿತ್ಯ ಕನ್ನಡ ಕೋಗಿಲೆ ವಿಜೇತ ಎಂ. ದೊಡ್ಡಪ್ಪ ತಂಡದಿಂದ ರಸಮಂಜರಿ ಕಾರ್ಯಕ್ರಮ ಮತ್ತು ಸನ್ಮಾನ ಸಮಾರಂಭ ನಡೆಯಲಿದೆ ಎಂದು ದಲಿತ ರಕ್ಷಣಾ ವೇದಿಕೆ ಜಿಲ್ಲಾ ಅಧ್ಯಕ್ಷ ಗಂಗಾಧರ ಮುಳಕೂರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜಶೇಖರ್ ಕೊಳ್ಳಿಮಠ ಅವರ ಪುಸ್ತಕ ಬಿಡುಗಡೆ

ಬೆಳಗಾವಿ : ಸ್ಥಳೀಯ ಸಪ್ನಾ ಬುಕ್ ಹೌಸ್ನಲ್ಲಿ ನಡೆದ ಭವ್ಯ ಸಮಾರಂಭದಲ್ಲಿ ಲೇಖಕ ರಾಜಶೇಖರ್ ಕೊಳ್ಳಿಮಠ ಅವರ ಇಂಗ್ಲಿಷ್ ಮೇಡ್ ಈಜಿ (English Made Easy) ಪುಸ್ತಕದ ತೃತೀಯ ಆವೃತ್ತಿಯನ್ನು ಯಶಸ್ವಿಯಾಗಿ ಲೋಕಾರ್ಪಣೆಗೊಳಿಸಲಾಯಿತು.

ಗಣ್ಯರ ಉಪಸ್ಥಿತಿ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ದತ್ತಾ ಫೈನಾನ್ಶಿಯಲ್ ಸರ್ವಿಸಸ್ನ ಅನಿತಾ ದತ್ತಾ ಆಗಮಿಸಿದ್ದರು, ಗೌರವಾನ್ವಿತ ಅತಿಥಿಗಳಾಗಿ ಶಿಲ್ಪಾ ಖಡಕಭಾವಿ ಹಾಗೂ ಚೈತನ್ಯ ಹಲಗೇಕರ ಉಪಸ್ಥಿತರಿದ್ದು, ಕೃತಿಯನ್ನು ಅನಾವರಣಗೊಳಿಸಿದರು. ಮೃಣಾಲಿನಿ ಇಂಗ್ಲಿಷ್ ಅಕಾಡೆಮಿ ಮತ್ತು ಕೋರಾ ಟೆಕ್ನಾಲಜೀಸ್ನ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಪುಸ್ತಕ ಪ್ರೇಮಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.

ಭಾಷಾ ಪ್ರೌಢಿಮೆಯ ಕುರಿತು ಅತಿಥಿಗಳ ನುಡಿ, ಕಾರ್ಯಕ್ರಮದಲ್ಲಿ ಮಾತನಾಡಿದ ಅತಿಥಿಗಳು ಲೇಖಕರ ಶ್ರಮವನ್ನು ಶ್ಲಾಘಿಸಿದರು.ಚೈತನ್ಯ ಹಲಗೇಕರ ಮಾತನಾಡಿ, ಒಬ್ಬ ಲೇಖಕನ ಜೀವನದ ಅನುಭವಗಳು ಮತ್ತು ಕಠಿಣ ಪರಿಶ್ರಮ ಹೇಗೆ ಒಂದು ಉಪಯುಕ್ತ ಪುಸ್ತಕವಾಗಿ ರೂಪುಗೊಳ್ಳುತ್ತದೆ ಎಂಬುದನ್ನು ಅವರು ಭಾವನಾತ್ಮಕವಾಗಿ ವಿವರಿಸಿದರು.

ಅನಿತಾ ದತ್ತಾ ಮಾತನಾಡಿ, ಕೇವಲ ಹಿಂದಿ ಭಾಷೆ ಮಾತ್ರ ತಿಳಿದಿದ್ದ ತಾವು, ನಂತರದ ದಿನಗಳಲ್ಲಿ ಕನ್ನಡ, ಇಂಗ್ಲಿಷ್, ಮರಾಠಿ, ತಮಿಳು ಮತ್ತು ತೆಲುಗು ಭಾಷೆಗಳನ್ನು ಹೇಗೆ ಕರಗತ ಮಾಡಿಕೊಂಡೆ ಎಂಬ ತಮ್ಮ ಸ್ಫೂರ್ತಿದಾಯಕ ಪಯಣವನ್ನು ಹಂಚಿಕೊಂಡರು. ನಿರಂತರ ಅಭ್ಯಾಸವಿದ್ದರೆ ಯಾರೂ ಬೇಕಾದರೂ ಯಾವುದೇ ಭಾಷೆಯನ್ನು ಕಲಿಯಬಹುದು ಎಂದು ಹೇಳಿದರು. ಶಿಲ್ಪಾ ಖಡಕಭಾವಿ ಮಾತನಾಡಿ, ಕಾರ್ಯಕ್ರಮಕ್ಕೆ ಕಲಾತ್ಮಕ ಸ್ಪರ್ಶ ನೀಡಿದ ಶಿಲ್ಪಾ ಅವರು ಸಂವಹನ ಕಲೆಯಲ್ಲಿ ಪುಸ್ತಕಗಳ ಮಹತ್ವದ ಬಗ್ಗೆ ಮಾತನಾಡಿದರು.

ಸಾರ್ವಜನಿಕರ ಬೆಂಬಲ ಬೆಳಗಾವಿಯ ಜನತೆ ಹಾಗೂ ಮಾಧ್ಯಮ ಪ್ರತಿನಿಧಿಗಳ ಸಮ್ಮುಖದಲ್ಲಿ ನಡೆದ ಈ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಂಡಿತು. ಇಂಗ್ಲಿಷ ಭಾಷೆಯನ್ನು ಸುಲಭವಾಗಿ ಕಲಿಯಲು ಬಯಸುವವರಿಗೆ ಈ ಪುಸ್ತಕವು ದಾರಿದೀಪವಾಗಲಿ ಎಂದು ಹಾರೈಸಲಾಯಿತು. ಕೊನೆಯಲ್ಲಿ ಲೇಖಕ ರಾಜಶೇಖರ ಕೊಳ್ಳಿಮಠ ಅವರು ತಮ್ಮ ಈ ಯಶಸ್ಸಿಗೆ ಕಾರಣರಾದ ಕುಟುಂಬಸ್ಥರು, ಸ್ನೇಹಿತರು ಮತ್ತು ಬೆಳಗಾವಿಯ ಜನತೆಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸಿದರು.



ಗ್ರಾಮಗಳ ಅಭಿವೃದ್ಧಿಗೆ ಒತ್ತು: ಬಾಬಾಸಾಹೇಬ ಪಾಟೀಲ

ನೇಸರಗಿ: ಗ್ರಾಮಗಳ ಅಭಿವೃದ್ಧಿಗೆ 2ವರ್ಷ 10 ತಿಂಗಳಿನಿಂದ ನಿರಂತರ ಕೆಲಸ ಮಾಡುತಿದ್ದು, ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ನೀರು ಸರಬರಾಜು ಮತ್ತು ಇತರೆ ಕಾರ್ಯಗಳ ನಡೆಯಿತ್ತಿದ್ದು, ಉಳಿದ ಕೆಲಸಗಳನ್ನು ಮುಂದಿನ ದಿನಗಳಲ್ಲಿ ಮಾಡಲಾಗುವುದು ಎಂದು ಶಾಸಕ ಬಾಬಾಸಾಹೇಬ ಪಾಟೀಲ ಹೇಳಿದರು.

ಸಮೀಪದ ನೇಗಿನಹಾಳ ಗ್ರಾಮದಲ್ಲಿ 25ಲಕ್ಷ ರೂ.ಗಳ ಅನುದಾನದಲ್ಲಿ ಸಿಸಿ ರಸ್ತೆ, ಚರಂಡಿ ನಿರ್ಮಾಣ, ಗುಡಿ ಕೋಟಭಾಗಿ ಗ್ರಾಮದಲ್ಲಿ 65 ಲಕ್ಷ ರೂ.ಗಳ ಅನುದಾನದಲ್ಲಿ ಸಿಸಿ ರಸ್ತೆ, 10 ಲಕ್ಷ ರೂಗಳ ಅನುದಾನದಲ್ಲಿ ಮೇಟಲಿಂಗ, 25 ಲಕ್ಷ ರೂ.ಗಳ ರಸ್ತೆ ಕಾಮಗಾರಿಗೆ, ಹೊನ್ನಾಪುರದಲ್ಲಿ 50ಲಕ್ಷ ರೂ.ಗಳ ಸಿಸಿ ರಸ್ತೆ ಮತ್ತು 2 ಮೆಟಲಿಂಗ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿ ದರು.ಈ ವೇಳೆ ನೇಗಿನಹಾಳ, ಗುಡಿ ಕೋಟಭಾಗಿ, ಹೊನ್ನಾಪುರ ಗ್ರಾಮಗಳ ಮಾಜಿ ಗ್ರಾಪಂ ಸದಸ್ಯರು, ಪಿಕೆಪಿಎಸ್ ಅಧ್ಯಕ್ಷರು, ಸದಸ್ಯರು, ಕಾಂಗ್ರೆಸ್ ಮುಖಂಡರು, ಗ್ರಾಮಸ್ಥರು ಇದ್ದರು.



ಅಂಬೇಡ್ಕರ್ ಜನ್ಮ ದಿನಾಚರಣೆ ಇಂದು

ಬೆಳಗಾವಿ : ಜಿಲ್ಲಾಡಳಿತ, ಜಿಪಂ, ಮಹಾನಗರ ಪಾಲಿಕೆ, ಸಮಾಜ ಕಲ್ಯಾಣ ಇಲಾಖೆ ಬೆಳಗಾವಿ ಸಹಯೋಗದಲ್ಲಿ ಡಾ.ಬಾಬಾಸಾಹೇಬ ಅಂಬೇಡ್ಕರ ರವರ 135ನೇ ಜನ್ಮ ದಿನಾಚರಣೆ ಅಂಗವಾಗಿ ಏ.14 ಇಂದು ಬೆಳಗ್ಗೆ 10ಕ್ಕೆ ಡಾ.ಬಾಬಾಸಾಹೇಬ ಅಂಬೇಡ್ಕರ ಉದ್ಯಾನವನದಲ್ಲಿ ಅಂಬೇಡ್ಕರವರ ಭಾವಚಿತ್ರಕ್ಕೆ ಪೂಜೆ, ಮಧ್ಯಾಹ್ನ 12ಕ್ಕೆ ಡಾ.ಬಾಬಾಸಾಹೇಬ ಅಂಬೇಡ್ಕರ ವೃತ್ತ(ಕ್ಯಾಂಪ)ದಿಂದ ಅಂಬೇಡ್ಕರ ಉದ್ಯಾನವನವರೆಗೆ ಮೆರವಣಿಗೆ ಜರುಗಲಿದೆ. ಮಧ್ಯಾಹ್ನ 3ಕ್ಕೆ ಡಾ.ಬಾಬಾಸಾಹೇಬ ಅಂಬೇಡ್ಕರ ಉದ್ಯಾನವನದಲ್ಲಿ ವೇದಿಕೆ ಕಾರ್ಯಕ್ರಮ ಜರುಗಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಶಾಸಕ ಆಸೀಫ್ ಸೇಠ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ವಿಜಯಪುರ ಜಿಲ್ಲೆಯ ಕೂಡಗಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಮಾಜಶಾಸ್ತ್ರ ಉಪನ್ಯಾಸಕ ಪ್ರೊ. ಬಸವರಾಜ ಜಾಲವಾದಿ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಸರ್ಕಾರಿ ಮುಖ್ಯ ಸಚೇತಕ ಅಶೋಕ ಪಟ್ಟಣ, ಕರ್ನಾಟಕ ಸರ್ಕಾರದ ಮಾನ್ಯ ವಿಶೇಷ ಪ್ರತಿನಿಧಿ 2 ನವದೆಹಲಿ ಪ್ರಕಾಶ ಹುಕ್ಕೇರಿ, ವಾಯುವ್ಯ ಸಾರಿಗೆ ನಿಗಮ ನಿಯಮಿತ ಅಧ್ಯಕ್ಷ ಭರಮಗೌಡ ಕಾಗೆ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷ ಮಹಾಂತೇಶ ಕೌಜಲಗಿ ವಿಶೇಷ ಆಮಂತ್ರಿತರಾಗಿ ಆಗಮಿಸಲಿದ್ದಾರೆ.

ರಾಜ್ಯ ಸಭೆ ಸಂಸದ ಈರಣ್ಣ ಕಡಾಡಿ, ಚಿಕ್ಕೋಡಿ ಲೋಕಸಭಾ ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ಜಿಲ್ಲಾ ಲೋಕಸಭಾ ಸಂಸದ ಜಗದೀಶ್ ಶೆಟ್ಟರ, ಉತ್ತರ ಕನ್ನಡ ಲೋಕಸಭಾ ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಗೌರವಾನ್ವಿತ ಅತಿಥಿಗಳಾಗಿ ಆಗಮಿಸಲಿದ್ದಾರೆ. ಜಿಲ್ಲೆಯ ಎಲ್ಲ ಸಂಸದರು, ಶಾಸಕರು, ಪರಿಷತ್ ಸದಸ್ಯರು, ಜನಪ್ರತಿಧಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ಹನುಮಾನ ಜಾತ್ರಾ ಮಹೋತ್ಸವ

ರಾಯಬಾಗ: ತಾಲೂಕಿನ ಮಾರಡಿ (ಮಾಡಲಗಿ) ಗ್ರಾಮದ ಹನುಮಾನ ದೇವರ, ಭರಮದೇವರ, ಅರಣ್ಯ ಸಿದ್ದೇಶ್ವರ, ಲಕ್ಷ್ಮೀದೇವಿ, ಯಲ್ಲಮ್ಮ ದೇವಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ಜರುಗಿತು.

ಸೋಮವಾರ ಬೆಳಗ್ಗೆ ಹನುಮಾನ ದೇವರ ಗುಡಿಯಿಂದ ಭರಮದೇವರ ಗುಡಿಯವರೆಗೆ ಸಕಲ ವಾದ್ಯ ಮೇಳದೊಂದಿಗೆ ಪಲ್ಲಕ್ಕಿ ಮೆರವಣಿಗೆ ನಡೆಯಿತು. ಭಕ್ತಾಧಿಗಳು ಭಂಡಾರ ಎರಚಿ ದೇವರ ದರ್ಶನ ಪಡೆದರು. ಲಕ್ಷ್ಮೇಶ್ವರ ಜೈ ಮಾತೃಭೂಮಿ ಕಲಾ ಸಂಘದಿಂದ ರಾತ್ರಿ ಸಾಮಾಜಿಕ ನಾಟಕ ಪ್ರದರ್ಶನ ನಡೆಯಿತು. ಐದು ದಿನಗಳವರೆಗೆ ನಡೆದ ಜಾತ್ರೆಗೆ ಬಂದ ಭಕ್ತರಿಗೆ ಮಹಾಪ್ರಸಾದ ಏರ್ಪಡಿಸಲಾಗಿತ್ತು.



ಪಿಯು ಫಲಿತಾಂಶ ಅಥರ್ವ ಕಾಲೇಜು ಅಮೋಘ ಸಾಧನೆ

ಮೂಡಲಗಿ: ನಾಗನೂರ ಪಟ್ಟಣದ ಅಥರ್ವ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯವು ಶೇ.98 ರಷ್ಟು ಫಲಿತಾಂಶ ಪಡೆಯುವ ಮೂಲಕ ಅಮೋಘ ಸಾಧನೆ ಮಾಡಿದೆ ಎಂದು ಸಂಸ್ಥೆಯ ಅಧ್ಯಕ್ಷ ವೆಂಕಟೇಶ ಜಂಬಗಿ ಹೇಳಿದ್ದಾರೆ.

ಈ ಕುರಿತು ಸುದ್ದಿಗಾರರೊಡನೆ ಮಾತನಾಡಿದ ಅವರು, ಅಥರ್ವ ಮಹಾವಿದ್ಯಾಲಯದ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿಯಾದ ಸೌಂದರ್ಯ ಪಂಡ್ರೋಳಿ (99.33 %) 596 ಅಂಕ ಪಡೆಯುವ ರಾಜ್ಯಕ್ಕೆ 5ನೇ ಹಾಗೂ ವಿಜ್ಞಾನ ವಿಭಾಗದ ಐಶ್ವರ್ಯ ತಿಮ್ಮಾಪೂರ (98.33%) 590 ಅಂಕ ಪಡೆಯುವ ಮೂಲಕ ರಾಜ್ಯಕ್ಕೆ 10ನೇ ರ‍್ಯಾಂಕ್ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ನಾಗವ್ವ ವಡೇರ (98%) ಹಾಗೂ ಸತ್ತೆವ್ವ ಶೆನವಿ (97.83%) ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಜಯಶ್ರೀ ಹೊಸತೋಟ ಹಾಗೂ ಸಂಗಮೇಶ ಬೆಣ್ಣಿ (96.33%) ಮತ್ತು ದುಂಡನಗೌಡ ಪಾಟೀಲ ಹಾಗೂ ಮಂಜು ಕುಟ್ರಿ (96%) ಅಂಕಗಳನ್ನು ಪಡೆಯುವ ಮೂಲಕ ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದಿದ್ದಾರೆ.ಒಟ್ಟು 349 ವಿದ್ಯಾರ್ಥಿಗಳು ಪ್ರಸಕ್ತ ಸಾಲಿನಲ್ಲಿ ಪರೀಕ್ಷೆ ಬರೆದಿದ್ದು, 14 ವಿದ್ಯಾರ್ಥಿಗಳು ಶೇ.95ಕ್ಕಿಂತ ಅಧಿಕ, 54 ವಿದ್ಯಾರ್ಥಿಗಳು ಶೇ. 90ಕ್ಕಿಂತ ಅಧಿಕ, 102 ವಿದ್ಯಾರ್ಥಿಗಳು ಶೇ. 85ಕ್ಕಿಂತ ಅಧಿಕ, 151 ವಿದ್ಯಾರ್ಥಿಗಳು ಶೇ. 80ಕ್ಕಿಂತ ಹಾಗೂ 209ಕ್ಕೂ ಅಧಿಕ ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಈ ಸಾಧನೆಗೆ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗ ಹಾಗೂ ಪಾಲಕರು ಮತ್ತು ಸಂಸ್ಥೆಯ ಹಿತೈಷಿಗಳ ಸಹಕಾರ ಕಾರಣ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾಲೇಜು ಪ್ರಾಚಾರ್ಯ ಗಿರೀಶ ಗೋರಬಾಳ, ಶೈಕ್ಷಣಿಕ ನಿರ್ದೇಶಕರಾದ ಡಾ. ಸಂತೋಷ ಮಿರ್ಜಿ, ಚೇತನ ಜೋಗನ್ನವರ, ಆಶಿರ್ವಾದ ಹುಲಕುಂದ, ಶಿವಬೋಧ ಯರಝರ್ವಿ, ಕೆ. ಕೆ. ಕಂಡ್ರ್ಯಾಗೋಳ, ಉಪನ್ಯಾಸಕರಾದ ರಾಚಯ್ಯ ನಿರ್ವಾಣಿ, ರಾಜೇಂದ್ರ ಪಾಟೀಲ, ಎಸ್.ಡಿ.ವಾಲಿ, ಎಸ್.ವಿ. ಮೆಳವಂಕಿ, ಕಿರಣ ಮರೆಪ್ಪಗೋಳ, ಅಮಿತ ಬೆಳಗಲಿ, ಕೃಷ್ಣಾ ಪೂಜೇರಿ, ಸಚಿನ ಮುಗಳಖೋಡ, ಸಂತೋಷ ಸುಭಂಜಿ, ಮಂಜುನಾಥ ಹಟ್ಟಿ ಮಹೇಶ ನರಗಟ್ಟಿ, ಪೂಜಾ ಮಾಡಲಗಿ, ಡಾ. ಪ್ರಸನ್ನ ಶಾಸ್ತ್ರಿಮಠ ವಿದ್ಯಾರ್ಥಿಗಳ ಸಾಧನೆಗೆ ಹರ್ಷ ವ್ಯಕ್ತ ಪಡಿಸಿದ್ದಾರೆ.



- ಶೇ .98 ರಷ್ಟು ಫಲಿತಾಂಶ
- ರಾಜ್ಯಕ್ಕೆ ವಾಣಿಜ್ಯ ವಿಭಾಗದಲ್ಲಿ 5ನೇ ಹಾಗೂ ವಿಜ್ಞಾನ ವಿಭಾಗದಲ್ಲಿ 10ನೇ ರ‍್ಯಾಂಕ್



ಕಿರುಸುದ್ದಿ

ನಾಳೆಯಿಂದ ವಾಲಿಬಾಲ್ ಕ್ರೀಡಾ ತರಬೇತಿ ಶಿಬಿರ

ಬೆಳಗಾವಿ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ವಾಲಿಬಾಲ್ ಕ್ರೀಡೆಯಲ್ಲಿ ಆಸಕ್ತ ಕ್ರೀಡಾಪಟುಗಳಿಗೆ ಏ.15ರಿಂದ ಮೇ.7ರವರೆಗೆ ಅಥಣಿ ಪಟ್ಟಣದ ಭೋಜರಾಜ ಕ್ರೀಡಾಂಗಣದಲ್ಲಿ ಉಚಿತ ವಾಲಿಬಾಲ್ ಕ್ರೀಡಾ ತರಬೇತಿ ಶಿಬಿರ ಆಯೋಜಿಸಲಾಗಿದೆ. ಆಸಕ್ತ ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಪ್ರಯೋಜನ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ವಾಲಿಬಾಲ್ ತರಬೇತಿದಾರ ಎನ್.ಎ. ಮೀರಜಕರ್ ಇವರ ದೂ:9379744731, 7022061993, 9008813161 ಸಂಖ್ಯೆಗಳನ್ನು ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಆರೋಗ್ಯ ತಪಾಸಣಾ ಶಿಬಿರ ನಾಳೆ

ಯಮಕನಮರಡಿ: ಹಿಂಡಾಲ್ಕೋ, ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಮಹಿಳಾ ಕಲ್ಯಾಣ ಸಂಸ್ಥೆ ಇವುಗಳ ಆಶ್ರಯದಲ್ಲಿ ಕೆಎಲ್‌ಇ ಸಂಸ್ಥೆಯ ಡಾ.ಸಂಪತ್‌ಕುಮಾರ ಎಸ್. ಶಿವಣಗಿ ಕ್ಯಾನ್ಸರ್ ಆಸ್ಪತ್ರೆಯ ಸಹಯೋಗದಲ್ಲಿ ಏ.15ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ವವರೆಗೆ ಹಿಡಕಲ್ ಡ್ಯಾಂನ ಶಿವಾಲಯ ದೇವಸ್ಥಾನದ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಹೊಸಪೇಟ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ನೀಲಕಂಠ ಕುಲಕರ್ಣಿ ಕಾರ್ಯಕ್ರಮ ಉದ್ಘಾಟಿಸುವವರು. ಮಹಿಳಾ ಕಲ್ಯಾಣ ಸಂಸ್ಥೆ ಗೌರವ ಕಾರ್ಯದರ್ಶಿ ವೈಜಯಂತಿ ಎಂ. ಚೌಗಲಾ ಅಧ್ಯಕ್ಷತೆ ವಹಿಸುವವರು. ಇಂಡಿಯನ್ ಕ್ಯಾನ್ಸರ್ ಸೊಸೈಟಿ ಪ್ರಾಂತೀಯ ವ್ಯವಸ್ಥಾಪಕ ಸಂತೇನಿ ದಂಡಿನ ಮುಖ್ಯ ಅತಿಥಿಗಳಾಗಿ ಆಗಮಿಸುವವರು. ಕೆಎಲ್‌ಇ ಸಂಸ್ಥೆಯ ಡಾಸಂಪತಕುಮಾರ ಎಸ್. ಶಿವಣಗಿ ಆಸ್ಪತ್ರೆ ವೈದ್ಯ ಉಚಿತ ಆರೋಗ್ಯ ತಪಾಸಣೆ ಕೈಗೊಳ್ಳಲುವರು ಎಂದು ಬೆಳಗಾವಿ ಮಹಿಳಾ ಕಲ್ಯಾಣ ಸಂಸ್ಥೆ ಗೌರವ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶೇ.96.166ರಷ್ಟು ಅಂಕ

ಕುಂದಗೋಳ: ಪಟ್ಟಣದ ನಿವಾಸಿಯಾದ ಖುಷಿ



ಸುರೇಶ ಗಂಗಾಯಿ ಅವರು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 600ಕ್ಕೆ 577 ಅಂಕಗಳನ್ನು ಪಡೆದು ಶೇ.96.166 ಫಲಿತಾಂಶದೊಂದಿಗೆ ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆಯಾಗಿದ್ದಾರೆ.ಖುಷಿ ಸುರೇಶ ಗಂಗಾಯಿ ಅವರು ಮಂಗಳೂರಿನ ಜಿಲ್ಲೆಯ ವಳಾಚಿಲ ಗ್ರಾಮದ ಎಕ್ಸಪೋರ್ಟ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ. ವಿದ್ಯಾರ್ಥಿನಿಯ ಈ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಶಿಕ್ಷಕರು ಹರ್ಷ ವ್ಯಕ್ತಪಡಿಸಿದ್ದಾರೆ.

ಪ್ರತಿಭಟನೆ ಸಲ್ಲ

ಧಾರವಾಡ: ಡಾ. ಬಿ.ಆರ್.ಅಂಬೇಡ್ಕರ್ ಜಯಂತಿ ದಿನ ಯಾವುದೇ ಸಂಘಟನೆಗಳ ಪ್ರತಿಭಟನೆ, ರ್‍ಯಾಲಿಗೆ ಅವಕಾಶ ನೀಡದಂತೆ ಭೀಮ-ಶಕ್ತಿ ಸಂಘಟನೆ ಉಪನಗರ ಠಾಣೆ ಮುಂದೆ ಪ್ರತಿಭಟಿಸಿ, ಮನವಿ ಸಲ್ಲಿಸಿದೆ. ಏ.14ಕ್ಕೆ ಸಾಮಾಜಿಕ ನ್ಯಾಯದ ಹರಿಕಾರ ಡಾ.ಅಂಬೇಡ್ಕರ್ ಜಯಂತಿ ಸಂಭ್ರಮ ಜಿಲ್ಲೆಯಲ್ಲಿ ಮನೆ ಮಾಡಲಿದ್ದು, ಈ ವೇಳೆ ಕೆಲವು ಸಂಘಟನೆ ಪ್ರತಿಭಟನೆ, ರ್‍ಯಾಲಿ, ಮೆರವಣಿಗೆಗೆ ಸಿದ್ಧತೆ ನಡೆಸಿದ್ದಾಗಿ ಮಾಹಿತಿ ನೀಡಿದೆ. ಜಿಲ್ಲಾಡಳಿತ ಜಯಂತಿ ಆಚರಿಸುವ ವೇಳೆ ಯಾವುದೇ ಅನಾನುಕೂಲತೆ ಹಾಗೂ ಕಾನೂನು ಸುವ್ಯವಸ್ಥೆ ಧಕ್ಕೆ ಬರದಂತೆ ಮತ್ತು ಗೊಂದಲಕ್ಕೆ ಆಸ್ಪದ ನೀಡದಂತೆ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದೆ. ಭೀಮ ಶಕ್ತಿ ಸಂಘಟನೆಯ ಶಂಕರ ಮುಗಳಿ, ಲಕ್ಷ್ಮಣ ಆರ್., ಸತೀಶ ಗಿರಿಯಣ್ಣವರ, ಸಮೀರ್ ಬಳ್ಳಾರಿ, ಪ್ರವೀಣ ಅದರಗುಂಚಿ, ಮನೋಜ ಹಾದಿಮನಿ, ಲಕ್ಷ್ಮೀ ಮಾದರ ಇದ್ದರು.

ಯುವಕ ಆತ್ಮಹತ್ಯೆ

ಹಿರೇಬಾಗೇವಾಡಿ: ಕುಡಿತದ ಚಟಕ್ಕೆ ದಾಸನಾಗಿ ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡಿದ್ದ ಯುವಕ ಆತ್ಮಹತ್ಯೆಗೆ ಶರಣಾದ ಘಟನೆ ಹಿರೇಬಾಗೇವಾಡಿಯ ದೊಡ್ಡ ಓಣಿಯಲ್ಲಿ ಸೋಮವಾರ ಬೆಳಗಿನ ಜಾವ ಬೆಳಕಿಗೆ ಬಂದಿದೆ. ಪ್ರದೀಪ ಬಸವರಾಜ ಹಾದಿಮನಿ(39) ನೇಣಿಗೆ ಶರಣಾದ ಯುವಕ. ಕಳೆದ ನಾಲ್ಕೈದು ದಿನಗಳಿಂದ ಸಾರಾಯಿ ಕುಡಿಯದ ಕಾರಣ ಮಾನಸಿಕ ಸಮತೋಲನ ಕಳೆದುಕೊಂಡವರಂತೆ ವರ್ತಿಸುತ್ತಿದ್ದ ಎನ್ನಲಾಗಿದೆ. ಭಾನುವಾರ ಮಧ್ಯಾಹ್ನದಿಂದ ಸೋಮವಾರ ಬೆಳಗಿನ ಅವಧಿಯಲ್ಲಿ ಸಾವನ್ನಪ್ಪಿದ್ದಾನೆ ಎಂದು ಗ್ರಾಮದ ಜನತೆ ತಿಳಿಸಿದರು. ಈ ಕುರಿತು ಹಿರೇಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ ಸುದ್ದಿ

ಮಾಯಪ್ಪ ಗಸ್ತಿ



ಹಾರೂಗೇರಿ: ಪಟ್ಟಣದ ಬಾಳಪ್ಪ ಮಾಯಪ್ಪ ಗಸ್ತಿ ನಿಧನರಾದರು. ಮೃತರು ಪತ್ನಿ ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಬೆಳಗಾವಿ/ಕೊಯಮುತ್ತೂರು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ತಮಿಳುನಾಡು ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಕೊಯಮುತ್ತೂರಿನ ತೊಪ್ಪಂಪಟ್ಟಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸೂರ್ಯ ಪ್ರಕಾಶ್ ಪರ ಪ್ರಚಾರ ನಡೆಸಿದರು.

ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ನಾಳೆ

ಅಳ್ನಾವರ: ತಾಲೂಕಿನ ಐದನೇ ಕನ್ನಡ ಸಾಹಿತ್ಯ ಸಮ್ಮೇಳನ ಏ.15ರಂದು ಪಟ್ಟಣದ ಉಮಾ ಭವನದಲ್ಲಿ ಜರುಗಲಿದೆ. ಬೆಳಗ್ಗೆ 8.30ಕ್ಕೆ ನಡೆಯಲಿರುವ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಮಾಜಿ ಸೈನಿಕ ಅಜ್ಜಪ್ಪ ಕುರುಬರ ರಾಷ್ಟ್ರ ಧ್ವಜಾರೋಹಣ, ಡಾ.ಲಿಂಗರಾಜ ಅಂಗಡಿ ನಾಡಧ್ವಜ ಹಾಗೂ ಗುರುರಾಜ ಸಬನೀಸ ಪರಿಷತ್ ಧ್ವಜಾರೋಹಣ ನೆರವೇರಿಸಲಿದ್ದು 9.30ಕ್ಕೆ ಕೆರೆ ಶಾಲಾ ಮೈದಾನದಿಂದ ಪ್ರಾರಂಭವಾಗಲಿರುವ ಸಮ್ಮೇಳನಾಧ್ಯಕ್ಷರ ಮೆರವಣಿಗೆಯಲ್ಲಿ ಎಸ್.ಬಿ.ಪಾಟೀಲ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಿದ್ದು, ತಹಶೀಲ್ದಾರ್ ಡಾ.ಡಿ.ಎಚ್.ಹೂಗಾರ ಹಾಗೂ ಪಿಎಸ್‌ಐ ಬಸವರಾಜ ಯದ್ದಲಗುಡ್ಡ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಬೆಳಗ್ಗೆ 10.30ಕ್ಕೆ ಉಮಾಭವನದಲ್ಲಿ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಸಮ್ಮೇಳನ ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ಕಾರ್ಮಿಕ ಸಚಿವರಾದ ಸಂತೋಷ ಲಾಡ ಅವರು ವಹಿಸಲಿದ್ದಾರೆ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಮತ್ತು ಸಭಾಪತಿ ಬಸವರಾಜ ಹೊರಟ್ಟಿ ಉಪಸ್ಥಿತಿ ಇರಲಿದ್ದು ಸರ್ಕಾರದ ಮುಖ್ಯ ಸಚೇತಕ ಸಲೀಮ ಅಹ್ಮದ, ಶಾಕರುಗಳಾದ ಎನ್.ಎಚ್ ಕೋನರೆಡ್ಡಿ, ವಿನಯ ಕುಲಕರ್ಣಿ, ವಿಧಾನ ಪರಿಷತ್ ಸದಸ್ಯರಾದ ಎಸ್.ವ್ಹಿ.ಸಂಕನೂರು,ಪ್ರದೀಪ ಶೆಟ್ಟರ ಆಗಮಿಸಲಿದ್ದಾರೆ. ಕಸಾಪ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ ಅಂಗಡಿ ಹಾಗೂ ಸ್ಥಳಿಯ ಗಣ್ಯರು ಉಪಸ್ಥಿತರಿರಲಿದ್ದು ಮಧ್ಯಾಹ್ನ 2 ಗಂಟೆಗೆ ನಡೆಯುವ ಗೋಷ್ಠಿಯ ಅಧ್ಯಕ್ಷತೆಯನ್ನು ಧಾರವಾಡ ಜಿಲ್ಲಾ ಕನಿಪ ಸಂಘದ ಅಧ್ಯಕ್ಷ ಬಂಡು ಕುಲಕರ್ಣಿ ವಹಿಸಲಿದ್ದು, ಸಂಜೆ 4 ಗಂಟೆಗೆ ಸಮಾರೋಪ ಸಮಾರಂಭದ ನುಡಿಗಳನ್ನು ಧಾರವಾಡ ಕ.ವಿ.ವ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಆಡಲಿದ್ದಾರೆ. ಸಮ್ಮೇಳನದ ಸರ್ವಾಧ್ಯಕ್ಷರಾಗಿ ಡಾ.ಬಸವರಾಜ ಮೂಡಬಾಗಿಲ ಅವರನ್ನು ಆಯ್ಕೆ ಮಾಡಲಾಗಿದೆ.



ರಾಯಬಾಗ: ವಕೀಲರ ಸಂಘದಲ್ಲಿ ಮಹಾತ್ಮ ಜ್ಯೋತಿಬಾ ಫುಲೆ ಅವರ 199ನೇ ಜಯಂತಿ ಆಚರಿಸಲಾಯಿತು. ಅಧ್ಯಕ್ಷ ಕೆ.ಆರ್. ಕೋಟಿವಾಲೆ, ಕಾರ್ಯದರ್ಶಿ ಆರ್.ಎಸ್.ಹಳ್ಳಿಪ್ಪಗೋಳ, ವಕೀಲರಾದ ಮಹೇಶ್ ಹೋಸಮನಿ, ಸಂಜು ಸಲಗರೆ, ಆರ್. ಎಲ್.ಅಸೋದೆ, ಕೆ.ಎಮ್.ಮದಳೆ, ತೊಹಿದ ಪಟವೆಗಾರ, ವೈಭವ ಕುಲಕರ್ಣಿ, ಬಿ.ಎಸ್.ಕಾಂಬಳೆ ಹಾಜರಿದ್ದರು.

ಅಂಬೇಡ್ಕರರ ಸೇವೆ ಅವಿಸ್ಮರಣೀಯ



ಮೂಡಲಗಿ: ಭಾರತದ ಸಮನ್ವಯತೆಯಲ್ಲಿ ಅಂಬೇಡ್ಕರರ ಸೇವೆ ಅವಿಸ್ಮರಣಿಯವಾಗಿದ್ದು ಸಂವಿಧಾನ ಶಿಲ್ಪಿಯಾಗಿ ಭಾರತದ ಪ್ರತಿಯೊಬ್ಬ ನಾಗರಿಕನ ಜೀವನಕ್ಕೆ ಸ್ಪೂರ್ತಿ ಆಶಾಕಿರಣದ ಚಿಂತನೆಯನ್ನು ಅಭಿವ್ಯಕ್ತ ಪಡಿಸಿದ ಡಾ. ಬಿ. ಆರ್. ಅಂಬೇಡ್ಕರರು ಎಂದು ಆರ್.ಡಿ.ಎಸ್. ಪದವಿ ಕಾಲೇಜಿನ ಉಪನ್ಯಾಸಕ ಸಂಜೀವ ಮಂಟೂರ ಹೇಳಿದರು.

ಪಟ್ಟಣದ ಆರ್.ಡಿ.ಎಸ್. ಕಲಾ, ವಾಣಿಜ್ಯ, ವಿಜ್ಞಾನ,ಸಮಾಜಕಾರ್ಯ ಪದವಿ ಮಹಾವಿದ್ಯಾಲಯ - ರಾಣಿಚೆನ್ನಮ್ಮಾ ವಿಶ್ವವಿದ್ಯಾಲಯ ಬೆಳಗಾವಿ ಸಹಯೋಗದಲ್ಲಿ ಹಮ್ಮಿಕೊಂಡಿರುವ ಮನೆಮನೆಗೆ ಮನಮನಕ್ಕೆ ಅಂಬೇಡ್ಕರರು ಎಂಬ ಅಭಿಯಾನದಲ್ಲಿ ಮಾತನಾಡಿ, ಮಾನವಕುಲದ ಕಲ್ಯಾಣಕ್ಕಾಗಿ ಇಡೀ ಅಖಂಡ ಭಾರತಕ್ಕೆ ಉತ್ತಮ ಸಂವಿಧಾನ ರಚಿಸಿಕೊಟ್ಟಿರುವಂತಹ ಮಹಾನ್ ದಾರ್ಶನಿಕ ಡಾ. ಬಿ.ಆರ್. ಅಂಬೇಡ್ಕರರವರ ವ್ಯಕ್ತಿತ್ವ ಇಂದಿನ ಪೀಳಿಗೆಯಲ್ಲಿ ಬೆಳದುಬರುವಂತೆ ಮನೆಮನೆಗೆ ಮನಮನಕ್ಕೆ ಅಂಬೇಡ್ಕರರು ಎಂದು ಕಾಲೇಜು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ನೈದಾನಿಕ ಚಿಂತನೆ ಇಂದಿನ ವಾಸ್ತವಿಕ ಜಗತ್ತಿನಲ್ಲಿ ಅಗತ್ಯವಿದೆ ಎಂದರು.

ಅಂಬೇಡ್ಕರರು ಚಿಕ್ಕವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡು ಜೀವನದಲ್ಲಿ ಸಾಮಾಜಿಕ ತೊಂದರೆಯನ್ನು ಅನುಭವಿಸಿ ಸಾಮಾಜಿಕ ಐಕ್ಯತೆಯನ್ನು ಮನಗಂಡು ಭಾರತದಲ್ಲಿ ಇರುವ ಸರ್ವಜನಾಂಗಕ್ಕೂ ಆಶಾದಾಯಕ ಸಂವಿಧಾನವನ್ನು ರಚಿಸಿದರು ಅಂತಹವರ ವ್ಯಕ್ತಿತ್ವವನ್ನು ಪ್ರತಿಯೊಬ್ಬ ವ್ಯಕ್ತಿ ಅಳವಡಿಸಿಕೊಳ್ಳುವುದು ಅಗತ್ಯವಿದೆ ಎಂದರು.

> ▸▸ ಮನೆ ಮನೆಗೆ ಮನ ಮನಕ್ಕೆ ಅಂಬೇಡ್ಕರರು ಅಭಿಯಾನ
>
> ▸▸ ಉಪನ್ಯಾಸಕ ಸಂಜೀವ ಮಂಟೂರ ಹೇಳಿಕೆ

ಕಾಲೇಜು ಪ್ರಾಚಾರ್ಯ ಸತೀಶ ಗೋಟೂರೆ ಮಾತನಾಡಿ, ಅಂಬೇಡ್ಕರರೆಂಬ ಮಹಾತ್ಮರ ಚಿಂತನೆ ವಿಚಾರಧಾರೆ ವ್ಯಕ್ತಿತ್ವ ವಿದ್ಯಾರ್ಥಿಗಳಲ್ಲಿ ಬೆಳಸುವಲ್ಲಿ ಇಂತಹ ಅಭಿಯಾನಗಳು ಮಹತ್ವದ ಪಾತ್ರ ವಹಿಸುತ್ತಿದ್ದು ಪ್ರತಿಯೊಬ್ಬ ಭಾರತೀಯರು ಅಂಬೇಡ್ಕರರ ಚಿಂತನೆ ಬೆಳಸಿಕೊಳ್ಳುವುದರ ಜೊತೆಗೆ ಅವರು ಹಾಕಿಕೊಟ್ಟ ಭಾರತೀಯ ಸಂವಿಧಾನದ ವಿಚಾರಗಳನ್ನು ಗೌರವಸುವಂತೆ ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಶಿವಾನಂದಸತ್ತಿಗೇರಿ ಸಂಗಮೇಶ ಕುಂಬಾರ ಎನ್.ಎಸ್.ಎಸ್. ಘಟಕಾಧಿಕಾರಿ ರಾಜು ಪತ್ತಾರ ರೆಡ್ ಕ್ರಾಸ ಘಟಕಾಧಿಕಾರಿ ಮುತ್ತಣ್ಣ ಒಡೆಯರ ಇನ್ನುಳಿದ ಉಪನ್ಯಾಸಕರು ಮತ್ತು ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು ವಿದ್ಯಾರ್ಥಿಗಳು ಊರಿನ ಪ್ರಮುಖ ಬೀದಿಗಳಲ್ಲಿ ಅಂಬೇಡ್ಕರರನ್ನು ಕುರಿತು ಘೋಷ್ಯವಾಕ್ಯಗಳೊಂದಿಗೆ ಸಂಚರಿಸಿ ಕಾಲೇಜಿನಲ್ಲಿ ಆಶುಭಾಷಣ ಪ್ರಬಂಧ ಸ್ಪರ್ಧೆ ಹಾಗೂ ಚಿತ್ರಕಲೆ ಸ್ಪರ್ಧೆಗಳಲ್ಲಿ ಭಾಗವಹಿಸಿ ಅಂಬೇಡ್ಕರರ ವಿಚಾರಧಾರೆಗಳನ್ನು ಅಭಿವ್ಯಕ್ತಪಡಿಸಿದರು.

ದಾಸ್ತಾನು ಕೊರತೆಯಾಗದಿರಲಿ: ಶಾಸಕ ಹೆಬ್ಬಾರ್

ಶಿರಸಿ: ಇರಾನ್-ಅಮೇರಿಕಾ ಯುದ್ದದಂತಹ ಜಾಗತಿಕ ವಿದ್ಯಮಾನಗಳಿಂದ ರಸಗೊಬ್ಬರ ಪೂರೈಕೆಯಲ್ಲಿ ವ್ಯತ್ಯಯವಾಗುವ ಆತಂಕವಿದ್ದು, ಜಿಲ್ಲೆಗೆ ಬಂದಿರುವ ಗೊಬ್ಬರ ಯಾವುದೇ ಕಾರಣಕ್ಕೂ ಹೊರಜಿಲ್ಲೆಗೆ ಹೋಗದಂತೆ ಅಧಿಕಾರಿಗಳು ಹದ್ದಿನ ಕಣ್ಣಿಡಬೇಕು ಎಂದು ಶಾಸಕ ಶಿವರಾಮ ಹೆಬ್ಬಾರ್ ಸೂಚಿಸಿದರು.

ಸೋಮವಾರ ನಗರದ ಮಿನಿ ವಿಧಾನಸೌಧದಲ್ಲಿ ಆಯೋಜಿಸದ್ದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಳೆಗಾಲ ಆರಂಭವಾಗುತ್ತಿದ್ದಂತೆಯೇ ರಸಗೊಬ್ಬರಕ್ಕೆ ಬೇಡಿಕೆ ಹೆಚ್ಚುತ್ತದೆ. ಈ ಸಮಯದಲ್ಲಿ ದಾಸ್ತಾನು ಕೊರತೆಯಾಗದಂತೆ ಕೃಷಿ ಅಧಿಕಾರಿಗಳು ಖಾಸಗಿ ವರ್ತಕರ ಜೊತೆ ಸಂಪರ್ಕದಲ್ಲಿರಬೇಕು. ರೈತರಿಗೆ ಗೊಬ್ಬರದ ಸಮಸ್ಯೆ ಎದುರಾದರೆ ಅಧಿಕಾರಿಗಳೇ ಹೊಣೆ ಎಂದು ಎಚ್ಚರಿಸಿದರು.

ಕ್ಷೇತ್ರದ ಹಳೆಯ ಅರಣ್ಯ ಅತಿಕ್ರಮಣದಾರರನ್ನು ಒಕ್ಕಲೆಬ್ಬಿಸದಂತೆ ನೋಡಿಕೊಳ್ಳುವುದು ನನ್ನ ಜವಾಬ್ದಾರಿ. ಅರಣ್ಯ ಇಲಾಖೆಯ ಕಿರಿಕಿರಿ ಸಹಿಸುವುದಿಲ್ಲ ಎಂದು ತಿಳಿಸಿದ ಅವರು, ಹೊಸ ಅತಿಕ್ರಮಣಕ್ಕೆ ಬೆಂಬಲವಿಲ್ಲ ಎಂದರು.

ತಾಲೂಕಿನ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಕೊರತೆ ಇರುವುದು ಸಭೆಯ ಗಮನಕ್ಕೆ ಬಂದಿತು. ಈ ವೇಳೆ ಮಾತನಾಡಿದ ಶಾಸಕರು, ವೈದ್ಯರ ಕೊರತೆ ನೆಪದಲ್ಲಿ ಬನವಾಸಿ ಭಾಗದ ವೈದ್ಯರನ್ನು ಬೇರೆಡೆಗೆ ನಿಯೋಜಿಸಿ ಅಲ್ಲಿನ ರೋಗಿಗಳಿಗೆ ತೊಂದರೆ ನೀಡಬಾರದು. ಮುಖ್ಯವಾಗಿ ಆಸ್ಪತ್ರೆಗಳಲ್ಲಿ ಅನಗತ್ಯ ಶಸ್ತ್ರಚಿಕಿತ್ಸೆ ಬದಲು ಸಹಜ ಹೆರಿಗೆಗೆ ಆದ್ಯತೆ ನೀಡಬೇಕು ಎಂದರು.

> **ಅಗತ್ಯ ಕ್ರಮವಹಿಸಿ**
>
> ಅಡಿಕೆ ಬೆಳೆಯ ಎಲೆಚುಕ್ಕಿ ರೋಗಕ್ಕೆ ತೋಟಗಾರಿಕೆ ಇಲಾಖೆ ಸೂಕ್ತ ಮಾರ್ಗದರ್ಶನ ನೀಡಬೇಕು ಮತ್ತು ವಿಳಂಬವಾಗಿರುವ ಬೆಳೆ ವಿಮೆ ಹಂಚಿಕೆ ಕುರಿತು ಕ್ರಮ ವಹಿಸಬೇಕು ಎಂದು ತಿಳಿಸಿದರು.

ಸಭೆಯ ಆರಂಭದಲ್ಲಿ ಶಿರಸಿ-ಹುಬ್ಬಳ್ಳಿ ರಸ್ತೆ ದುರಸ್ತಿ ಬಗ್ಗೆ ಕಾಂಗ್ರೆಸ್ ನಾಯಕ ಸುನೀಲ್ ನಾಯ್ಕ ಆಕ್ಷೇಪ ವ್ಯಕ್ತಪಡಿಸಿದಾಗ ಶಾಸಕರು ಗರಂ ಆದರು. ಇದು ರಾಷ್ಟ್ರೀಯ ಹೆದ್ದಾರಿಯಾಗಿದ್ದು, ಕೇಂದ್ರದ ವ್ಯಾಪ್ತಿಗೆ ಬರುತ್ತದೆ. ನಾನು ಹಲವು ಬಾರಿ ಪತ್ರ ಬರೆದಿದ್ದೇನೆ. ಈ ಬಗ್ಗೆ ಸಂಸದರನ್ನು ಪ್ರಶ್ನಿಸುವುದು ಸೂಕ್ತವೆಂದು ಉತ್ತರಿಸಿದರು. ಸಮಸ್ಯೆಗಳ ಕುರಿತಾದ ಹೋರಾಟಗಳಿಗೆ ಕೈಜೋಡಿಸುವಂತೆ ಸುನೀಲ್ ನಾಯ್ಕ ಆಗ್ರಹಿಸಿದರು.ತಹಶೀಲ್ದಾರ್ ಪಟ್ಟರಾಜ ಗೌಡ, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಡಾ. ಬಿ.ಪಿ. ಸತೀಶ ಸೇರಿದಂತೆ ವಿವಿಧ ಇಲಾಖಾಧಿಕಾರಿಗಳು, ಬನವಾಸಿ ಭಾಗದ ದ್ಯಾಮಣ್ಣ ದೊಡ್ಮನಿ, ಬಸವರಾಜ ದೊಡ್ಮಜಿ, ಗಣಪತಿ ನಾಯ್ಕ ಇದ್ದರು.



ಉಚಿತ ಬೇಸಿಗೆ ಕ್ರೀಡಾ ತರಬೇತಿ ಶಿಬಿರ ನಾಳೆ

ಬೆಳಗಾವಿ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಜಿಲ್ಲೆಯ ಬಾಲಕ, ಬಾಲಕಿಯರಿಗೆ ಏ.15ರಿಂದ ಬ್ಯಾಸ್ಕೆಟ್ ಬಾಲ್ ಕ್ರೀಡಾ ಪಟುಗಳಿಗೆ ಹಾಗೂ ವೀಲಚೇರ್ ಕ್ರೀಡಾಪಟುಗಳಿಗೆ ಉಚಿತ ಬೇಸಿಗೆ ಕ್ರೀಡಾ ತರಬೇತಿ ಶಿಬಿರ ಏರ್ಪಡಿಸಲಾಗಿದೆ.

18 ವರ್ಷದೊಳಗಿನ ಆಸಕ್ತ ಬಾಲಕ, ಬಾಲಕಿಯರು ಏ.14 ರೊಳಗಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಆಸಕ್ತ ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶಿಬಿರದ ಪ್ರಯೋಜನ ಪಡೆದುಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ಬ್ಯಾಸ್ಕೆಟ್ ಬಾಲ್ ತರಬೇತಿದಾರ ವಿ.ಎಸ್. ಪಾಟೀಲ ಅವರ ದೂ: 8317456301ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಳಗಾವಿ ಜಿಲ್ಲೆಯಲ್ಲಿ ದಲಿತರ ಅಭ್ಯುದಯಕ್ಕೆ ಮೀಸಲಿಟ್ಟ ಅನುದಾನ ದುರ್ಬಳಕೆ: ಆರೋಪ

ಖಾನಾಪುರ: ಕಳೆದ 2025ರ ಜು.11ರಂದು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಎಡಿಜಿಪಿ ಕಚೇರಿಯಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದು ಬೆಳಗಾವಿ ಜಿಲ್ಲೆಯ 12 ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು 15ನೇ ಹಣಕಾಸು ಯೋಜನೆಯ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನದ 1 ಕೋಟಿ 50 ಲಕ್ಷ ಹಣವನ್ನು ಅನ್ಯ ಉದ್ದೇಶಗಳಿಗೆ ವಿನಿಯೋಗಿಸಿ ದಲಿತರಿಗೆ ಅನ್ಯಾಯವೆಸಗಿರುವ ಬಗ್ಗೆ ದಾಖಲೆಗಳ ಸಮೇತ ದೂರು ಸಲ್ಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪತ್ರ ಬರೆದಿದ್ದು, ಇದುವರೆಗೂ 15 ತಾಪಂ ಇಒಗಳ ಮೇಲೆ ಕ್ರಮ ಆಗದಿರುವುದು ಡಾ.ಬಾಬಾಸಾಹೇಬ ಅಂಬೇಡ್ಕರರು ಬರೆದ ಸಂವಿಧಾನದ ವಿಧಿ 46ರ ಪರಿಕಲ್ಪನೆಯನ್ನು ಸುಳ್ಳು ಮಾಡಿದೆ ಎಂದು ಅಂಬೇಡ್ಕರ್ ಸೇವಾ ಸಮಿತಿ ಕರ್ನಾಟಕ ಸಂಘಟನೆಯ ಜಿಲ್ಲಾಧ್ಯಕ್ಷ ಸಂತೋಷ ತಳವಾರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಇದೇ ಮಾದರಿಯಲ್ಲಿ ಬೆಳಗಾವಿ ತಾಲೂಕಿನ 32 ಗ್ರಾಮ ಪಂಚಾಯತಿಗಳಲ್ಲಿ 2021-22ರ 15ನೇ ಹಣಕಾಸು ಯೋಜನೆಯಡಿ ಮಂಜೂರಾದ ಕ್ರಿಯಾಯೋಜನೆಯಡಿ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನವನ್ನು ಅನ್ಯ ಕಾರ್ಯಗಳಿಗೆ ವಿನಿಯೋಗಿಸಿದ ಬಗ್ಗೆ ತನಿಖೆ ನಡೆಸಿದ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಪೊಲೀಸ್ ಅಧೀಕ್ಷಕರು ಈ ಅಕ್ರಮದ ಬಗ್ಗೆ ದೊರೆತ ಎಲ್ಲ ದಾಖಲೆಗಳು ಮತ್ತು ವಿಚಾರಣಾ ವರದಿಯೊಂದಿಗೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪತ್ರ ಬರೆದು ಎಂಟು ತಿಂಗಳು ಗತಿಸಿದರೂ ಇದುವರೆಗೂ ಯಾವೊಬ್ಬ ಅಧಿಕಾರಿಯ ವಿರುದ್ಧವೂ ಕ್ರಮ ಜರುಗದಿರುವುದನ್ನು ಗಮನಿಸಿದಾಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮೇಲಾಧಿಕಾರಿಗಳು ತಮ್ಮ ಅಧೀನ ಅಧಿಕಾರಿಗಳ ರಕ್ಷಣೆಯಲ್ಲಿ ತೊಡಗಿದ್ದಾರೆಯೇ ಎಂಬ ಸಂಶಯಕ್ಕೆ ಹಾದಿ ಮಾಡಿಕೊಟ್ಟಿದೆ ಎಂದು ಅವರು ದೂರಿದ್ದಾರೆ.

ಅರ್ಜಿ ಆಹ್ವಾನ

ಬೆಳಗಾವಿ: 2026-27ನೇ ಸಾಲಿಗೆ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಜಿಲ್ಲೆಯ ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಗಳು ಮೇ 4 ರೊಳಗಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿ ಹಾಗೂ ಅರ್ಜಿಗಳಿಗಾಗಿ ಸಂಬಂಧಿಸಿದ ಸಮಾಜ ಕಲ್ಯಾಣ ಇಲಾಖೆ ಹಾಗೂ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಾವೀರ ಅರ್ಬನ್ ಸೊಸೈಟಿಗೆ 8.65 ಲಕ್ಷ ರೂ. ಲಾಭ



ಹುಕ್ಕೇರಿ: ಯುವ ಸಮೂಹ ಆರ್ಥಿಕವಾಗಿ ಸದೃಢರಾಗಲು ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಪ್ರಾರಂಭಿಸಲಾದ ಮಹಾವೀರ ಅರ್ಬನ್‌ಕೋ-ಆಪ್ ಕ್ರೆಡಿಟ್ ಸೊಸೈಟಿ ಪ್ರಸಕ್ತ ಆರ್ಥಿಕ ವರ್ಷಾಂತ್ಯಕ್ಕೆ 8ಲಕ್ಷ 65 ಸಾವಿರ ರೂ.ಗಳ ನಿವ್ವಳ ಲಾಭ ಗಳಿಸಿದೆ ಎಂದು ಅಧ್ಯಕ್ಷ ಪ್ರಜ್ವಲ ನಿಲಜಗಿ ಹೇಳಿದರು.

ಶನಿವಾರ ಸಂಜೆ ಸೊಸೈಟಿ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಹಾವೀರ ಉದ್ಯೋಗ ಸಮೂಹ ಸಂಸ್ಥೆ ಅಧ್ಯಕ್ಷ ಮತ್ತು ನಮ್ಮ ತಂದೆಯಾದ ಮಹಾವೀರ ನಿಲಜಗಿ ಅವರ ಮಾರ್ಗದರ್ಶನದಲ್ಲಿ ಸ್ಥಾಪಿತವಾದ ಸೊಸೈಟಿ 473 ಸದಸ್ಯರಿಂದ 10ಲಕ್ಷ 55 ಸಾವಿರ ಶೇರ ಬಂಡವಾಳ ಹೊಂದಿದೆ. 6 ಕೋಟಿ 76 ಲಕ್ಷರೂಠೇವು ಸಂಗ್ರಹಿಸಿ 6 ಕೋಟಿ 13 ಲಕ್ಷ ಸಾಲ ವಿತರಿಸಿದೆ ಎಂದರು.

ಪ್ರಸ್ತುತ 7 ಕೋಟಿ 48 ಲಕ್ಷ ರೂ.ಗಳ ದುಡಿಯುವ ಬಂಡವಾಳ ಹೊಂದಿರುವ ಸೊಸೈಟಿ 29 ಕೋಟಿ 2 ಲಕ್ಷ ರೂ. ಗಳ ವಾರ್ಷಿಕ ವಹಿವಾಟು ನಡೆಸಿದೆ ಎಂದರು.

ಮುಂಬರುವ ದಿನಗಳಲ್ಲಿ ಸೊಸೈಟಿಯ ಶಾಖೆಯನ್ನುತಾಲೂಕಿನ ಕಣಗಲಾ ಗ್ರಾಮದಲ್ಲಿ ಪ್ರಾರಂಭಿಸಲು ಸಹಕಾರ ಇಲಾಖೆ ಅನುಮತಿಸಿದೆ ಎಂದರು.

ಕೈಗಾರಿಕಾ ಪ್ರದೇಶ ಆಗಿರುವ ಕಣಗಲಾದಲ್ಲಿ ಉದ್ದಿಮೆ ಪ್ರಾರಂಭಿಸುವವರಿಗೆ ಆರ್ಥಿಕ ಕಲ್ಪಿಸುವ ಚಿಂತನೆ ಮಾಡಲಾಗಿದೆ ಎಂದು ತಿಳಿಸಿದರು.

ಉಪಾಧ್ಯಕ್ಷ ರಾಜೇಂದ್ರ ಪಾಟೀಲ, ನಿರ್ದೇಶಕರಾದ ಅಪ್ಪಾಸಾಹೇಬ ಚೌಗಲಾ, ಅಕ್ಷಯ ಕಬಾಡಗೆ, ಗೋಮಟೇಶ ಶೆಟ್ಟಿ, ಆದರ್ಶ ಪಾಟೀಲ, ಜ್ಯೋತಿಭಾ ಪಂತೋಜಿ, ಮಹಮ್ಮದ್ ಹನೀಫ ಸನದಿ, ಶಂಕರ ಗೋಟುರೆ, ಅಶೋಕ ನಯಿಕ, ಉದಯ ಕಾಂಭಳೆ, ಅನುರಾಧಾ ರಜಪೂತ, ಭಾರತಿ ಪಾಟೀಲ ಇದ್ದರು. ಕಾರ್ಯದರ್ಶಿ ಸುಕುಮಾರ ಮುರಗೋಡೆ ವಾರ್ಷಿಕ ವರದಿ ಮಂಡಿಸಿದರು.

ಗ್ರಾಮೀಣ ತೋಟಗಾರಿಕೆ ಕಾರ್ಯಾನುಭವ ಶಿಬಿರದ ಉದ್ಘಾಟನಾ ಕಾರ್ಯಕ್ರಮ

ಮೂಡಲಗಿ: ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟದ ಅಂಗವಾದ ಕಿತ್ತೂರು ರಾಣಿ ಚನ್ನಮ್ಮಾ ತೋಟಗಾರಿಕೆ ಮಹಾವಿದ್ಯಾಲಯ ಅರಭಾವಿಯಿಂದ ರಾಮದುರ್ಗ ತಾಲೂಕಿನ ಗೊಡಚಿ ಗ್ರಾಮದಲ್ಲಿ ಅಂತಿಮ ವರ್ಷದ ಬಿ.ಎಸ್‌ಸಿ ತೋಟಗಾರಿಕೆ ವಿದ್ಯಾರ್ಥಿಗಳ ಗ್ರಾಮೀಣ ತೋಟಗಾರಿಕೆ ಕಾರ್ಯಾನುಭವ ಶಿಬಿರದ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಯುವ ಧುರಿಣ ಅನಿಕೇತನ ಪಟ್ಟಣ ಉದ್ಘಾಟಿಸಿ ಯುವಕರನ್ನುದ್ದೇಶಿಸಿ ತೋಟಗಾರಿಕೆ ಬಗ್ಗೆ ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಅಂತಿಮ ವರ್ಷದ ಬಿ.ಎಸ್‌ಸಿ. ತೋಟಗಾರಿಕೆಯ 75 ವಿದ್ಯಾರ್ಥಿಗಳು ಮೂರು ತಿಂಗಳು ಕಾಲ ಗೊಡಚಿ ಗ್ರಾಮದಲ್ಲಿ ತಂಗಲಿದ್ದು ರೈತರೊಂದಿಗೆ ಸಂಪರ್ಕ ಹೊಂದಿ ರೈತರಿಂದ ತೋಟಗಾರಿಕಾ ಮಾಹಿತಿ ಪಡೆದುಕೊಳ್ಳುವರು. ವಿದ್ಯಾರ್ಥಿಗಳು ರೈತರಿಗೆ ಹೊಸ ತಂತ್ರಜ್ಞಾನಗಳನ್ನು ಪರಿಚಯಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಕಿರಾಚತೋ ಮಹಾವಿದ್ಯಾಲಯದ ಡೀನ್ ಡಾ.ಆನಂದ ಮಾಸ್ತಿಹೊಳಿ, ಜಿಲ್ಲಾ ಅಭಿವೃದ್ಧಿ ಅಧಿಕಾರಿ ಅಭಿನವ ಯಾದವ, ಲೀಡ್ ಬ್ಯಾಂಕ್ ವ್ಯವಸ್ಥಾಪಕ ಪ್ರಶಾಂತ ಗೊಡಕೆ, ರಾಮದುರ್ಗ ಸಹಾಯಕ ಕೃಷಿ ನಿರ್ದೇಶಕ ಶ್ರೀನಾಥ ಚಿಮ್ಮಲಗಿ, ಗೊಡಚಿ ಪ್ರಗತಿಪರ ರೈತ ಪ್ರಕಾಶ ಮುರಕಟನಾಳ ಮಾತನಾಡಿದರು.



ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮಂಜುನಾಥ ದೇವರಡ್ಡಿ, ಕೃಷಿ ಅಧಿಕಾರಿ ಆರ್.ವಿ.ದಾಸರ, ಅಶೋಕ ವಾಲಿಕಾರ ಹಾಗೂ ಕಿರಾಚತೋಮ ಅರಭಾವಿಯ ಡಾ.ವಿಲಾಸ ಗಸ್ತಿ, ಗ್ರಾ.ತೋ.ಕಾ.ಶಿ ಸಂಯೋಜಕರು ಡಾ.ಎಸ್.ಜಿ ಪ್ರವೀಣಕುಮಾರ, ಗ್ರಾ.ತೋ.ಕಾ.ಶಿ. ಸಹ ಸಂಯೋಜಕರು, ಕಿರಾಚತೋಮ ಚಂದರಗಿ ಗ್ರಾಮದ ರೈತರು ಇದ್ದರು. ಈ ವೇಳೆ ಸುನಿತಾ ಸ್ವಾಗತಿಸಿ, ನಾಗಮಣಿ ನಿರೂಪಿಸಿ, ಪ್ರದೀಪ ವಂದಿಸಿದರು.



ಧಾರವಾಡ: ಡಾ. ಬಿ.ಆರ್.ಅಂಬೇಡ್ಕರ್ ಜಯಂತಿ ದಿನ ಯಾವುದೇ ಸಂಘಟನೆಗಳ ಪ್ರತಿಭಟನೆ, ರ್‍ಯಾಲಿಗೆ ಅವಕಾಶ ನೀಡದಂತೆ ಭೀಮ-ಶಕ್ತಿ ಸಂಘಟನೆ ಉಪನಗರ ಠಾಣೆ ಮುಂದೆ ಪ್ರತಿಭಟಿಸಿ, ಮನವಿ ಸಲ್ಲಿಸಿದೆ.

ಸೂಕ್ತ ಕ್ರಮಕ್ಕೆ ಆಗ್ರಹಿಸಿ ಮನವಿ

ಅಳ್ನಾವರ: ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ನಡೆದಿದೆ ಎನ್ನಲಾದ ಲವ್ ಜಿಹಾದ ಪ್ರಕರಣದಲ್ಲಿ ಭಾಗಿಯಾದವರ ಮೇಲೆ ಸೂಕ್ತ ಕ್ರಮ ಕೈಗೊಂಡು ಇದರಲ್ಲಿ ಭಾಗಿಯಾದವರ ಬಗ್ಗೆ ತನಿಖೆ ನಡೆಸಬೇಕೆಂದು ಆಗ್ರಹಿಸಿ ಅಳ್ನಾವರದ ಹಿಂದೂ ರಾಷ್ಟ್ರ ಸಮನ್ವಯ ಸಮಿತಿಯವರು ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಮತಾಂತರ, ಲೈಂಗಿಕ ಕಿರುಕುಳ ಹಾಗೂ ಬೆದರಿಕೆಯಂತಹ ಪ್ರಕರಣಗಳು ಬೆಳಕಿಗೆ ಬರುತ್ತಿದ್ದು, ಜಿಮ್‌ಗಳಲ್ಲಿ ಇಂತಹ ಘಟನೆಗಳು ಹೆಚ್ಚಾಗಿ ನಡೆಯುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಒಂದು ಧರ್ಮವನ್ನು ಗುರಿಯಾಗಿಟ್ಟುಕೊಂಡು ನಡೆಯುತ್ತಿರುವ ಕೃತ್ಯಗಳನ್ನು ತಡೆಯುವದು ಅವಶ್ಯವಿದೆ ಎಂದು ಮಹಾದೇವ ಸಾಗರೇಕರ ನೇತೃತ್ವದಲ್ಲಿ ಉಪ ತಹಶೀಲ್ದಾರ್ ಮಲ್ಲಿಕಾರ್ಜುನ ಬಿರಾದಾರ ಅವರಿಗೆ ಮನವಿ ಸಲ್ಲಿಸಲಾಯಿತು.



ಆಧುನಿಕ ತಂತ್ರಜ್ಞಾನ ಸಹಕಾರಿ



ಧಾರವಾಡ: ಎಸ್‌ಡಿಎಂ ವೈದ್ಯಕೀಯ ಕಾಲೇಜಿನಲ್ಲಿ ವಾಕ್ ಮತ್ತು ಶ್ರವಣ ಚಿಕಿತ್ಸೆ ವಿಭಾಗದಿಂದ ಇತ್ತೀಚಿನ ಆಟಿಸಂಣ ಮಧ್ಯಸ್ಥಿಕೆ; ಸಮಗ್ರ, ಸಂಯೋಜಿತ ಮತ್ತು ಪುರಾವೆ ಆಧಾರಿತ ವಿಧಾನ ವಿಷಯದ ಕುರಿತು ಎರಡು ದಿನಗಳ ಕಾರ್ಯಾಗಾರ ಜರುಗಿತು.

ಕಾರ್ಯಾಗಾರ ಉದ್ಘಾಟಿಸಿದ ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಭಾಷಾತಜ್ಞೆ ಡಾ. ಜಯಶ್ರೀ ಶಾನಬಾಳ ಮಾತನಾಡಿ, ಆಟಿಸಂ ಸಮಸ್ಯೆಗಳನ್ನು ನಿವಾರಿಸಲು ಆಧುನಿಕ ತಂತ್ರಜ್ಞಾನ ಬಹಳಷ್ಟು ಸಹಕಾರಿಯಾಗಿದೆ ಎಂದರು.


ಆಟಿಸಂ ಕ್ಷೇತ್ರಕ್ಕೆ ನೀಡಿದ ಕೊಡುಗೆ ಮೆಲಕು ಹಾಕಿದ ಅವರು, ಈ ಆಟಿಸಂ ಚಿಕಿತ್ಸೆಯಲ್ಲಿ ಡಿಜಿಟಲ್ ಇಂಡಿಯಾ ಮೂಲಕವೇ ಪುನರ್ವಸತಿ ಕಲ್ಪಿಸಬೇಕು ಎಂದು ತಿಳಿಸಿದರು. ಕೊನೆಯಲ್ಲಿ ಡಾ. ಜಯಶ್ರೀ ಶಾನಬಾಳ ಅವರನ್ನು ಸನ್ಮಾನಿಸಲಾಯಿತು. ಉಪಕುಲಸಚಿವ ಡಾ.ಅಜಂತಾ ಜಿ.ಎಸ್., ಎಸ್‌ಡಿಎಂ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯ ವಿಜಯ ಕುಲಕರ್ಣಿ, ಹಣಕಾಸು ಅಧಿಕಾರಿ ವಿ.ಜಿ.ಪ್ರಭು, ಡಾ. ಚಿದೇಂದ್ರ ಶೆಟ್ಟರ, ಡಾ.ಸಂಜಯ ಪಾರಮಾರ, ಡಾ.ರಶ್ಮಿ, ಸಿಂಚನಾ, ಡಾ.ವಸೀಮ್ ಇದ್ದರು.

ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ

ಕುಂದಗೋಳ: ಇಂದಿನ ತಂತ್ರಜ್ಞಾನ ಯುಗದಲ್ಲಿ ವಂಶ ಪಾರಂಪರಿವಾಗಿ ಗಂಟಿ ಸುಡುಗಾರಸಿದ್ದರ ಕಲೆಯನ್ನು ವಿವಿಧ ರಾಜ್ಯಗಳಲ್ಲಿ ಪ್ರದರ್ಶನ ನೀಡುತ್ತಿರುವ ಕಲಾವಿದ ಯಲ್ಲಪ್ಪ ಡಕ್ಕಣ್ಣವರ ಅವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಬೇಕೆಂದು ಹಿರಿಯ ಜಾನಪದ ಕಲಾವಿದ ಎಸ್. ಎಸ್. ಹಿರೇಮಠ ಹೇಳಿದರು. ತಾಲೂಕಿನ ಹರಲಾಪೂರ ಗ್ರಾಮದ ಜಾನಪದ ಕ್ರೀಡಾ ರಂಗ ಕುಟೀರದಲ್ಲಿ ಆಯೋಜಿಸಿರುವ ಯುವಜನ ಹಾಗೂ ಸಾಂಸ್ಕೃತಿಕ ಅಭಿವೃದ್ಧಿ ಕೇಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯೋಗದಲ್ಲಿ ಲಿಂ.ಪಾರ್ವತಮ್ಮ ಚಂ. ನರೇಗಲ್ಲಮಠ ಅವರ ಸ್ಮರಣೆಗೆ ನಡೆಯುತ್ತಿರುವ ರಾಜ್ಯಮಟ್ಟದ ಮಕ್ಕಳ ಮಲ್ಲಕಂಬ ಜಾನಪದ ಯೋಗ ಶಿಬಿರದಲ್ಲಿ ಕಲಾವಿದ ಯಲ್ಲಪ್ಪ ಡಕ್ಕಣ್ಣವರ ಅವರಿಗೆ ಸನ್ಮಾನಿಸಿ ಮಾತನಾಡಿ, ಇಂತಹ ಪರಂಪರೆಯನ್ನು ಉಳಿಸಿ ಬೆಳೆಸುತ್ತಿರುವ ಇವರ ಕಾರ್ಯ ಶ್ಲಾಘನಿಯವಾಗಿದೆ. ಇವರಿಗೆ ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕಾರ ಲಭಿಸಿದೆ ಎಂದರು. ಕಲಾವಿದ ಯಲ್ಲಪ್ಪ ಡಕ್ಕಣ್ಣವರ ಮಾತನಾಡಿ, ನಮ್ಮ ಪೂರ್ವಿಕರು ಈ ಸಿದ್ದಿಕಲೆಯನ್ನು ಕರಗತ ಮಾಡಿಕೊಂಡು ಸುತ್ತಾಡುತ್ತಿದ್ದರು. ನಾವು ಸಹ ನಮ್ಮ ಪರಂಪರೆಯ ಕಲೆಯನ್ನು ರಾಜ್ಯ ವ್ಯಾಪ್ತಿ ಸುತ್ತಾಡಿ ಜಾಗೃತಿ ಮೂಡಿಸುತ್ತಿರುವ ಕುರಿತು ಮಕ್ಕಳಲ್ಲಿ ಹಂಚಿಕೊಂಡರು. ಗಣೇಶ ಕಮ್ಮಾರ, ರುದ್ರಮುನಿ ಹಿರೇಮಠ, ಎನ್. ದೇವರಾಜ, ಸಂದೀಪ ಪಾಟೀಲ್, ಅಮೋಘ ಹಿರೇಮಠ, ವಿದ್ಯಾರ್ಥಿಗಳು ಇದ್ದರು.



1200 ಫಲಾನುಭವಿಗಳ ಸಮಾವೇಶ



ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯ 35ನೇ ವಾಡ್‌ನ ಬೈರಿದೇವರಕೊಪ್ಪದ ಸರ್ಕಾರಿ ಶಾಲೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳ 1200 ಫಲಾನುಭವಿಗಳ ಸಮಾವೇಶವನ್ನು ವಿಧಾನ ಪರಿಷತ್ ಸದಸ್ಯ ಎಫ್. ಎಚ್. ಜಕ್ಕಪ್ಪನವರ ಉದ್ಘಾಟಿಸಿದರು. ಈ ವೇಳೆ 11 ಅಂಗನವಾಡಿಯ ಕಾರ್ಯಕರ್ತರು, ಸಹಾಯಕರಿಗೆ ಸನ್ಮಾನಿಸಲಾಯಿತು.

ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಜತ್ ಉಳ್ಳಾಗಡ್ಡಿಮಠ ಮಾತನಾಡಿ, ಕರ್ನಾಟಕದಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಈ ಐದು ಗ್ಯಾರಂಟಿ ಯೋಜನೆಗಳು ಮಹಿಳೆಯರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುವುದಲ್ಲದೆ, ಮಹಿಳೆಯರು ಕುಟುಂಬದ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಪುರುಷರ ಸಮಾನವಾಗಿ ಪ್ರಮುಖ ಪಾತ್ರ ವಹಿಸುವಂತೆ ಮಾಡಿವೆ. ಕಾಂಗ್ರೆಸ್ ಪಕ್ಷ ಜನರಿಗೆ ನೀಡಿದ ಭರವಸೆಯನ್ನು ಯಶಸ್ವಿಯಾಗಿ ಈಡೇರಿಸಿದೆ ಎಂದರು.

ಬಾಲವಿಕಾಸ್ ಅಕಾಡೆಮಿಯ ಅಧ್ಯಕ್ಷ ಅಡಿವೇಶ್ ಇಟಗಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಲ್ತಾಫ್ ಹಳ್ಳೂರ್, ಜಿಲ್ಲಾ ಗ್ಯಾರೆಂಟಿ ಸಮಿತಿ ಅಧ್ಯಕ್ಷ ಪ್ರಕಾಶ್ ಹಳಿಯಾಲ್, ಜಿಲ್ಲಾ ಗ್ಯಾರೆಂಟಿ ಸಮಿತಿ ಉಪಾಧ್ಯಕ್ಷ ವೀರೇಶಯ್ಯ ಕಡಕೋಳಮಠ, ಸೆಂಟ್ರಲ್ ಕ್ಷೇತ್ರದ ಗ್ಯಾರೆಂಟಿ ಸಮಿತಿ ಅಧ್ಯಕ್ಷ ಸಂಗಮೇಶ್ ಗೌರಕ್ಕನವರ್, ಉಣಕಲ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷರೀಫ್ ಗರಗದ, ಬಸವರಾಜ ಬೆಲ್ಲದ್, ಪ್ರಕಾಶ್ ಮಾಯಕರ್ ಇದ್ದರು.

ಕಿರುಸುದ್ದಿ

ಜ್ಯೋತಿ ಇಂಗಳಗಿ ಆಯ್ಕೆ



ದೇವರ ಹಿಪ್ಪರಗಿ: ತಾಲೂಕಿನ ಕೋರವಾರ ಗ್ರಾಮದಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಸಾಗರ್ ಬಣ) ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ 135ನೇ ಜಯಂತಿ ನಿಮಿತ್ತ ಕೊಡ ಮಾಡುವ ರಾಜ್ಯ ಮಟ್ಟದ ಸ್ಫೂರ್ತಿದಾಯಕ ವ್ಯಕ್ತಿ ಪ್ರಶಸ್ತಿ 2026ರ ದೇವರ ಹಿಪ್ಪರಗಿ ತಾಲೂಕಿನ ಇಂಗಳಗಿ ಗ್ರಾಮದ ಡೊಳ್ಳಿನ ಹಾಡಿಕೆ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದಿರುವ ಜ್ಯೋತಿ ಇಂಗಳಗಿ ಇವರ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಏ. 19ರಂದು ಸಂಜೆ 5ಕ್ಕೆ ಕೋರವಾರ ಗ್ರಾಮದಲ್ಲಿ ಜರುಗುವ ಅಂಬೇಡ್ಕರ್ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಅಶೋಕ ಲಾಗಲೋಟಿ ಆಯ್ಕೆ



ಬಾಗಲಕೋಟೆ: ನಗರದ ಜ್ಯೋತಿ ಕೋ-ಆಫ್ ಕ್ರೆಡಿಟ್ ಸೋಸೈಟಿಯ(ಬ್ಯಾಂಕಿನ) ಅಧ್ಯಕ್ಷರಾಗಿ ಅಶೋಕ ಲಾಗಲೋಟಿ, ಉಪಾಧ್ಯಕ್ಷರಾಗಿ ಮುತ್ತಪ್ಪ ಕೆಂಪಣ್ಣವರ ಅವಿರೋಧವಾಗಿ ಆಯ್ಕೆಯಾದರು. ನಿರ್ದೇಶಕರಾಗಿ ಮಲ್ಲನಗೌಡ ನಾಡಗೌಡರ, ಬಸಲಿಂಗಪ್ಪ ಹೊಕ್ರಾಣಿ, ಸಿದ್ದಣ್ಣ ಕಾಖಂಡಕಿ, ನಿಂಗಣ್ಣ ಗೋಡಿ, ಧರಿಯಪ್ಪ ಯಳ್ಳಿಗುತ್ತಿ, ಸಂಗಪ್ಪ ಕೊಪ್ಪದ, ಚಂದ್ರಕಾಂತ ಕೇಸನೂರ, ಪ್ರಭಾವತಿ ಹೆರಕಲ್, ಕವಿತಾ ಏಳೆಮ್ಮಿ, ಪರಸಪ್ಪ ಮಾದರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಬ್ಯಾಂಕಿನ ವ್ಯವಸ್ಥಾಪಕ ಬಾಬು ಶ.ನಾಡಗೌಡ ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.

ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಇಂದು

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ-2026ರ ಹಿನ್ನಲೆಯಲ್ಲಿ ಜಿಲ್ಲೆಯಾದ್ಯಂತ ನೀತಿ ಸಂಹಿತೆ ಜಾರಿಯಾಗಿರುವುದರಿಂದ ಏ.14ರಂದು ಆಚರಿಸಲ್ಪಡುವ ಡಾ.ಬಿ.ಆರ್.ಅಂಬೇಡ್ಕರರವರ ಜಯಂತಿಯನ್ನು ಸರಳವಾಗಿ ಆಚರಿಸಲಾಗುತ್ತಿದೆ. ಅಂದು ಇಲಕಲ್ಲ ತಹಶೀಲ್ದಾರ್ ಕಚೇರಿಯಲ್ಲಿ ಬೆಳಿಗ್ಗ 9.30ಕ್ಕೆ ಹಾಗೂ ಹುನಗುಂದ ತಹಶೀಲ್ದಾರ್ ಕಚೇರಿಯಲ್ಲಿ ಬೆಳಿಗ್ಗೆ 10.30 ಗಂಟೆಗೆ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪ ಅರ್ಪಿಸುವ ಮೂಲಕ ಸರಳವಾಗಿ ಆಚರಿಸಲಾಗುವುದೆಂದು ಇಲಕಲ್ಲ ಹಾಗೂ ಹುನಗುಂದ ತಹಶೀಲ್ದಾರರು ಹಾಗೂ ಡಾ.ಬಿ.ಆರ್.ಅಂಬೇಡ್ಕರ ಜಯಂತಿ ಆಚರಣಾ ಸಮಿತಿಯ ಅಧ್ಯಕ್ಷರು ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೀದಿ ನಾಯಿಗಳ ಹಾವಳಿ: ಕ್ರಮಕ್ಕೆ ಆಗ್ರಹ

ಜಮಖಂಡಿ: ನಗರದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗುತ್ತಲೇ ಹೋಗುತ್ತಿದೆ. ಇದಕ್ಕೆ ಅಧಿಕಾರಿಗಳು ಕಡಿವಾಣ ಹಾಕಲು ಆಗುತ್ತಿಲ್ಲ ಎಂದು ನಾಗರಿಕರು ಆರೋಪಿಸಿದ್ದಾರೆ.

ಇತ್ತೀಚೆಗೆ ಕಳೆದೆರಡು ತಿಂಗಳಿನಿಂದ ಮಕ್ಕಳ ಮೇಲೆ ಬೀದಿ ನಾಯಿಗಳ ಉಪಟಳ ಹೆಚಾಗಿದೆ. ಸಂಜೆಯ ಸಮಯದಲ್ಲಿ ವೃದ್ಧರು ವಾಯು ವಿಹಾರಕ್ಕೂ ಸಹ ಹೋಗಲು ಹಿಂಜರಿಯುತ್ತಿದ್ದಾರೆ. ಆದರೆ, ಇದನ್ನು ನೋಡುತ್ತ ನಗರಸಭೆಯ ಅಧಿಕಾರಿಗಳು ತಮಗೇನು ಸಂಬಂಧವಿಲ್ಲವೆಂಬಂತೆ ಸುಮಮ್ಮನೇ ಕುಳಿತಿದ್ದಾರೆ ಎಂದು ಆರೋಪವು ಕೇಳಿ ಬರುತ್ತಿದೆ. ಬೀದಿ ನಾಯಿಗಳ ಮತ್ತು ಬಿಡಾಡಿ ದನಗಳ ಹಾವಳಿಯನ್ನು ತಪ್ಪಿಸಲು ಸಾರ್ವಜನಿಕರು ಅನೇಕ ಬಾರಿ ಮನವಿ ಮಾಡಿದರೂ ಸಹ ಯಾವುದೇ ಪ್ರಯೋಜನೆಯಾಗಿಲ್ಲ. ಈಗಂತೂ ಎಲ್ಲೆಂದರಲ್ಲಿ ಬೀದಿ ನಾಯಿಗಳು ತುಂಬಿಕೊಂಡಿವೆ. ಯಾರಾದರೂ ಮನೆಯ ಸಾಮಾನು ತೆಗೆದುಕೊಂಡು ಹೊರಟರೇ ಅವುಗಳು ಅವರ ಮುಗಿ ಬೀಳುತ್ತವೆ. ಎಲ್ಲೆಂದರಲ್ಲಿ ಕಚ್ಚಿ ಘಾಸಿಗೊಳಿಸುತ್ತವೆ. ಆದರೂ ಸಹ ನಮ್ಮ ಅಧಿಕಾರಿಗಳು ಜಾಣ ಮೌನ ವಹಿಸಿದ್ದಾರೆ ಎಂದು ಆರೋಪವು ಕೇಳಿ ಬರುತ್ತಿದೆ. ಬೀದಿ ನಾಯಿಗಳಿಗೆ ಕಡಿವಾಣ ಯಾವಾಗ ಎನ್ನುವುದೇ ಸಾರ್ವಜನಿಕರು ಚಿಂತೆಯಗಿದೆ. ಒಂದೆರಡು ದಿನ ಹಿಂದೆ ಚಿಕ್ಕಗಲಗಾರ ಕಾಲನಿ ಹತ್ತಿರ ಚಿಕ್ಕ ಮಕ್ಕಳು ಆಟವಾಡುತ್ತಿರುವಾಗ ಬೀದಿ ನಾಯಿಗಳ ಹಿಂಡು ಅವರ ಮೇಲೆ ಎರಗಿ ಕಚ್ಚಿ ಘಾಸಿ ಗೊಳಿಸಿವೆ. ಗಾಯಾಳುಗಳನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಯಾವುದೆ ತೊಂದರೆಯಿಲ್ಲವೆಂದು ವೈದ್ಯರು ತಿಳಿಸಿದ್ದಾರೆ . ಆದರೆ ಇದು ಪುರಾವರ್ತನೆಯಾಗದಂತೆ ನಗರ ಸಭೆಯ ಅಧಿಕಾರಿಗಳು ಕಡಿವಾಣ ಹಾಕಲೇ ಬೇಕು ಎಂದು ಸಾರ್ವಜನಿಕರು ಕೋರಿದ್ದಾರೆ.

ನಿಧನ ಸುದ್ದಿ

ಮಹಾದೇವಿ ಹಿರೇಮಠ



ರಬಕವಿ-ಬನಹಟ್ಟಿ: ರಬಕವಿಯ ಜಂಗಮ ಸಮಾಜದ ಹಿರಿಯರಾದ ಮಹಾದೇವಿ ಹಿರೇಮಠ(78) ಭಾನುವಾರ ನಿಧನರಾದರು. ಮೃತರಿಗೆ ಮೂವರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಳಗವಿದೆ.



ರಬಕವಿ-ಬನಹಟ್ಟಿ: ಬೆಂಗಳೂರಿನಲ್ಲಿ ಈಚೆಗೆ ನಡೆದ ಎಜ್ಯುಕೇಶನ್ ಅವಾರ್ಡ್‌ನಲ್ಲಿ ಬಾಗಲಕೋಟೆ ಜಿಲ್ಲೆಯ ಅತ್ಯುತ್ತಮ ಶಾಲೆ ಪ್ರಶಸ್ತಿಯನ್ನು ಬನಹಟ್ಟಿಯ ಸಾಯಿ ಪ್ಲೇಹೋಂ ಹಾಗೂ ಭಕ್ತಿ ಪೂರ್ವ ಪ್ರಾಥಮಿಕ ಶಾಲೆಯು ಪ್ರಶಸ್ತಿ ಪಡೆಯುವಲ್ಲಿ ಕಾರಣವಾಯಿತು.

ಸ್ವಯಂ ಜನಗಣತಿ ಅಭಿಯಾನಕ್ಕೆ ಚಾಲನೆ

ಇಳಕಲ್: ಕರ್ನಾಟಕ ಸರ್ಕಾರ, ಬಾಗಲಕೋಟೆ ಜಿಲ್ಲಾ ಆಡಳಿತ, ಇಳಕಲ್ ತಾಲೂಕು ಆಡಳಿತ ಹಾಗೂ ನಗರಸಭೆ ಕಾರ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಭಾರತದ ಜನಗಣತಿ 2027 ರ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಸ್ವಯಂ ಜನಗಣತಿ ಅಭಿಯಾನದ ಬೈಕ್ ಜಾಥಾ ಕಾರ್ಯಕ್ರಮಕ್ಕೆ ಅದ್ದೂರಿ ಚಾಲನೆ ನೀಡಲಾಯಿತು.

ನಗರದ ಬಸವೇಶ್ವರ ವೃತ್ತದಲ್ಲಿ ಹಮ್ಮಿಕೊಳ್ಳಲಾಗಿದ್ದ ಈ ಕಾರ್ಯಕ್ರಮಕ್ಕೆ ಇಳಕಲ್ ತಾಲೂಕಿನ ತಹಶೀಲ್ದಾರ್ ಅಮರೇಶ ಪಮ್ಮಾರ, ಹಾಗೂ ನಗರಸಭೆಯ ಪೌರಾಯುಕ್ತರಾದ ಶ್ರೀನಿವಾಸ ಜಾಧವ ಅವರು ಚಾಲನೆ ನೀಡಿದರು.

ಬಸವೇಶ್ವರ ವೃತ್ತದಿಂದ ಆರಂಭಗೊಂಡ ಈ ಬೈಕ್ ಜಾಥಾವು ಕಂಠಿ ವೃತ್ತ ಮಾರ್ಗವಾಗಿ ಸಂಚರಿಸಿತು. ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ಅಧಿಕಾರಿಗಳು ಮತ್ತು ಸಿಬ್ಬಂದಿ, ಸಾರ್ವಜನಿಕರಲ್ಲಿ ಸ್ವಯಂ ಜನಗಣತಿಯ ಕುರಿತು ಜಾಗೃತಿ ಮೂಡಿಸಿದರು.

ಈ ಜಾಗೃತಿ ಅಭಿಯಾನದಲ್ಲಿ ಇಳಕಲ್ ತಾಲೂಕು ತಹಶೀಲ್ದಾರ್ ಕಾರ್ಯಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ, ಇಳಕಲ್ ನಗರಸಭೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ನಗರದ ವಿವಿಧ ಶಾಲೆಗಳ ಶಿಕ್ಷಕರು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.



ಇಳಕಲ್: ಕರ್ನಾಟಕ ಸರ್ಕಾರ, ಬಾಗಲಕೋಟೆ ಜಿಲ್ಲಾ ಆಡಳಿತ, ಇಳಕಲ್ ತಾಲೂಕು ಆಡಳಿತ ಹಾಗೂ ನಗರಸಭೆ ಕಾರ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಭಾರತದ ಜನಗಣತಿ 2027 ರ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಸ್ವಯಂ ಜನಗಣತಿ ಅಭಿಯಾನದ ಬೈಕ್ ಜಾಥಾ ಕಾರ್ಯಕ್ರಮಕ್ಕೆ ಇಳಕಲ್ ತಾಲೂಕಿನ ತಹಶೀಲ್ದಾರ್ ಅಮರೇಶ ಪಮ್ಮಾರ, ಹಾಗೂ ನಗರಸಭೆಯ ಪೌರಾಯುಕ್ತರಾದ ಶ್ರೀನಿವಾಸ ಜಾಧವ ಅವರು ಅವರು ಚಾಲನೆ ನೀಡಿದರು.

ಧೂಳು ತಿನ್ನುತ್ತಿರುವ ಆಸನಗಳು | ಅಭಿವೃದ್ಧಿಗೆ ಸಾರ್ವಜನಿಕರ ಆಗ್ರಹ

ನಿರ್ವಹಣೆಯಿಲ್ಲದ ಉದ್ಯಾನವನಗಳು!

▸ ಮಲ್ಲಿಕಾರ್ಜುನ ತುಂಗಳ

ರಬಕವಿ-ಬನಹಟ್ಟಿ: ತಾಲೂಕುಕೇಂದ್ರವಾಗಿರುವ ರಬಕವಿ-ಬನಹಟ್ಟಿ ಅವಳಿ ಪಟ್ಟಣಕ್ಕೆ ಸುಮಾರು 1.3 ಲಕ್ಷದ ಜನಸಂಖ್ಯೆಯ ಕಿರೀಟವಿದೆ. ಉತ್ತಮ ಶಿಕ್ಷಣ, ಉದ್ಯಮ ಹೀಗೆ ಹಲವಾರು ಯಶಸ್ಸಿನ ಮೆಟ್ಟಿಲುಗಳ ಮೇಲೆ ನಿಂತಿರುವ ಪಟ್ಟಣಕ್ಕೆ ಬೆಳಿಗ್ಗೆ ಅಥವಾ ಸಂಜೆ ಹೊತ್ತು ಹಾಯಾಗಿ ಸಂಚರಿಸಿ ಶುದ್ಧ ಗಾಳಿ ಪಡೆಯಲು ಒಂದೇ ಒಂದು ಉದ್ಯಾನವನ ನಿರ್ವಹಣೆಯಾಗದಿರುವುದು ವಿಪರ್ಯಾಸದ ಸಂಗತಿ.

ಬನಹಟ್ಟಿಯ ನೀರಿನ ಟಾಕಿ ಹಾಗು ಅಶೋಕ ಕಾಲನಿಯಲ್ಲಿ ಉದ್ಯಾನವಗಳಿವೆ. ಧೂಳು ತಿನ್ನುತ್ತಿರುವ ಆಸನಗಳು, ಒಣಗಿ ನಿಂತು ಯಾವ ಕ್ಷಣದಲ್ಲಾದರೂ ನೆಲಕಚ್ಚುವ ಸ್ಥಿತಿಯಲ್ಲಿರುವ ವೃಕ್ಷಗಳು, ಆಗಾಗಕಾಣಿಸಿಕೊಳ್ಳುವವಿಷಜಂತುಗಳು. ಈ ದೃಶ್ಯ ಕಂಡು ಬರುವದು ಸಾಮಾನ್ಯವಾಗಿವೆ. ಸತತ ಮೂರ್ನಾಲ್ಕು ವರ್ಷಗಳಿಂದ ಉದ್ಯಾನವನಕ್ಕೆ ಬೀಗ ಹಾಕಿದ ಕಾರಣ ನಿರ್ವಹಣೆ ಇಲ್ಲದೆ ಮರ-ಗಿಡಗಳು ಸಂಪೂರ್ಣ ಒಣಗಿದರೆ, ಇಲ್ಲಿನ ಆಸನಗಳು ಧೂಳು ತಿನ್ನುತ್ತಿವೆ. ಅಲ್ಲದೆ ಆಗಾಗ ವಿಷ ಜಂತುಗಳು ಸಹ ಕಾಣಿಸಿಕೊಳ್ಳುತ್ತಿವೆ.

ಲಕ್ಷಾಂತರ ರೂ. ನೀರಿನಂತೆ ಖರ್ಚು ಮಾಡಿ ಇದೀಗ ಉದ್ಯಾನವನ ಸಾರ್ವಜನಿಕರ ಉಪಯೋಗಕ್ಕೆ ಮುಕ್ತವಾಗಿರಿಸದಿರುವುದು ಸಾಕಷ್ಟು ಅಸಮಾಧಾನಕ್ಕೆ ಕಾರಣವಾಗಿದೆ. ಇನ್ನಾದರೂ ಸಂಬಂಧಿಸಿದ ಅಧಿಕಾರಿಗಳು ಇತ್ತ ಗಮನಹರಿಸಿ ಸಮಸ್ಯೆ ಬಗೆಹರಿಸುವದು ಅವಶ್ಯವಿದೆ.

ಭೂಗಳ್ಳರ ಪಾಲಾದ ಉದ್ಯಾನವನಗಳು: ಕಳೆದೆರಡು ದಶಕಗಳಿಂದ ರಬಕವಿ-ಬನಹಟ್ಟಿ ನಗರಾಭಿವೃದ್ಧಿಯಲ್ಲಿ 50 ಕ್ಕೂ ಹೆಚ್ಚು ಲೇಔಟ್‌ಗಳು ಹುಟ್ಟಿಕೊಂಡಿದ್ದು, ಎಲ್ಲಿಯೂ ಉದ್ಯಾನವನದ ಕುರುಹುಗಳು ದೊರಕುತ್ತಿಲ್ಲ. ಬಹುತೇಕ ಸಮುದಾಯ ಭವನ ಹಾಗು ಉದ್ಯಾನವನಗಳು ಭೂಗಳ್ಳರ ಪಾಲಾಗಿದ್ದು, ಇವರಿಗೆ ಅಧಿಕಾರಿಗಳ ಸಾಥ್ ಸ್ಪಷ್ಟವಾಗಿ ಗೋಚರಿಸುತ್ತಿದೆ.

ಇವೆಲ್ಲದರ ಕುರಿತಾಗಿ ತುರ್ತು ತನಿಖೆಯಾಗಿ ನಗರಸಭೆ ತನ್ನ ಅಧೀನಕ್ಕೆ ಎಲ್ಲ ಉದ್ಯಾನವನಗಳನ್ನು ವಶಕ್ಕೆ ಪಡೆದು ಅಭಿವೃದ್ಧಿ ಪಡಿಸುವ ಮೂಲಕ ಸಾರ್ವಜನಿಕರಿಗೆ ಅನುಕೂಲ ಮಾಡಬೇಕೆಂದು ಸ್ಥಳೀಯರ ಒತ್ತಾಯವಾಗಿದೆ.



'ಸಿಬ್ಬಂದಿ ಕೊರತೆ ಕಾರಣ ಉದ್ಯಾನವನ ನಿರ್ವಹಣೆ ಸಮಸ್ಯೆಯಾಗುತ್ತಿದೆ. ಸಾರ್ವಜನಿಕರು ಜವಾಬ್ದಾರಿಯಿಂದ ನಿರ್ವಹಣೆ ಮಾಡಿದಲ್ಲಿ ಉದ್ಯಾನವನಕ್ಕೆ ಮುಕ್ತ ಅವಕಾಶ ಕಲ್ಪಿಸುವೆ. ಖಾಸಗಿ ಲೇಔಟ್‌ಗಳಲ್ಲಿನ ಉದ್ಯಾನವನಗಳ ಬಗ್ಗೆ ಸಮಗ್ರ ಮಾಹಿತಿ ಪಡೆದಿದ್ದು, ಶೀಘ್ರವೇ ಉದ್ಯಾನವನ ನಿರ್ವಹಣೆಗೆ ಎಲ್ಲವನ್ನೂ ವಶಪಡಿಸಲಾಗುವುದು.

■ ರಮೇಶ ಜಾಧವ, ಪೌರಾಯುಕ್ತರು, ರಬಕವಿ-ಬನಹಟ್ಟಿ.

ಸಾಮಾಜಿಕ ಸೇವಾ ಮನೋಭಾವ ಬೆಳೆಸುವ ಭಾರತ ಸ್ಕೌಟ್ಸ್, ಗೈಡ್ಸ್: ದಳವಾಯಿ

ಬಾಗಲಕೋಟೆ: ಸಾಮಾಜಿಕ ಕ್ಷೇತ್ರದಲ್ಲಿಂದು ಸೇವಾ ಮನೋಭಾವ ಮುಖ್ಯವಾಗಿದೆ. ವಿದ್ಯಾರ್ಥಿಗಳಲ್ಲಿ ಸೇವೆಯಿಂದ ಪ್ರಾಮಾಣಿಕ ವ್ಯಕ್ತಿತ್ವ ಬೆಳೆಯುತ್ತದೆ ಎಂದು ಬಾಗಲಕೋಟೆ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಕಾರ್ಯದರ್ಶಿ ಎಸ್.ಎಸ್.ದಳವಾಯಿ ಹೇಳಿದರು.

ನವನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳ ಆಶ್ರಯದಲ್ಲಿ ಸೋಮವಾರ ಕಾಲೇಜಿನ ವಿಶ್ವಮಾನವ ಸಭಾಂಗಣದಲ್ಲಿ ನಡೆದ 2026ರ ಬೇಸಿಗೆ ಶಿಬಿರವನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಭಾರತ ಸ್ಕೌಟ್ಸ್ ಗೈಡ್ಸ್ ಶಿಬಿರವು ವಿದ್ಯಾರ್ಥಿಗಳಲ್ಲಿ ಕ್ರಿಯಾತ್ಮಕ ಚಟುವಟಿಗಳು ಮಾಡಿಸುವ ಮೂಲಕ ಆದರ್ಶ ವ್ಯಕ್ತಿತ್ವ ಬೆಳೆಸುತ್ತದೆ ಎಂದರು.

ಮುಖ್ಯ ಅತಿಥಿಯಾಗಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಘಟಿಕರಾದ ನಾರಾಯಣ ಯಳ್ಳಿಗುತ್ತಿ ಅವರು ಮಾತನಾಡಿ, ಶಿಬಿರಗಳು ವಿದ್ಯಾರ್ಥಿಗಳಲ್ಲಿ ಶಿಸ್ತು, ಸಮಯ ಪಾಲನೆ, ದಕ್ಷತೆಯಿಂದ ಸ್ವಾವಲಂಬನೆ ಬದುಕು ಕಟ್ಟಿಕೊಳ್ಳಲು ಪೂರಕವಾಗುತ್ತವೆ ಎಂದು ಹೇಳಿದರು.

ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ದ ಜಿಲ್ಲಾ ಸಂಘಟಕರಾದ ಪ್ರಮೋದ್ ಚೌಗಲೆ ಅವರು ಮಾತನಾಡಿ, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳಲ್ಲಿರುವವಿದ್ಯಾರ್ಥಿಗಳು ಶಿಬಿರದಿಂದ ಮಾನವೀಯ ಮೌಲ್ಯಗಳನ್ನು ಬೆಳಸಿಕೊಂಡು ಸಾಮಾಜಿಕ ಮತ್ತು ಪರಿಸರಾತ್ಮಕ ಸೇವೆಯಲ್ಲಿ ತೊಡಗಿಕೊಳ್ಳಬೇಕು. ಈಗಬಿಸಿಲಿನತಾಪಮಾನ ಹೆಚ್ಚುತ್ತಿದೆ ಇಂತಹ ಸಂದರ್ಭಗಳಲ್ಲಿ ತಮ್ಮ ಸುತ್ತಲಿನ ವಾತಾವರಣದಲ್ಲಿರುವ ಪಕ್ಷಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಮೂಲಕ ಪಕ್ಷಿ ಪರಸರ ಸಂರಕ್ಷಣೆ ಮಾಡಬೇಕು ಎಂದರು.

ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಪ್ರಾಂಶುಪಾಲರಾದ ಡಾ. ಅರುಣಕುಮಾರ ಗಾಳಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ರೋವರ್ಸ್ ಲೀಡರ್ ಪ್ರೊ.ಪರಸಪ್ಪ ತಳವಾರ ಪ್ರಾಸ್ತಾವಿಕ ನುಡಿ ಹೇಳಿದರು. ರೇಂಜರ್ಸ್ ಲೀಡರ್ ಡಾ.ಸುಮಂಗಲಾ ಮೇಟಿ ಅವರು ಸ್ವಾಗತಿಸಿದರು. ರೇಂಜರ್ಸ್ ಲೀಡರ್ ಪ್ರೊ. ಸವಿತಾ ಬದಾಮಿ, ಐಕ್ಯೂಎಸಿ ಸಂಚಾಲಕ ಡಾ.ಬಸವರಾಜ ಬೀಳಗಿ, ಪ್ರೊ.ಸಂಪತ್ತ ಲಮಾಣಿ, ಪ್ರೊ.ಶಿವಶಂಕರ ಪ್ರಸಾದ, ಅವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಶಿಬಿರದಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳ ಐವತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



'ಕಲ್ಪನೆಯ ಕವನಗಳು' ಕೃತಿ ಲೋಕಾರ್ಪಣೆ

ಮಹಾಲಿಂಗಪುರ: ಪೂಜಾ ತುಂಬಾ ಸಣ್ಣಾಕಿ ಇದಾಳ ಆದರೆ ಆಕೆಯ ವಿಚಾರ ತುಂಬಾ ದೊಡ್ಡಾವು ಅದಾವು ಎಂದು ಸ್ಥಳೀಯ ಬ್ರಹ್ಮಾನಂದ ಸಿದ್ಧಾರೂಢ ಮಠದ ಸಹಜಾನಂದ ಶ್ರೀಗಳು ಹೇಳಿದರು.

ಕಸಾಪ ಮಹಾಲಿಂಗಪುರ ವಲಯ ಘಟಕ ಹಾಗೂ ಸಿದ್ಧಾರೂಢ ಆಶ್ರಮದ ಸಂಯುಕ್ತಾಶ್ರಯದಲ್ಲಿ ಜರುಗಿದ ಪೂಜಾ ಪುಳ್ಯಾಗೋಳ ವಿರಚಿತ 'ಕಲ್ಪನೆಯ ಕವನಗಳು' ಎಂಬಕವನಸಂಕಲನಬಿಡುಗಡೆಸಮಾರಂಭದಲ್ಲಿ ಕೃತಿ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಪೂಜಾ ವಯಸ್ಸಿನಲ್ಲಿ ಚಿಕ್ಕವಳಾದರೂ ಅವಳ ವಿಚಾರಗಳು ತುಂಬಾ ದೊಡ್ಡವಿವೆ. ವರ್ಣನೆ, ಕಲ್ಪನೆ, ವಿಚಾರಗಳ ಜೊತೆ ಬದುಕಿನ ಬಗ್ಗೆ ಅತ್ಯಂತ ಕಾಳಜಿ ಮತ್ತು ಜವಾಬ್ದಾರಿಯನ್ನು ವ್ಯಕ್ತಪಡಿಸಿದ್ದಾರೆ, ಬದುಕು ಗಾಜಿನಂತೆ, ಕಲ್ಲಿನ ಮೇಲೆ ಗಾಜು ಬಿದ್ದರು, ಗಾಜಿನ ಮೇಲೆ ಕಲ್ಲು ಬಿದ್ದರೂ ಹಾಳಾಗುವುದು ಬದುಕು ಎಂಬ ಪೂಜಾಳ ಮಾತು ಅಕ್ಷರಶಃ ಸತ್ಯ ಎಂದರು.

ಶಿಕ್ಷಕಿ ಸಪನಾ ಅನಿಗೋಳ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಬೆಳೆದು ಸರ್ಕಾರಿ ಶಾಲೆಗಳಲ್ಲಿ ಕಲಿತು ಇಂದು ಚೊಚ್ಚಲ ಕವನ ಸಂಕಲನದೊಂದಿಗೆ ಸಾಹಿತ್ಯ ಲೋಕಕ್ಕೆ ಪಾದರ್ಪಣೆ ಮಾಡಿದ ಪೂಜಾಳ ಕಾರ್ಯ ಶ್ಲಾಘನೀಯ ಎಂದರು.

ಪತ್ರಕರ್ತ ನಾರನಗೌಡ ಉತ್ತಂಗಿ ಮಾತನಾಡಿ, ಪೂಜಾ ಹಳ್ಳಿಗಾಡಿನಲ್ಲಿ ಬೆಳೆದ ಚಿಕ್ಕ ಹುಡುಗಿಯಾದರೂ ಅವಳು ರಚಿಸಿದ ಸಾಹಿತ್ಯ ಅತ್ಯಂತ ಪ್ರಭುದ್ಧವಾಗಿದ್ದು ಮಹಾನ್ ಕವಿಗಳ ಸಾಲಿನಲ್ಲಿ ನಿಲ್ಲುತ್ತಾಳೆ. ನಿರಾಡಂಬರ ಮತ್ತು ಸರಳ ಶಬ್ದಗಳ ಬಳಕೆಯಿಂದಾಗಿ ಎಲ್ಲ ಕವನಗಳು ಪ್ರತಿಯೊಬ್ಬರ ಹೃದಯವನ್ನು ಮುಟ್ಟುವಲ್ಲಿ ಮತ್ತು ಮೀಟುವಲ್ಲಿ ಯಶಸ್ವಿಯಾಗುತ್ತವೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಸಮಾಜದ ಪ್ರತಿಯೊಂದು ವಿಷಯದ ಮೇಲೆ ಬೆಳಕು ಚೆಲ್ಲಿರುವುದು ಅವಳ ಅತ್ಯದ್ಭುತ ಪ್ರತಿಭೆಗೆ ಸಾಕ್ಷಿ ಎಂದರು.

ಸಹಜಾನಂದ ಶ್ರೀಗಳು ಗ್ರಂಥ ಲೋಕಾರ್ಪಣೆಗೊಳಿಸಿದರು, ಸಿದ್ಧಾರೂಢರ ಪ್ರವಚನ ಜರುಗಿತು. ಸಿದ್ಧರಾಮಸ್ವಾಮಿ, ಮಹೇಶ ಇಟಕನ್ನವರ, ಕನ್ನಡ ಸಾಹಿತ್ಯ ಪರಿಷತ್ ವಲಯ ಘಟಕದ ಅಧ್ಯಕ್ಷ ಬಸವರಾಜ ಮೇಟಿ, ಶ್ರೀಶೈಲಪ್ಪ ಉಳ್ಳಾಗಡ್ಡಿ, ಶ್ರೀಶೈಲಪ್ಪ ವಜ್ರಮಟ್ಟಿ, ಹನುಮಂತ ಶಿರೋಳ, ಕವಿಯತ್ರಿ ಪೂಜಾ ಪುಳ್ಯಾಗೋಳ ಅಜ್ಜ ಹನುಮಂತ, ಅಜ್ಜಿ ಮಾನವ್ವ, ತಂದೆ ಮಹಾಲಿಂಗಪ್ಪ, ತಾಯಿ ರೇಣುಕ, ಚಿಕ್ಕಪ್ಪ ಮಲ್ಲಪ್ಪ, ಚಿಕ್ಕಮ್ಮ ಲಕ್ಷ್ಮಿ, ಪಾರವ್ವ, ಬಸಪ್ಪ ಇತರರಿದ್ದರು.

ಬಸವರಾಜ ಮೇಟಿ ಪ್ರಸಾದ್ ವ್ಯವಸ್ಥೆ ಮಾಡಿದ್ದರು. ಶಿಕ್ಷಕರಾದ ಎಸ್.ಕೆ.ಗಿಂಡೆ, ಹುಮಾಯೂನ್ ಸುತಾರ ನಿರೂಪಿಸಿದರು.



ಬಸವಣ್ಣನವರ ಚಿಂತನೆಗಳು ಸಮಾಜಕ್ಕೆ ಪೂರಕ: ಹುಚ್ಚೇಶ್ವರ ಶ್ರೀಗಳು



ಗುಳೇದಗುಡ್ಡ: ಸಮಾಜದಲ್ಲಿ ಬೇರೂರಿದ್ದ ಜಾತಿಯತೆ, ಮೌಢ್ಯ, ಕಂದಾಚಾರಗಳನ್ನು ಹೊಗಲಾಡಿಸಿ, ಸಮಸಮಾಜವನ್ನು ನಿರ್ಮಿಸಿದ ಬಸವಣ್ಣನವರ ಚಿಂತನೆಗಳು, ಆದರ್ಶಗಳನ್ನು ಬದುಕಿನಲ್ಲಿ ರೂಢಿಸಿಕೊಳ್ಳಬೇಕೆಂದು ಕೊಟೇಕಲ್ಲ ಹುಚ್ಚೇಶ್ವರ ಸಂಸ್ಥಾನ ಮಠದ ಹೊಳೆ ಹುಚ್ಚೇಶ್ವರ ಶ್ರೀಗಳು ಹೇಳಿದರು.

ಅವರು ಪಟ್ಟಣದ ಕಾಡಸಿದ್ದೇಶ್ವರ ಮಠದಲ್ಲಿ ಮೌನಯೋಗಿಯ ಜಾತ್ರಾ ಮಹೋತ್ಸವದ ನಿಮಿತ್ತ ಶನಿವಾರ ಹಮ್ಮಿಕೊಂಡಿದ್ದ ಜೀವನದರ್ಶನ ಪ್ರವಚನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮನುಷ್ಯ ಸಂಘ ಜೀವಿಯಾಗಬೇಕು, ಪರೋಪಕಾರಗುಣ ಬೆಳೆಸಿಕೊಳ್ಳಬೇಕು. ನಾವು ಭಗವಂತನ ಧ್ಯಾನ ಮಾಡಬೇಕು, ಶರಣರ ತತ್ವಾದರ್ಶ ಪಾಲಿಸಬೇಕು ಎಂದರು.

ಅಭಿನವ ಕಾಡಸಿದ್ದೇಶ್ವರ ಶ್ರೀಗಳು ಸಾನ್ನಿಧ್ಯವಹಿಸಿ ಮಾತನಾಡಿ, ಹಿರಿಯ ಪೂಜ್ಯರು ನಡೆದಾಡುವ ದೇವರಾಗಿದ್ದರು. ಧರ್ಮದಂತೆ ನಡೆದು ಭಕ್ತವರ್ಗದವರಿಗೆ ಸಂಸ್ಕಾರ, ಸಂಸ್ಕೃತಿ ಕಲಿಸಿದ್ದಾರೆ ಅವರ ಆಲೋಚನೆಗಳನ್ನು ನಾವು ರೂಢಿಸಿಕೊಳ್ಳಬೇಕು ಎಂದರು.

ರುದ್ರಮುನಿ ದೇವರು ಸಾನಿಧ್ಯವಹಿಸಿ ಮಾತನಾಡಿದರು. ದುಮ್ಮವಾಡದ ಸರ್ಪಭೂಷಣದೇವರು ಜೀವನದರ್ಶನ ಪ್ರವಚನ ನೀಡಿ, ಮನುಷ್ಯ ಬುಂದಿವಂತ ಪ್ರಾಣಿ. ಉತ್ತಮ ಸದಾಚಾರ ನಮ್ಮದಾಗಬೇಕು, ದೇವರು ಧರ್ಮದ ಆಚರಣೆ ಸರಳವಾಗಿದ್ದು ಉತ್ತಮ ಚಿಂತನೆ ರೂಢಿಸಿಕೊಳ್ಳಬೇಕು. ಹುಟ್ಟು ಸಾವಿನ ಮಧ್ಯ ಉತ್ತಮ ಸಂಸ್ಕಾರ, ಎಲ್ಲರೂ ಒಂದುಎನ್ನುವ ಮನೋಧರ್ಮ ಬೆಳೆಸಿಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಸನ್ಮಾನ ಸಂಗೀತ ಕಾರ್ಯಕ್ರವ ನಡಯಿತು. ಕಾರ್ಯಕ್ರಮದಲ್ಲಿ ಪ್ರಕಾಶ ಅಂಕದ, ಚಿನ್ನು ಬಾರಾಟಕ್ಕೆ, ಸಂಗಪ್ಪ ಜವಳಿ, ಮಲ್ಲಿಕಾರ್ಜುನ ಹಿರೇಮಠ, ಮುತ್ತಣ್ಣ ದೇವರಮನಿ, ಭೀಮಪ್ಪ ಹಳ್ಳಿಗೋಳ ಮುಂತಾದವರಿದ್ದರು.

ತಾಲೂಕು ಹೋರಾಟ ವೇದಿಕೆಗೆ ಕೋಡಿಹಳ್ಳಿ ಚಂದ್ರಶೇಖರ್ ಭೇಟಿ

ಮಹಾಲಿಂಗಪುರ: ಜೀವ ಬಿಟ್ಟೇವು ತಾಲೂಕು ಬಿಡೆವು ಎಂಬ ಗಟ್ಟಿ ನಿಲುವಿನಿಂದ ಕಳೆದ 1464ದಿನಗಳಿಂದ ನಡೆಯುತ್ತಿರುವ ಮಹಾಲಿಂಗಪುರ ತಾಲೂಕು ಹೋರಾಟ ವೇದಿಕೆಗೆ ರಾಜ್ಯ ರೈತ ಸಂಘ ಹಸಿರು ಸೇನೆಯ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಭಾನುವಾರ ಭೇಟಿ ನೀಡಿ ಹೋರಾಟಗಾರರ ಬೇಡಿಕೆ ಆಲಿಸಿ, ಬೆಂಬಲ ವ್ಯಕ್ತಪಡಿಸಿ ಮಾತನಾಡಿದರು.

ಮಹಾಲಿಂಗಪುರ ಪಟ್ಟಣ ಮತ್ತು ಸುತ್ತಮುತ್ತಲಿನ ಪ್ರದೇಶವನ್ನು ದಶಕಗಳಿಂದ ಅವಲೋಕಿಸುತ್ತಾ ಬಂದಿದ್ದೇನೆ. ಅಂದಿನಿಂದಲೂ ಮಹಾಲಿಂಗಪುರ ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ, ಧರ್ಮಿಕ ಹೀಗೆ ಸರ್ವ ರಂಗಗಳಲ್ಲೂ ತಾಲೂಕು ಘೋಷಣೆಗೆ ಅರ್ಹವಾಗಿದ್ದು ನ್ಯಾಯಯುತ ಬೇಡಿಕೆಯಾಗಿದೆ.

ಈ ಹೋರಾಟಕ್ಕೆ ರೈತ ಸಂಘ ಮತ್ತು ಹಸಿರು ಸೇನೆ ಸಂಪೂರ್ಣ ಬೆಂಬಲ ಇದೆ ಎಂದು ಅವರು, ಹೋರಾಟಗಾರರು ಮುಖ್ಯಮಂತ್ರಿಗಳಿಗೆ ಭೇಟಿಯಾಗುವ ಸಲುವಾಗಿ ನಿಯೋಗ ತೆಗೆದುಕೊಂಡು ಬನ್ನಿ, ಮುಖ್ಯಮಂತ್ರಿಗಳಿಗೆ ನೂತನ ತಾಲೂಕಿಗಾಗಿ ನಾನು ಸಹ ಮನವರಿಕೆ ಮಾಡುತ್ತೇನೆ ಎಂದರು.



ತಾಲೂಕು ಹೋರಾಟಗಾರರಾದ ಗಂಗಾಧರ ಮೇಟಿ, ನಿಂಗಪ್ಪ ಬಾಳಿಕಾಯಿ ವಿರೇಶ ಆಸಂಗಿ, ಶಿವಲಿಂಗ ಟಿರಕಿ, ಬಂದು ಪಕಾಲಿ, ಸಿದ್ದು ಶಿರೋಳ, ರಫೀಕ್ ಮಾಲದಾರ, ಹಣ್ಮಂತ ಜಮಾದಾರ,ಮೂಸಾ ಬೂದಿಹಾಳ ಮತ್ತು ರೈತ ಸಂಘದ ಪದಾಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

ಡಾ. ಅಂಬೇಡ್ಕರ್‌ರ ಜಯಂತಿ ಇಂದು

ಬೀಳಗಿ ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್‌ರವರ 135ನೇ ಜಯಂತಿಯನ್ನು ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರ ಉಪ ಚುನಾವಣೆ ಮಾದರಿ ನೀತಿ ಸಂಹಿತೆ ಹಿನ್ನೆಲೆಯಲ್ಲಿ ತಾಲೂಕು ಆಡಳಿತದಿಂದ ಸರಳವಾಗಿ ಆಚರಿಸಲಾಗುತ್ತದೆ ಎಂದು ತಹಶೀಲ್ದಾರರು ಹಾಗೂ ಜಯಂತಿ ಉತ್ಸವ ಸಮಿತಿ ಅಧ್ಯಕ್ಷ ವಿನೋದ ಹತ್ತಳ್ಳಿ ತಿಳಿಸಿದ್ದಾರೆ.

ಏ.14ರಂದು ಜರುಗುವ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ರವರ 135ನೇ ಜಯಂತಿಯನ್ನು ತಾಲೂಕಾ ಆಡಳಿತದಿಂದ ಮಂಗಳವಾರ ಬೆಳಿಗ್ಗ 10 ಗಂಟೆಗೆ ಡಾ. ಬಿ. ಆರ್. ಅಂಬೇಡ್ಕರ್ ವೃತ್ತದಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ರವರ ಮುತ್ಥಳಿಗೆ ಮಾಲಾರ್ಪಣೆ ಮಾಡಿ, ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಸರಳವಾಗಿ ಆಚರಿಸಲಾಗುವುದು ಎಂದು ಪ್ರಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಆರೋಗ್ಯ ತಪಾಸಣಾ ಶಿಬಿರ ನಾಳೆ

ಯಮಕನಮರಡಿ: ಹಿಂಡಾಲ್ಕೋ, ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಮಹಿಳಾ ಕಲ್ಯಾಣ ಸಂಸ್ಥೆ ಇವುಗಳ ಆಶ್ರಯದಲ್ಲಿ ಕೆಎಲ್‌ಇ ಸಂಸ್ಥೆಯ ಡಾ.ಸಂಪತ್‌ಕುಮಾರ ಎಸ್. ಶಿವಣಗಿ ಕ್ಯಾನ್ಸರ್ ಆಸ್ಪತ್ರೆಯ ಸಹಯೋಗದಲ್ಲಿ ಏ.15ರಂದು ಬೆಳಿಗ್ಗ 10 ರಿಂದ ಮಧ್ಯಾಹ್ನ 3 ವವರೆಗೆ ಹಿಡಕಲ್ ಡ್ಯಾಂನ ಶಿವಾಲಯ ದೇವಸ್ಥಾನದ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಹೊಸಪೇಟ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ನೀಲಕಂಠ ಕುಲಕರ್ಣಿ ಕಾರ್ಯಕ್ರಮ ಉದ್ಘಾಟಿಸುವವರು. ಇಂಡಿಯನ್ ಕ್ಯಾನ್ಸರ್ ಸೊಸೈಟಿ ಪ್ರಾಂತೀಯ ವ್ಯವಸ್ಥಾಪಕ ಸಂತೇನಿ ದಂಡಿನ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಕೆಎಲ್‌ಇ ಸಂಸ್ಥೆಯ ಡಾಸಂಪತಕುಮಾರ ಎಸ್. ಶಿವಣಗಿ ಆಸ್ಪತ್ರೆ ವೈದ್ಯ ಉಚಿತ ಆರೋಗ್ಯ ತಪಾಸಣೆ ಕೈಗೊಳ್ಳಲುವರು ಎಂದು ಬೆಳಗಾವಿ ಮಹಿಳಾ ಕಲ್ಯಾಣ ಸಂಸ್ಥೆ ಗೌರವ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಲಾ ವಿಭಾಗ: ತಾಲೂಕಿಗೆ ಪವಿತ್ರಾ ಪ್ರಥಮ

ಗುಳೇದಗುಡ್ಡ: ಪಟ್ಟಣದ ಭಂಡಾರಿ ಹಾಗೂ ರಾಠಿ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ಪರೀಕ್ಷೆಯ ಕಲಾ ವಿಭಾಗದಲ್ಲಿ 600 ಅಂಕಗಳಿಗೆ 582 ಅಂಕ ಗಳಿಸಿ ಕಲಾವಿಭಾಗದಲ್ಲಿ ತಾಲೂಕಿಗೆ ಪ್ರಥಮ ಸ್ಥಾನಗಳಿಸಿದ ವಿದ್ಯಾರ್ಥಿ ಪವಿತ್ರಾ ಚಿಕ್ಕಾಡಿ ಅವರಿಗೆ ಕಾಲೇಜಿನ ವತಿಯಿಂದ ಸೋಮವಾರ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಪಿಇ ಟ್ರಸ್ಟ್‌ನ ಗೌರವಕಾರ್ಯದರ್ಶಿ ರವೀಂದ್ರ ಪಟ್ಟಣಶೆಟ್ಟಿ, ಪಪೂ ಕಾಲೇಜಿನ ಚೇರಮನ್ ಸಿದ್ದಲಿಂಗಪ್ಪ ಬರಗುಂಡಿ, ಬಾಲಮುಕುಂದ ತಾಪಡಿಯಾ, ಪುರುಷೋತ್ತಮ ಜಂವರ, ಲಕ್ಷ್ಮಿಕಾಂತ ಕಾಬ್ರಾ, ಸುನೀಲ ಕರಣಿ, ಪದವಿ ಕಾಲೇಜಿನ ಪ್ರಾಚಾರ್ಯ ಡಾ.ಎನ್.ವೈ. ಬಡಣ್ಣವರ, ಸಂಗಮೇಶ ಚಿಕ್ಕಾಡಿ, ಉಪನ್ಯಾಸಕಿಯರಾದ ಜಿ.ಎಸ್. ಕಲ್ಯಾಣಿ, ವಿ.ವಿ. ಮದರಿಮಠ, ಪಿ.ಎಸ್. ಜವಳಗಿ, ಸಾವಿತ್ರಿ ವಾಳದವುಂಕಿ ಗಿರಿಸಾಗರ, ಈರಣ್ಣ ಅಲದಿ, ಪಿ.ಎಸ್. ಮಾದರ, ಎಂ.ಎ. ಮುಲ್ಲಾ, ಶ್ರೀಕಾಂತ ಎಂ. ಮತ್ತಿತರರು ಇದ್ದರು.



ಅತ್ಯುತ್ತಮ ಪ್ರವಾಸಿ ಮಿತ್ರ ಪ್ರಶಸ್ತಿ ಪ್ರದಾನ



ಕಲಾದಗಿ: ಸಮೀಪದ ಐತಿಹಾಸಿಕ ಧಾರ್ಮಿಕ ಕ್ಷೇತ್ರ ತುಳಸಿಗೇರಿಯ ಮಾರುತೇಶ್ವರನ ದೇವಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರವಾಸಿ ಮಿತ್ರ ಲಕ್ಷ್ಮಣ ರಾಮಪ್ಪ ಮಲ್ಲಾರ ಇವರ ಪ್ರಾಮಾಣಿಕ ಕರ್ತವ್ಯ ಸೇವೆಯನ್ನು ನಿರ್ವಹಿಸಿರುವುದನ್ನು ಗಮನಿಸಿರುವ ರಾಜ್ಯ ಪ್ರವಾಸಿ ಮಿತ್ರ ಅಸೋಸಿಯನ ಕ್ಷೇಮಾಭಿವೃದ್ಧಿ ಸಂಘವು ಇತ್ತೀಚೆಗೆ ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅತ್ಯುತ್ತಮ ಪ್ರವಾಸಿ ಮಿತ್ರ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು.

ಡಿಸೆಂಬರ್ ತಿಂಗಳತುಳಸಿಗೇರಿಮಾರುತೇಶ್ವರನಕಾರ್ತಿಕೋತ್ಸವದಜನದಟ್ಟನೆಯಲ್ಲಿ ಭಕ್ತರೊಬ್ಬರು ಕಳೆದುಕೊಂಡಿದ್ದ ಮೊಬೈಲ್ ಹುಡುಕಿ ಮರಳಿ ಭಕ್ತರಿಗೆ ಹಿಂದಿರುಗಿಸಿ ಪ್ರಾಮಾಣಿಕತೆ ತೋರಿದ್ದ ಇವರ ನಿಸ್ವಾರ್ಥ ಸೇವೆಯನ್ನು ನಾವು ಸ್ಮರಿಸಬಹುದು ಇವರಿಗೆ ಬಾಗಲಕೋಟೆ ಜಿಲ್ಲೆಯ ಗೃಹರಕ್ಷಕದಳದ ಮಹಾ ಸಮಾದೇಷ್ಟ ಹಣಮಂತ ಕಂಬಳಿ, ಬಾಗಲಕೋಟೆ ಜಿಲ್ಲಾ ಬೋಧಕ ಎ.ಎಲ್.ಸಾಹುಕಾರ, ಜಿಲ್ಲಾ ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಜಿ.ಎಸ್.ಹಿತ್ತಲಮನಿ, ಕಲಾದಗಿ ಘಟಕ ಅಧಿಕಾರಿ ಶಿವುಕುಮಾರ ಕೋತಿನ, ಪ್ರಕಾಶ ಹಂಪಿಹೊಳಿ, ಬಾಷಾಸಾಬ ತಂಗಡಗಿ, ಕಲಾದಗಿ ಉಪತಹಶೀಲ್ದಾರ್ ಆರ್.ಆರ್.ಕುಲಕರ್ಣಿ ಅವರನ್ನು ಅಭಿನಂದಿಸಿದ್ದಾರೆ.

ಕಿರುಸುದ್ದಿ

ಕೊಳವೆ ಬಾವಿ ದುರಸ್ತಿಗೆ ಶಾಸಕ ಯತ್ನಾಳ ಸೂಚನೆ



• **ವಿಜಯಪುರ:** ನಗರದಲ್ಲಿ ಬಂದ್ ಆಗಿರುವ ಹಳೆಯ ಕೊಳವೆ ಬಾವಿಗಳನ್ನು ದುರಸ್ತಿಗೊಳಿಸಿ, ನೀರು ಪೂರೈಕೆಗೆ ನಗರ ನೀರು ಸರಬರಾಜು ಮಂಡಳಿ ಅಧಿಕಾರಿಗಳಿಗೆ ಸೂಚಿಸಲಾಗಿದ್ದು, ಎಲ್ಲೆಲ್ಲಿ ಕೊಳವೆ ಬಾವಿಗಳು ಬಂದಾಗಿವೆ ಎಂಬುದರ ಬಗ್ಗೆ ಕಾಲೋನಿ, ಬಡಾವಣೆ ನಿವಾಸಿಗಳು ನಗರದ ಶಾಸಕರ ಸಾರ್ವಜನಿಕ ಸಂಪರ್ಕ ಕಾರ್ಯಾಲಯಕ್ಕೆ ಮಾಹಿತಿ ನೀಡಲು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿದ ಅವರು, ಬೇಸಿಗೆ ಆರಂಭಗೊಂಡಿದ್ದರಿಂದ ನಗರದಲ್ಲಿ ನೀರಿನ ಕೊರತೆ ಆಗದಂತೆ ಮುಂಜಾಗ್ರತಾ ಕ್ರಮ ಕೈಗೊಂಡು ಸಮರ್ಪಕವಾಗಿ ನೀರು ಪೂರೈಕೆಗಾಗಿ ನಗರದಲ್ಲಿರುವ ಕೊಳವೆ ಬಾವಿಗಳನ್ನು ಚಾಲ್ತಿಯಲ್ಲಿರುವಂತೆ ನೋಡಿಕೊಳ್ಳಲು, ನಗರದಲ್ಲಿ ಈಚೆಗೆ ನಡೆದ ನಗರ ನೀರು ಸರಬರಾಜು ಮಂಡಳಿ ಅಧಿಕಾರಿಗಳ ಸಭೆಯಲ್ಲಿ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಗಿದ್ದು, ಪಂಪ್ ಕೆಟ್ಟು ಮತ್ತಿತರೆ ಸಮಸ್ಯೆಯಿಂದ ತಾತ್ಕಾಲಿಕವಾಗಿ ಬಂದ್ ಆಗಿರುವ ಮತ್ತು ಅನೇಕ ವರ್ಷಗಳಿಂದ ಬಳಕೆಯಾಗದೆ ಹಾಗೇ ಬಿದ್ದಿರುವ ಹಳೆಯ ಕೊಳವೆ ಬಾವಿಗಳನ್ನು ರಿಚಾರ್ಜ್ ಮಾಡಿ, ಪಂಪ್ ಅಳವಡಿಸಿ ನೀರು ಪೂರೈಕೆ ಮಾಡುವುದರಿಂದ ತಕ್ಷಣದಲ್ಲೇ ನೀರಿನ ಬವಣೆ ನೀಗಿಸಲು ಅನುಕೂಲವಾಗಲಿದೆ. ಹೀಗಾಗಿ ನಗರದಲ್ಲಿ ಎಲ್ಲೆಲ್ಲಿ ಕೊಳವೆ ಬಾವಿಗಳು ಬಂದ್ ಆಗಿವೆ, ಯಾವ ಸಮಸ್ಯೆಯಿಂದ ಕೊಳವೆ ಬಾವಿಗಳಿಂದ ನೀರು ಪೂರೈಕೆ ಸ್ಥಗಿತಗೊಂಡಿದೆ ಎಂಬುದರ ಬಗ್ಗೆ ವಾರ್ಡ್ ನಂಬರ್, ಬಡಾವಣೆ, ಕಾಲೋನಿ ಹೆಸರು ಮತ್ತು ಸಂಪರ್ಕಕ್ಕಾಗಿ ಸ್ಥಳೀಯ ಪ್ರಮುಖರೊಬ್ಬರ ಮೊಬೈಲ್ ಸಂಖ್ಯೆ ಸಹಿತ ನಗರ ಶಾಸಕರ ಸಾರ್ವಜನಿಕ ಸಂಪರ್ಕ ಕಾರ್ಯಾಲಯಕ್ಕೆ ಮಾಹಿತಿ ನೀಡಿದಲ್ಲಿ, ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿ ತಕ್ಷಣ ದುರಸ್ತಿಗೊಳಿಸಿ, ನೀರು ಪೂರೈಕೆಗೆ ಅನುಕೂಲ ಮಾಡಿಕೊಡಲಾಗುವುದು ಎಂದು ಅವರು ತಿಳಿಸಿದ್ದಾರೆ.

ಏ.20ರಂದು ವಿವಿಧ ಸ್ಪರ್ಧೆ

• **ಬಸವನಬಾಗೇವಾಡಿ:** ಏ.20ರಂದು ನಡೆಯಲಿರುವ ಬಸವ ಜಯಂತಿ ಕಾರ್ಯಕ್ರಮದ ನಿಮಿತ್ತ ಶಾಲಾ ಮಕ್ಕಳಿಗೆ ವಚನ ಕಂಠಪಾಠ ಸ್ಪರ್ಧೆ ಹಾಗೂ ವಚನ ಗಾಯನ ಸ್ಪರ್ಧೆಯನ್ನು ಅಭಿವೃದ್ಧಿ ಪ್ರಾಧಿಕಾರದ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದೆ. ನಾಲ್ಕರಿಂದ 7ನೇ ವರ್ಗದ ವಿದ್ಯಾರ್ಥಿಗಳಿಗೆ ವಚನ ಕಂಠ ಪಾಠ ಸ್ಪರ್ಧೆ ಹಾಗೂ ಎಂಟರಿಂದ 10ನೇ ತರಗತಿ ವಿದ್ಯಾರ್ಥಿಗಳು ವಚನ ಗಾಯನ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಆಸಕ್ತರು ತಮ್ಮ ಹೆಸರನ್ನು ಸುಭಾಸ ಹಡಪದ ಶಿಕ್ಷಕರು ದೂರವಾಣಿ ಸಂಖ್ಯೆ 8197709764, ಪತ್ರಕರ್ತರು, ಶಿಕ್ಷಕರಾದ ಬಸವರಾಜ ನಂದಿಹಾಳ ದೂರವಾಣಿ ಸಂಖ್ಯೆ 9916402368 ಅಥವಾ ಬಸವೇಶ್ವರ ದೇವಸ್ಥಾನದಲ್ಲಿರುವ ಪ್ರಾಧಿಕಾರ ಕಚೇರಿಯಲ್ಲಿ ಹೆಸರನ್ನು ನೋಂದಾಯಿಸಬೇಕು. ಈ ಎಲ್ಲಾ ಸ್ಪರ್ಧೆಗಳು ದೇವಾಲಯದ ಆವರಣದಲ್ಲಿರುವ ಪ್ರಾಧಿಕಾರದ ಕಚೇರಿಯಲ್ಲಿ ಏ.18ರಂದು ಬೆಳಗ್ಗೆ10 ಗಂಟೆಗೆ ಹಮ್ಮಿಕೊಳ್ಳಲಾಗುವುದೆಂದು ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ. ಸ್ಪರ್ಧೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಬೇಕೆಂದು ಸಾಹಿತಿ ವಿವೇಕಾನಂದ ಕಲ್ಯಾಣಶೆಟ್ಟಿ ಮನವಿ ಮಾಡಿದ್ದಾರೆ.

ನನಗೆ ಮಾಹಿತಿಯಿಲ್ಲ: ಆನಂದ ಭೂಸನೂರ



• **ಸಿಂದಗಿ:** ಪ್ರಸ್ತುತ 2026–2031ನೇ ಅವಧಿಗೆ ನಡೆದ ಸಂಘದ ಚುನಾವಣೆಯ ಕುರಿತಂತೆ ರಾಜ್ಯಾದ್ಯಂತ ವಿವಿಧ ಮಾಧ್ಯಮಗಳ ಪ್ರಕಟಣೆಗಳು, ಸಂಘದ ರಾಜ್ಯಾಧ್ಯಕ್ಷರ ಹೇಳಿಕೆಗಳು ಹಾಗೂ ಶಿಕ್ಷಕ ಸದಸ್ಯರ ಅಭಿಪ್ರಾಯಗಳು ಹೊರ ಬರುತ್ತಿರುವುದು ಕಂಡು ಬಂದಿದೆ. ಸಿಂದಗಿ ತಾಲೂಕಿನಲ್ಲಿ ನಡೆದ ಘಟನೆಗಳ ಬಗ್ಗೆ ನನಗೆ ಲಭ್ಯವಿರುವ ಹಾಗೂ ಲಭ್ಯವಿಲ್ಲದ ಮಾಹಿತಿಗಳ ಕುರಿತು ಸಂಬಂಧಿಸಿದ ಪದಾಧಿಕಾರಿಗಳಿಗೆ, ಶಿಕ್ಷಕರಿಗೆ ಹಾಗೂ ಪತ್ರಿಕಾ ಮಾಧ್ಯಮ ಪ್ರತಿನಿಧಿಗಳಿಗೆ ಈಗಾಗಲೇ ನಾನು ಸ್ಪಷ್ಟನೆ ನೀಡಿದ್ದೇನೆ ಎಂದು ಸಿಂದಗಿ ತಾಲೂಕು ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷ, ಶಿಕ್ಷಕ ಆನಂದ ಭೂಸನೂರ ಹೇಳಿದರು. ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ ಅವರು, ಕಳೆದ 2020–2025ರವರೆಗೆ ಸಿಂದಗಿ ತಾಲೂಕು ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷನಾಗಿ ಸೇವೆ ಸಲ್ಲಿಸುವ ಅವಕಾಶ ದೊರಕಿತ್ತು. ಆ ಅವಧಿಯಲ್ಲಿ ನೀವು ನೀಡಿದ ಸಹಕಾರ, ಮಾರ್ಗದರ್ಶನ ಹಾಗೂ ಬೆಂಬಲಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕಾರ್ಯ ನಿರ್ವಹಣೆ, ಪ್ರತಿಭಾ ಕಾರಂಜಿ, ಕಲಿಕೋತ್ಸವ, ಗುರುಭವನ ಕಟ್ಟಡ ನಿರ್ಮಾಣ ಕಾರ್ಯ ಸೇರಿದಂತೆ ಅನೇಕ ಕಾರ್ಯಗಳನ್ನು ಮಾಡಿದ್ದೇನೆ. ತಾಲೂಕಿನಲ್ಲಿ ಯಾವುದಾದರೂ ಅನುಮಾನಾಸ್ಪದ ಗೊಂದಲಗಳಿದ್ದಲ್ಲಿ, ಅದರ ಕುರಿತು ಸ್ಪಷ್ಟ ಮಾಹಿತಿ ಪಡೆಯಲು ಈಗಾಗಲೇ ರಾಜ್ಯ ಸಂಘಕ್ಕೆ ಮಿಂಚಂಚೆ (ಇಮೇಲ್) ಮೂಲಕ ಮಾಹಿತಿ ರವಾನೆ ಮಾಡಲಾಗಿದೆ. ಮಾಹಿತಿ ಲಭ್ಯವಾದ ಬಳಿಕ ಸಂಬಂಧಪಟ್ಟ ಶಿಕ್ಷಕ ಬಂಧುಗಳಿಗೆ ನಿಖರವಾದ ಮಾಹಿತಿಯನ್ನು ಒದಗಿಸುತ್ತೇನೆ ಎಂದು ತಿಳಿಸಿದ್ದಾರೆ.



ರಾಯಬಾಗ: ವಕೀಲರ ಸಂಘದಲ್ಲಿ ಮಹಾತ್ಮ ಜ್ಯೋತಿಬಾ ಫುಲೆ ಅವರ 199ನೇ ಜಯಂತಿ ಆಚರಿಸಲಾಯಿತು. ಅಧ್ಯಕ್ಷ ಕೆ.ಆರ್. ಕೋಟಿವಾಲೆ, ಕಾರ್ಯದರ್ಶಿ ಆರ್.ಎಸ್.ಹಳ್ಳಿಪ್ಪಗೋಳ, ವಕೀಲರಾದ ಮಹೇಶ್ ಹೊಸಮನಿ, ಸಂಜು ಸಲಗರೆ, ಆರ್. ಎಲ್.ಅಸೋದೆ, ಕೆ.ಎಮ್.ಮದಳೆ, ತೊಹಿದ ಪಟವೆಗಾರ, ವೈಭವ ಕುಲಕರ್ಣಿ, ಬಿ.ಎಸ್.ಕಾಂಬಳೆ ಹಾಜರಿದ್ದರು.

ಸಾಧಕರಿಗೆ ಜ್ಯೋತಿಬಾ ಫುಲೆ ಪ್ರಶಸ್ತಿ ಪ್ರದಾನ

• **ವಿಜಯಪುರ:** ದಲಿತ ವಿದ್ಯಾರ್ಥಿ ಪರಿಷತ್ ವಿಜಯಪುರದಲ್ಲಿ ಆಯೋಜಿಸಿದ ಅಂಬೇಡ್ಕರ್ ಅರಿವಿನ ಹಬ್ಬ ಎರಡನೇ ಆವೃತ್ತಿ ಕಾರ್ಯಕ್ರಮಕ್ಕೆ ಶನಿವಾರ ವಿಧ್ಯುಕ್ತ ಚಾಲನೆ ದೊರಕಿತು.

ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದ ಭವ್ಯ ವೇದಿಕೆಯಲ್ಲಿ ಮಹಾತ್ಮ ಜ್ಯೋತಿಬಾ ಫುಲೆ ಹಾಗೂ ಬಾಬಾಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪ ನಮನ ಸಲ್ಲಿಸುವ ಮೂಲಕ ವೇದಿಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಇದೇ ಸಂದರ್ಭ ಸಾಧಕರಿಗೆ ಜ್ಯೋತಿಬಾ ಫುಲೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಸಮಾರಂಭ ಉದ್ಘಾಟಿಸಿದ ಡಾ.ಜಯದೇವಿ ಗಾಯಕವಾಡ ಮಾತನಾಡಿದರು.

ಮನಗೂಳಿಯ ಡಾ.ಫೈರೋಜ್‌ಹುಸೇನ್ ಇನಾಮದರ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು.

ಇದೇ ಸಂದರ್ಭ ವಿವಿಧ ಕ್ಷೇತ್ರದಲ್ಲಿ ಸಾಧನೆ ತೋರಿದ ಎ.ಬಿ.ಹೊಸಮನಿ, ಲೋಕೇಶ ಎಂ.ಬೆಂಗಳೂರು, ಲತಾ ರಾಮು ನಾಡೋಣಿ, ಸಾವಿತ್ರಿ ಮುಜುದಾರ ಕೊಪ್ಪಳ, ಡಾ.ಜಿನದತ್ತ ಹಡಗಲಿ ಧಾರವಾಡ, ಡಾ. ಖಾತುನಬಿ ಗಡೆದ ವಿಜಯಪುರವರಿಗೆ ಮಹಾತ್ಮಾ ಜ್ಯೋತಿಬಾ ಫುಲೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪುಸ್ತಕ ಮಳಿಗೆಗಳ ಬಾಗಲಕೋಟೆ ವಿವಿ ಕುಲಸಚಿವ ಸೋಮಲಿಂಗ ಗೆಣ್ಣೂರು ಚಾಲನೆ ನೀಡಿದರು. ವೇದ ಅಕಾಡೆಮಿ ಸಂಸ್ಥಾಪಕ ಡಾ. ಶಿವಾನಂದ ಕೆಲೂರ, ಅರ್ಜುನ ಗೋಳಸಂಗಿ, ದಲಿತ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಶ್ರೀನಾಥ ಪೂಜಾರಿ, ಬಾಲಾಜಿ ಕಾಂಬಳೆ, ಪ್ರಭು ಮಲ್ಲಿಕಾರ್ಜುನ್ ಮಠ, ಮೊಹ್ಮದ ರಫೀಕ್ ಟಪಾಲ್, ಡಾ.ಬಿ.ಎಂ. ಬಿರಾದಾರ, ಡಾ.ವೈ.ಎಂ. ಭಜಂತ್ರಿ, ಮೋಹನ ಕಟ್ಟಿಮನಿ ಉಪಸ್ಥಿತರಿದ್ದರು.



ವಿಜಯಪುರ: ದಲಿತ ವಿದ್ಯಾರ್ಥಿ ಪರಿಷತ್ ವಿಜಯಪುರದಲ್ಲಿ ಆಯೋಜಿಸಿದ ಅಂಬೇಡ್ಕರ್ ಅರಿವಿನ ಹಬ್ಬ ಎರಡನೇ ಆವೃತ್ತಿ ಕಾರ್ಯಕ್ರಮದಲ್ಲಿ ಸಾಧಕರಿಗೆ ಜ್ಯೋತಿಬಾ ಫುಲೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕೃಪಾಮಯಿ ಶಾರದಾಶ್ರಮದ ಕೈವಲ್ಯಮಯಿ ಮಾತಾಜಿ ಅಭಿಮತ

ಶ್ರದ್ಧೆ, ಆತ್ಮವಿಶ್ವಾಸವೇ ಯಶಸ್ಸಿನ ಮೂಲಮಂತ್ರ

• **ವಿಜಯಪುರ:** ಮಾನವನ ಜೀವನದಲ್ಲಿ ಗುರಿ ತಲುಪಲು ಶ್ರದ್ಧೆ ಅತ್ಯಗತ್ಯ. ಯಾರಲ್ಲಿ ಶ್ರದ್ಧೆ ಇರುತ್ತದೆಯೋ ಅವರು ಜೀವನದ ಪ್ರತಿ ಹಂತದಲ್ಲೂ ವಿಜಯಶಾಲಿಗಳಾಗುತ್ತಾರೆ ಎಂದು ವಿಜಯಪುರದ ಕೃಪಾಮಯಿ ಶಾರದಾಶ್ರಮದ ಕೈವಲ್ಯಮಯಿ ಮಾತಾಜಿ ಹೇಳಿದರು.

ಜಿಲ್ಲೆಯ ಕನ್ನೂರಿನ ಶಾಂತಿ ಕುಟೀರ ಆಶ್ರಮದಲ್ಲಿ ಶಾಂತಿ ಕುಟೀರ ಟ್ರಸ್ಟ್ ಹಾಗೂ ಭಾರತೀಯ ಸ್ವರಾಜ್ಯ ಸಂಸ್ಥೆ ಮತ್ತು ಸಂಡೂರಿನ ಶೈಲೇಶ್ವರ ವಿದ್ಯಾ ಕೇಂದ್ರದ ಆಶ್ರಯದಲ್ಲಿ ಹಮ್ಮಿಕೊಂಡ ಒಂದು ತಿಂಗಳ ಉಚಿತ ಶೈಕ್ಷಣಿಕ ಹಾಗೂ ಆಧ್ಯಾತ್ಮಿಕ ಬೇಸಿಗೆ ಶಿಬಿರದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ವಿದ್ಯಾರ್ಥಿ ದೆಸೆಯಲ್ಲಿ ಆತ್ಮವಿಶ್ವಾಸ ಎನ್ನುವುದು ಬೆನ್ನೆಲುಬಿನಂತೆ. ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಮೈಗೂಡಿಸಿಕೊಂಡು ಸವಾಲುಗಳನ್ನು ಎದುರಿಸುವ ಧೈರ್ಯ ಬೆಳೆಸಿಕೊಳ್ಳಬೇಕು. ಕೇವಲ ಅಂಕ ಗಳಿಕೆಯಷ್ಟೇ ಜೀವನವಲ್ಲ; ಸಂಸ್ಕಾರವಂತ ವ್ಯಕ್ತಿತ್ವ ರೂಪಿಸಿಕೊಂಡಾಗ ಮಾತ್ರ ಸದೃಢ ದೇಶ ನಿರ್ಮಾಣ ಸಾಧ್ಯ ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ಭಾರತಿ ಮನವಳ್ಳಿ ಪಾಟೀಲ ಕಾರ್ಯಕ್ರಮ



ಉದ್ಘಾಟಿಸಿ ಮಾತನಾಡಿ, ಶಿಲ್ಪಿಯು ಕಲ್ಲಿನಲ್ಲಿ ಸುಂದರ ಮೂರ್ತಿಯನ್ನು ಕಂಡರೆ, ಶಿಕ್ಷಕರು ಮಕ್ಕಳಲ್ಲಿ ಭವ್ಯ ಭವಿಷ್ಯವನ್ನು ಕಾಣುತ್ತಾರೆ. ನೂರಾರು ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ವಾಹನ ಸೌಕರ್ಯ ಹಾಗೂ ನೈತಿಕ ಮೌಲ್ಯಗಳನ್ನು ಒದಗಿಸುತ್ತಿರುವ ಶಾಂತಿ ಕುಟೀರದ ಸೇವೆ ಅನನ್ಯ ಎಂದರು.

ರಾಮರಾಜ್ಯ ಕಲಾ ಮೇಳದ ಅಧ್ಯಕ್ಷ ಶ್ರೀಕೃಷ್ಣ ಸಂಪಗಾಂವಕರ ಪ್ರಾಸ್ತಾವಿಕವಾಗಿ ಮಾತನಾಡಿ, ಸಮರ್ಥ ಗಣಪತರಾವ ಮಹಾರಾಜರ ಆಶಯದಂತೆ 2002ರಲ್ಲಿ ಸಂಡೂರಿನ ಶ್ರೀಶೈಲೇಶ್ವರ ವಿದ್ಯಾ ಕೇಂದ್ರದ ಸಂಸ್ಥಾಪಕ ದಿವಂಗತ ಎಸ್.ವಿ. ನಾನಾವಟೆ ಗುರುಗಳಿಂದ ಆರಂಭಗೊಂಡ ಈ ಶಿಬಿರವು ಇಂದಿಗೂ ಅವಿರತವಾಗಿ ಸಾಗುತ್ತಿದೆ ಎಂದರು.

ಈ ಶಿಬಿರದಲ್ಲಿ ಪಾಲ್ಗೊಳ್ಳುವ ಶಿಬಿರಾರ್ಥಿಗಳಿಗೆ ಗಣಿತ, ವಿಜ್ಞಾನ, ಇಂಗ್ಲಿಷ್ ಜೊತೆಗೆ ಅಬಾಕಸ್, 1 ರಿಂದ 99 ರ ವರೆಗೆ ಮಗ್ಗಿ ಹಾಗೂ ಶುದ್ಧ ಬರವಣಿಗೆಗೆ ಆದ್ಯತೆ, ಅಗಸ್ತ್ಯ ಫೌಂಡೇಶನ್ ವತಿಯಿಂದ ವಿಜ್ಞಾನ ಪ್ರಾತ್ಯಕ್ಷಿಕೆ ಹಾಗೂ ಆರೋಗ್ಯ ತಪಾಸಣೆ ಸೇರಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ ಎಂದರು. ಗುರು ಮನೆತನದ ಹಿರಿಯ ರಮೇಶ ಕನ್ನೂರ ಅಧ್ಯಕ್ಷತೆ ವಹಿಸಿದ್ದರು. ಭಾರತೀಯ ಸುರಾಜ್ಯ ಸಂಸ್ಥೆಯ ಗೌರವಾಧ್ಯಕ್ಷ ಬಿ.ಬಿ. ಪೂಜಾರ, ಅಜಿತ ಕನ್ನೂರ, ಶ್ರೀನಿವಾಸ್ ಕುಲಕರ್ಣಿ, ಸತೀಶ್ ತಿಕೋಟಿ, ವಿ.ಡಿ. ಪಾಟೀಲ್ ಇದ್ದರು.

ಬದುಕಿನ ಸತ್ಯ ತಿಳಿಸುವ ಪುಸ್ತಕಗಳು: ಶಿವಶರಣ

• **ವಿಜಯಪುರ (ಹರ್ಡೇಕರ ಮಂಜಪ್ಪ, ಡಾ ಫ.ಗು. ಹಳಕಟ್ಟಿ, ಕುಮಾರ ಕಕ್ಕಯ್ಯ ಪೋಳ ವೇದಿಕೆ):** ಬುದ್ಧ, ಬಸವ, ಅಂಬೇಡ್ಕರ್ ಮಹಾನ್ ಮಾನವತಾವಾದಿಗಳ ತತ್ವ, ಸಿದ್ಧಾಂತ ನಮ್ಮ ಪ್ರತಿ ರಕ್ತದ ಕಣದಲ್ಲೂ ಬೆರೆತಾಗ ಬಸವಾದಿ ಶರಣರ ಕಲ್ಯಾಣದ ಕನಸು ನನಸಾಗಲು ಸಾಧ್ಯ ಎಂದು ಸಾಹಿತಿ, ಪತ್ರಕರ್ತ ಪರಶುರಾಮ ಶಿವಶರಣ ಹೇಳಿದರು.

ನಗರದ ದರಬಾರ ಹೈಸ್ಕೂಲ್ ಮೈದಾನದಲ್ಲಿ ಮೇ ಸಾಹಿತ್ಯ ಮೇಳ ವತಿಯಿಂದ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಹಮ್ಮಿಕೊಂಡ ಬುದ್ಧ, ಬಸವ, ಬಾಬಾಸಾಹೇಬ ಅಂಬೇಡ್ಕರ್ ಪುಸ್ತಕ ಮೇಳದ ನಿಮಿತ್ತ ಭಾನುವಾರ ಹಮ್ಮಿಕೊಂಡ ಯುವ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈ ಸಮಾಜದ ಆತ್ಮ ಬುದ್ಧ, ಈ ಸಮಾಜದ ಉಸಿರು ಬಸವಣ್ಣ, ಈ ಸಮಾಜದ ದೇಹ–ಕಾಯ ಅಂಬೇಡ್ಕರ್ ಆದಾಗ ಮಾತ್ರ ಪ್ರಬುದ್ಧ ಸಮಾಜ ನಿರ್ಮಾಣ ಆಗಲು ಸಾಧ್ಯ. ಪುಸ್ತಕ ವ್ಯಕ್ತಿಯ ಜೀವನದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎನ್ನುವುದಕ್ಕೆ ಡಾ.ಬಾಬಾಸಾಹೇಬ ಅಂಬೇಡ್ಕರರೇ ಸಾಕ್ಷಿ. ಉತ್ತಮ ಪುಸ್ತಕಗಳು ನಮ್ಮಲ್ಲಿ ಹೊಸ ಚಿಂತನೆಗಳನ್ನು ಹುಟ್ಟಿಸುವ ಜೊತೆಗೆ ಬದುಕಿನ ಸತ್ಯಗಳನ್ನು ತಿಳಿಸಿಕೊಡುತ್ತವೆ ಎಂದರು.

ಪ್ರೊ.ಎ.ಎಚ್. ಕೊಳಮಲಿ ಮಾತನಾಡಿ, ಸಾಹಿತ್ಯಕ್ಕೆ ಸಮಾಜವನ್ನು ತಿದ್ದುವ ಶಕ್ತಿಯಿದೆ, ಒಂದು ಕಾವ್ಯ ಸರ್ಕಾರವನ್ನು ರಚಿಸಬಹುದು, ಒಂದು ಸರ್ಕಾರವನ್ನು ಕೆಡವಬಹುದು ಎಂದರು.

ಕವಿಗಳಾದ ದೀಪಕ ಸಿಂಧೆ, ಸಿದ್ದು ಬಾರಿಗಿಡದ, ನಟರಾಜ ಕುಂಬಾರ, ಕಲ್ಲಪ್ಪ ಶಿವಶರಣ, ರಮೇಶ ಜೋಗೂರ, ಶಿವಬಾಳಮ್ಮ ಕೊಂಡಗೂಳಿ, ಲಾಯಪ್ಪ ಇಂಗಳೆ, ವೀರೇಶ ಗಬ್ಬೂರ, ಭರತಕುಮಾರ ಎಚ್.ಟಿ., ಮಯೂರ ಸಜ್ಜನ ಕವನ ವಾಚಿಸಿದರು. ಸಮ್ಮೇಳನದ ಸಂಘಟಕರಾದ ಬಸವರಾಜ ಸೂಳಿಬಾವಿ, ಅನಿಲ ಹೊಸಮನಿ, ಅಪ್ಪಸಾಹೇಬ ಯಾರನಾಳ, ಸವಿತಾ ವಾಘಮೋರೆ, ಶಾರದಾ ಹೊಸಮನಿ, ಸುಲೋಚನಾ ಮಮದಾಪುರ, ಭಾಗ್ಯಶ್ರೀ ಹೊಸಮನಿ, ಪೂಜಾ ಹೊಸಮನಿ, ಕಾವೇರಿ ರಜಪೂತ, ವೈ. ಎಸ್. ಗುಣಕಿ, ಸುರೇಶ ಬಿಜಾಪುರ, ಶೇಷರಾವ ಮಾನೆ, ಆರ್. ಎಂ. ಯಲಗೋಡ, ದಾನೇಶ ಅವಟಿ, ವೈ. ಎಚ್. ಲಂಬು, ಶಂಕರ ಹಾಲಳ್ಳಿ, ಶರಣಗೌಡ ಪಾಟೀಲ, ಬೋಗೇಶ ಸೊಲ್ಲಾಪುರ, ಸುರೇಶ ಜೀಬಿ ಇದ್ದರು.



ಅಂಬೇಡ್ಕರ್ ಜಯಂತಿ ಇಂದು

• **ಮುದ್ದೇಬಿಹಾಳ:** ಭಾರತೀಯ ಜನತಾ ಪಕ್ಷದ ಮಂಡಲ ಕಾರ್ಯಾಲಯ ವತಿಯಿಂದ ಏ.14ರಂದು ಭಾರತದ ಸಂವಿಧಾನದ ಪಿತಾಮಹ ಮತ್ತು ಶ್ರೇಷ್ಠ ಸಮಾಜ ಸುಧಾರಕರು ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ 135 ನೇ ಜಯಂತಿಯನ್ನು ಬೆಳಗ್ಗೆ 8ಕ್ಕೆ ಅಂಬೇಡ್ಕರ್ ಮೂರ್ತಿಗೆ ಮಾಲೆ ಹಾಕಿ ನಮನವನ್ನು ಸಲ್ಲಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನಂತರ ಭಾ.ಜ.ಪ ಕಾರ್ಯಾಲದಲ್ಲಿ ಭಾವಚಿತ್ರಕ್ಕೆ ಪುಷ್ಪಾರ್ಚಣೆ ಸಲ್ಲಿಸಿ, ವಿಚಾರ ವಿನಿಮಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಭಾ.ಜ.ಪ ಮಂಡಲ ಅಧ್ಯಕ್ಷರು ಜಗದೀಶ್ ಪಂಪಣ್ಣವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏತ ನೀರಾವರಿ ಯೋಜನೆಗೆ ಭೂಸ್ವಾಧೀನ ತಡೆ, ಹಣಕಾಸು ಕೊರತೆ: ಕೆಬಿಜೆಎನ್‌ಎಲ್



• **ಮುದ್ದೇಬಿಹಾಳ:** ತಾಲೂಕಿನ ನಾಗರಬೆಟ್ಟ ಏತ ನೀರಾವರಿ ಯೋಜನೆ ನಿಧಾನಗತಿಯಲ್ಲಿ ನಡೆಯುತ್ತಿದ್ದು ಈ ಕುರಿತು ಕೃಷ್ಣ ಭಾಗ್ಯ ಜಲ ನಿಗಮಕ್ಕೆ ಶೀಘ್ರವಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕು ಎಂದು ಒತ್ತಾಯಿಸಿ ಹೋರಾಟದ ಎಚ್ಚರಿಕೆಯನ್ನು ನೀಡಿದ್ದ ರಾಜ್ಯ ಯುವಜನ ಸೇನೆಯ ಅಧ್ಯಕ್ಷ ಶಿವಾನಂದ ವಾಲಿ ಅವರಿಗೆ ನಿಗಮದ ಅಧಿಕಾರಿಗಳು ಪ್ರತ್ಯುತ್ತರವನ್ನು ಪತ್ರವನ್ನು ನೀಡಿದ್ದಾರೆ.

ತಾಲೂಕಿನ ನಾಗರಬೆಟ್ಟ ಏತ ನೀರಾವರಿ ಯೋಜನೆ ಸ್ಥಳೀಯ ಶಾಸಕ ಸಿ.ಎಸ್. ನಾಡಗೌಡ ಅವರ ಒತ್ತಾಸೆಯ ಮೇರೆಗೆ ಯುಕೆಪಿ–3 ಹಂತದ ನಂತರದಲ್ಲಿ ಉಳಿದ ನೀರಿನ ಬಳಕೆಯ ಯೋಜನೆಯಾಗಿದೆ. ಸದರಿ ಕಾಮಗಾರಿಯನ್ನು 2022ರಲ್ಲಿ ಮುಕ್ತಾಯ ಮಾಡುವ ಯೋಜನೆ ಹಾಕಲಾಗಿತ್ತು, ಆದರೆ ಭೂಸ್ವಾಧೀನ ತಡೆ, ಹಣಕಾಸು ಕೊರತೆ ಕಾರಣದಿಂದ ಬಾಕಿ ಉಳಿದಿರುವ ಕಾಮಗಾರಿಯನ್ನು ಪ್ರಸಕ್ತ ವರ್ಷದಲ್ಲಿ ಮುಗಿಸುವ ಯೋಜನೆ ಹಾಕಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಾಲತವಾಡದ ಅಮರೇಶ್ವರ ದೇವಸ್ಥಾನದ ಮುಂದೆ ಕಾಲುವೆ ನಿರ್ಮಾಣದ 99 ಎಕರೆ 19(1) ಭೂಸ್ವಾಧೀನ ಕಾರ್ಯವು ಅಸಿಂಧು ಆಗಿರುವುದರಿಂದ ಮೊತ್ತ 27.32 ಕೋಟಿ ಠೇವಣಿ ಇಡಲಾಗಿದೆ. ಹಿರೇಮುರಾಳ 11(1) ಗ್ರಾಮದ ಸುತ್ತಲಿನ ಮೀಸಲದ 54.63 ಕೋಟಿಯ ಕಾಮಗಾರಿ ಅರಸನಾಳ ನರಬೆಂಚಿ, ಜಂಗಮುರಾಳ ಗ್ರಾಮದ ರೈತರು ಸಂಪೂರ್ಣ ಪರಿಹಾರ ಬೇಕೆಂದು ಪಟ್ಟು ಹಿಡಿದಿದ್ದಾರೆ. ಇದಕ್ಕಾಗಿ ಕಾಲುವೆಯನ್ನು ಸಂಪೂರ್ಣವಾಗಿ ಮುಚ್ಚುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ ಆದರೆ ಐತೀರ್ಪು ಪರಿಹಾರ ಪಡೆಯುವಂತೆ ರೈತರಿಗೆ ಮನ ಒಲಿಸಲಾಗುವುದು ಎಂದು ಅಧಿಕಾರಿಗಳು ಪತ್ರದಲ್ಲಿ ತಿಳಿಸಿದ್ದಾರೆ.

ಸ್ಪಷ್ಟ ಮಾಹಿತಿ ಇಲ್ಲದೆ ಶಿಕ್ಷಕರಿಗೆ ಗೊಂದಲ: ಬಿ.ಟಿ.ಗೌಡರ



• **ಆಲಮಟ್ಟಿ:** 2026–31ನೇ ಸಾಲಿನ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳ ಮತ್ತು ನಿರ್ದೇಶಕರ ಚುನಾವಣೆ ಘೋಷಣೆಯಾಗಿದ್ದು, ನಿಡಗುಂದಿ ತಾಲೂಕಿನಲ್ಲಿ ಸ್ಪಷ್ಟ ಮಾಹಿತಿ ಇಲ್ಲದಿರುವ ಕಾರಣ ಶಿಕ್ಷಕರಿಗೆ ಗೊಂದಲ ಉಂಟಾಗಿದ್ದು, ವ್ಯಕ್ತಿಯೋರ್ವರ ಸ್ವ ಹಿತಾಸಕ್ತಿಗಾಗಿ ಚುನಾವಣೆ ನಿಯಮಗಳನ್ನು ಗಾಳಿಗೆ ತೂರಲಾಗಿದೆ ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿಕಟಪೂರ್ವ ವಿಜಯಪುರ ಜಿಲ್ಲಾಧ್ಯಕ್ಷ ಬಿ.ಟಿ.ಗೌಡರ ಹೇಳಿದರು.

ರವಿವಾರ ಆಲಮಟ್ಟಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

ನಮಗೆ ಸಿಕ್ಕ ಮಾಹಿತಿಯಂತೆ ಏ.11ರಂದು ಮತ್ತು ಏ.12ರವರೆಗೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದ್ದು ಅದಕ್ಕಿಂತ ಮೊದಲು ಕರಡು ಮತದಾರರ ಪಟ್ಟಿ ಬಿಡುಗಡೆ ಮಾಡಿ ಅಂತಿಮ ಪಟ್ಟಿ ಬಿಡುಗಡೆ ಮಾಡಬೇಕಾಗಿತ್ತು. ಹಾಗೂ ಚುನಾವಣೆ ಅಧಿಕಾರಿಗಳ ನೇಮಕ ಮತ್ತು ಚುನಾವಣಾ ಕಾರ್ಯಾಲಯದ ಬಗ್ಗೆ ಮಾಹಿತಿ ನೀಡಬೇಕಾಗಿತ್ತು, ಇಲ್ಲಿಯವರೆಗೆ ಅದಾವುದನ್ನು ಮಾಡದೇ ಅಕ್ರಮವಾಗಿ ಚುನಾವಣೆ ನಡೆಸಿ ವಾಮಮಾರ್ಗದಿಂದ ಅಧಿಕಾರ ಹಿಡಿಯುವ ಹುನ್ನಾರವಿದೆ ಎಂದು ಆರೋಪಿಸಿದರು.

ಅಕ್ರಮದ ಚುನಾವಣೆಯಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ್ ನುಗ್ಲಿ ಅವರು ತಮ್ಮ ಸ್ವಂತ ಕ್ಷೇತ್ರವಾದ ನಿಡಗುಂದಿ ತಾಲೂಕಿನಲ್ಲಿ ಅಕ್ರಮವಾದ ಚುನಾವಣೆ ನಡೆಸಲು ಮತ್ತು ಮತ್ತೊಮ್ಮೆ ರಾಜ್ಯ ಘಟಕದ ಅಧ್ಯಕ್ಷರಾಗಲು ವಾಮಮಾರ್ಗದ ದಾರಿ ಹಿಡಿದಿರುವುದು ರಾಜ್ಯದ ಶಿಕ್ಷಕರ ಆಕ್ರೋಶಕ್ಕೆ ಕಾರಣವಾಗಿದೆ ಎಂದು ಆಕ್ರೋಶವ್ಯಕ್ತಪಡಿಸಿದರು.

ಈ ಸಂದೇಶ ಎಚ್.ಎಚ್. ದೊಡ್ಡಮನಿ ಅಧ್ಯಕ್ಷರು ಕರ್ನಾಟಕ ರಾಜ್ಯ ಎಸ್ಸಿ ಎಸ್ಟಿ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ನಿಡಗುಂದಿ, ಬಿ.ಎಸ್. ಇಜೇರಿ ನಿಕಟಪೂರ್ವ ಅಧ್ಯಕ್ಷರು ಶಿಕ್ಷಕರ ಸೊಸೈಟಿ ಬಸವನಬಾಗೇವಾಡಿ, ಬಿಡಿ ಛಲವಾದಿ ನಿಕಟಪೂರ್ವ ತಾಲೂಕ ಕೋಶ ಅಧ್ಯಕ್ಷರು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಘಟಕ ನಿಡುಗುಂದಿ ಸೇರಿದಂತೆ ಮತ್ತಿತರಿದ್ದರು.

ಇಂದು ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ

• **ಕೊಲ್ಹಾರ:** ತಾಲೂಕು ಆಡಳಿತದಿಂದ ಏ.14ರಂದು ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಹಾಗೂ ಭಾರತದ ಮಾಜಿ ಉಪ ಪ್ರಧಾನಿ ಮತ್ತು ಹಸಿರು ಕ್ರಾಂತಿ ಹರಿಕಾರ ಡಾ. ಬಾಬು ಜಗಜೀವನ ರಾಮ್‌ರವರ 119ನೇ ಜಯಂತಿಯನ್ನು ಆಚರಿಸಲಾಗುವುದು. ಬೆಳಗ್ಗೆ 9ಕ್ಕೆ ಕೊಲ್ಹಾರ ಪಟ್ಟಣದ ಶ್ರೀ ದಿಗಂಬರೇಶ್ವರ ಮಠ ದಿಂದ ಮಹನೀಯರ ಭಾವಚಿತ್ರದ ಭವ್ಯವಾದ ಮೆರೆವಣಿಗೆಯನ್ನು ಹಮ್ಮಿಕೊಳ್ಳಲಾಗಿದ್ದು, ನಂತರ ವಾರ್ಡ್ ನಂಬರ್ 12 ದಲ್ಲಿರುವ ಡಾ. ಬಿ. ಆರ್. ಅಂಬೇಡ್ಕರ್ ಸಮುದಾಯ ಭವನದಲ್ಲಿ 10.30 ನಿಮಿಷಕ್ಕೆ ವೇದಿಕೆಯ ಕಾರ್ಯಕ್ರಮವನ್ನು ಕೂಡಾ ಹಮ್ಮಿಕೊಳ್ಳಲಾಗಿದೆ ಆ ಕಾರಣ ಕೊಲ್ಹಾರ ತಾಲ್ಲೂಕಿನ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಿಬ್ಬಂದಿ ವರ್ಗ ಹಾಗೂ ನಾಗರಿಕರು ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಲು ಮಂಜುಳಾ ಹಿರೇಮನಿ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಮಾಹಿತಿ ನೀಡಿದರು.

ಧರಿದೇವರ ಜಾತ್ರಾ ಮಹೊತ್ಸವ: ಸುಮಂಗಲಿಯರಿಂದ ಪೂರ್ಣ ಕುಂಭ ಮೇಳ

• **ಇಂಡಿ:** ತಾಲೂಕಿನ ಇಂಗಳಗಿ ಗ್ರಾಮದ ಮಾನೆವಸ್ಥಿಯ ಶ್ರೀ ಧರಿದೇವರ ಜಾತ್ರಾ ಮಹೊತ್ಸವವು ಅಂಗವಾಗಿ ಸುಮಂಗಲಿಯರ ಪೂರ್ಣ ಕುಂಭ ಮೇಳದೊಂದಿಗೆ ಪಲ್ಲಕ್ಕಿ ಹಾಗೂ ಕುದುರೆ ಮೆರವಣಿಗೆಯು ಚಿಟ್ಟ ಹಲಗೆ, ಡೊಳ್ಳು ಕುಣಿತದೊಂದಿಗೆ ಅತಿ ವಿಜೃಂಭಣೆಯಿಂದ ನಡೆಯಿತು.

ಬೆಳಗ್ಗೆ ನಸುಕಿನ ಜಾವ 4ಗಂಟೆಗೆ ರುದ್ರಾಭಿಷೇಕ, ಪ್ರಾರಂಭವಾದ ಪಲ್ಲಕ್ಕಿ ಮೆರವಣಿಗೆಯು ಮಾನೆ ವಸ್ಥಿಯ ಶ್ರೀ ಹನುಮಾನ ದೇವರ ದೇವಸ್ಥಾನದಿಂದ ಹೊರಟ ಸುಮಂಗಲಿಯರ ಪೂರ್ಣ ಕುಂಬ ಮೇಳದೊಂದಿಗೆ ಡೊಳ್ಳು, ಸಕಲ ವಾದ್ಯ ವೈಭವಗಳಿಂದ ಶ್ರೀ ಧರಿದೇವರ ಪಲ್ಲಕ್ಕಿ ಮೆರವಣಿಗೆಯು ವಿಜೃಂಭಣೆಯಿಂದ ಮೆರವಣಿಗೆಯುದ್ದಕ್ಕೂ ಕುದರಿಕಾರರು ಹಾಗೂ ಭಕ್ತರು ಜಯಘೋಣೆಗಳನ್ನು ಕೂಗುತ್ತಾ ಮೆರವಣಿಗೆ ಸಾಗಿತು.



ಶ್ರೀ ಧರಿದೇವರ ದೇವಸ್ಥಾನಕ್ಕೆ ಸುಮಂಗಲಿಯರ ಪೂರ್ಣ ಕುಂಬ ಮೇಳದೊಂದಿಗೆ ಪಲ್ಲಕ್ಕಿ ಹಾಗೂ ಕುದುರೆ ಮೇರವಣಿಗೆಯು ಆಗಮಿಸಿದ ನಂತರ ಸುಮಂಗಲಿಯರಿಗೆ ಉಡಿ ತುಂಬುವ ಕಾರ್ಯಕ್ರಮವು ಶ್ರೀ ಧರಿದೇವರ ಸೇವಾ ಸಮೀತಿ ಹಾಗೂ ಅಕ್ಕನ ಬಳಗದ ಸಹಯೋಗದಲ್ಲಿ ಕಾರ್ಯಕ್ರಮಗಳು ನೆರವೇರಿದವು.

ಮೇರವಣಿಗೆಯಲ್ಲಿ ಜಾತ್ರಾ ಉತ್ಸವ ಸಮಿತಿಯ ನಾಮದೇವ ಡಾಂಗೆ, ಶರಣಪ್ಪ ಉಡಚಾಣ, ತುಕಾರಾಮ ಹೊಸಮನಿ, ಶಿವಯೋಗಿ ಮದಬಾವಿ, ಧರೆಪ್ಪ.ತು.ಡಂಗಿ, ಸಂತೊಷ ಮಾನೆ, ವಿಜಯಕುಮಾರ ಡಂಗಿ, ಧರೇಪ್ಪ.ಮಾ.ಡಂಗಿ, ರವಿಚಂದ್ರ ಡಾಂಗೆ, ಶಿರಗಪ್ಪಾ ಕಳಸಗೊಂಡ, ಸಂತೋಷ ಡಾಂಗೆ, ಮಲ್ಲಪ್ಪ ವಳಸಂಗ, ಧರೆಪ್ಪ ಚಾಂದಕೊಟೆ, ಅಂಬಣ್ಣಾ ಮಂಗಲಗಿ, ವಿಠ್ಠಲ ಹೊಸಮನಿ, ರಾಮ ಜೇವಣಗಿ, ಬಸಪ್ಪ ವಳಸಂಗ, ಅಪ್ಪಶಾ ಹೌಸೆ, ಪರಮೇಶ್ವರ ಹೊನ್ನಕೊರೆ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಪ್ರಜಾಸೌಧ ಸ್ಥಳ ವಿವಾದ: 49ನೇ ದಿನಕ್ಕೆ ಮುಂದುವರಿದ ಧರಣಿ

• **ತಾಳಿಕೋಟೆ:** ತಾಲೂಕಿನ ಮೈಲೇಶ್ವರ ಗ್ರಾಮದ ಬಳಿ ನಿರ್ಮಿಸಲು ಉದ್ದೇಶಿಸಿರುವ 'ಪ್ರಜಾಸೌಧ'ದ ಸ್ಥಳ ಆಯ್ಕೆಯನ್ನು ವಿರೋಧಿಸಿ ನಡೆಯುತ್ತಿರುವ ಧರಣಿ ಸತ್ಯಾಗ್ರಹವು ಸೋಮವಾರಕ್ಕೆ 49ನೇ ದಿನಕ್ಕೆ ಯಶಸ್ವಿಯಾಗಿ ಪೂರೈಸಿದೆ. ದಿನಕಳೆದಂತೆ ಈ ಹೋರಾಟಕ್ಕೆ ಸಾರ್ವಜನಿಕ ಬೆಂಬಲ ಹೆಚ್ಚುತ್ತಿದ್ದು, ಇಂದು ಪಟ್ಟಣದ ಆಶ್ರಯ ಕಾಲೋನಿ ಮೈನಾರಿಟಿ ಯಂಗ್ ಕಮಿಟಿಯ ಪದಾಧಿಕಾರಿಗಳು ಧರಣಿ ನಿರತರಿಗೆ ಸಾಥ್ ನೀಡಿದರು.



ನಿರ್ಜನ ಪ್ರದೇಶದಲ್ಲಿ ಸೌಧ ಬೇಡ: ಹೋರಾಟಗಾರರ ಪಟ್ಟು: ಪಟ್ಟಣದಿಂದ ಸುಮಾರು 4–5 ಕಿಮೀ ದೂರದ ನಿರ್ಜನ ಪ್ರದೇಶದಲ್ಲಿ ಸೌಧ ನಿರ್ಮಿಸಿದರೆ ರೈತರು, ಮಹಿಳೆಯರು ಮತ್ತು ವೃದ್ಧರಿಗೆ ಓಡಾಡಲು ತೊಂದರೆಯಾಗುತ್ತದೆ ಎಂಬುದು ನಾಗರಿಕರ ಪ್ರಮುಖ ಆಕ್ಷೇಪ. ''ಸಾರ್ವಜನಿಕರಿಗೆ ಸುಲಭವಾಗಿ ಸಿಗುವ ಜಾಗದಲ್ಲಿ ಕಚೇರಿಗಳಿರಬೇಕು ಹೊರತು, ನಗರದಿಂದ ದೂರವಲ್ಲ'' ಎಂದು ಹೋರಾಟಗಾರರು ಪ್ರತಿಪಾದಿಸುತ್ತಿದ್ದಾರೆ.

ಜನಪ್ರತಿನಿಧಿಗಳ ವಿರುದ್ಧ ಆಕ್ರೋಶ: ಧರಣಿಯನ್ನು ಉದ್ದೇಶಿಸಿ ಮಾತನಾಡಿದ ದೇವರ ಹಿಪ್ಪರಗಿ ಜೆಡಿಎಸ್ ತಾಲೂಕು ಅಧ್ಯಕ್ಷ ಸಾಯಬಣ್ಣ ಬಾಗೇವಾಡಿ, ಶಾಸಕರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಮೌನವನ್ನು ಖಂಡಿಸಿದರು. ಜನರು ರಸ್ತೆಯಲ್ಲಿ ಕುಳಿತು 50 ದಿನಗಳಾಗುತ್ತಾ ಬಂದರೂ ಜನಪ್ರತಿನಿಧಿಗಳು ಇತ್ತ ಕಡೆ ಮುಖ ಮಾಡದಿರುವುದು ದುರ್ದೈವ. ಮತ ನೀಡಿದ ಜನರ ಸಂಕಷ್ಟಕ್ಕೆ ಸ್ಪಂದಿಸದ ಶಾಸಕರು ಇದ್ದೂ ಇಲ್ಲದಂತಾಗಿದ್ದಾರೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಅಸ್ಲಾಂ ಜಮಖಂಡಿ, ಖಜಾಪಟೇಲ್ ಪಟೇಲ್, ರಫೀಕ್ ಬೀಳಗಿ, ಆಯುಸ ಸೋಲಾಪುರ, ಹುಸೇನ್ ಬೆಳ್ಳುಬ್ಬಿ, ನಬಿ ಪಾಲವಾಲೆ, ಜಾಕಿರ ಬೇಪಾರಿ, ಲಾಡಾನ ಮಕಾನದಾರ, ಸಾಹಿಲ ಜಮಖಂಡಿ, ಮೊಬಿನ್ ತಳ್ಳಳ್ಳಿ, ತನ್ವೀರ್ ಬಿಸ್ತಿ, ಇರ್ಫಾನ್ ಅತ್ತಾರ, ರಿಹಾನ್ ಅತ್ತಾರ, ಆಸಿಫ್ ನದಾಫ್, ಅಮಿತ ಮನಗೂಳಿ, ಪ್ರಕಾಶ್ ಹಜೇರಿ, ಪರಶುರಾಮ ತಂಗಡಗಿ, ಸುರೇಶ ಹಜೇರಿ, ಹೋರಾಟ ಸಮಿತಿಯ ಅಧ್ಯಕ್ಷ ದಶರತಸಿಂಗ್ ಮನಗೂಳಿ, ಎಸ್.ಬಿ. ಕಟ್ಟಿಮನಿ, ಆರ್.ಎಸ್. ಪಾಟೀಲ (ಕೂಚಬಾಳ), ಮುತ್ತಪ್ಪ ಚಮಲಾಪುರ, ಕಾಶೀನಾಥ ಮುರಾಳ, ಮುರಿಗೆಪ್ಪ ಸರಶೆಟ್ಟಿ, ದತ್ತು ಹೆಬಸೂರ, ಪರಶುರಾಮ ತಂಗಡಗಿ, ನಾಗೇಶ ಕಟ್ಟಿಮನಿ, ದೇವೇಂದ್ರ ಹಾದಿಮನಿ, ವಿಜಯಸಿಂಗ್ ಹಜೇರಿ, ಮಹೇಶ ಛಲವಾದಿ, ಪ್ರಕಾಶ್ ಹಜೇರಿ ಮುದಕಪ್ಪ ಬಡಿಗೇರ, ಸಿರಸಕುಮಾರ ಹಜೇರಿ, ಮಲ್ಲು ಮೇಟಿ, ಸೇರಿದಂತೆ ಅನೇಕರು ಮತ್ತು ಪಟ್ಟಣದ ಗಣ್ಯರು ಭಾಗವಹಿಸಿದ್ದರು.

ಮುಂದಿನ ಎಚ್ಚರಿಕೆ: ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ಸ್ಥಳವನ್ನು ಬದಲಿಸದಿದ್ದರೆ, ಮುಂಬರುವ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಸಮಿತಿ ಎಚ್ಚರಿಸಿದೆ.

ದಲಿತ ಸಂಘರ್ಷ ಸಮಿತಿ, ವಿದ್ಯಾರ್ಥಿ ಒಕ್ಕೂಟ ಪದಾಧಿಕಾರಿಗಳ ನೇಮಕ

• **ತಾಳಿಕೋಟೆ:** ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ರಿ), ನಾಗವಾರ ಸ್ಥಾಪಿತ ಸಂಘಟನೆಯ ವತಿಯಿಂದ ತಾಳಿಕೋಟಿ ತಾಲೂಕಿನಲ್ಲಿ ತಾಲೂಕು, ಹೋಬಳಿ, ನಗರ ಶಾಖೆಗಳು ಹಾಗೂ ತಾಲೂಕು ದಲಿತ ವಿದ್ಯಾರ್ಥಿ ಒಕ್ಕೂಟದ ಪದಾಧಿಕಾರಿಗಳನ್ನು ನೇಮಕ ಮಾಡಲಾಯಿತು.

ಕಾರ್ಯಕ್ರಮವು ಬೆಳಗಾವಿ ವಿಭಾಗೀಯ ಸಂಚಾಲಕರಾದ ದೇವೇಂದ್ರ ಹಾದಿಮನಿ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮುಖ್ಯ ಅತಿಥಿಗಳಾಗಿ ರಾಜ್ಯ ಸಮಿತಿ ಸದಸ್ಯರಾದ ರಾವುತ್ ತಳಕೇರಿ, ಬೆಳಗಾವಿ ವಿಭಾಗೀಯ ಸಂಘಟನಾ ಸಂಚಾಲಕರಾದ ಹುಯೋಗಿ ತಳ್ಳೊಳ್ಳಿ, ವಿಜಯಪುರ ಜಿಲ್ಲಾ ಸಂಚಾಲಕರಾದ ಗುರುರಾಜ್ ಗುಡಿಮನಿ ಹಾಗೂ ಸಂಘಟನಾ ಸಂಚಾಲಕರಾದ ಪರಶುರಾಮ ಕಟ್ಟಿಮನಿ ಸೇರಿದಂತೆ ಕಾಮೇಶ ಭಜಂತ್ರಿ, ಪವಡೆಪ್ಪ ಹುಲ್ಲೂರು ಮತ್ತು ಕಾಳಪ್ಪ ಮಸಿಬಿನಾಳ ಉಪಸ್ಥಿತರಿದ್ದರು.

ಇದೇ ವೇಳೆ ದಲಿತ ವಿದ್ಯಾರ್ಥಿ ಒಕ್ಕೂಟದ ಜಿಲ್ಲಾ ಸಂಚಾಲಕರಾದ ನಾಗೇಶ್ ಕಟ್ಟಿಮನಿ ಮತ್ತು ಜಿಲ್ಲಾ ಸಂಘಟನಾ ಸಂಚಾಲಕರಾದ ಮಾಂತೇಶ್ ಕಟ್ಟಿಮನಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ತಾಳಿಕೋಟಿ ತಾಲೂಕು



ಶಾಖೆಯ ಸಂಚಾಲಕರಾಗಿ ಮಹೇಶ್ ಚಲವಾದಿ ಅವರನ್ನು ಆಯ್ಕೆ ಮಾಡಲಾಗಿದ್ದು, ಸಂಘಟನಾ ಸಂಚಾಲಕರಾಗಿ ಬಸವರಾಜ್ ತಳವಾರ್, ಬಸವರಾಜ್ ಉತಾಳೆ, ದೇವು ಗೊಟಗಣಕಿ, ಭೀಮರಾವ್ ರತ್ನಾಕರ್, ಚಂದ್ರು ದೊಡ್ಡಮನಿ ಮತ್ತು ಯಮನಪ್ಪ ಮಾದರ್ ಅವರನ್ನು ನೇಮಕ ಮಾಡಲಾಯಿತು. ಖಜಾಂಚಿಯಾಗಿ ಮಾಯಪ್ಪ ಮಾದರ್ ಆಯ್ಕೆಯಾದರು.

ಹೋಬಳಿ ಶಾಖೆಯ ಸಂಚಾಲಕರಾಗಿ ಪರಶುರಾಮ ಬೋಳವಾಡ ಹಾಗೂ ಸಂಘಟನಾ ಸಂಚಾಲಕರಾಗಿ ಕಾಶಿನಾಥ್ ತುಂಬಿಗಿ, ಸಾಬಣ್ಣ ಗುತ್ತಿಹಾಳ, ಕಾಳಪ್ಪ ಬಡಿಗೇರ್, ಅಪ್ಪು ಚಲವಾದಿ ಮತ್ತು ಶರಣು ನಡುವಿನಮನಿ ನೇಮಕಗೊಂಡರು.

ನಗರ ಶಾಖೆಯ ಸಂಚಾಲಕರಾಗಿ ಶ್ರೀನಿವಾಸ್ ಕುಲಕರ್ಣಿ ಹಾಗೂ ಸಂಘಟನಾ ಸಂಚಾಲಕರಾಗಿ ಪರಶುರಾಮ ನವದಗಿ, ಮುತ್ತು ಮತ್ತು ಆನಂದ ಬೋಳವಾಟ ಅವರನ್ನು ಆಯ್ಕೆ ಮಾಡಲಾಯಿತು. ಇದೇ ವೇಳೆ ತಾಳಿಕೋಟಿ ತಾಲೂಕು ದಲಿತ ವಿದ್ಯಾರ್ಥಿ ಒಕ್ಕೂಟದ ತಾಲೂಕು ಸಂಚಾಲಕರಾಗಿ ನಾಗೇಶ್ ಚಲವಾದಿ ಅವರನ್ನು ನೇಮಕ ಮಾಡಲಾಯಿತು. ಕಾರ್ಯಕ್ರಮದಲ್ಲಿ ಸಂಘಟನೆಯ ಹಲವಾರು ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಕಿರುಸುದ್ದಿ

ತಾಲೂಕು ಆಡಳಿತದಿಂದ ಪಕ್ಷಿಗಳಿಗೆ ನೀರುಣಿಸುವ ತೊಟ್ಟಿಗಳ ವಿತರಣೆ

ಮಾನ್ವಿ: ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತ ಹಾಗೂ ಪಕ್ಷಿ ಪ್ರೇಮಿ ಸಲಾವುದ್ದೀನ್ ಸಹಯೋಗದಲ್ಲಿ ಪಕ್ಷಿಗಳಿಗೆ ನೀರುಣಿಸುವ ತೊಟ್ಟಿಗಳ ವಿತರಣೆ ಕಾರ್ಯಕ್ರಮವನ್ನು ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ರವರು ಪಕ್ಷಿಗಳಿಗೆ ನೀರುಣಿಸುವ ತೊಟ್ಟಿಗಳನ್ನು ವಿತರಿಸುವ ಮೂಲಕ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಈ ಬಾರಿ ಬೇಸಿಗೆಯಲ್ಲಿ ಹೆಚ್ಚಿನ ಉಷ್ಣಾಂಶ ದಾಖಲಾಗಿರುವುದರಿಂದ ಜನರಿಗಾಗಿ ಅರವಟಿಗೆಗಳನ್ನು ಪ್ರಾರಂಭಿಸಲಾಗಿದು ಅದರಂತೆ ನಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸವಾಗಿರುವ ಪಕ್ಷಿಗಳಿಗೂ ಕೂಡ ನೀರಿನ ಅವಶ್ಯಕತೆ ಇರುವುದರಿಂದ ಸರಕಾರಿ ಕಚೇರಿಗಳ ಆವರಣದಲ್ಲಿ ಹಾಗೂ ಮನೆಗಳ ಛಾವಣಿಗಳ ಮೇಲೆ ಬೇಸಿಗೆ ಮುಗಿಯುವವರೆಗೂ ಪಕ್ಷಿಗಳಿಗೆ ನೀರುಣಿಸುವ ತೊಟ್ಟಿಗಳನ್ನು ಕಟ್ಟಿ ಅವುಗಳಿಗೆ ನಿತ್ಯ ನೀರು ಹಾಗೂ ಆಹಾರ ಪದಾರ್ಥಗಳನ್ನು ನೀಡುವುದರಿಂದ ಸಾಕಷ್ಟು ಪಕ್ಷಿಗಳ ಜೀವಗಳನ್ನು ಉಳಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಪಕ್ಷಿ ಪ್ರೇಮಿ ಸಲಾವುದ್ದೀನ್ ಮಾತನಾಡಿ, ಪ್ರಕೃತಿಯಲ್ಲಿನ ಪ್ರತಿಯೊಂದು ಜೀವಿಗೂ ಕೂಡ ತನ್ನದೆ ಆದ ಮಹಾತ್ವವಿದೆ ಪರಿಸರ ಸಮತೋಲನದಲ್ಲಿ ಪಕ್ಷಿಗಳ ಪಾತ್ರ ಬಹುಳ ಪ್ರಮುಖವಾಗಿರುವುದರಿಂದ ಅಳುವಿನಂಚಿನಲ್ಲಿರುವ ಪಕ್ಷಿಗಳನ್ನು ನಾವು ಉಳಿಸಿಕೊಳ್ಳಬೇಕಾಗಿದೆ ಎಂದು ತಿಳಿಸಿದರು. ಗ್ರೇಡ್-2 ತಹಶಿಲ್ದಾರ್ ಅಬ್ದುಲ್ ವಾಹಿದ್, ಪುರಸಭೆ ಮುಖ್ಯಾಧಿಕಾರಿ ಪರಶುರಾಮ್ ದೇವಮಾನೆ, ಪಿ.ಐ, ಸೋಮಶೇಖರ ಎಸ್.ಕೆಂಚರೆಡ್ಡಿ, ತಾ.ಆರೋಗ್ಯಧಿಕಾರಿ ಡಾ.ಶರಣಬಸವರಾಜ, ತಾ.ಪಶು ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ಬಸವರಾಜ ಹಿರೇಮಠ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

ಬಾಲ್ಯ ವಿವಾಹ ತಡೆಗೆ ಶ್ರಮಿಸಿ: ಎಸ್ಪಿ

ರಾಯಚೂರು: ಜಿಲ್ಲೆಯಲ್ಲಿ ಬಾಲ್ಯ ವಿವಾಹಗಳು ಇಂದಿಗೂ ಜರಗುತ್ತಿರುವ ಕುರಿತು ಸಹಾಯವಾಣಿ 112ಗೆ ಕರೆಗಳು ಬರುತ್ತಿವೆ. ಬಾಲ್ಯ ವಿವಾಹಗಳು ಜರಗುತ್ತಿರುವ ಕುರಿತು ಸಾರ್ವಜನಿಕರ ಗಮನಕ್ಕೆ ಕಂಡುಬಂದರೆ ತಕ್ಷಣ ಸಹಾಯವಾಣಿಗೆ ಕರೆ ಮಾಡಿದರೆ ಬಾಲ್ಯ ವಿವಾಹಗಳನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ ಎಂದು ಜಿಲ್ಲಾ ಎಸ್ಪಿ ಅರುಣಾಂಗ್ಶು ಗಿರಿ ತಿಳಿಸಿದ್ದಾರೆ.



ಅಪ್ರಾಪ್ತ ವಯಸ್ಸಿನಲ್ಲಿ ವಿವಾಹವಾಗಿ ಮಗುವೂ ಆಗಿದ್ದರೆ ಅಂತಹ ಪ್ರಕರಣವನ್ನು ಮಕ್ಕಳ ರಕ್ಷಣಾ ಘಟಕದ ಸಹಾಯದೊಂದಿಗೆ ಫೋಕ್ಸೋ ಕಾಯ್ದೆಯಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗುವುದು. ಈಗಾಗಲೇ ಇಂತಹ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ ಕಳೆದ ಮೂರು ತಿಂಗಳಿಂದ ಸಹಾಯವಾಣಿ 112 ದೂರವಾಣಿ ಸಂಖ್ಯೆಗೆ 11 ಕರೆಗಳು ಬಂದಿರುವ ಕಾರಣಕ್ಕೆ ಈ ಎಲ್ಲ ಕಡೆಗಳಲ್ಲಿಯೂ ನಮ್ಮ ಸಿಬ್ಬಂದಿ ಹೋಗಿ ಬಾಲ್ಯ ವಿವಾಹಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಈಗಾಗಲೇ ಮದುವೆ ಆಗಿ ಅಪ್ರಾಪ್ತರು ಗರ್ಭವತಿಯರಾಗಿರುವ ಪ್ರಕರಣಗಳು ಬೆಳಕಿಗೆ ಬಂದಿವೆ. ಈ ಪ್ರಕರಣಗಳಲ್ಲಿ ಕಾನೂನು ರೀತಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬಳ್ಳಾರಿ: ಜಿಲ್ಲೆಯ ಪ್ರತಿಷ್ಠಿತ ಖಾಸಗಿ ಶಾಲೆಗಳಲ್ಲಿ ಓದಲು ಇಚ್ಛಿಸುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ 2026-27ನೇ ಶೈಕ್ಷಣಿಕ ಸಾಲಿಗೆ 6ನೇ ತರಗತಿ ಪ್ರವೇಶಕ್ಕಾಗಿ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. 5ನೇ ತರಗತಿಯಲ್ಲಿ ಶೇ.60ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ವಿದ್ಯಾರ್ಥಿಗಳನ್ನು ಅರ್ಹತಾ ಪರೀಕ್ಷೆಯ ಮೂಲಕ ಆಯ್ಕೆ ಮಾಡಲಾಗುವುದು. ಏ.15ರಿಂದ ಅರ್ಜಿ ವಿತರಿಸಲಾಗುತ್ತದೆ. ಮೇ 4 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ.

ಆಸಕ್ತರು ಆಯಾ ತಾಲ್ಲೂಕಿನ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ಅರ್ಜಿಗಳನ್ನು ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ನಿಗದಿತ ದಿನಾಂಕದೊಳಗೆ ಆದೇ ಕಚೇರಿಯಲ್ಲಿ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗಾಗಿ ನಗರದ ವಾಲ್ಮೀಕಿ ಭವನದ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಅಥವಾ ಆಯಾ ತಾಲ್ಲೂಕು ಕಚೇರಿ ಸಂಪರ್ಕಿಸಬಹುದು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಾಷು ಮೋದ್ದಿನ್ ತಿಳಿಸಿದ್ದಾರೆ.



ಮಾನ್ವಿ: ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತ ಹಾಗೂ ಪಕ್ಷಿ ಪ್ರೇಮಿ ಸಲಾವುದ್ದೀನ್ ಸಹಯೋಗದಲ್ಲಿ ಪಕ್ಷಿಗಳಿಗೆ ನೀರುಣಿಸುವ ತೊಟ್ಟಿಗಳ ವಿತರಣೆ ಕಾರ್ಯಕ್ರಮವನ್ನು ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ರವರು ಪಕ್ಷಿಗಳಿಗೆ ನೀರುಣಿಸುವ ತೊಟ್ಟಿಗಳನ್ನು ವಿತರಿಸಿದರು.

ರಹೀಂಸಾಬ್‌ಗೆ ಭಾವಪೂರ್ಣ ವಿದಾಯ

ಕನಕಗಿರಿ: ತಾಲೂಕಿನ ಪಂಚಾಯತ್ ಕಚೇರಿಯಲ್ಲಿ ಸೇವೆ ಸಲ್ಲಿಸಿದ ಅಟೆಂಡರ್ ರಹೀಂಸಾಬ್ ಅವರಿಗೆ ಗೌರವಪೂರ್ವಕವಾಗಿ ನಿವೃತ್ತಿ ಬಿಳ್ಕೋಡುಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಕೆ.ರಾಜಶೇಖರ ಮಾತನಾಡಿ, ರಹೀಂಸಾಬ್ ಉತ್ತಮ ಸ್ವಭಾವದ ವ್ಯಕ್ತಿಯಾಗಿದ್ದು, ಸಹೋದ್ಯೋಗಿಗಳೊಂದಿಗೆ ಸದಾ ಸೌಹಾರ್ದತೆಯಿಂದ ವರ್ತಿಸುತ್ತಿದ್ದರು, ತಮ್ಮ ಕರ್ತವ್ಯಗಳನ್ನು ಅತ್ಯಂತ ಪ್ರಾಮಾಣಿಕತೆ ಹಾಗೂ ಕಾಳಜಿಯಿಂದ ನಿರ್ವಹಿಸಿದ್ದ ಅವರು ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಪ್ರಾಮಾಣಿಕತೆ ಯಾವಾಗಲೂ ಪ್ರಶಂಸೆಗೆ ಅರ್ಹವಾದ ಗುಣವಾಗಿದೆ ಎಂದು ಶ್ಲಾಘಿಸಿದರು. ಸರ್ಕಾರಿ ಸೇವೆಯಲ್ಲಿ ವಯೋ ನಿವೃತ್ತಿ ಸಹಜ ಪ್ರಕ್ರಿಯೆಯಾಗಿದ್ದು, ರಹೀಂಸಾಬ್ ಅವರ ಮುಂದಿನ ಜೀವನ ಆರೋಗ್ಯಕರ ಹಾಗೂ ಸುಖಕರವಾಗಿರಲಿ ಎಂದು ಹಾರೈಸಿದರು.

ಮೈಸೂರು ಜಿಲ್ಲೆಯ ಹುಣಸೂರು ಉಪವಿಭಾಗದ ಸಹಾಯಕ ಆಯುಕ್ತರಾದ ಕಾವ್ಯರಾಣಿ ಮಾತನಾಡಿ, ನಾನು ಇಲ್ಲಿ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ರಹೀಂಸಾಬ್ ಅವರು ತಾಯಿ ಸ್ಥಾನದಲ್ಲಿ ನಿಂತು ಸಾಕಷ್ಟು ಕಾಳಜಿ ವಹಿಸುತ್ತಿದ್ದರು ಎಂದು ಸ್ಮರಿಸಿದರು. ನಂತರ ಗ್ರಾಪಂ ಪಿಡಿಓಗಳು ಹಾಗೂ ಸಿಬ್ಬಂದಿ ಮಾತನಾಡಿ, ರಹೀಂಸಾಬ್ ಅವರ ಸೇವೆಯನ್ನು ಶ್ಲಾಘಿಸಿದರು. ಬಳಿಕ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು.



ಕನಕಗಿರಿ: ತಾಲೂಕಿನ ಪಂಚಾಯತ್ ಕಚೇರಿಯಲ್ಲಿ ಸೇವೆ ಸಲ್ಲಿಸಿದ ಅಟೆಂಡರ್ ರಹೀಂಸಾಬ್ ಅವರಿಗೆ ಗೌರವಪೂರ್ವಕವಾಗಿ ನಿವೃತ್ತಿ ಬಿಳ್ಕೋಡುಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸಹಾಯಕ ನಿರ್ದೇಶಕ ವೀರಣ್ಣ ನಕ್ರಳ್ಳಿ ಸೇರಿದಂತೆ 11 ಗ್ರಾಮ ಪಂಚಾಯತ್‌ಗಳ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು ಹಾಗೂ ತಾ.ಪಂ ಮತ್ತು ಗ್ರಾಪಂ ಸಿಬ್ಬಂದಿ ಉಪಸ್ಥಿತರಿದ್ದರು.

ಹುಲಿಗೆಮ್ಮ ದೇವಿ ಜಾತ್ರಾ ಮಹೋತ್ಸವ ಪೂರ್ವಭಾವಿ ಸಭೆ

ಸಾರ್ವಜನಿಕರಿಗೆ ಅಚ್ಚುಕಟ್ಟು ವ್ಯವಸ್ಥೆ ಕಲ್ಪಿಸಿ

ಕೊಪ್ಪಳ: ಮೇ 10ರಿಂದ 14ರವರೆಗೆ ಜಿಲ್ಲೆಯ ಹುಲಿಗಿಯಲ್ಲಿ ನಡೆಯುವ ಶ್ರೀಹುಲಿಗೆಮ್ಮ ದೇವಿ ಜಾತ್ರಾ ಮಹೋತ್ಸವಕ್ಕೆ ಲಕ್ಷಾಂತರ ಭಕ್ತರು, ಸಾರ್ವಜನಿಕರು ಪಾಲ್ಗೊಳ್ಳಲಿದ್ದು, ಅವರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಎಲ್ಲ ಅಗತ್ಯ ಸೌಲಭ್ಯಗಳನ್ನು ಒದಗಿಸಿ, ಅಚ್ಚುಕಟ್ಟು ವ್ಯವಸ್ಥೆ ಕಲ್ಪಿಸಿ ಎಂದು ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸೋಮವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮೇ 10ರಿಂದ 14ರವರೆಗೆ ಹುಲಿಗಿ ಗ್ರಾಮದಲ್ಲಿ ನಡೆಯಲಿರುವ ಶ್ರೀಹುಲಿಗೆಮ್ಮ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಧಾರ್ಮಿಕ ಮತ್ತು ದತ್ತಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

5 ದಿನಗಳ ಜಾತ್ರಾ ಮಹೋತ್ಸವದಲ್ಲಿ, ಮುಖ್ಯವಾಗಿ ಮೇ 11ರಂದು ನಡೆಯಲಿರುವ ಮಹಾರಥೋತ್ಸವದಲ್ಲಿ ಲಕ್ಷಾಂತರ ಭಕ್ತರು, ಸಾರ್ವಜನಿಕರು ಪಾಲ್ಗೊಳ್ಳುವುದರಿಂದ ಸ್ವಚ್ಚತೆ ಮತ್ತು ಸುರಕ್ಷತೆ ಕಡೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಗ್ರಾಮದ ಪ್ರತಿ ರಸ್ತೆ, ದೇವಾಲಯದ ಆವರಣ, ಸುತ್ತಲಿನ ಪ್ರದೇಶವನ್ನು ಸ್ವಚ್ಛಗೊಳಿಸಬೇಕು. ಬೇಸಿಗೆ ಸಮಯವಾದ್ದರಿಂದ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ದೇವಸ್ಥಾನ ಮತ್ತು ಆವರಣವನ್ನು, ಗ್ರಾಮವನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಬೇಕು. ಸಾರ್ವಜನಿಕರ ವಿಶ್ರಾಂತಿ ಗೃಹ, ತಂಗುದಾಣಗಳನ್ನು, ಗ್ರಾಮದಲ್ಲಿನ ಎಲ್ಲ ರಸ್ತೆ, ಚರಂಡಿಗಳನ್ನು ಸ್ವಚ್ಛಗೊಳಿಸಬೇಕು. ನೀರು ಪೂರೈಸುವ ಎಲ್ಲ ಪೈಪ್‌ಲೈನ್‌ಗಳನ್ನು, ಓಎಚ್‌ಟಿಗಳನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ದುರಸ್ಥಿಗೊಳಿಸಬೇಕು.



> ಜಾತ್ರೆ ಸಂದರ್ಭ ದೇವಸ್ಥಾನದ ಪಕ್ಕದಲ್ಲಿನ ನದಿಗೆ ನೀರು ಬಿಡುಗಡೆ ಮಾಡಲಿದ್ದು, ನದಿ ತೀರ ಪ್ರದೇಶದಲ್ಲಿ ಭಕ್ತರು ಸ್ನಾನಕ್ಕೆ ತೆರಳುವುದರಿಂದ ಯಾವುದೇ ಅಪಾಯ ಜರುಗದಂತೆ ಸೂಕ್ತ ಭದ್ರತೆ ಕಲ್ಪಿಸಬೇಕು. ಅಗತ್ಯ ಮುನ್ನೆಚ್ಚರಿಕಾ ಫಲಕಗಳನ್ನು ನದಿ ತೀರ ಪ್ರದೇಶದಲ್ಲಿ ಅಳವಡಿಸಬೇಕು.
> ■ ಡಾ.ಸುರೇಶ್ ಇಟ್ನಾಳ್, ಜಿಲ್ಲಾಧಿಕಾರಿ

ಮೊಬೈಲ್ ಟಾಯ್ಲೆಟ್‌ಗಳ ವ್ಯವಸ್ಥೆ ಕಲ್ಪಿಸಬೇಕು ಎಂದು ಸಂಬಂಧಿಸಿದ ಪಿಡಿಓ ಹಾಗೂ ದೇವಸ್ಥಾನದ ಪ್ರಾಧಿಕಾರದ ಕಾರ್ಯದರ್ಶಿಗಳಿಗೆ ಜಿಲ್ಲಾಧಿಕಾರಿಗಳು ಸೂಚನೆಯನ್ನು ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಹೇಮಂತ್ ಕುಮಾರ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಂಜುನಾಥ ಗುಂಡೂರ, ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಎಚ್ ಪ್ರಕಾಶ್‌ರಾವ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಲಿಂಗರಾಜು ಟಿ., ಕೊಪ್ಪಳ ತಹಶೀಲ್ದಾರ್ ಬಸವರಾಜ ತೆನ್ನಳ್ಳಿ, ಕೊಪ್ಪಳ ತಾಪಂ ಇಓ ದುಂಡಪ್ಪ ತುರಾದಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಒತ್ತುವರಿ ತೆರವುಗೊಳಿಸಿ

ಬೇರೆ ಬೇರ ರಾಜ್ಯ, ಊರುಗಳಿಂದ ಆಗಮಿಸುವ ಭಕ್ತರಿಗೆ, ಸಾರ್ವಜನಿಕರಿಗೆ ಒದಗಿಸುವ ದೇವಸ್ಥಾನದ ಪ್ರಸಾದವನ್ನು ಆಹಾರ ಗುಣಮಟ್ಟ ಪರೀಕ್ಷೆಗೊಳಪಡಿಸಿ, ಸುರಕ್ಷಿತವಿದ್ದಲ್ಲಿ ಮಾತ್ರ ವಿತರಿಸಬೇಕು. ಕುಡಿಯುವ ನೀರನ್ನು ಸಹ ಪರೀಕ್ಷೆಗೊಳಪಡಿಸಬೇಕು. ದೇವಸ್ಥಾನದ ಆವರಣ ಮತ್ತು ಗ್ರಾಮದ ರಸ್ತೆಗಳಲ್ಲಿನ ಒತ್ತುವರಿ ಕಟ್ಟಡ, ವ್ಯಾಪಾರ ಮಳಿಗೆಗಳನ್ನು ಯಾವುದೇ ಹಿಂಜರಿಕೆ ಇಲ್ಲದೆ ನಿಯಮಾನುಸಾರ ತೆರವುಗೊಳಿಸಬೇಕು ಎಂದು ಇಲಾಖಾ ಅಧಿಕಾರಿಗಳಿಗೆ ಅವರು ತಿಳಿಸಿದರು.

ಮಹಾನ್ ಚೇತನರ ಬದುಕು-ಬರಹ ಮಾದರಿ

ಕುಷ್ಟಗಿ: ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆ ಆದರ್ಶವಾಗಿದ್ದು, ಸ್ಮರಿಸುವ ಕಾರ್ಯವಾಗಬೇಕು ಎಂದು ವಿಧಾನಸಭೆಯ ವಿರೋಧ ಪಕ್ಷದ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ್ ಹೇಳಿದರು.

ಪಟ್ಟಣದ ಕ್ರೈಸ್ಟ್ ದಿ ಕಿಂಗ್ ಸ್ಕೂಲ್‌ನಲ್ಲಿ ತಾಲೂಕು ಆಡಳಿತ, ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ, ದಲಿತಪರ ಸಂಘಟನೆಗಳು ಒಕ್ಕೂಟ, ಕನ್ನಡಪರ ಸಂಘಟನೆ ಹಾಗೂ ಇತರೆ ಸಂಘಟನೆಗಳ ನೇತೃತ್ವದಲ್ಲಿ ಆಯೋಜಿಸಿದ್ದ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಜನ್ಮದಿನಾಚರಣೆ ನಿಮಿತ್ತ ರಾಜ್ಯಮಟ್ಟದ ಮುಕ್ತ ರಸಪ್ರಶ್ನೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಭಾನುವಾರ ಮಾತನಾಡಿದರು.

ಮಾಜಿ ಶಾಸಕರಾದ ಕೆ.ಶರಣಪ್ಪ, ಕಾಡಾ ಅಧ್ಯಕ್ಷ ಹಸನಸಾಬ್ ದೋಟಿಹಾಳ್ ಮಾತನಾಡಿ, ಎರಡನ್ನೂರು ವರ್ಷಗಳಿಂದ ಸಮಾನತೆಗಾಗಿ ಹೋರಾಡಿದ ಬಸವಣ್ಣನವರು ವಚನ ಕ್ರಾಂತಿ ಮಾಡಿದರು. ಅಂಬೇಡ್ಕರ್ ದೇಶದ ಸಂವಿಧಾನಕ್ಕಾಗಿ ಹಗಲೆರಳು ಶ್ರಮಿಸಿದ್ದಾರೆ. ಉತ್ತಮ ಗ್ರಂಥಾಲಯದಲ್ಲಿ ಸಮಯ ಕಳೆದು ವಿಶ್ವಕ್ಕೆ ಶ್ರೇಷ್ಠ ಸಂವಿಧಾನವನ್ನು ಅಂಬೇಡ್ಕರ್ ನೀಡಿದ್ದಾರೆ. ಸುಮಾರು 50 ಸಾವಿರ ಪುಸ್ತಕಗಳ ಗ್ರಂಥಾಲಯದಲ್ಲಿ ಸಂಗ್ರಹಿಸಿದ್ದರು. ದಾರ್ಶನಿಕರ ನೆನಪಿಗಾಗಿ ಇಂತಹ ಹೊಸ ಕಾರ್ಯಕ್ರಮಗಳಿಂದ ಬದಲಾವಣೆ ಕಾಣಲು ಸಾಧ್ಯ ಎಂದು ತಿಳಿಸಿದರು. ಸಿಪಿಐ ವಿಶ್ವನಾಥ ಹಿರೇಗೌಡ್ರ ಮಾತನಾಡಿ, ಶ್ರೇಷ್ಠ ಮಹಾನ್ ವ್ಯಕ್ತಿಗಳ ನೆನಪು ಉಳಿಯಬೇಕಿದೆ. ತಾಲೂಕಿನಲ್ಲಿ ಮೊದಲನೇ ಬಾರಿಗೆ ಇಂತಹ ಕಾರ್ಯಕ್ರಮ ಆಯೋಜಿಸಿದ್ದು, ಸುಮಾರು 1,043 ಸ್ಪರ್ಧಾಳು ವಿದ್ಯಾರ್ಥಿಗಳು, ಶಿಕ್ಷಕರು, ರೈತರು ಸೇರಿದಂತೆ ಸ್ವಯಂ ಪ್ರೇರಿತವಾಗಿ ಪಾಲ್ಗೊಂಡಿರುವುದು ವಿಶೇಷ ಎಂದು ಹೇಳಿದರು.

ಎಸಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಕಾಂಗ್ರೆಸ್ ಮುಖಂಡರಾದ ದೊಡ್ಡ ಬಸವನಗೌಡ ಪಾಟೀಲ್, ತಹಶೀಲ್ದಾರ್ ಅಶೋಕ ಶಿಗ್ಗಾವಿ, ಡಿಎಸ್‌ಎಸ್ ಮುಖಂಡ ವಸಂತಕುಮಾರ ಮೇಲಿನಮನಿ, ಡಿಎಸ್ಪಿ ಹೇಮಂತಕುಮಾರ್ ಮಾತನಾಡಿದರು. ಬಿಇಓ ಉಮಾದೇವಿ ಬಸಾಪೂರ, ಕೊಪ್ಪಳ ವಿವಿ ಕುಲಪತಿ ಡಾ.ಎಸ್.ವಿ.ಡಾಣಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ತುಗ್ಗಲೆಪ್ಪ ದೇಸಾಯಿ, ರಾಜ್ಯ ನೌಕರ ಸಂಘದ ಅಧ್ಯಕ್ಷ ಶ್ರೀನಿವಾಸ ನಾಯಕ, ಪಿಎಸೈ ಹನುಮಂತಪ್ಪ, ಶಿಕ್ಷಕರಾದ ಶರಣಪ್ಪ ತಮ್ಮಿನಾಳ್, ನಿಂಗಪ್ಪ ಗುನ್ನಾಳ್, ನಟರಾಜ್ ಸೋನಾರ್, ಜೀವನಸಾಬ್ ಬಿನ್ನಾಳ್ ಮುಖಂಡ ರಮೇಶ ಮೇಲಿನಮನಿ ಇದ್ದರು.



ಭೀಮಾಂಬಿಕಾ ದೇವಿಯ ಪುರಾಣ ಕಾರ್ಯಕ್ರಮ



ಕುಕನೂರ: ನಮ್ಮ ಊರು ಮಾದರಿ ಗ್ರಾಮವಾಗಿ, ಧಾರ್ಮಿಕ ಕ್ಷೇತ್ರವಾಗಿ ಬೆಳೆಯಲಿ, ನಾವೆಲ್ಲರೂ ಧರ್ಮದ ಹಾದಿಯಲ್ಲಿ ಸಾಗಿ ಭಯ ಭಕ್ತಿಯಿಂದ ಜಾತ್ರೆಯನ್ನು ಯಶಸ್ವಿಗೊಳಿಸೋಣ ಎಂದು ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಸದಸ್ಯ ಎಚ್.ಡಿ ಪಾಟೀಲ ಹೇಳಿದರು.

ತಾಲೂಕಿನ ಭಟಪನಹಳ್ಳಿ ಗ್ರಾಮದ ಶ್ರೀಭೀಮಾಂಬಿಕಾ ದೇವಿಯ ಮಠದಲ್ಲಿ 29ನೇಯ ಜಾತ್ರಾ ಹಾಗೂ ಪುರಾಣ, ಸಾಮೂಹಿಕ ವಿವಾಹ ಕಾರ್ಯಕ್ರಮ ಮತ್ತು ನೂತನ ಮಹಾರಥೋತ್ಸವದ ಅಂಗವಾಗಿ ಪುರಾಣ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕುಕನೂರಿನ ಅನ್ನದಾನೇಶ್ವರ ಮಠದ ಮಹಾದೇವ ಸ್ವಾಮೀಜಿ ಅವರು ಸಾನಿಧ್ಯ ವಹಿಸಿ ಮಾತನಾಡಿ, ಭಟಪನಳ್ಳಿಯ ಭಕ್ತರ ಸೇವೆ ಅಪಾರವಾದದು ತಾವೇಲ್ಲರೂ ನೂತನ ತೇರನ್ನು ಒಂದು ವರ್ಷದಲ್ಲಿ ನಿರ್ಮಾಣ ಮಾಡಿ ತಾವು ಭಕ್ತಿಯಿಂದ ತೇರು ಎಳೆಯುವದಕ್ಕೆ ಕಂಕಣ ಬದ್ಧರಾಗಿ ಶ್ರಮಿಸಿದ್ದಿರಿ ತಮ್ಮ ಕಾರ್ಯ ಶ್ಲಾಘನೀಯವಾದದು ಎಂದು ಹೇಳಿದರು.

ಭೀಮಾಂಬಿಕಾದೇವಿಯ ನಾಮಕರಣದ ತೊಟ್ಟಿಲು ಕಾರ್ಯಕ್ರಮ, ಭೀಮಾಂಬಿಕಾ ದೇವಿಯ ಮದುವೆ ಸಮಾರಂಭ, ಸಿಮಂತ ಕಾರ್ಯಕ್ರಮ ಹಾಗು ಉಡಿ ತುಂಬುವ ಕಾರ್ಯಕ್ರಮಗಳು ವಿಜೃಂಭಣೆಯಿಂದ ಸಾಗಿಬಂದವು, ಕಲ್ಲೂರಿನ ಕಲ್ಲಯ್ಯ ಶಾಸ್ತ್ರೀ, ಅವರು ಅಮ್ಮನ ಜೀವನ ಚರಿತ್ರೆಯ ಬಗ್ಗೆ ಪ್ರವಚನ ನೀಡಿದರು. ಸಂಗೀತಾ ಬಳಗದ ಹಾಲಕೇರಿಯ ಬಡಿಗೇರ ದ್ಯಾಮಣ್ಣ ಗವಾಯಿ, ಸಿದ್ನೇಕೊಪ್ಪದ ಖಾದರಸಾಬ ಅವರಿಂದ ಸಂಗೀತ ಕಾರ್ಯಕ್ರಮ ಜರುಗಿತು.

ಹಿರಿಯರಾದ ವೀರಯ್ಯಸ್ವಾಮಿ ಭದ್ರಾಪೂರಮಠ, ಹಂಚ್ಯಾಳಪ್ಪ ಕಲ್ಲಗೋಡಿ, ಮಲ್ಲಿಕಾರ್ಜುನ ರಡ್ಡೇರ, ಮಲ್ಲಪ್ಪ ಗುಡಿಹಿಂದಲ, ರಾಜಶೇಖರ ಕರಮುಡಿ, ಮಹೇಶ ದೊಡ್ಡಮನಿ, ಯಲ್ಲಪ್ಪ ದೇವರಳ್ಳಿ, ಶರಣಬಸಪ್ಪ ದಾನಕ್ಕೈ, ಯಲ್ಲಪ್ಪ ಡೊಳ್ಳಿನ, ಮುದಿಯಪ್ಪ ಪೂಜಾರ, ಶರಣಪ್ಪ ಹಾದಿಮನಿ, ಕೆಂಚಪ್ಪ ಹರಿಜನ, ಚೆನ್ನಪ್ಪ ತಳವಾರ, ಬಸಪ್ಪ ಕುಡಗುಂಟಿ, ಉಮೇಶ ಗೂಳರಡ್ಡಿ, ಕಿರಣ ಗುದ್ಯಾಡಿ,ಯಲ್ಲಪ್ಪ ಶಿ.ಪೋತುಂಡಿ, ಬಸವರಾಜ ಭಾವಿಕಟ್ಟಿ, ಹನುಮಪ್ಪ ಗಾಳಿ, ಫಕಿರಪ್ಪ ಪೋತುಂಡಿ, ಹರೀಶ್ ಕುಡಗುಂಟಿ, ಯಮನೂರಪ್ಪ ಹರಿಜನ, ಹೇಮಲತಾ ಪಾಟೀಲ, ಪ್ರಿಯಾ ರವಿಕಿರಣ್, ಜ್ಯೋತಿ ದೊಡ್ಡಮನಿ, ದೇವಮ್ಮ ಭಾವಿಕಟ್ಟಿ, ವಿದ್ಯಾ ಹೊಸಮನಿ, ಶ್ರುತಿ ಗುರಿಕಾರ, ವಿಜಯಲಕ್ಷ್ಮೀ ದಾನಕ್ಕೈ, ಶೋಭಾ ಉದ್ದಾರ, ಲಕ್ಷ್ಮೀ ಭದ್ರಾಪೂರ, ಕಾವ್ಯ ಗಾಳಿ, ಅನ್ನಪೂರ್ಣ ಕುಡಗುಂಟಿ, ಗುದ್ಯಾಡಿ, ಸುನೀತಾ ದೊಡ್ಡಮನಿ, ಲಕ್ಷ್ಮೀ ಭಾವಿಕಟ್ಟಿ, ಗಾಯತ್ರಿ ಗುರಿಕಾರ, ಯಶೋಧಾ ಗುದ್ಯಾಡಿ ಇತರರಿದ್ದರು.

ದುಡಿಯುವ ಕೈಗಳಿಗೆ ನಿರಂತರ ಕೆಲಸ: ಶರಣಪ್ಪ ಹಾಳಕೇರಿ

ಯಲಬುರ್ಗಾ: ಗ್ರಾಮೀಣ ಪ್ರದೇಶದ ಅಕುಶಲ ಕೂಲಿಕಾರರು ನರೇಗಾ ಯೋಜನೆಯಡಿ ಮುಂದುವರಿದ ನಾಲಾ ಹೂಳೆತ್ತುವ ಕಾಮಗಾರಿಗಳಲ್ಲಿ ಕೆಲಸ ನೀಡಲಾಗುತ್ತಿದೆ ಎಂದು ತಾಲೂಕು ಐಇಸಿ ಸಂಯೋಜಕ ಶರಣಪ್ಪ ಹಾಳಕೇರಿ ಹೇಳಿದರು.



ತಾಲೂಕಿನ ಹಿರೇಅರಳಿಹಳ್ಳಿ ಗ್ರಾಪಂ ವ್ಯಾಪ್ತಿಯ ಹೊಸೂರ ಗ್ರಾಮದಲ್ಲಿ ಸೋಮವಾರ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಕೈಗೊಳ್ಳಲಾದ ನಾಲಾ ಹೂಳೆತ್ತುವ ಕಾಮಗಾರಿಯಲ್ಲಿ ನರೇಗಾ ಯೋಜನೆಯ ಕೂಲಿಕಾರರು ಗುಳೆ ಹೋಗದಂತೆ ತಡೆದು ಕೆಲಸ ನೀಡಲಾಗುತ್ತಿದ್ದು ಒಂದು ತಿಂಗಳ ನಿರಂತರ ಕೆಲಸ ಮಾಡಲು ಅವಕಾಶವಿದೆ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಗ್ರಾಮದ 170 ಜನ ಅಕುಶಲ ಕೂಲಿಕಾರರ ಎನ್ ಎಂಆರ್ ತೆಗೆದು ಕೆಲಸದ ಹಂಚಿಕೆ ಮಾಡಲಾಗಿದೆ. ಕಳೆದ ಐದು ದಿನಗಳಿಂದ ನಿರಂತರ ಕೆಲಸ ಮಾಡುತ್ತಿದ್ದು, ದುಡಿಯುವ ಕೈಗಳಿಗೆ ಕೆಲಸ ನೀಡಲಾಗಿದೆ.ಈಗಾಗಲೇ ಕೆಲಸದ ಬೇಡಿಕೆಯ ಅರ್ಜಿ ಸಲ್ಲಿಸಿದ ಕೂಲಿಕಾರರಿಗೆ ನಿರಂತರವಾಗಿ ಕೆಲಸ ನೀಡಲಾಗುತ್ತಿದೆ. ಕೆಲವು ಗ್ರಾಮ ಪಂಚಾಯತಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇನ್ನು ಕೆಲ ಗ್ರಾಪಂಗಳಲ್ಲಿ ಈ ತಿಂಗಳ ಗುರಿ ನಿಗದಿ ಮಾಡಲಾಗಿದ್ದು, ತಿಂಗಳಾಂತ್ಯದ ವೇಳೆಗೆ ಗುರಿ ಸಾಧಿಸಲು ತಿಳಿಸಲಾಗಿದೆ ಎಂದು ಹೇಳಿದರು.

ಸದರಿ ಕಾಮಗಾರಿ ಸ್ಥಳದಲ್ಲಿ ಎನ್‌ಎಂಎಂ ಫೇಸ್ ಅಥೆಂಟಿಕೇಶನ್ ಆಧಾರಿತವಾಗಿ ಹಾಜರಾತಿ ಹಾಕಲಾಗಿದೆ. ಕೂಲಿಕಾರ್ಮಿಕರ ಮುಖ ಗುರುತಿಸುವಿಕೆ (ಫೇಶಲ್ ರಿಕಾಗ್ನೆಶನ್) ತಂತ್ರಜ್ಞಾನ ಬಳಸಿ ಕಾರ್ಮಿಕರ ನಿಖರವಾದ ಹಾಜರಾತಿಯನ್ನು ಪಡೆಯಲಾಯಿತು ಎಂದರು.

ಸಮುದಾಯ ತಾಂತ್ರಿಕ ಸಹಾಯಕರಾದ ಬಸೆಟೆಪ್ಪ ಅಂಗಡಿ, ಗ್ರಾಮ ಕಾಯಕ ಮಿತ್ರರಾದ ಶಾಂತಮ್ಮ ಅಂಗಡಿ ಮಾತನಾಡಿದರು. ಕಾಯಕ ಬಂಧುಗಳು, ನೂರಾರು ಜನ ಕೂಲಿಕಾರರು ಇದ್ದರು.

ದುರ್ಗಾಭವಾನಿ, ನಯನಾ ಜಿಲ್ಲೆಗೆ ಪ್ರಥಮ

ಸಿಂಧನೂರು: 2025-26ನೇ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟವಾಗಿದ್ದು ತಾಲೂಕ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರ ಬಾಲಕ-ಬಾಲಕಿಯರ ವಸತಿನಿಲಯಗಳ ಫಲಿತಾಂಶ ಪ್ರಕಟಗೊಂಡಿದ್ದು, ಕಲಾ ವಿಭಾಗದಲ್ಲಿ ದುರ್ಗಾ ಭವಾನಿ ಬಸವರಾಜ 593 (98.83%) ಅಂಕ ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ರಾಜ್ಯಕ್ಕೆ ನಾಲ್ಕನೇ ಸ್ಥಾನ ಪಡೆದಿದ್ದಾರೆ.





ವಾಣಿಜ್ಯ ವಿಭಾಗದಲ್ಲಿ ನಯನಾ ತಂದೆ ವೀರೇಶ್ 594 (99%) ಅಂಕಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ರಾಜ್ಯಕ್ಕೆ ಆರನೇ ಸ್ಥಾನ ಪಡೆದಿದ್ದಾರೆ ಎಂದು ತಾಲೂಕ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಲಿಂಗಪ್ಪ ಅಂಗಡಿ ಪತ್ರಿಕೆ ಪ್ರಕಟಣೆಯಲ್ಲಿ ತಿಳಿಸಿದರು.

ಅವರು ನಗರದ ಸುಕಾಲಪೇಟೆಯಲ್ಲಿರುವ ಡಿ ದೇವರಾಜ ಅರಸು ಮೆಟ್ರಿಕ್ ನಂತರ ಬಾಲಕಿಯರ ವಸತಿ ನಿಲಯದ ಇಬ್ಬರು ವಿದ್ಯಾರ್ಥಿಗಳು ರಾಜ್ಯ ಮತ್ತು ಜಿಲ್ಲೆಯಲ್ಲಿ ಅತಿ ಹೆಚ್ಚಿನ ಅಂಕಗಳಿಸಿ ಉತ್ತೀರ್ಣರಾಗಿದ್ದಾರೆ,ಇದರಿಂದಾಗಿ ತಂದೆ ತಾಯಿ ಗಳಿಗೆ ಮತ್ತು ವಿದ್ಯಾಭ್ಯಾಸ ಮಾಡಿದ ಹಾಸ್ಟೆಲ್ ಗೆ ಕೀರ್ತಿ ತಂದು ಕೊಟ್ಟಿದ್ದಾರೆ.

ಒಟ್ಟು 204 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅದರಲ್ಲಿ 192 ವಿದ್ಯಾರ್ಥಿಗಳು (ಶೇಕಡ 94.12%) ರಷ್ಟು ಮಂದಿ ಉತ್ತೀರ್ಣರಾಗಿದ್ದಾರೆ. ಇದರಲ್ಲಿ ಡಿಸ್ಟಿಂಕ್ಷನ್ 96 ಪ್ರಥಮ ಶ್ರೇಣಿ-90 ದ್ವಿತೀಯ ಶ್ರೇಣಿ-6ರಷ್ಟು ಗಳಿಸಿದ್ದಾರೆ ಎಂದು ಬಿಸಿಎಂ ತಾಲೂಕು ಅಧಿಕಾರಿ ಲಿಂಗಪ್ಪ ಅಂಗಡಿ ತಿಳಿಸಿದರು.

ವಿದ್ಯಾರ್ಥಿಗಳ ಈ ಸಾಧನೆಗೆ ಸಿಂಧನೂರು ತಾಲೂಕಿನ ಹಾಗೂ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ವಸತಿ ನಿಲಯಗಳ ಮೇಲ್ವಿಚಾರಕರಾದ ಕಮಲ ಜೋಶಿ, ಸುವರ್ಣ, ನೀಲಮ್ಮ ಹಾಗೂ ಲೋಕಪ್ಪ ರಾಥೋಡ್, ಸಿಬ್ಬಂದಿ ವರ್ಗ ಹಾಗೂ ಆಡಳಿತ ಮಂಡಳಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಶಾದಿಮಹಲ್ ಉದ್ಘಾಟನಾ ಸಮಾರಂಭ

ಮುನಿರಾಬಾದ್: ಸಮಾಜದ ಬಡವರಿಗೆ ಮದುವೆ ದಿಬ್ಬಣಗಳು ಹಾಗೂ ಇತರೆ ಸಮಾಜಿಕ ಕಾರ್ಯಕ್ರಮಗಳನ್ನು ಸಂಘಟಿಸಲು ಅಗತ್ಯವಾದ ಕಟ್ಟಡವನ್ನು ನಿರ್ಮಿಸುವುದರೊಂದಿಗೆ ಸಮಾಜದ ಏಳಿಗೆಗಾಗಿ ಶ್ರಮಿಸುತ್ತಿರುವ ಗ್ರಾಮದ ಮುಖಂಡರ ಪಾತ್ರ ಮುಖ್ಯವಾಗಿದೆ ಸೌಹಾರ್ದತೆಯಿಂದ ಇಂತಹ ಪುಣ್ಯ ಕಾರ್ಯದಲ್ಲಿತೊಡಗಿರುವುದು ಸಂತಸದ ವಿಷಯವಾಗಿದೆ ಎಂದು ಸಂಸದ ಹಿಟ್ನಾಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ಇತ್ತೀಚೆಗೆ ಅಗಳಕೇರಾ ಗ್ರಾಮದಲ್ಲಿ ಜಿಲ್ಲಾಪಂಚಾಯತ್ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅನುದಾನದಡಿಯಲ್ಲಿ ನೂತನವಾಗಿ ನಿರ್ಮಾಣಗೊಂಡ ಶಾದಿಮಹಲ್ ಸಮುದಾಯ ಭವನ ಉದ್ಘಾಟನಾ ಸಮಾರಂಭ ವಿಜೃಂಭಣೆಯಿಂದ ನಡೆಯಿತು. ಹಿಟ್ನಾಳ ಹೋಬಳಿಯಲ್ಲಿ ಅಗಳಕೇರಾ ಗ್ರಾಮದ ಧಾರ್ಮಿಕ ಗ್ರಾಮವಾಗಿದೆ ಇಲ್ಲಿ ಪ್ರತಿ ಗ್ರಾಮದ ಸಮಾರಂಭದಲ್ಲಿ ಪ್ರತಿ ಸಮಾಜದ ಹಿರಿಯರು ಭಾಗವಹಿಸುತ್ತಾರೆ ಎಂದು ಕೆ.ಎಂ.ಸೈಯದ್ ಅಭಿಪ್ರಾಯ ವ್ಯಕ್ತಪಡಿಸಿದರು.

ಸಂಸದ ಕೆ.ರಾಜಶೇಖರ ಹಿಟ್ನಾಳ, ಮಾಜಿ ಶಾಸಕ ಹಸೇನಸಾಬ ದೋಟಿಹಾಳ, ವಿಶ್ವನಾಥ ರಾಜು, ಕೆ.ಎಂ.ಸೈಯದ್, ಅಮ್ಜದ್ ಪಾಟೀಲ್, ಹುಲುಗಪ್ಪ ಗಡಾದ, ನಾಗರಾಜ್ ಪಟವಾರಿ, ಕೆಂಚಪ್ಪ ಹಿಟ್ನಾಳ, ಕನಕರಾಜ ಬುಳ್ಳಪುರ, ಜಂಬಣ್ಣ ಹೂಗಾರ, ಮುಸ್ಲಿಂ ಕಮಿಟಿ ಅಧ್ಯಕ್ಷ ಮಹ್ಮದ್ ಸಾಬ ಕೊರಗಲ್, ಉಪಸ್ಥಿತರಿದ್ದರು. ವಲಿಸಾಬ ಸ್ವಾಗತಿಸಿದರು, ವೀರಭದ್ರಪ್ಪ ಭೂಸನೂರಮಠ ನಿರೂಪಿಸಿದರು, ಕರೀಮಸಾಬ ಯದಗೀರಿ ವಂದಿಸಿದರು.

ಖರ್ಗೆ ಹೇಳಿಕೆ ಖಂಡಿಸಿ ಬಿಜೆಪಿ ಯುವ ಮೋರ್ಚಾದಿಂದ ದೂರು

ಕಲಬುರಗಿ: ಅಸ್ಸಾಂ ವಿಧಾನಸಭಾ ಚುನಾವಣೆಯ ಪ್ರಚಾರ ವೇಳೆ ಎಐಸಿಸಿ ಅಧ್ಯಕ್ಷ ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆಯವರು ನೀಡಿದ ಹೇಳಿಕೆ ಖಂಡನೀಯವಾಗಿದ್ದು, ಕೂಡಲೇ ಅವರ ವಿರುದ್ಧ ಸೂಕ್ತ ಕಾನೂನು ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿ ಭಾರತೀಯ ಜನತಾ ಪಕ್ಷ ಚಿತ್ತಾಪುರ ಹಾಗೂ ಆಳಂದ ಮುಂಡಲಗಳ ಯುವ ಮೋರ್ಚಾ ಘಟಕದಿಂದ ಸ್ಥಳೀಯ ಪೋಲಿಸ್ ಠಾಣೆಗಳಿಗೆ ದೂರು ಸಲ್ಲಿಸಲಾಗಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಅಸ್ಸಾಂ ಚುನಾವಣೆ ಪ್ರಚಾರ ವೇಳೆ ತಮ್ಮ ಭಾಷಣದಲ್ಲಿ ಅವರು ಕುರಾನ್ ಉಲ್ಲೇಖಿಸಿ ನಮಾಜ್ ಮಾಡುವ ವೇಳೆ ವಿಷಸರ್ಪ ಕಂಡರೆ ಅದನ್ನು ಕೊಲ್ಲಬೇಕು.ಆರೆಸ್ಸೆಸ್ ಮತ್ತು ಬಿಜೆಪಿ ಕೂಡ ಅಂತಹವೇ ವಿಷಸರ್ಪಗಳಂತಿವೆ ಎಂದು ಹೇಳಿಕೆ ನೀಡಿರುವುದು ಖಂಡನೀಯವಾಗಿದೆ.

ರಾಷ್ಟ್ರೀಯ ಪಕ್ಷದ ಅಧ್ಯಕ್ಷ ಸ್ಥಾನದಲ್ಲಿರುವ ಖರ್ಗೆಯವರು ಇಂತಹ ಪ್ರಚೋದನಕಾರಿ ಹೇಳಿಕೆ ನೀಡಿರುವುದು ಅಸ್ವೀಕಾರ್ಯ.ಈ ಹೇಳಿಕೆ ದೇಶದಾದ್ಯಂತ ಇರುವ ಬಿಜೆಪಿ ಹಾಗೂ ಆರೆಸ್ಸೆಸ್ ಕಾರ್ಯಕರ್ತರ ಜೀವಕ್ಕೆ ಅಪಾಯ ಉಂಟುಮಾಡುವಂತದ್ದು ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.ಚುನಾವಣಾ ಪ್ರಚಾರದ ಸಂದರ್ಭದಲ್ಲಿನ ಈ ರೀತಿಯ ಭಾಷಣಗಳು ಸಮಾಜದಲ್ಲಿ ಉದ್ವಿಗ್ನತೆ ಹೆಚ್ಚಿಸುವ ಸಾಧ್ಯತೆಯಿದ್ದು,ಈ ಹೇಳಿಕೆ ಮತಿಗೇಡಿಗಳಿಗೆ ಉತ್ತೇಜನ ನೀಡುವಂತಿವೆ.ಸಂಘ ಪರಿವಾರದ ಕಾರ್ಯಕರ್ತರ ಮೇಲೆ ದಾಳಿ ಸಂಭವಿಸುವ ಭೀತಿ ಇದೆ.ದೇಶದಲ್ಲಿ ಶಾಂತಿ ಹಾಗೂ ಸೌಹಾರ್ದತೆಗೆ ಧಕ್ಕೆ ತರುವಂತಹ ಮಾತುಗಳಿಗೆ ತಕ್ಷಣ ತಡೆಹಿಡಿಯಬೇಕು ಎಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.



> ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಪ್ರಚೋದನಕಾರಿ ಹೇಳಿಕೆ ಸಮಾಜದಲ್ಲಿನ ಸಾಮರಸ್ಯ ಮತ್ತು ಗೌರವಾನ್ವಿತ ರಾಜಕೀಯ ಸಂವಾದದ ಮೌಲ್ಯಗಳಿಗೆ ವಿರುದ್ಧವಾಗಿವೆ. ಸಮಾಜದಲ್ಲಿ ವಿಭಜನೆಯನ್ನು ಸೃಷ್ಟಿಸುವ ಈ ರೀತಿಯ ಭಾಷೆಯನ್ನು ನಾವು ಬಲವಾಗಿ ವಿರೋಧಿಸುತ್ತೇವೆ.
> ■ ಪ್ರಕಾಶ್ ಮಾನೆ, ಆಳಂದ ಮಂಡಲ ಪ್ರಧಾನ ಕಾರ್ಯದರ್ಶಿ

ಸಮುದಾಯಗಳ ನಡುವಿನ ಸೌಹಾರ್ದತೆ ಕಾಪಾಡುವ ಕಾನೂನಿನಡಿ ಕ್ರಮ ಕೈಗೊಳ್ಳುವಂತೆ ಮನವಿಯಲ್ಲಿ ಆಗ್ರಹಿಸಲಾಗಿದೆ. ಈ ಸಂದರ್ಭದಲ್ಲಿ ಆಳಂದ ಮಂಡಲ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಮಾನೆ, ಬಿಜೆವೈಎಂ ಮಂಡಲ ಅಧ್ಯಕ್ಷ ನಾಗರಾಜ ಧನಕ್,ಬಿಜೆಪಿ ನಗರ ಅಧ್ಯಕ್ಷ ಬಸವರಾಜ ಹತ್ರಕಿ ಮಲ್ಲಿಕಾರ್ಜುನ ಸಿಗರಕಂಟಿ, ಶಾಂತಮಲ್ಲಪ್ಪ ಅಚೇರಿ,ಚಿತ್ತಾಪುರ ತಾಲೂಕಿನ ಯುವ ಮೋರ್ಚಾ ಅಧ್ಯಕ್ಷ ದೇವರಾಜ ತಳವಾರ ಬೆಣ್ಣೂರು,ಶರಣು ಕೊಲ್ಲೂರ, ರವಿಂದ್ರ ಸಜ್ಜನ ಶೆಟ್ಟಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕಿರುಸುದ್ದಿ

ಸಮುದಾಯ ಭವನ ನಿರ್ಮಾಣಕ್ಕೆ ಭೂಮಿಪೂಜೆ



ಕರೂರ: ಸಮೀಪದ ಶಾನವಾಸಪುರ ಗ್ರಾಮದಲ್ಲಿ 2025–26ನೇ ಸಾಲಿನ ಸಿಎಂಐಡಿಪಿ ಯೋಜನೆಯ ಅನುದಾನದ ಅಡಿಯಲ್ಲಿ ಶ್ರೀಸುಂಕ್ಲಮ್ಮ ದೇವಸ್ಥಾನದ ಬಳಿ ಸಮುದಾಯ ಭವನ ನಿರ್ಮಾಣಕ್ಕೆ ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ಶಾಸಕ ಬಿ.ಎಂ.ನಾಗರಾಜ ಭೂಮಿಪೂಜೆ ನೆರವೇರಿಸಿದರು. ಮುಖಂಡರಾದ ಕುಮಾರ್‌ರಾಜೇಗೌಡ, ನಾಗರಾಜ, ಶರಣಗೌಡ, ಅಯ್ಯಪ್ಪ, ನೀಲಕಂಠ ಗೌಡ, ಅಕ್ಬರ್ ಸಾಬ್, ಇಸ್ಮಾಯಿಲ್ ಸಾಬ್, ಜಿಲಾನ್ ಸಾಬ್, ನಡುವಿ ಶಂಕ್ರಪ್ಪ, ಹೊನ್ನೂರಪ್ಪ, ಎರೆಪ್ಪ ಗೌಡ, ತಿಪ್ಪೆರುದ್ರ, ಜೆಡ್‌ಪಿ ಎಇಇ ಎಂಜಿನಿಯರ್ ತಿಪ್ಪೇಸ್ವಾಮಿ, ಪಿಡಿಒ ವೀರೇಶ್, ಬಿ.ವೆಂಕಟೇಶ್, ಎಚ್.ಗಣೇಶ್, ಟಿ.ಸಿ.ಮೋಹನ್, ಬಿ.ಎಂ.ಮಣಿಕಂಠ ನಾಯಕ್, ಶಾನವಾಸಪುರ ಗ್ರಾಮದ ಮುಖಂಡರಿದ್ದರು.

6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ವಿಜಯನಗರ: 2026–27ನೇ ಸಾಲಿಗೆ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಅಗತ್ಯ ದಾಖಲಾತಿಗಳೊಂದಿಗೆ ಏ.15ರಂದು https://swdservices.karnataka.gov.in/ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಿ, ಮೇ 4ರೊಳಗಾಗಿ ಸಂಬಂಧಿಸಿದ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಗೆ ಅರ್ಜಿ ಹಾಗೂ ದಾಖಲೆಗಳ ಪ್ರತಿಯನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಆಯಾ ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಕಚೇರಿಗೆ ಸಂಪರ್ಕಿಸುವಂತೆ ಇಲಾಖೆಯ ಉಪನಿರ್ದೇಶಕರು ವೈ.ಎ.ಕಾಳೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಡಾ.ಅಂಬೇಡ್ಕರ್ ಜಯಂತಿ

ಯಲಬುರ್ಗಾ: ಪಟ್ಟಣದ ಬಯಲು ರಂಗ ಮಂದಿರದಲ್ಲಿ ಮಂಗಳವಾರ ಬೆಳಿಗ್ಗೆ 11ಗಂಟೆಗೆ ತಾಲೂಕಾಡಳಿತ, ಸಮಾಜಕಲ್ಯಾಣ, ಪಟ್ಟಣ ಪಂಚಾಯಿತಿ ಸಹಯೋಗದಲ್ಲಿ ಸಂವಿಧಾನ ಶಿಲ್ಪಿ, ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್‌ರವರ 135ನೇ ಹಾಗೂ ಹಸಿರು ಕ್ರಾಂತಿ ಹರಿಕಾರ ಭಾರತದ ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನ ರಾಮ್ ಅವರ 119ನೇ ಜನ್ಮ ದಿನಾಚರಣೆ ಸಮಾರಂಭ ಕಾರ್ಯಕ್ರಮ ನಡೆಯಲಿದೆ ಎಂದು ಸಮಾಜ ಕಲ್ಯಾಣಾಧಿಕಾರಿ ಶಶಿಧರ ಸಕ್ರಿ ಹೇಳಿದರು. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು ಪಟ್ಟಣ ಪಂಚಾಯಿತಿ ಆವರಣದಿಂದ ಬೆಳ್ಳಿಗ್ಗೆ 9 ಗಂಟಗೆ ಇಬ್ಬರು ಮಹನೀಯರ ಭಾವಚಿತ್ರಗಳಿಗೆ ಪೂಜೆ ಸಲ್ಲಿಸುವ ಮೂಲಕ ಮೆರವಣಿಗೆ ಪ್ರಾರಂಭಗೊಂಡು ಕನಕದಾಸ ವೃತ್ತದ ಮೂಲಕ ಹಾಗೂ ವೇದಿಕೆಗೆ ಆಗಮಿಸಲಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಿಎಂ ಆರ್ಥಿಕ ಸಲಹೆಗಾರ,ಶಾಸಕ ಬಸವರಾಜ ರಾಯರಡ್ಡಿ ಸಭೆ ಅಧ್ಯಕ್ಷತೆ ವಹಿಸುವವರು, ಅತಿಥಿಗಳಾಗಿ ಸಂಸದ ಕೆ.ರಾಜಶೇಖರ ಹಿಟ್ನಾಳ,ವಿಪ ಸದಸ್ಯರಾದ ಶರೀಲ್ ನಮೋಶಿ, ಡಾ.ಚಂದ್ರಶೇಖರ ಬಿ ಪಾಟೀಲ, ಶರಣಗೌಡ ಪಾಟೀಲ, ಹೇಮಲತಾ ನಾಯಕ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಇಂದು

ಕುಷ್ಟಗಿ: ತಾಲೂಕಿನ ವಿರುಪಾಪೂರು ಗ್ರಾಮದಲ್ಲಿ ದಲಿತ ಸಂಘರ್ಷ ಸಮಿತಿ ಸಾಮಾಜಿಕ ಮತ್ತು ಸಾಂಸ್ಕೃತಿ ಹಾಗೂ ಗ್ರಾಮೀಣಾಭಿವೃದ್ಧಿ ಸಂಯುಕ್ತಾಶ್ರಯದಲ್ಲಿ ಡಾ.ಬಾಬು ಜಗಜೀವನರಾಮ್ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಜಯಂತ್ಯುತ್ಸವ ಕಾರ್ಯಕ್ರಮ ಏ.14ರಂದು ಸಂಜೆ 5 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಶಾಸಕ ದೊಡ್ಡನಗೌಡ ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ಮಾಜಿ ಸಚಿವ ಅಮರೇಗೌಡ ಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಪಂ ಮಾಜಿ ಸದಸ್ಯ ಹನಮೇಶ ನಾಯಕ್ ಹುಲಿಹೈದರ್, ಮುಖಂಡ ನಿತ್ಯಾನಂದಗೌಡ, ತಾವರಗೇರಾ ಪಿಎಸ್‌ಐ ಚಂದ್ರಪ್ಪ, ಪಿಡಿಒ ಬಸವರಾಜ ರ‍್ಯಾವಣಕಿ, ಸಹಾಯಕ ಪ್ರಾಧ್ಯಾಪಕಿ ಅರುಣಾ ಕುಮಾರಿ, ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ರವಿಂದ್ರ ತೆಳಗಡೆ, ರಾಜು ಬಿ.ಆರ್., ಸೇರಿದಂತೆ ಇನ್ನಿತರ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಆಯೋಜಕ ಮಂಜುನಾಥ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಳ್ಳಾರಿ: ನೆರೆಯ ಆಂಧ್ರಪ್ರದೇಶದ ಕುರುಬ ಸಮಾಜದ ಅಧ್ಯಕ್ಷ ಮಲ್ಲಿಕಾರ್ಜುನ ಅವರು, ಬಳ್ಳಾರಿ ನಗರದ ಬಳ್ಳಾರಿ ಜಿಲ್ಲಾ ಕುರುಬ ಸಮಾಜದ ಸಂಘದ ಕಚೇರಿಗೆ ಭೇಟಿ ನೀಡಿದರು. ಬಳ್ಳಾರಿ ಸಂಘದ ವತಿಯಿಂದ ಮಲ್ಲಿಕಾರ್ಜುನ ಅವರನ್ನು ಅತ್ಯಂತ ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು. ಬಳ್ಳಾರಿ ಜಿಲ್ಲಾ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಅಲ್ಲಿಪುರ ಕೆ.ಮೋಹನ್, ಕೊಳಗಲ್ ಅಂಜನಿ, ಗಾದಿಲಿಂಗಪ್ಪ, ಸೇರಿದಂತೆ ಅನೇಕ ಮುಖಂಡರು, ಸಂಘದ ಪದಾಧಿಕಾರಿಗಳು, ಸಮಾಜದ ಪ್ರಮುಖರು ಭಾಗವಹಿಸಿದ್ದರು.

ವಿಂದ್ಯಾ ಆರ್.ಗೆ ಪಿಎಚ್‌ಡಿ ಪ್ರದಾನ

ಬಳ್ಳಾರಿ: ಬಳ್ಳಾರಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆ್ಯಂಡ್ ಮ್ಯಾನೇಜ್ಮೆಂಟ್ (ಬಿಐಟಿಎಂ) ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ವಿಂದ್ಯಾ ಆರ್. ಅವರಿಗೆ



ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ವತಿಯಿಂದ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್‌ಡಿ) ಪದವಿ ಪ್ರದಾನ ಮಾಡಲಾಗಿದೆ.

ವಿಂದ್ಯಾ ಅವರು, ಸ್ಟಡೀಸ್ ಆನ್ ಕ್ಲಿನಿಕಲ್ಲೀ ಇಂಪಾರ್ಟೆಂಟ್, ಎನ್. ಹಾಗೂ ಎಸ್.ಡೋನರ್ ಲೆಜೆಂಡ್ಸ್ ಆ್ಯಂಡ್ ದೇರ ಮೆಟಲ್ ಕಾಂಪ್ಲೆಕ್ಸ್ ಎನ್ನುವ ಮಹತ್ವದ ಸೌಶೋಧನ ಮಹಾ ಪ್ರಬಂಧವನ್ನು ಯಶಸ್ವಿಯಾಗಿ ಮಂಡಿಸಿದ್ದು, ಈ ಅಧ್ಯಯನವು ವೈದ್ಯಕೀಯ ಕ್ಷೇತ್ರದಲ್ಲಿ ಉಪಯುಕ್ತವಾಗುವ ಲಿಗ್ಯಾಂಡ್‌ಗಳು ಹಾಗೂ ಅವುಗಳ ಮೆಟಲ್ ಕಾಂಪ್ಲೆಕ್ಸ್‌ಗಳ ಕುರಿತಾಗಿ ಮಹತ್ತರವಾದ ಮಾಹಿತಿ ನೀಡುವಂತಿದೆ. ಈ ಸಂಶೋಧನೆಗೆ ಬಿಐಟಿಎಂ ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥ ಡಾ.ಸುರೇಶ್ ಅವರ ಮಾರ್ಗದರ್ಶನ, ಜೊತೆಗೆ, ಆರ್.ವೈ.ಎಂ.ಇ.ಸಿ ತಾಂತ್ರಿಕ ಮಹಾವಿದ್ಯಾಲಯ, ಬಳ್ಳಾರಿಯ ನಿವೃತ್ತ ಪ್ರಾಧ್ಯಾಪಕ ಡಾ. ಹಿರೇಮಠ್ ಸುರೇಶ್ ಬಾಬು ಅವರು ಸಹ ಸಹಮಾರ್ಗದರ್ಶಕರಾಗಿ ಅಮೂಲ್ಯ ಮಾರ್ಗದರ್ಶನ ನೀಡಿದ್ದಾರೆ. ವಿಂದ್ಯಾ ಆರ್. ಅವರ ಈ ಶೈಕ್ಷಣಿಕ ಸಾಧನೆಗೆ ಸಂಸ್ಥೆಯ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಪ್ರಾಚಾರ್ಯರು, ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಹರ್ಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ ಎಂದು ಸಂಸ್ಥೆ ಮುಖ್ಯಸ್ಥರು ತಿಳಿಸಿದ್ದಾರೆ.



ಬಳ್ಳಾರಿ: ಕಲಬುರ್ಗಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಪಡೆದ ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ ಅವರಿಗೆ ನಗರದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯ ಕಚೇರಿಯಲ್ಲಿ ಸನ್ಮಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಕೆಎಂಎಫ್ ಮಾಜಿ ಅಧ್ಯಕ್ಷ, ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ನಿವೃತ್ತ ನೌಕರರಾದ ಡಾ.ಎಂ.ಟಿ.ಮಲ್ಲೇಶಪ್ಪ, ಹನುಮಂತ ರೆಡ್ಡಿ, ಮುಖಂಡ ಜಯಸಿಂಹ ಇತರರಿದ್ದರು.

ಕಾಯಕ ದೀಕ್ಷೆ ಕಾರ್ಯಕ್ರಮಕ್ಕೆ ಚಾಲನೆ | ಚಂದ್ರಕಾಂತ ಸಲಹೆ

ಯುವಕರಲ್ಲಿ ಓದಿನ ಅಭಿರುಚಿ ಬೆಳೆಸಿ

ಹೂವಿನಹಡಗಲಿ: ಯುವಕರಲ್ಲಿ ಓದಿನ ಅಭಿರುಚಿ ಬೆಳೆಸಿ ಎಂದು ಚಂದ್ರಕಾಂತ ಎಸ್ .ಪಾಟೀಲ ಹೇಳಿದರು.

ಪಟ್ಟಣದ ಶ್ರೀಗವಿಸಿದ್ದೇಶ್ವರ ಶಾಖಾ ಮಠದಲ್ಲಿ ಭಾನುವಾರ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ ಶರಣ ಸಾಹಿತ್ಯ ಪರಿಷತ್ತು ಯುವ ಘಟಕ ಸಹಯೋಗದಲ್ಲಿ ಆಯೋಜಿಸಿದ್ದ ಕಾಯಕ ದೀಕ್ಷೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.ಬಸವಾದಿ ಶರಣರ ಸೂಫಿ ಸಂತರ ವಚನಗಳು ವಿಚಾರಗಳನ್ನು ಗ್ರಂಥಗಳ ರೂಪದಲ್ಲಿ ಪ್ರಕಟಿಸುವ ಮೂಲಕ ಓದುಗರಿಗೆ ಒದಗಿಸುವ ಕೆಲಸ ಆಗಬೇಕಾಗಿದೆ ಎಂದು ತಿಳಿಸಿದರು.



ಹೊಸಪೇಟೆಯ ಕವಯಿತ್ರಿ ಡಾ.ಭಾರತಿ ಮೂಲಿಮನಿ ಶರಣ ಸಾಹಿತ್ಯ ಮತ್ತು ಪ್ರಸ್ತುತತೆ ಕುರಿತು ಉಪನ್ಯಾಸ ನೀಡಿದರು.

ಜಿಲ್ಲಾ ಶಸಾಪ ಅಧ್ಯಕ್ಷ ಡಾ.ಕೆ.ರವೀಂದ್ರನಾಥ ಅಧ್ಯಕ್ಷತೆ ವಹಿಸಿ ಜಿಲ್ಲೆ ಮತ್ತು ತಾಲೂಕು ಶಸಾಪ ಚಟುವಟಿಕೆಗಳು ಕುರಿತು ಮಾಹಿತಿ ನೀಡಿದರು.

ಗವಿಮಠದ ಡಾ.ಹಿರಿಶಾಂತವೀರ ಮಹಾಸ್ವಾಮಿಗಳು, ಅಭಿನವ ಚೆನ್ನಬಸವ ಮಹಾಸ್ವಾಮಿಗಳು ಹಿರೇಮಲ್ಲನಕೆರೆ ಮಠ, ಸದ್ಗುರು ಶಿವಯೋಗಿ ಡಾ.ಮಂಜುನಾಥ ಹಾಲಸ್ವಾಮಿಗಳು ಸಾನಿಧ್ಯ ವಹಿಸಿ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳು ನಿರಂತರವಾಗಿ ನೆಡೆಯಲಿ ಎಂದು ಆಶೀರ್ವದಿಸಿದರು.

ಶಸಾಪ ಜಿಲ್ಲಾ ಕಾರ್ಯದರ್ಶಿ ರವಿಕುಮಾರ್ ಎನ್.ಎಂ.ಸಾಹಿತಿ ತೋ.ಮ.ಶಂಕ್ರಯ್ಯ, ಕಸಾಪ ಮಾಜಿ ಅಧ್ಯಕ್ಷ ಎಚ್.ಜಿ.ಪಾಟೀಲ, ಚಿತ್ರಕಲಾ ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷ ದ್ವಾರಕೀಶ್ ರೆಡ್ಡಿ ಎಸ್.ಮಾತನಾಡಿದರು.

ಶಸಾಪ ತಾಲೂಕು ಘಟಕದ ಅಧ್ಯಕ್ಷ ಟಿ.ಎಂ.ನಾಗಭೂಷಣ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಡಾ.ಶೈಲಜಾ ಪವಾಡಶೆಟ್ರು, ಯುವ ಘಟಕದ ಅಧ್ಯಕ್ಷ ಎಂ.ದಯಾನಂದ ಅವರಿಗೆ ಶಸಾಪ ಜಿಲ್ಲಾ ಘಟಕ ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಗೌರವ ಸನ್ಮಾನ ನೆರವೇರಿಸಲಾಯಿತು.

ಕನ್ನಡ ಪುಸ್ತಕ ಪ್ರಾಧಿಕಾರದ ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಮುದೇನೂರು ಉಮಾಮಹೇಶ್ವರ ಮನೆಗೊಂದು ಗ್ರಂಥಾಲಯ ಅನುಷ್ಠಾನದ ಅಂಗವಾಗಿ 9 ಜನರಿಗೆ ಅಭಿನಂದನಾ ಪತ್ರ ವಿತರಿಸಿದರು.ಯುವರಾಜ್ ಗೌಡ್ರು, ಜಯಮಾಲ, ಎ.ವೀಣಾ, ಮೇಘನಾ, ಯಶಸ್ವಿನಿ, ಸಿಂಚನಾ, ಬಸವರಾಜ ಭಂಡಾರಿ ವಚನ ಗಾಯನ ಪ್ರಸ್ತುತ ಪಡಿಸಿದರು. ಎಚ್.ಬಿ.ರಾಜೇಶ್, ರಾಜೇಶ್ವರಿ ಕಮ್ಮಾರ, ಚಂದ್ರಪ್ಪ ಅಕ್ಕಸಾಲಿ ನಿರ್ವಹಿಸಿದರು.

ನಿಷ್ಠಿ ರುದ್ರಪ್ಪಗೆ ಸಾಹಿತ್ಯ ಶ್ರೀ ಪ್ರಶಸ್ತಿ: ಸನ್ಮಾನ

ಬಳ್ಳಾರಿ: ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಸಾಹಿತ್ಯ ಶ್ರೀಪ್ರಶಸ್ತಿ ಪಡೆದ, ಕನ್ನಡ ಸಾಹಿತ್ಯ ಪರಿಷತ್ ಅಖಂಡ ಬಳ್ಳಾರಿ ಜಿಲ್ಲಾಧ್ಯಕ್ಷ ನಿಷ್ಠಿ ರುದ್ರಪ್ಪ ಅವರನ್ನು, ಕರ್ನಾಟಕ ರಾಜ್ಯ ರೈಲ್ವೆ ಕ್ರಿಯಾ ಸಮಿತಿ ಬಳ್ಳಾರಿ ವತಿಯಿಂದ ಸೋಮವಾರ ಸನ್ಮಾನಿಸಿ ಗೌರವಿಸಲಾಯಿತು.

ನಗರದ ಡಾ.ರಾಜಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯದಲ್ಲಿನ ಕನ್ನಡ ಸಾಹಿತ್ಯ ಪರಿಷತ್ ಸಭಾಭವನದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಕಸಾಪ ಜಿಲ್ಲಾಧ್ಯಕ್ಷ ನಿಷ್ಠಿ ರುದ್ರಪ್ಪ ಅವರನ್ನು ಅನೇಕ ಗಣ್ಯರು ಸನ್ಮಾನಿಸಿ ಗೌರವಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಮಿತಿಯ ಅಧ್ಯಕ್ಷ ಕೆ.ಎಂ.ಮಹೇಶ್ವರ ಸ್ವಾಮಿ ಮಾತನಾಡಿ, ಕಸಾಪ ಅಧ್ಯಕ್ಷ ನಿಷ್ಠಿ ರುದ್ರಪ್ಪ ಅವರು ಸಲ್ಲಿಸಿದ ಕನ್ನಡ ಸಾಹಿತ್ಯ ಕ್ಷೇತ್ರದ ಸೇವೆಯನ್ನು ಪರಿಗಣಿಸಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಇದು ಅತ್ಯಂತ ಸಂತಸ ಮೂಡಿಸಿದೆ.

ಸತತ ಮೂರು ಬಾರಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸುವ ಮೂಲಕ ಇತಿಹಾಸ ಸೃಷ್ಟಿಸಿದ್ದಾರೆ. ಜೊತೆಗೆ ಅತ್ಯುತ್ತಮ ಸಾಹಿತಿಗಳು ಕೂಡ ಆಗಿದ್ದಾರೆ. ಅವರಿಗೆ ದೊರೆತ ಈ ಪ್ರಶಸ್ತಿ, ಗೌರವ ಇಡಿ ಅಖಂಡ ಬಳ್ಳಾರಿ ಜಿಲ್ಲೆಗೆ ದೊರೆತ ಗೌರವ ಎಂದು ಅಭಿಪ್ರಾಯಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾಜಿ ಉಪ ನಿರ್ದೇಶಕ ಚೋರ್ನೂರು ಕೊಟ್ರಪ್ಪ, ನಿವೃತ್ತ ಪ್ರಾಚಾರ್ಯ ಮಲ್ಲಪ್ಪ, ಸಿ.ಎಂ.ಗಂಗಾಧರಯ್ಯ, ಯೋಗಪಟು ಬಾಣಪುರ ಮಹೇಶ್ ಗೌಡ, ವಿ.ಎಸ್. ಕಾನೂನು ವಿದ್ಯಾಲಯದ ಆಡಳಿತ ಮಂಡಳಿ ಅಧ್ಯಕ್ಷ ನರೇಂದ್ರಬಾಬು ಅವರು ಸೇರಿದಂತೆ ಅನೇಕ ಗಣ್ಯರು ಸನ್ಮಾನಿತರ ಕುರಿತು ಮಾತನಾಡಿದರು.

ಸನ್ಮಾನ ಸ್ವೀಕರಿಸಿದ ನಿಷ್ಠಿ ರುದ್ರಪ್ಪ ಮಾತನಾಡಿ, ಹಿರಿಯ ಹೋರಾಟಗಾರ ಮಹೇಶ್ವರ ಸ್ವಾಮಿ ಹಾಗೂ ಚೋರ್ನೂರು ಕೊಟ್ರಪ್ಪ ಅವರಿಂದ ಸನ್ಮಾನಿತನಾಗಿರುವುದು ಪ್ರಶಸ್ತಿ ಪಡೆದಷ್ಟೇ ಸಂತೋಷವಾಗಿದೆ. ಸನ್ಮಾನ ಸಮಾರಂಭಆಯೋಜಿಸಿದಪ್ರತಿಯೊಬ್ಬರಿಗೂ ಅಭಿನಂದನೆಗಳನ್ನು ಸಲ್ಲಿಸುವೆ ಎಂದರು.

ಸಮಿತಿಯ ಪದಾಧಿಕಾರಿಗಳಾದ ಎಚ್. ಕೆ.ಗೌರಿಶಂಕರ್, ಕೋಳೂರು ಚಂದ್ರಶೇಖರ್ ಗೌಡ ನಿರ್ವಹಿಸಿದರು. ಹುಬ್ಬಳ್ಳಿ ರೈಲ್ವೆ ಎಡಿ ಆರ್ ಯುಸಿಸಿ ಸದಸ್ಯ ಕೆ.ಎಂ.ಕೊಟ್ರೇಶ್, ಸೋಮಲಿಂಗನಗೌಡ, ಪಿ.ಬಂಡೆಗೌಡ, ಬಿ.ಎಂ.ಎರಿಸ್ವಾಮಿ, ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳಾದ ಚಂದ್ ಬಾಷಾ, ಮಂಜುನಾಥ್ ಸೇರಿದಂತೆ ಇತರರು ಭಾಗವಹಿಸಿದ್ದರು.



ಕಟ್ಟಡ ಕಾರ್ಮಿಕನ ಮಗಳ ಉತ್ತಮ ಸಾಧನೆ



ಕೊಟ್ಟೂರು: ತಾಲೂಕಿನ ಚಿಕ್ಕ ಗ್ರಾಮ ಬೋರನಹಳ್ಳಿಯ ಮೊಟಮ್ಮರ ಸಂಜನಾ ದ್ವಿತೀಯ ಪಿಯುಸಿ ಕಲಾ ವಿಭಾಗದಲ್ಲಿ 590 ಅಂಕಗಳನ್ನು ಪಡೆದು ಗ್ರಾಮಕ್ಕೆ ಕೀರ್ತಿ ತಂದಿದ್ದಾರೆ.ಹನುಮಂತಪ್ಪ ಕಟ್ಟಡ ಕಾರ್ಮಿಕ, ಕಡು ಬಡತನದ ಇವರ ಕುಟುಂಬಕ್ಕೆ ಈತನ ಕೂಲಿಯೇ ಮಗಳ ವಿದ್ಯಾಭ್ಯಾಸಕ್ಕೆ ಹಾಗೂ ಕುಟುಂಬಕ್ಕೆ ಆಧಾರ. ಬಡತನದಲ್ಲೂ ಮಗಳು ಸಾಧನೆ ಮಾಡಿರುವುದು ಕುಟುಂಬಕ್ಕೆ ಮಾತ್ರವಲ್ಲ ಇಡೀ ಗ್ರಾಮಕ್ಕೆ ಎಲ್ಲಿಲ್ಲದ ಹರ್ಷ ತಂದಿದೆ ಎಂದು ಹನುಮಂತಪ್ಪ ಹರ್ಷವ್ಯಕ್ತಪಡಿಸಿದರು. ಮನೆಯಲ್ಲಿ ಬಡತನ ಇದ್ದರು ಮಗಳ ವಿದ್ಯಾಭ್ಯಾಸಕ್ಕೆ ಅಡ್ಡಿಮಾಡದೆ ಓದುವುದಕ್ಕೆ ಸದಾ ಪ್ರೋತ್ಸಾಹ ನೀಡಿದ್ದಾರೆ.

ವಸತಿ ಕಾಲೇಜಿನ ವಿದ್ಯಾರ್ಥಿನಿಯರ ಅಮೋಘ ಸಾಧನೆ

ಬಳ್ಳಾರಿ: ನಗರದ ಹೊರವಲಯದ ಅಲ್ಲೀಪುರದಲ್ಲಿರುವ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜು 2025–26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.99ರಷ್ಟು ಅತ್ಯುತ್ತಮ ಗುಣಾತ್ಮಕ ಫಲಿತಾಂಶ ದಾಖಲಿಸುವ ಮೂಲಕ ಗಮನಾರ್ಹ ಸಾಧನೆ ಮಾಡಿದೆ.

ಕಾಲೇಜಿನ ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಿಂದ ಒಟ್ಟು 108 ವಿದ್ಯಾರ್ಥಿನಿಯರು ಪರೀಕ್ಷೆಗೆ ನೋಂದಾಯಿಸಿದ್ದರು. ಇವರಲ್ಲಿ 107 ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದಾರೆ. ಉತ್ತೀರ್ಣರಾದವರಲ್ಲಿ 57 ವಿದ್ಯಾರ್ಥಿನಿಯರು ಅತ್ಯುತ್ತಮ ದರ್ಜೆ, 47 ವಿದ್ಯಾರ್ಥಿನಿಯರು ಉತ್ತಮ ದರ್ಜೆ ಹಾಗೂ ಇಬ್ಬರು ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಶೇ.100ಸಾಧನೆ: ವಿಜ್ಞಾನ ವಿಭಾಗದ ಒಟ್ಟು 56 ವಿದ್ಯಾರ್ಥಿನಿಯರು ಪರೀಕ್ಷೆ ಬರೆದಿದ್ದು, ಎಲ್ಲರೂ ಉತ್ತೀರ್ಣರಾಗುವ ಮೂಲಕ ಶೇ.100ರಷ್ಟು ಫಲಿತಾಂಶ ತಂದಿದ್ದಾರೆ. ಈ ವಿಭಾಗದಲ್ಲಿ 36 ವಿದ್ಯಾರ್ಥಿನಿಯರು ಅತ್ಯುತ್ತಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದು, 20ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದ್ದಾರೆ.

ವಿಜ್ಞಾನ ವಿಭಾಗದ ಟಾಪರ್ಸ್: ದಾನೇಶ್ವರಿ (ಶೇ.97.33), ಫ್ರೀದೋಷ್ ಬಿ. (ಶೇ.96.50),ಕೆ.ಎಂ.ಚಂದನ(ಶೇ.96.16), ಸವಿತಾ (ಶೇ.96.16),ಸಂಗೀತ (ಶೇ.95.66) ಮತ್ತು ಕೆ.ಪೂರ್ಣಿಮಾ (ಶೇ.95.33)







ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿನಿಯರು.

ವಾಣಿಜ್ಯ ವಿಭಾಗ: ವಾಣಿಜ್ಯ ವಿಭಾಗದಲ್ಲಿ 52 ವಿದ್ಯಾರ್ಥಿನಿಯರು ಪರೀಕ್ಷೆ ಎದುರಿಸಿದ್ದು, ಇವರಲ್ಲಿ 21 ವಿದ್ಯಾರ್ಥಿನಿಯರು ಅತ್ಯುತ್ತಮ ದರ್ಜೆ ಹಾಗೂ 28 ವಿದ್ಯಾರ್ಥಿನಿಯರು ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಈ ವಿಭಾಗದಲ್ಲಿ ಕಾಲೇಜು ಶೇ.98 ರಷ್ಟು ಫಲಿತಾಂಶ ಪಡೆದಿದೆ.

ವಾಣಿಜ್ಯ ವಿಭಾಗದ ಟಾಪರ್ಸ್: ಪವಿತ್ರಾ (ಶೇ.96), ಲೀಲಾವತಿ ಎಂ. (ಶೇ.95.83), ಸಿಂಚನ (ಶೇ.95.50), ರೋಷನ್ ಬಿ.(ಶೇ.93.83) ಮತ್ತು ಎಂ.ಸಹನಾ (ಶೇ.93.50) ವಿಭಾಗಕ್ಕೆ ಕೀರ್ತಿ ತಂದಿದ್ದಾರೆ.

ವಿದ್ಯಾರ್ಥಿನಿಯರ ಈ ಅಮೋಘ ಸಾಧನೆಗೆ ಬೆಂಗಳೂರಿನ ಅಲ್ಪಸಂಖ್ಯಾತರ ನಿರ್ದೇಶನಾಲಯದ ನಿರ್ದೇಶಕರು, ಬಳ್ಳಾರಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾಅಧಿಕಾರಿಗಳು ಮೆಚ್ಚುಗೆವ್ಯಕ್ತಪಡಿಸಿದ್ದಾರೆ. ಕಾಲೇಜಿನ ಪ್ರಾಂಶುಪಾಲರಾದ ನಾಗಯ್ಯ ಹಿರೇಮಠಅವರುಸಾಧಕವಿದ್ಯಾರ್ಥಿನಿಯರಿಗೆ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಕ್ರೀಡೆಗಳಿಂದ ಆರೋಗ್ಯ ಸದೃಢ: ಎಂ.ಎಸ್.ಸಿದ್ದಪ್ಪ

ಸಿರುಗುಪ್ಪ: ಕ್ರೀಡೆಗಳಿಂದ ಆರೋಗ್ಯ ಸದೃಢವಾಗಿರಲಿದೆ. ಒತ್ತಡದ ಬದುಕಿನಲ್ಲಿ ಕ್ರೀಡೆ, ಯೋಗ, ಧ್ಯಾನಕ್ಕೂ ಪ್ರತಿಯೊಬ್ಬರೂ ಆದ್ಯತೆ ನೀಡಲು ಮುಂದಾಗಬೇಕು. ಇದರಿಂದ ಆವರಿಸುವ ವಿವಿಧ ರೋಗಗಳು ದೂರವಾಗಿ ಹೊಸ ಚೈತನ್ಯ ಮೂಡಲಿದೆ ಎಂದು ಬಿಜೆಪಿ ಯುವ ಘಟಕದ ಜಿಲ್ಲಾಧ್ಯಕ್ಷ ಎಂ.ಎಸ್.ಸಿದ್ದಪ್ಪ ಹೇಳಿದರು. ತಾಲೂಕಿನ ತೆಕ್ಕಲಕೋಟೆ ಪಟ್ಟಣದ ಸರ್ಕಾರಿ ಪ್ರೌಢ ಶಾಲೆಯ ಆವರಣದಲ್ಲಿ 7 ಸ್ಟಾರ್ ತಂಡದ ವತಿಯಿಂದ ಆಯೋಜಿಸಿದ್ದ ಸೀಸನ್ 3 ಜಿಲ್ಲಾಮಟ್ಟದ ಅಮೆಚರ್ ಅಸೋಸಿಯೇಷನ್ ಪ್ರೊಕಬಡ್ಡಿ ಫೈನಲ್ ಪಂದ್ಯಾವಳಿಯಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಬಹುಮಾನ ವಿತರಿಸಿ ಮಾತನಾಡಿದರು.



ಇತ್ತೀಚನ ದಿನಗಳಲ್ಲಿ ಪ್ರತಿಯೊಬ್ಬರು ಮೊಬೈಲ್, ವ್ಯಾಟ್ಸ್‌ಆ್ಯಪ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಲ್ಯಾಪ್‌ಟಾಪ್, ಟಿವಿ ವೀಕ್ಷಣೆಗೆ ಮೊದಲ ಆದ್ಯತೆ ನೀಡುತ್ತಿದ್ದು, ಆರೋಗ್ಯದ ಕಡೆ ಗಮನ ಹರಿಸದಿದ್ದರೆ ಬರುವ ದಿನಗಳಲ್ಲಿ ವಿವಿಧ ತೊಂದರೆಗಳು ಎದುರಾಗುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ಯಾವುದೇ ಕ್ರೀಡೆ ಇರಲಿ, ಕ್ರೀಡೆಗಳಿಗಳಲ್ಲಿ ಭಾಗವಹಿಸುವುದನ್ನು ರೂಢಿಸಿಕೊಳ್ಳಬೇಕು, ನಿಗಧಿತ ಸಮಯದಲ್ಲಿ ನಿತ್ಯ ಯೋಗಾಭ್ಯಾಸ, ಧ್ಯಾನ ಮಾಡಲು ಮುಂದಾಗಬೇಕು ಎಂದರು.

ಕ್ರೀಡೆಗಳಲ್ಲಿ ಸೋಲು ಗೆಲುವು ಮುಖ್ಯವಲ್ಲ, ಭಾಗವಹಿಸುವುದು ಮುಖ್ಯ, ಕ್ರೀಡಾಪಟುಗಳು ಸೋಲು, ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕು. ಈ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿ, ಪ್ರಥಮ, ದ್ವಿತೀಯ, ತೃತೀಯ ಸ್ಥಾನಗಳನ್ನು ಪಡೆದ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುವೆ ಎಂದರು. ಇದಕ್ಕೂ ಮುನ್ನ ವಿಜೇತ ತಂಡದ ಸದಸ್ಯರಿಗೆ ಬಹುಮಾನ ವಿತರಿಸಿ ಅಭಿನಂದಿಸಿದರು. 7 ಸ್ಟಾರ್ ತಂಡದ ಮುಖ್ಯಸ್ಥರು, ಪದಾಧಿಕಾರಿಗಳು, ಕ್ರೀಡಾಪಟುಗಳು, ವಿವಿಧ ಗಣ್ಯರು, ಕ್ರೀಡಾಭಿಮಾನಿಗಳು ಇತರರಿದ್ದರು.

ಕೊಟ್ಟೂರಿನಲ್ಲಿ ಕಲಾತ್ಮಕ ಸಿನಿಮಾ ಚಿತ್ರೀಕರಣ

ಕೊಟ್ಟೂರು: ಪಟ್ಟಣದ ಪ್ರತಿಭೆ, ದೂರದರ್ಶನ ಸೀರಿಯಲ್, ಕಿರು ಚಿತ್ರಗಳ ನಿರ್ದೇಶಕ ವೆಂಕಟೇಶ್ ನಿರ್ದೇಶನದ ಕಲಾತ್ಮಕ ಚಿತ್ರ ಯಶಸ್ವಿಯಾಗಿ ಪ್ರಶಸ್ತಿಗಳನ್ನು ಪಡೆಯಲಿ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎಂ.ಎಂ. ಜೆ.ಹರ್ಷವರ್ಧನ ಹಾರೈಸಿದರು.

ಪಟ್ಟಣದಲ್ಲಿ ಆರಂಭಗೊಂಡ ಕಲಾತ್ಮಕ ಸಿನಿಮಾದ ದೃಶ್ಯಕ್ಕೆ ಕ್ಲಾಪ್ ತೋರಿಸಿ ಚಿತ್ರೀಕರಣಕ್ಕೆ ಚಾಲನೆ ನೀಡಿ ಮಾತನಾಡಿದರು. ನಿರ್ದೇಶಕ ವೆಂಕಟೇಶ್ ಕೊಟ್ಟೂರಿನವರು ಎಂಬುದು ಹೆಮ್ಮೆ. ಅನಂತನಾಗ್, ಯಶ್ ಸೇರಿ ಅನೇಕ ನಟರ ಸೀರಿಯಲ್‌ಗಳನ್ನು ನಿರ್ದೇಶಿಸಿರುವ ಅವರು ಪ್ರತಿಭಾವಂತರು. ರಾಗಭೈರವಿ ಚಲನಚಿತ್ರವನ್ನೂ ಉತ್ತಮವಾಗಿ ನಿರ್ದೇಶಿಸಿದ್ದರು. ಈಗಿನ ಅವರ ಚಂದ್ರ ಹೆಸರಿನ ಸಿನಿಮಾ ಅನೇಕ ಪ್ರಶಸ್ತಿಗಳನ್ನು ಪಡೆಯಲಿ ಎಂದರು.

ಇಟ್ಟಿಗಿ ರಸ್ತೆ, ತೇರು ಬಯಲು, ಖಾಸಗಿ ಬಸ್ ನಿಲ್ದಾಣಗಳಲ್ಲಿ ಅನೇಕ ದೃಶ್ಯಗಳ ಚಿತ್ರೀಕರಣವನ್ನು ಮಾಡಲಾಯಿತು. ಮದಲಗಟ್ಟಿ ನದಿ ಬಳಿ, ಬೆಂಗಳೂರು, ರಾಯಚೂರಿನಲ್ಲಿ ಚಿತ್ರೀಕರಣ ನಡೆಯಲಿದೆ ಎಂದು ನಿರ್ದೇಶಕ ವೆಂಕಟೇಶ್ ಹೇಳಿದರು.



ನಿರ್ದೇಶಕ ವೆಂಕಟೇಶ್ ಕಥೆಯಿರುವ ಚಿತ್ರಕ್ಕೆ ಮಹಾಂತೇಶ್ ನವಲಕಲ್‌ಮಠ ಸಂಭಾಷಣೆ ಬರೆದಿದ್ದು, ಛಾಯಾಗ್ರಹಕ ಸುನೀಲ್ ಹಲವು ಸನ್ನಿವೇಶಗಳನ್ನು ಸೆರೆ ಹಿಡಿದರು. ಚಲನಚಿತ್ರ ನಟ ರಾಮರಾವ್, ಶಶಿಧರ, ಡಾ.ಪ್ರವೀಣ್ ಚೌಟಿ, ಚಕ್ರವರ್ತಿ ದಾವಣಗೆರೆ, ಶ್ರೀನಿವಾಸ, ರಾಮರಾವ್, ಪ್ರಶಾಂತ ಸೇರಿ ಅನೇಕ ನಟರು ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು.

ಮಕ್ಕಳಿಗೆ ಕರಾಟೆಯ ಸಮವಸ್ತ್ರ ಉಚಿತ ವಿತರಣೆ



ಕುರುಗೋಡು: ಸಮೀಪದ ಎಮ್ಮಿಗನೂರು ಗ್ರಾಮದ ಡಾಕ್ಟರ್ ಅಬ್ದುಲ್ ಕಲಾಂ ಎಸ್ಬಿ ಚಾರಿಟೇಬಲ್ ಫೌಂಡೇಶನ್ ವತಿಯಿಂದ ಮಕ್ಕಳಿಗೆ ಸೋಮವಾರ ಮಕ್ಕಳಿಗೆ ಕರಾಟೆಯ ಸಮವಸ್ತ್ರವನ್ನು ಉಚಿತವಾಗಿ ವಿತರಿಸಲಾಯಿತು.

ಈ ವೇಳೆ ಫೌಂಡೇಶನ್‌ನ ಕಾರ್ಯದರ್ಶಿ ಎಚ್.ಪಿರಾವಲಿ ಮಾತನಾಡಿ, ನಮ್ಮ ಆಶಯದಂತೆ ತಂದೆ, ತಾಯಿ ಇಲ್ಲದ ಅನಾಥ ಹೆಣ್ಣು ಮಕ್ಕಳಿಗೆ ಹಾಗೂ ವಿಶೇಷ ಚೇತನ ಕುಟುಂಬದ ಹೆಣ್ಣು ಮಕ್ಕಳಿಗೆ ಉಚಿತ ಕರಾಟೆ ತರಬೇತಿ ನೀಡುವುದರ ಜೊತೆಗೆ ಮಕ್ಕಳಿಗೆ ಕರಾಟೆಯ ಸಮವಸ್ತ್ರ ವಿತರಿಸಲಾಯಿತು.

ರೈತ ಮುಖಂಡ ಜಿ.ನಾಗರೆಡ್ಡಿ ಮಾತನಾಡಿ, ಪ್ರಸ್ತುತದಿನಮಾನಗಳಲ್ಲಿ ಯುವಕ, ಯುವತಿಯರು ತಮ್ಮ ಆತ್ಮ ರಕ್ಷಣೆಗಾಗಿ ಕರಾಟೆ ಕಲಿಯುವುದು ಅವಶ್ಯ ಎಂದರು.

ಪ್ರಮುಖರಾದ ವಡ್ಡರ ವೀರೇಶ್, ರಾಜಪಪ್ಪ, ಜಡೇಶ್ವರಡ್ಡಿ, ನಾರಾಯಣ, ಬಿ.ರಾಜ, ಎಸ್. ರಾಮಪ್ಪ, ಎಚ್.ಪಿರಾವಲಿ, ಸಾಧಕಲಿ ಸಾಬ್, ಪರಶುರಾಮ್ ಇತರರಿದ್ದರು.

ಮರಬ್ಬಿಹಾಳು ತಾಂಡದಲ್ಲಿ ರೈತ ಸಂಘ ರಚನೆ

ಹಗರಿಬೊಮ್ಮನಹಳ್ಳಿ: ತಾಲೂಕಿನ ಮರಬ್ಬಿಹಾಳು ತಾಂಡ ಗ್ರಾಮದಲ್ಲಿ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ರೈತ ಸಂಘದ ನೂತನ ಗ್ರಾಮ ಘಟಕವನ್ನು ರಚನೆ ಮಾಡಲಾಯಿತು.

ಗ್ರಾಮ ಘಟಕದ ಅಧ್ಯಕ್ಷರಾಗಿ ಸೇವಾ ನಾಯಕ್ ಗೌರವಾಧ್ಯಕ್ಷರಾಗಿ ಪರಶುರಾಮ್ ನಾಯಕ್, ಉಪಾಧ್ಯಕ್ಷರಾಗಿ ಪೂಜಾರಿ ಚಂದ್ರನಾಯಕ್, ಷಣ್ಮುಖ ನಾಯ್ಕ, ಯಮುನಾ ನಾಯ್ಕ, ಶಂಕರ್ ನಾಯ್ಕ ಪ್ರಧಾನ ಕಾರ್ಯದರ್ಶಿಯಾಗಿ.ಯಂಕಾನಾಯ್ಕ, ಸಂಘಟನಾ ಕಾರ್ಯದರ್ಶಿಯಾಗಿ ಪ್ರಕಾಶ್ ನಾಯಕ, ಖಜಾಂಚಿಯಾಗಿ ರಾಮ ನಾಯ್ಕ ಕಾರ್ಯಾಧ್ಯಕ್ಷರಾಗಿ ಚಂದ್ರ ನಾಯಕ್, ಕಾರ್ಯದರ್ಶಿಯಾಗಿ ರಮೇಶ್ ನಾಯ್ಕ, ಸಹಕಾರ್ಯದರ್ಶಿಯಾಗಿ ಟೀಕೆ ನಾಯ್ಕ ಸೂರ್ಯನಾಯ್ಕ, ರಣಧೀರ ನಾಯಕ, ಜಗ್ಗು ನಾಯಕ ಸಂಚಾಲಕರಾಗಿ ಶಂಕರ್ ನಾಯ್ಕ, ಮೂರ್ತಿ ನಾಯ್ಕ, ಯಂಕಾನಾಯ್ಕ, ಸಣ್ಣ ರಾಮ ನಾಯಕ, ಅರ್ಜುನ್ ನಾಯಕ, ಮುನ್ನಿ ನಾಯಕ, ಅನಿಲ್‌ಕುಮಾರ್, ಸೋಮ್ಲಿ ನಾಯ್ಕ ಅವರನ್ನು ಮರಬ್ಬಿಹಾಳ ತಾಂಡದ ಗ್ರಾಮ ಘಟಕದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷರಾದ ಜೆ.ಎಂ.ವೀರಸಂಗಯ್ಯ ಮತ್ತು ರಾಜ್ಯ ಸಂಘಟನಾ ಕಾರ್ಯದರ್ಶಿ ಬಿ.ಗೋಣಿಬಸಪ್ಪ. ಹ.ಬೊ.ಹಳ್ಳಿ ತಾಲೂಕ ಅಧ್ಯಕ್ಷ ಬಸವನಗೌಡ. ಪ್ರಧಾನ ಕಾರ್ಯದರ್ಶಿ ಎ.ನಾಗರಾಜ್. ಜಿಲ್ಲಾ ಯುವ ಘಟಕದ ಜಿಲ್ಲಾಧ್ಯಕ್ಷ ರವಿಕುಮಾರ್ ತಂಬ್ರಹಳ್ಳಿ ಇತರರು ಇದ್ದರು.



ಜೆಸ್ಕಾಂ ನೌಕರರ ಚುನಾವಣೆಯಲ್ಲಿ ಅಕ್ರಮ: ಆರೋಪ

ವಿಜಯನಗರ: ಕವಿಪ್ರನಿನಿ/ಜೆಸ್ಕಾಂ ನೌಕರರ ಸಂಘದನಿಯಮಾವಳಿಗಳನ್ನು ಉಲ್ಲಂಘಿಸಿಸಂಘದ 2026–29ನೇ ಸಾಲಿನ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆ ನಡೆಸಲಾಗುತ್ತಿರುವುದನ್ನು ಖಂಡಿಸಿ ಬಹಿಷ್ಕರಿಸುತ್ತಿದ್ದೇವೆ. ಅಲ್ಲದೇ, ಕರ್ತವ್ಯಲೋಪ ಎಸಗಿರುವ ಚುನಾವಣಾಧಿಕಾರಿಗಳ ವಿರುದ್ಧವೇ ಕಾನೂನು ಹೋರಾಟ ನಡೆಸುತ್ತೇವೆ ಎಂದು ಸಂಘದ ಪ್ರಮುಖ ಹನುಮಂತಪ್ಪ ಎಚ್ಚರಿಕೆ ನೀಡಿದರು.

ಹೊಸಪೇಟೆಯ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣಾಧಿಕಾರಿಯಾಗಿರುವ ವೆಂಕೋಬಣ್ಣ ಶೆಟ್ಟಿ ಅವರು ಸಂಘದ ಬೈಲಾ ಪ್ರಕಾರ ಚುನಾವಣೆಯನ್ನು ಪಾರದರ್ಶಕವಾಗಿ ನಿರ್ವಹಿಸುತ್ತಿಲ್ಲ. ಸಂಘದ ಚುನಾವಣೆಗೆ ಸಂಬಂಧಿಸಿದ 7 ನೌಕರರಿಗೆ ಮತದಾನ ಮಾಡಲು ಮತ್ತು ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಬೇಕೆಂದು 24.02.2025 ರಂದು ಕೋರ್ಟ್ ನೀಡಿದ ತೀರ್ಪಿನಲ್ಲಿ ಸ್ಪಷ್ಟಪಡಿಸಿತ್ತು. ಅದರಂತೆ ಈ 7 ನೌಕರರು ಈಗಾಗಲೇ ಫೆಬ್ರವರಿ–2025ರ ವೇತನದಲ್ಲಿ ಕಟ್ಟಡ ನಿಧಿಯನ್ನು ಪಾವತಿಸಿದ್ದರೂ ಸಹ, ತಾಂತ್ರಿಕ ನೆಪಗಳನ್ನು ಒಡ್ಡಿ ಅವರ ನಾಮಪತ್ರಗಳನ್ನು ತಿರಸ್ಕರಿಸಿರುವುದು ಕಾನೂನು ಬಾಹಿರವಾಗಿದೆ ಎಂದು ಆರೋಪಿಸಿದರು.



ಈ ವಿಚಾರವಾಗಿ ಬೆಂಗಳೂರಿನ ಪ್ರಧಾನ ಕಾರ್ಯದರ್ಶಿಗಳಿಂದ ಯಾವುದೇ ಅಧಿಕೃತ ಸ್ಪಷ್ಟೀಕರಣ ಪಡೆಯದೇ, ಏಕಾಏಕಿ ಚುನಾವಣೆ ನಡೆಸುತ್ತಿದ್ದಾರೆ. ಚುನಾವಣೆ ಘೋಷಿಸಿದ ದಿನವೇ ಮತದಾರರ ಪಟ್ಟಿಯನ್ನು ಅಖೈರುಗೊಳಿಸಿದ್ದಾರೆ. ಇದು ಸಂಘದ ಬೈಲಾ ಪುಸ್ತಕದ ನಿಯಮಗಳಿಗೆ ವಿರುದ್ಧವಾಗಿದ್ದು, ಚುನಾವಣೆಯ ನಿಯಮಗಳನ್ನು ಸಂಪೂರ್ಣವಾಗಿ ಗಾಳಿಗೆ ತೂರಿದ್ದಾರೆ. ತಕ್ಷಣ ಈ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿ, ನಿಯಮಾನುಸಾರ ನಡೆಸಬೇಕೆಂಬ ನಮ್ಮ ಮನವಿಗೆ ಸ್ಪಂದಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕವಿಪ್ರನಿನಿ/ಜೆಸ್ಕಾಂ ನೌಕರರ ಸಂಘದ ಚುನಾವಣಾ ಪ್ರಕ್ರಿಯೆಯಲ್ಲಿ ಬೈಲಾ ನಿಯಮಗಳನ್ನು ಪಾಲನೆ ಮಾಡದೇ, ಚುನಾವಣಾಧಿಕಾರಿ ಏಕಪಕ್ಷೀತವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಖಂಡಿಸಿ ಸೋಮವಾರ ನಡೆದ ಚುನಾವಣೆಯನ್ನು ಬಹಿಷ್ಕರಿಸಿದ್ದೇವೆ. ನಮಗೆ ಆಗಿರುವ ಅನ್ಯಾಯದ ಬಗ್ಗೆ ನ್ಯಾಯಾಲಯದಲ್ಲಿ ಪ್ರಶ್ನಿಸುತ್ತೇವೆ ಎಂದು ಹನುಮಂತಪ್ಪ ತಿಳಿಸಿದರು.

ಸಂಘದ ಪ್ರಮುಖರಾದ ಶ್ರೀಕಾಂತ, ಸಲಿಂ ಕೆ., ಚನ್ನಬಸಯ್ಯ ಎಚ್.ಎಂ., ವಡ್ಡೆರ್ ಬಸವರಾಜ್, ರುದ್ರಪ್ಪ, ಡಿ.ಸುರೇಶ್ ಹಾಗೂ ನಜೀರ್ ಸಾಬ್ ಉಪಸ್ಥಿತರಿದ್ದರು.